[illegible]

ಉಪನಿಷತ್ತು

ಅನುವಾದಕರು :

ಶ್ರೀ ದೇವುಡು ನರಸಿಂಹಶಾಸ್ತ್ರೀ, ಎಂ.ಎ.

ಪ್ರಕಾಶಕರು :
ಮೈಸೂರು ಸಂಸ್ಥಾನದ
ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ
ವಿಧಾನಸೌಧ, ಬೆಂಗಳೂರು-೧.

ಮುದ್ರಕರು :
ಮೈಸೂರು ಸರ್ಕಾರದ ಮುದ್ರಣಾಲಯದ ಡೈರೆಕ್ಟರವರು
ಬೆಂಗಳೂರು-೧.
೧೯೫೮.

ಮುನ್ನುಡಿ.

ಒಂದು ದಿನ ಶ್ರೀ ಹನುಮಂತಯ್ಯನವರು "ನಮ್ಮ ಉಪನಿಷತ್ತುಗಳು ಜನಸಾಮಾನ್ಯರ ಸೊತ್ತಾಗಬೇಕು. ಹಾಗೆ, ಆ ಮಟ್ಟಕ್ಕೆ ಒಂದು ಪುಸ್ತಕವನ್ನು ಬರೆಯುವಿರಾ?" ಎಂದು ಕೇಳಿದರು. ಅದು ಈ ಪುಸ್ತಕದ ಮೊದಲು. ಮೈಸೂರು ಸರ್ಕಾರದವರು ದಯವಿಟ್ಟು ಇದನ್ನು ಅಂಗೀಕರಿಸಿ ಪ್ರಕಟಿಸಿದರು. ಅದಕ್ಕಾಗಿ ಅವರಿಗೆ ಅನಂತ ಕೃತಜ್ಞತೆಯ ವಂದನೆಗಳು.

ಸ್ವಾತಂತ್ರ್ಯ ಪಡೆದಾಗಿನಿಂದ ಭಾರತವು ತನ್ನ ಅಸ್ತಿತ್ವವನ್ನು ರೂಢಿಸಿಕೊಳ್ಳಲು ನಾನಾ ಮುಖವಾಗಿ ಹೆಣಗುತ್ತಿದೆ. ಅದಕ್ಕಿರುವ ಭಾರಿಯ ಆಸ್ತಿ ಅದರ ಜನ. ಅದು ಉದ್ಧಾರವಾಗಬೇಕು. ಆ ಉದ್ಧಾರದ ಮಾರ್ಗಗಳಲ್ಲಿ ಎಲ್ಲದಕ್ಕಿಂತ ಹೆಚ್ಚಾಗಿ ಮಾನವನು "ಬಾಳು ದೇವರು ಕೊಟ್ಟಿರುವ ವರ. ಅದನ್ನು ತನಗೂ ತನ್ನವರಿಗೂ ಹಿತವೂ ಪ್ರಿಯವೂ ಆಗುವಂತೆ ರೂಪಿಸಿಕೊಂಡು ಹೋಗುವ ಕಾರ್ಯ, ಕಾರ್ಯಗಳಲ್ಲೆಲ್ಲಾ ಉತ್ತಮವಾದುದು. ಹಾಗೆ ಮಾಡಿದವನು ದೇವನಾಗುವನು. ತನ್ನ ಬೆಳಕಿನಿಂದ ಲೋಕವನ್ನು ಬೆಳಗುವನು." ಎಂಬುದನ್ನು ಅರಿತುಕೊಳ್ಳಬೇಕು. ಅಗ, ಸಂಸ್ಕಾರವಿಲ್ಲದಿದ್ದರೆ ಕಾಡು ಬಿದ್ದು ಹೊಡೆದು ತಿನ್ನುವ ಮೃಗವಾಗುವ ಮಾನವಸ್ವಭಾವವು ಸಂಸ್ಕಾರ ಸಂಪನ್ನವಾದರೆ ಬಂದವರಿಗೆಲ್ಲಾ ವರಗಳನ್ನು ಕೊಡುವ ದೇವನಾಗುವದು ಎಂಬುದು ತಿಳಿಯುವುದು: ಮಾನವ ಹೃದಯದಲ್ಲಿ ಸುಪ್ತವಾಗಿರುವ ಸದಾಶೆಗಳೆಲ್ಲ ಪ್ರಬುದ್ಧವಾಗಿ, ಉತ್ತೇಜಿತವಾಗಿ, ಪ್ರಕಟವಾಗಿ, ಮಾನವಕುಲವು ಕಲ್ಪ

ವೃಕ್ಷವಾಗಿ ಲೋಕವು ನಂದನವಾಗುವುದು. ಹಾಗೆ ಸದಾಶೆಗಳನ್ನು ಉತ್ತೇಜನಗೊಳಿಸುವುದು ಉಪನಿಷತ್ತುಗಳ ಅಧ್ಯಯನ: ಬ್ರಹ್ಮವಿದ್ಯಾಭ್ಯಾಸ.

ಬ್ರಹ್ಮವಿದ್ಯೆಯು ಮಾನವ ಕುಲಕ್ಕೆ ಅತ್ಯಂತ ಅವಶ್ಯವಾಗಿ ಬೇಕಾದುದು. ಇದೊಂದು ಸಾಧನ; ಸಂಸ್ಕಾರ. ತಿರ್ಯಗ್ಯೋನಿಯಲ್ಲಿ ಕಲ್ಲಿನಂತೆ ಮಣ್ಣಿನಂತೆ ಅದುರಾಗಿದ್ದ ಜೀವನು ಮನುಷ್ಯತ್ವವನ್ನು ಪಡೆದಾಗ ಕಬ್ಬಿಣವಾಗುವನು: ಬ್ರಹ್ಮವಿದ್ಯಾಸಂಪನ್ನನಾದಾಗ ಇಟ್ಟೆಡೆಯಲ್ಲಿಯೇ ತುಕ್ಕು ಹಿಡಿಯುವ ಕಬ್ಬಿಣವು ಸಂಸ್ಕಾರ ಪಡೆದು ತುಕ್ಕು ಮುಟ್ಟಲಾರದ ಉಕ್ಕಾಗುವುದು. ಹಾಗೆ ಆಗಲಿ ಎಂದೇ ಲೋಕೋದ್ಧಾರವಾಡಿದ ಆಚಾರ್ಯರೆಲ್ಲರೂ ಬ್ರಹ್ಮವಿದ್ಯಾಮುಖವಾಗಿ ಉಪದೇಶ ಮಾಡಿದುದು. ಈಗಲೂ ಹಾಗಾಗಲಿ: ಸಾಮಾನ್ಯ ಮಾನವನು ಸಂಸ್ಕಾರ ಸಂಪನ್ನನಾಗಿ ದೇವನಾಗಲಿ ಎಂದು ಈ ಗ್ರಂಥವನ್ನು ಬರೆಯಿಸಿದುದು: ಬರೆದಿರುವುದು: ಪ್ರಕಟಿಸಿರುವುದು.

ಇನ್ನೂ ಬೃಹದಾರಣ್ಯಕ, ಛಾಂದೋಗ್ಯ, ಕೌಷೀತಕೀ, ಮಾಂಡೂಕ್ಯ ಉಪನಿಷತ್ತುಗಳು ಈ ಗ್ರಂಥದ ಜೊತೆಯ ಗ್ರಂಥಗಳಾಗಿ ಪ್ರಕಟವಾಗಬೇಕು. ಆಗಲಿ ಎಂದು ಹಾರೈಸೋಣ.

ಈ ಗ್ರಂಥವನ್ನು ಪ್ರಕಟಿಸುವುದರಲ್ಲಿ ಆಸಕ್ತಿ ವಹಿಸಿದ ಸಂಸ್ಕೃತಿ ಪ್ರಚಾರ ಇಲಾಖೆಯವರಿಗೂ, ಅಂದವಾಗಿ ಮುದ್ರಿಸಿರುವ ಸರಕಾರದ ಮುದ್ರಣ ಇಲಾಖೆಯವರಿಗೂ ನನ್ನ ಅನಂತ ವಂದನೆಗಳು.

ಶ್ರೀ ಗೀರ್ವಾಣ ವಿದ್ಯಾಪೀಠ,
ಬೆಂಗಳೂರು-4
25-9-1957

ದೇವುಡು.

ವಿಷಯಾನುಕ್ರಮಣಿಕೆ

ಪೀಠಿಕೆ

೧. ಉಪನಿಷತ್ತು ಎಂದರೇನು?

ಉಪನಿಷತ್ತು ಎಂದರೆ, ರಹಸ್ಯವಾದ ವಿದ್ಯೆ. ಗುರುವಿನ ಮಗ್ಗುಲಲ್ಲಿ ಕುಳಿತು ಕಲಿಯುವ ವಿದ್ಯೆ. ಅಷ್ಟೇ ಅಲ್ಲ. ಪರಮಾನಂದ ವನ್ನು, ನಿರತಿಶಯ ಆನಂದವನ್ನು, ನಮ್ಮವರು ಬ್ರಹ್ಮಾನಂದ ಎನ್ನು ತ್ತಾರೆ. ಅಂತಹ ಬ್ರಹ್ಮಾನಂದವನ್ನು ಪಡೆಯಲು ದಾರಿಯಲ್ಲಿ ಎಷ್ಟೋ ವಿಘ್ನಗಳಿವೆ. ಅವೆಲ್ಲವನ್ನೂ ತಳ್ಳಿ, ಧ್ವಂಸಮಾಡಿ, ಪರಮಾ ನಂದವನ್ನು ದೊರಕಿಸಿಕೊಡುವ ರಹಸ್ಯವಾದ ವಿದ್ಯೆಯು ಯಾವುದೋ ಅದನ್ನು ಉಪನಿಷತ್ತು ಎನ್ನುತ್ತಾರೆ.

ಈ ಮಾತು ಉಪನಿಷತ್ತುಗಳಲ್ಲಿಯೂ ಅಲ್ಲಲ್ಲಿ ಬರುತ್ತದೆ. ತೈತ್ತಿರೀಯದಲ್ಲಿ ಮೊದಲಲ್ಲಿಯೇ "ಸಂಹಿತಾಯಾಃ ಉಪನಿಷದಂ ವ್ಯಾಖ್ಯಾಸ್ಯಾಮಃ" ಎಂದು ಆರಂಭವಾಗುತ್ತದೆ. ಅಲ್ಲಿಯೂ ರಹಸ್ಯ ಎಂಬರ್ಥ.

ಉಪನಿಷತ್ತುಗಳಲ್ಲಿ ಇನ್ನೊಂದು ವಿಶೇಷವೆಂದರೆ 'ಯ ಏವಂ ವೇದ' ಎಂಬುದು. ಅಲ್ಲಿ ಪದೇ ಪದೇ ಈ 'ಯ ಏವಂ ವೇದ' ಎಂದು ಬರುತ್ತದೆ. ಹಾಗೆಂದರೆ "ಯಾವನು ಈಗ ಹೇಳಿದುದನ್ನು ಇಲ್ಲಿ ಹೇಳಿದಂತೆ ತಿಳಿಯುತ್ತಾನೆಯೋ ಅವನೂ ಹೀಗೇ ಆಗುತ್ತಾನೆ" ಎಂದು. ಈ ಮಾತಿನಿಂದ ಉಪನಿಷತ್ತು ಹೇಳುವುದು ಸತ್ಯವೆಂದು ಎಲ್ಲರೂ ಗ್ರಹಿಸಿದ್ದಾರೆ.

ಉಪನಿಷತ್ತು ಹೇಳುವುದು ರಹಸ್ಯವನ್ನು ಕರಗತಮಾಡಿ ಕೊಡುವ ವಿದ್ಯೆಯನ್ನು. ಆ ವಿದ್ಯೆಯನ್ನು ಬಲ್ಲವರು ಆ ರಹಸ್ಯವನ್ನು ಪಡೆಯುವರು. ಆ ರಹಸ್ಯವು ಆನಂದ. ಅದನ್ನೇ ಬ್ರಹ್ಮ ಎನ್ನುವುದು.

ಬ್ರಹ್ಮವನ್ನು ಬೋಧಿಸುವ ಶಾಸ್ತ್ರಕ್ಕೆ ವೇದಾಂತ ಎಂದೂ ಹೆಸರು. ವೇದ ಎಂದರೆ ಜ್ಞಾನ, ತಿಳಿವಳಿಕೆ, ಅದರ ಕೊನೆ, ಅಲ್ಲಿಂದಾಚೆಗೆ ತಿಳಿಯಬೇಕಾದುದು ಯಾವುದೂ ಇಲ್ಲ. ಅದರಿಂದ ಬ್ರಹ್ಮಜ್ಞಾನವು ವೇದಾಂತ. ಹಾಗೆಯೇ ಅದನ್ನು ಬೋಧಿಸುವ ಶಾಸ್ತ್ರವೂ ವೇದಾಂತ.

ವೇದಾಂತದಲ್ಲಿ ಪ್ರಸ್ಥಾನ ಎಂಬುದೊಂದು ಮಾತು. ಪ್ರಸ್ಥಾನವೆಂದರೆ ಶಾಸ್ತ್ರ, ಅದು ಹೇಳಿದ ಮೇಲೆ ಇನ್ನು ಮಾತು ಇಲ್ಲ ಎಂದು ಒಪ್ಪಿಕೊಳ್ಳುವಂತಹ ಶಾಸ್ತ್ರ. ಈ ಪ್ರಸ್ಥಾನವು ಮೂರು: ಅವು–ಉಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತಾ. ಬ್ರಹ್ಮಸೂತ್ರ, ಭಗವದ್ಗೀತೆ ಎರಡೂ ತಾವು ಹೇಳಿರುವ ವಿಷಯವನ್ನು ಉಪನಿಷತ್ತುಗಳಲ್ಲಿ ಹೇಳಿದೆ ಎಂದು ತೋರಿಸಿ, ಅದರಿಂದ ಅದು ಸತ್ಯ ಎನ್ನುತ್ತವೆ. ಹೀಗೆ, ಉಪನಿಷತ್ತುಗಳು ಸತ್ಯವನ್ನು ಕುರಿತು ಹೇಳುವ ಶಾಸ್ತ್ರಗಳಲ್ಲಿ ಅತಿಮುಖ್ಯವೆಂದು ಗಣ್ಯವಾಗಿವೆ.

೨. ಉಪನಿಷತ್ತುಗಳು ಎಷ್ಟು?

ಉಪನಿಷತ್ತುಗಳು ೧೧೮೦ ಎಂದು ಒಂದು ಲೆಕ್ಕ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಎಂದು ನಾಲ್ಕು ವೇದಗಳು. ಅದರಲ್ಲಿ ಋಗ್ವೇದವು ಇಪ್ಪತ್ತೊಂದು ಶಾಖೆ, ಯಜುಸ್ಸು ನೂರೊಂಭತ್ತು ಶಾಖೆ, ಸಾಮವು ಒಂದು ಸಾವಿರ ಶಾಖೆ, ಐವತ್ತು ಶಾಖೆ ಅಥರ್ವವೇದ. ಒಟ್ಟು ವೇದಶಾಖೆಗಳು ೧೧೮೦. ಶಾಖೆಗೆ ಒಂದೊಂದರಂತೆ ಉಪನಿಷತ್ತುಗಳೂ ೧೧೮೦.

ಇವುಗಳಲ್ಲಿ ಎಷ್ಟೋ ನಷ್ಟವಾಗಿ ಹೋಗಿವೆ. ಆಚಾರ್ಯ ಶಂಕರರು ಬರುವ ಕಾಲಕ್ಕೆ (ಸುಮಾರು ಸಾವಿರದ ಮುನ್ನೂರು ವರ್ಷಗಳ ಹಿಂದೆ) ಎಷ್ಟು ಇದ್ದುವೋ ಏನೋ ತಿಳಿಯದು. ಅವರು ಹದಿನಾಲ್ಕು ಉಪನಿಷತ್ತುಗಳಿಗೆ ಭಾಷ್ಯ ಬರೆದಿದ್ದಾರೆ. ಅವು ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ.

ಬೃಹದಾರಣ್ಯಕ, ಶ್ವೇತಾಶ್ವತರ, ಕೌಷೀತಕಿ, ನೃಸಿಂಹತಾಪಿನೀ (೨). ಇವುಗಳಲ್ಲಿ ಮೊದಲನ ಹತ್ತು ದಶೋಪನಿಷತ್ತುಗಳೆಂದು ಪ್ರಖ್ಯಾತ ವಾಗಿವೆ.

ಅಲ್ಲದೆ, ವ್ಯಾಸಭಗವಾನರು (ಶಂಕರರಿಗೆ ಸಾವಿರ ವರ್ಷ ಗಳಾದರೂ ಹಿಂದೆ) ಬ್ರಹ್ಮಸೂತ್ರಗಳನ್ನು ರಚಿಸುವಾಗ, ಮುಖ್ಯವಾದ ಉಪನಿಷತ್ತುಗಳನ್ನು ತೆಗೆದುಕೊಂಡು ಅವುಗಳ ಅರ್ಥವನ್ನು ಹಿಡಿದು ಸೂತ್ರಗಳನ್ನು ರಚಿಸಿದ್ದಾರೆ. ಅದರಿಂದ ಅವರು ಉಪಯೋಗಿಸಿರುವ ಉಪನಿಷತ್ತುಗಳನ್ನು ಮುಖ್ಯವಾದವು ಎಂದೂ, ಇತರ ಉಪನಿಷತ್ತು ಗಳನ್ನು ಅಮುಖ್ಯಗಳೆಂದೂ ಕರೆಯುವುದೊಂದು ವಾಡಿಕೆ.

ಈ ಉಪನಿಷತ್ತುಗಳನ್ನು ಆಗಾಗ ಲೆಕ್ಕಮಾಡಿಡುವ ಪ್ರಯತ್ನವೂ ನಡೆದಿದೆ. ಹೀಗೆ, ಶ್ರೀರಾಮತಾರಕೋಪನಿಷತ್ತು ಎನ್ನು ವುದೊಂದು, ಮುಕ್ತಿಕೋಪನಿಷತ್ತು ಎನ್ನುವುದಿನ್ನೊಂದು. ಈ ಎರಡರಲ್ಲೂ ಆಗಿನ ಕಾಲದಲ್ಲಿದ್ದ ಉಪನಿಷತ್ತುಗಳನ್ನೆಲ್ಲ ಲೆಕ್ಕಮಾಡಿ, ನೂರಎಂಟು ಎಂದು ಗೊತ್ತುಮಾಡಿದೆ. ಅವು ಇವು :—

ಈಶ	ಕಾಲಾಗ್ನಿರುದ್ರ	ತ್ರಿಶಿಖೀಬ್ರಾಹ್ಮಣ
ಕೇನ	ಮೈತ್ರೇಯೀ	ಸೀತಾ
ಕಠ	ಸುಬಾಲ	ಯೋಗಚೂಡಾಮಣಿ
ಪ್ರಶ್ನ	ಕ್ಷುರಿಕಾ	ಬ್ರಹ್ಮ
ಮುಂಡಕ	ಮಂತ್ರಿಕಾ	ಕೈವಲ್ಯ
ಮಾಂಡೂಕ್ಯ	ಸರ್ವಸಾರ	ಜಾಬಾಲ
ತೈತ್ತಿರೀಯ	ನಿರಾಲಂಬ	ಶ್ವೇತಾಶ್ವತರ
ಐತರೇಯ	ಶುಕರಹಸ್ಯ	ಹಂಸ
ಛಾಂದೋಗ್ಯ	ವಜ್ರಸೂಚಿಕ	ಆರುಣಿಕ
ಬೃಹದಾರಣ್ಯಕ	ತೇಜೋಬಿಂದು	ಗರ್ಭ
ಅಥರ್ವಶಿರ	ನಾದಬಿಂದು	ನಾರಾಯಣ
ಅಥರ್ವಶಿಖ	ಧ್ಯಾನಬಿಂದು	ನಿರ್ವಾಣ
ಮೈತ್ರಾಯಣೀ	ಬ್ರಹ್ಮವಿದ್ಯಾ	ಮಂಡಲಬ್ರಾಹ್ಮಣ
ಕೌಷೀತಕೀಬ್ರಾಹ್ಮಣ	ಯೋಗತತ್ತ್ವ	ದಕ್ಷಿಣಾಮೂರ್ತಿ
ಬೃಹಜ್ಜಾಬಾಲ	ಆತ್ಮಬೋಧ	ಶರಭ
ನೃಸಿಂಹತಾಪಿನೀ (೨)	ನಾರದಪರಿವ್ರಾಜಕ	ಸ್ಕಂದ

ಮಹಾನಾರಾಯಣ
ಅದ್ವಯತಾರಕ
ರಾಮರಹಸ್ಯ
ರಾಮತಾಪಿನೀ
ವಾಸುದೇವ
ಮುದ್ಗಲ
ಶಾಂಡಿಲ್ಯ
ಪೈಂಗ
ಭಿಕ್ಷುಕ
ಮಹಾ
ಶಾರೀರಕ
ಯೋಗಶಿಖ
ತುರೀಯಾತೀತಾವಧೂತ
ಸಂನ್ಯಾಸ
ಪರಮಹಂಸ ಪರಿವ್ರಾಜಕ
ಅಕ್ಷಮಾಲಿಕ
ಅವ್ಯಕ್ತ
ಏಕಾಕ್ಷರ
ಅನ್ನಪೂರ್ಣಾ
ಸೂರ್ಯ
ಪರಮಹಂಸ
ಅಮೃತಬಿಂದು
ಅಮೃತನಾದ
ಅಕ್ಷಿ
ಅಧ್ಯಾತ್ಮ
ಅವಧೂತ
ತ್ರಿಪುರತಾಪಿನೀ
ದೇವೀ
ತ್ರಿಪುರಾ
ಕಠ
ಭಾವನಾ
ರುದ್ರಹೃದಯ
ಯೋಗಕುಂಡಲಿ
ಭಸ್ಮಜಾಬಾಲ
ರುದ್ರಾಕ್ಷಜಾಬಾಲ
ಗಣಪತಿ
ದರ್ಶನ
ತಾರಸಾರ
ಮಹಾವಾಕ್ಯ
ಪಂಚಬ್ರಹ್ಮ
ಪ್ರಾಣಾಗ್ನಿಹೋತ್ರ
ಗೋಪಾಲತಾಪಿನೀ
ಕೃಷ್ಣ
ಯಾಜ್ಞವಲ್ಕ್ಯ
ವರಾಹ
ಶಾಟ್ಯಾಯನೀಯ
ಹಯಗ್ರೀವ
ದತ್ತಾತ್ರೇಯ
ಗಾರುಡ
ಕಲಿಸಂತಾರಣ
ಜಾಬಾಲ
ಸೌಭಾಗ್ಯ ಲಕ್ಷ್ಮೀ
ಸರಸ್ವತೀರಹಸ್ಯ
ಬಹ್ವೃಚ
ಮುಕ್ತಿಕ—ಇತ್ಯಾದಿ

ಇವುಗಳಲ್ಲಿ ಋಗ್ವೇದದ ಉಪನಿಷತ್ತುಗಳು ೧೦, ಶುಕ್ಲಯಜುರ್ವೇದದವು ೧೯, ಕೃಷ್ಣಯಜುರ್ವೇದದವು ೩೨, ಸಾಮವೇದದವು ೧೬, ಅಥರ್ವಣದವು ೩೧, ಹೀಗೆ ೧೦೮.*

೩. ಉಪನಿಷತ್ತುಗಳ ಕಾಲ

ಭಾರತದಲ್ಲಿ ಯಾವುದನ್ನೂ ಕಾಲದ ಚೌಕಟ್ಟಿಗೆ ಹೊಂದಿಸಿ ಹೇಳಲು ಸಾಧ್ಯವಿಲ್ಲ. ನಮ್ಮವರು ಯುಗಯುಗಾಂತರಗಳ ಲೆಕ್ಕದವರು. ಈಗಿನವರು ಅದನ್ನು ಅಂಗೀಕರಿಸಿಲ್ಲ.

* ಇವೆಲ್ಲವೂ ಬ್ರಹ್ಮವಿದ್ಯೆಯನ್ನೇ ಕುರಿತು ಹೇಳುವುದಿಲ್ಲ. ಕೆಲವು ಯೋಗವನ್ನು ಕುರಿತು, ಇನ್ನು ಕೆಲವು ಉಪಾಸನೆಗಳನ್ನು, ಇನ್ನು ಕೆಲವು ವಿಭೂತಿ, ರುದ್ರಾಕ್ಷ ಮೊದಲಾದವುಗಳ ಮಹಿಮೆಯನ್ನು ಕುರಿತು ಹೇಳುತ್ತವೆ.

ನಮ್ಮವರು ಹೇಳಿರುವ ರೀತಿ ಇದು. “ ಈ ಲೋಕವನ್ನು ಸೃಷ್ಟಿಸಿದಾಗ ದೇವತೆಗಳು, ದಾನವರು, ಮಾನವರು ಎಂಬ ಮೂರು ಜಾತಿಗಳು ಹುಟ್ಟಿದುವು. ಈ ಮೂವರನ್ನು ಸೃಷ್ಟಿಸಿದ ಪ್ರಜಾಪತಿಯು, ಇವರಿಗೆ ಪ್ರವೃತ್ತಿ (ಧರ್ಮಕರ್ಮ) ಶಾಸ್ತ್ರವನ್ನು ವೇದ (ಸಂಹಿತೆ) ಗಳ ಮೂಲಕವಾಗಿಯೂ, ನಿವೃತ್ತಿ ಶಾಸ್ತ್ರವನ್ನು ವೇದಾಂತ (ಉಪನಿಷತ್ತು)ಗಳ ಮೂಲಕವಾಗಿಯೂ ಬೋಧಿಸಿದನು ” ಎನ್ನುತ್ತಾರೆ. ಇದಕ್ಕೆ ಒಪ್ಪುವಂತೆ, ಕೇನ, ಛಾಂದೋಗ್ಯ, ಬೃಹದಾರಣ್ಯಕಗಳಲ್ಲಿ ಹಿರಣ್ಯಗರ್ಭ ಎಂಬ ಪ್ರಜಾಪತಿಯೇ ದೇವತೆಗಳಿಗೆ ಬ್ರಹ್ಮವಿದ್ಯೋಪದೇಶಮಾಡಿದನೆಂದು ಹೇಳಿದೆ. ಮುಂಡಕದಲ್ಲಿ ದೇವತೆಗಳಲ್ಲಿ ಮೊದಲನೆಯವನಾದ ಬ್ರಹ್ಮನು ಬ್ರಹ್ಮವಿದ್ಯೆಯನ್ನು ತನ್ನ ಜ್ಯೇಷ್ಠಪುತ್ರನಾದ ಅಥರ್ವನಿಗೆ ಹೇಳಿದನು ಎಂದಿದೆ.

ಅದರಿಂದ, ಈ ಲೋಕವು ಹುಟ್ಟಿದಾಗಲೇ ಶ್ರುತಿಯೂ ಹುಟ್ಟಿತು. ಬ್ರಹ್ಮನು ಲೋಕಸೃಷ್ಟಿ ಮಾಡುವಾಗ ಶ್ರುತಿಯಿಂದ ಹಿಂದಿನ ಸೃಷ್ಟಿಯಲ್ಲಿ ಹೇಗಿತ್ತು ಎಂಬುದನ್ನು ತಿಳಿದು ಅದರಂತೆ ಮಾಡಿದನು. ‘ ಧಾತಾ ಯಥಾಪೂರ್ವಮಕಲ್ಪಯತ್ ’ ಎಂದೂ ಹೇಳಿದೆಯಾಗಿ ನಮ್ಮವರು ಬ್ರಹ್ಮವಿದ್ಯೆಯು ಅಥವಾ ವೇದಾಂತವು ಸೃಷ್ಟಿಯೊಡನೆ ಹುಟ್ಟಿದುದು” ಎನ್ನುತ್ತಾರೆ.

ಈಗಿನವರ ಲೆಕ್ಕದಂತೆ ಭಾರತದ ಇತಿಹಾಸದಲ್ಲಿ ಗೌತಮಬುದ್ಧನದು ಒಂದು ನಿಗದಿಯಾದ ಕಾಲ. ಅದು ಸುಮಾರು ಕ್ರಿ. ಪೂ. ಐದನೆಯ ಶತಮಾನದ ಆದಿಯೆಂದು ಗೊತ್ತಾಗಿದೆ. ಅಲ್ಲಿಂದ ಹಿಂದಕ್ಕೆ ಲೆಕ್ಕಹಾಕುವುದು ವಾಡಿಕೆ. ಅದರಂತೆ ನೋಡಿದರೆ ಈ ಉಪನಿಷತ್ತುಗಳು (ಮುಖ್ಯವಾದವು) ಬೌದ್ಧಕಾಲಕ್ಕಿಂತ ಹಿಂದಿನವು ಎಂದು ಧಾರಾಳವಾಗಿ ಹೇಳಬಹುದು.

ಭಾರತದ ಪೂರ್ವಕಾಲವನ್ನು ಈಗಿನವರು ಮೂರು ಭಾಗವಾಗಿ ವಿಂಗಡಿಸುತ್ತಾರೆ. ಮಹೆಂಜೊದಾರೋಯುಗವು ಈಗ್ಗೆ ಸುಮಾರು ೫,೦೦೦ ವರ್ಷಗಳ ಹಿಂದಿನದು. ಅನಂತರ ಆರ್ಯಯುಗ.

ಇದು ಸುಮಾರು ೪,೦೦೦ ವರ್ಷಗಳ ಹಿಂದಿನಿಂದ ಸುಮಾರು ೨,೫೦೦ ವರ್ಷಗಳವರೆಗಿನದು. "ಈ ಕಾಲದಲ್ಲಿ ಆರ್ಯರು ಭಾರತಕ್ಕೆ ವಲಸೆ ಬಂದರು; ಇಲ್ಲಿದ್ದ ಪೂರ್ವನಿವಾಸಿಗಳನ್ನು ಗೆದ್ದು ಸಿಂಧೂ ಗಂಗಾ ತೀರಗಳಲ್ಲಿ ನೆಲಸಿದರು. ಅವರು ತಮ್ಮ ದೇವತೆಗಳನ್ನು ಹೊಗಳುವುದಕ್ಕೆ ಉಪಯೋಗಿಸುತ್ತಿದ್ದ ಮಂತ್ರಗಳು ವೇದಗಳಾದುವು; ಅವರು ಮಾಡುತ್ತಿದ್ದ ಯಜ್ಞಗಳನ್ನು ಕುರಿತು ಹೇಳುವ ಗ್ರಂಥಗಳು ಬ್ರಾಹ್ಮಣಗಳಾದುವು. ಅವರು ಆತ್ಮ, ಜೀವ, ದೇವ, ಜಗತ್ತು ಮೊದಲಾದವನ್ನು ಕುರಿತು ಚಿಂತಿಸುತ್ತಿದ್ದರು. ಅವರಲ್ಲಿ ಗುರುವು ತಾನು ಕಲಿತಿದ್ದ ರಹಸ್ಯಗಳನ್ನು ಏಕಾಂತದಲ್ಲಿ ಶಿಷ್ಯರಿಗೆ ಬೋಧಿಸುತ್ತಿದ್ದನು. ಆ ಚಿಂತನಗಳು ರಹಸ್ಯಗಳು ಆರಣ್ಯಕಗಳು ಉಪನಿಷತ್ತುಗಳಾದುವು. ಇವೆಲ್ಲ ಮೂರನೆಯ ಬೌದ್ಧಯುಗಕ್ಕಿಂತಲೂ ಮೊದಲೇ ಆಗಿದ್ದುವು." ಎಂದು ಈಗಿನವರ ವಾದ.

"ಅನೇಕ ಉಪನಿಷತ್ತುಗಳು ಬ್ರಾಹ್ಮಣಗಳಂತಿವೆ: ಎಂದರೆ ಯಜ್ಞಗಳನ್ನು ಕುರಿತು ಚಿಂತಿಸುತ್ತವೆ. ಇನ್ನು ಕೆಲವು ಆರಣ್ಯಕಗಳಂತೆ ಏಕಾಂತದಲ್ಲಿ ಮಾತ್ರ ಆಡಬೇಕಾದ, ಗುರುವಿನಿಂದ ಮಾತ್ರವೇ ಕಲಿಯಲು ಸಾಧ್ಯವಾದ ರಹಸ್ಯಗಳನ್ನು ಕುರಿತು ಹೇಳುತ್ತವೆ. ಇವೆಲ್ಲವನ್ನೂ ನೋಡಿದರೆ, ಈ ಉಪನಿಷತ್ತುಗಳು ಆಯಾ ಯುಗದವು ಎನ್ನಲು ತಕ್ಕಷ್ಟು ಕಾರಣವಿರುತ್ತದೆ."

ಬೌದ್ಧಯುಗಕ್ಕಿಂತಲೂ ಈಚೆಗೂ ಕೆಲವು ಉಪನಿಷತ್ತುಗಳು ಹುಟ್ಟಿವೆ. ಆದರೂ ದಶೋಪನಿಷತ್ತುಗಳು ಬೌದ್ಧಯುಗಕ್ಕಿಂತ ಹಿಂದಿನವು ಎಂಬುದರಲ್ಲಿ ಸಂದೇಹವಿಲ್ಲ.

ಇಷ್ಟಾದರೂ ಒಂದು ವಿಷಯ ನೆನೆಪಿನಲ್ಲಿಡಬೇಕಾದುದು: ವೇದಗಳಲ್ಲಿರುವ ಮಂತ್ರಗಳನ್ನೆಲ್ಲಾ ನಮ್ಮವರು ಅಪೌರುಷೇಯ ಎನ್ನುತ್ತಾರೆ. ಹಾಗೆಂದರೆ ಮನುಷ್ಯರು ಯಾರೂ ಅವುಗಳನ್ನು ರಚಿಸಲಿಲ್ಲ ಎಂದು ಅರ್ಥ. ಆದರೆ ಉಪನಿಷತ್ತುಗಳಲ್ಲಿ ಇಂತಹ ಋಷಿಯು ಹೇಳಿದುದು ಎಂಬುದು ಸ್ಪಷ್ಟವಾಗಿದ್ದರೂ ಅವುಗಳನ್ನೂ

ಶ್ರುತಿಯೆಂದೇ ಹೇಳಿ, ಸಂಹಿತೆ (ಮಂತ್ರಗಳ ಗುಂಪು)ಗೆ ಸಮಾನ ವೆನ್ನುತ್ತಾರೆ.

ಈ ಅರ್ಥವು ಸ್ಪಷ್ಟವಾಗಬೇಕಾದರೆ, ಶ್ರುತಿ, ಸ್ಮೃತಿ ಎಂಬ ಎರಡು ಗುಂಪಿನ ಗ್ರಂಥರಾಶಿಗಳನ್ನು ನಾವು ಗಮನಿಸಬೇಕು. ಶ್ರುತಿ ಎನ್ನುವುದು ದೈವಕೃಪೆಯಿಂದ ದೊರೆತ ಸಾಹಿತ್ಯರಾಶಿ. ಸ್ಮೃತಿ ಎನ್ನುವುದು ಹಿಂದಿನ ಮಹಾಪುರುಷರು ಹೇಳಿದುದನ್ನು ನೆನೆಸಿಕೊಂಡು ಬರೆದ ಗ್ರಂಥರಾಶಿಗಳು. ಹೀಗೆ, ಭಗವದ್ಗೀತೆಯು ಸ್ವಯಂ ಶ್ರೀಕೃಷ್ಣನೇ, ನಾವೆಲ್ಲರೂ ಅವತಾರವೆನ್ನುವ ಶ್ರೀಕೃಷ್ಣನೇ ಹೇಳಿದ್ದರೂ, ಪ್ರಸ್ಥಾನತ್ರಯದಲ್ಲಿ ಒಂದು ಎಂದು ಅಂಗೀಕೃತವಾಗಿದ್ದರೂ, ಅದು ಸ್ಮೃತಿ.

ಮುಂಡಕೋಪನಿಷತ್ತಿನಲ್ಲಿ "ಕವಿಗಳು ಮಂತ್ರಗಳಲ್ಲಿ ಕಂಡ ಕರ್ಮಗಳು ತ್ರೇತೆಯಲ್ಲಿ ನಾನಾವಿಧವಾಗಿ ಹರಡಿದುವು" ಎಂದಿದೆ. ಛಾಂದೋಗ್ಯದಲ್ಲಿ ಮಹಿದಾಸ ಐತರೇಯನ ಹೆಸರಿದೆ: ಆತನೇ ಐತರೇಯ ಬ್ರಾಹ್ಮಣವನ್ನು ತಂದವನು ಎನ್ನುತ್ತಾರೆ, ಇದನ್ನೂ ಗಮನಿಸಬೇಕು.

ಉಪನಿಷತ್ತುಗಳಲ್ಲಿ ಅಲ್ಲಲ್ಲಿ "ಮನುಷ್ಯನು ಹುಟ್ಟಿದುದು ಆಮೇಲೆ: ದೇವನು ಮೊದಲು ಬೇರೆ ಬೇರೆ ಪ್ರಾಣಿಗಳನ್ನು ಹುಟ್ಟಿಸಿ ನೋಡಿ, ಅವನ್ನು ದೇವತೆಗಳು ಒಪ್ಪದಿರಲು ಮನುಷ್ಯನನ್ನು ಹುಟ್ಟಿಸಿದನು. ಆಗ ಅವರೆಲ್ಲರೂ ಸುಕೃತಂ ಸುಕೃತಂ ಎಂದರು" ಎಂದಿದೆ. ಜೊತೆಗೆ ಸಾಂಖ್ಯರ ಪರಿಣಾಮವಾದವೂ ಇದೆ. (ಪರಿಣಾಮ ಎಂದರೆ, ಒಂದರಿಂದ ಒಂದು ಹುಟ್ಟಿತು ಎಂದು) ಒಟ್ಟಿನಲ್ಲಿ ಒಂದು ಮಾತು ನಿಜ. ಉಪನಿಷತ್ತುಗಳೆಲ್ಲಾ ಒಂದೇ ಕಾಲದಲ್ಲಿ ಹುಟ್ಟಿದವುಗಳಲ್ಲ. ಮೊದಲು ಹುಟ್ಟಿದವು ಕೆಲವು. ಕ್ರಮಕ್ರಮವಾಗಿ ಬೆಳೆದು ಕೊನೆಗೆ ಈಗ ಅಪಾರ ವಾಗಿವೆ.

೪. ಉಪನಿಷತ್ತುಗಳ ವೈಶಿಷ್ಟ್ಯ

ನಾವು ಬ್ರಹ್ಮವಿದ್ಯೆಯನ್ನು ಕಲಿಸಿಕೊಡುವ ವೇದಾಂತ ಶಾಸ್ತ್ರವನ್ನು ಉಪನಿಷತ್ತು ಎಂದಿದ್ದೇವೆ. ಭಾರತದಲ್ಲಿ ಈ ಶಾಸ್ತ್ರಕ್ಕೆ ಉಪನಿಷತ್ತು ಎಂದು ಹೆಸರಾದರೆ, ಈ ಹೆಸರಿಲ್ಲದಿದ್ದರೂ ಈ ಶಾಸ್ತ್ರಕ್ಕೆ ಸಮಾನವಾದ ರಹಸ್ಯ ವಿದ್ಯೆಗಳು ಲೋಕದಲ್ಲಿ ಎಲ್ಲೆಲ್ಲಿಯೂ ಇವೆ. "ದೇಶಗಳಲ್ಲೆಲ್ಲಾ ಭಾರತವೇ ಉತ್ತಮವಾದುದು. ಅದರಿಂದ ಏನು ರಹಸ್ಯಗಳಿದ್ದರೂ ಅವೆಲ್ಲ ನಮ್ಮ ದೇಶದಲ್ಲಿಯೇ !" ಎಂಬ ಮಾತಿಗೂ ಅರ್ಥವಿದೆ. ನಮ್ಮ ದೇಶದಲ್ಲಿ ಪ್ರೇಯಸ್ಸಿಗಿಂತ ಶ್ರೇಯಸ್ಸಿಗೇ ಬೆಲೆಯನ್ನು ಕೊಡುವವರು ಹೆಚ್ಚಾಗಿದ್ದರು ಎಂದು ಆ ಖ್ಯಾತಿ ಬಂದಿರುವುದು. ಅದು ಸರಿಯೆಂದು ಒಪ್ಪಿಕೊಂಡರೂ, ಇತರ ದೇಶಗಳಲ್ಲಿ "ಶ್ರೇಯಸ್ವಿಗಳೇ ಇರಲಿಲ್ಲ" ಎನ್ನುವ ವಾದ ಈಗಿನಕಾಲದವರಿಗೆ ಹಿಡಿಯುವುದಿಲ್ಲ. "ಇತರ ದೇಶಗಳಲ್ಲೂ ಬ್ರಹ್ಮವಾದಿಗಳು ಇದ್ದರು. ಗ್ರೀಸ್ ದೇಶದ ಪ್ಲೇಟೋ, ರೋಮ್ ದೇಶದ ಮಾರ್ಕಸ್ ಅರಿಲಿಸ್ ಮೊದಲಾದವರೆಲ್ಲರೂ ಬ್ರಹ್ಮವಾದಿಗಳು. ಚೈನಾದ ಕಾರ್ಫ್ಯೂಷಿಯಸ್ ಮತ್ತು ಲೋ, ಇಂಡಿಯದ ಬುದ್ಧ, ಇಸ್ರೈಯಿಲ್‌ನ ಕ್ರಿಸ್ತ, ಅರೇಬಿಯದ ಪೈಗಂಬರ್ ಇವರೆಲ್ಲರೂ ಬ್ರಹ್ಮಜ್ಞರೇ !" ಎನ್ನುವವರಿದ್ದಾರೆ. ಬ್ರಹ್ಮಜ್ಞರು ಇತರರಿಗೆ ಬ್ರಹ್ಮವನ್ನು ತೋರಿಸಬಲ್ಲವರು. ಬ್ರಹ್ಮವಾದಿಗಳ ವಿಚಾರವು ವಿಸ್ತಾರವಾಗಿದ್ದರೂ, ಇತರರ ಹೃದಯದಲ್ಲಿ ಸಜಾತೀಯ ಎಂದರೆ ಅದೇ ಜಾತಿಯ ವಿಚಾರತರಂಗಗಳನ್ನು ಎಬ್ಬಿಸಬಲ್ಲುದಾದರೂ, ಅಲ್ಲಿ ಬೀಜವಾಗಿ ನಿಂತು ಫಲವಾಗುವವರೆಗೆ ಕರೆದೊಯ್ಯುವ ಸಾಮರ್ಥ್ಯವು ಅವಕ್ಕೆ ಇರುವುದಿಲ್ಲ.

ಉಪನಿಷತ್ತುಗಳಲ್ಲಿಯೂ ಅಲ್ಲಲ್ಲಿ ಇಂತಹ ಬ್ರಹ್ಮವಾದಿಗಳ ವಿಚಾರ ಬಂದಿದೆ. ಪ್ರಶ್ನೋಪನಿಷತ್ತಿನಲ್ಲಿ ಶಿಷ್ಯರಾಗಿ ಬಂದ ಭರದ್ವಾಜ ಮೊದಲಾದವರೆಲ್ಲರೂ ಬ್ರಹ್ಮನಿಷ್ಠರು, ಬ್ರಹ್ಮಪರರು, ಬ್ರಹ್ಮಾನ್ವೇಷಮಾಣರು. ಅಷ್ಟಷ್ಟಾಗಿ ಬ್ರಹ್ಮವನ್ನು ಬಲ್ಲವರು. ಆದರೂ ಭಗವಂತನಾದ

ಪಿಪ್ಪಲಾದನಬಳಿಗೆ ಸರ್ವವನ್ನೂ ಹೇಳುವನೆಂದು ಬಂದರು. " ಯಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ ಭವತಿ " ಯಾವುದೊಂದನ್ನು ತಿಳಿದರೆ ಸರ್ವವೂ ತಿಳಿಯುವುದೋ ಅದು ಬ್ರಹ್ಮ. ಸರ್ವಜ್ಞನಾಗುವ ವರೆಗೂ, ಸರ್ವವಿತ್ ಆಗುವವರೆಗೂ ಬ್ರಹ್ಮವು ತಿಳಿಯುವುದಿಲ್ಲ. ಬ್ರಹ್ಮನಿಷ್ಠತಾ (ಬ್ರಹ್ಮವನ್ನು ಚಿಂತಿಸುವ ಅಭ್ಯಾಸ), ಬ್ರಹ್ಮ ಪರತಾ (ಬ್ರಹ್ಮಕ್ಕಿಂತಲೂ ಹೆಚ್ಚಿನದು ಯಾವುದೂ ಇಲ್ಲ), ಬ್ರಹ್ಮಪರಾ ಯಣತಾ (ಬ್ರಹ್ಮವಲ್ಲದ ಇನ್ನೇನೂ ಬೇಕಿಲ್ಲ) ಇರುವವರೆಲ್ಲರೂ ಬ್ರಹ್ಮ ವಾದಿಗಳು.

ಶ್ವೇತಾಶ್ವತರೋಪನಿಷತ್ತು ಬ್ರಹ್ಮವಾದಿನೋ ವದಂತಿ ಎಂದು ಆರಂಭಿಸುತ್ತದೆ. ಕೇನೋಪನಿಷತ್ತು ಬ್ರಹ್ಮವಾದಿಗಳು ಹೇಗೆ ವಿಚಾರಮಾಡುವರು ಎಂಬುದನ್ನು ತೋರಿಸುತ್ತದೆ. ಹಾಗೆಯೇ ಈಶಾವಾಸ್ಯವು ಬ್ರಹ್ಮವಿತ್ ಆದವನು ಏನು ಹೇಳುತ್ತಾನೆ ಎಂಬುದನ್ನು ತೋರಿಸುತ್ತದೆ. ಈಶಾವಾಸ್ಯಮಿದಂ ಸರ್ವಂ ಎಂಬುದು ತಿಳಿದವನ ಮಾತು. ತಿಳಿಯದವನೂ ಆ ಮಾತನ್ನು ಆಡಬಹುದು. ಆದರೆ ಒಬ್ಬ ನದು ಬ್ಯಾಂಕಿನಲ್ಲಿ ಹಣವಿರುವವನು ಚೆಕ್ ಬರೆದುಕೊಟ್ಟಹಾಗೆ; ಇನ್ನೊಬ್ಬನದು ಬಡವನು ಬರೆದುಕೊಟ್ಟ ಅರ್ಡಿಮ್ಯಾಂಡಿನ ಹಾಗೆ.

ಈ ಬ್ರಹ್ಮವಾದಿಗಳ ಕಥೆಗಳು ಇತರ ಉಪನಿಷತ್ತುಗಳಲ್ಲಿಯೂ ಬಂದಿವೆ. ಛಾಂದೋಗ್ಯದ ಶ್ವೇತುಕೇತುವಿನ ಕಥೆಯನ್ನು ನೋಡಿ. ವಿದ್ಯಾವಂತನಾದ ಶ್ವೇತುಕೇತುವನ್ನು ಜೈವಲಿಪ್ರವಾಹಣನೆಂಬ ರಾಜನು ಕೆಲವು ಪ್ರಶ್ನೆಗಳನ್ನು ಕೇಳುತ್ತಾನೆ: " ಜನರು ಸತ್ತಮೇಲೆ ಎಲ್ಲಿಗೆ ಹೋಗುವರು ?" " ದೇವಯಾನ ಪಿತೃಯಾನಗಳು ಎಲ್ಲಿ ಒಡೆಯವುವು ?" " ಬಹುಜನರು ಬರುತ್ತಿದ್ದರೂ ಪಿತೃಲೋಕವು ತುಂಬದಿರುವುದೆಂತು ?" " ಐದನೆಯ ಸಲ ಆಹುತಿಯಾದಾಗ ಆಪವು ಪುರುಷನೆನ್ನಿಸಿಕೊಳ್ಳುವು ದೆಂತು ?"

ಈ ಪ್ರಶ್ನೆಗಳಿಗೆ ಶ್ವೇತಕೇತುವು ಉತ್ತರಕೊಡಲಾರದೆಹೋದನು. ಹೋಗಿ ತಂದೆಯನ್ನು ಕೇಳಿದನು ; ಆತನಿಗೂ ತಿಳಿಯದು. ಕೊನೆಗೆ

ತಂದೆ ಮಕ್ಕಳಿಬ್ಬರೂ ಹೋಗಿ ಆತನಲ್ಲಿಯೇ ಅದೆಲ್ಲವನ್ನೂ ಕೇಳಿ ಬಂದರು.

ಇನ್ನೊಂದು ಕಥೆ. ಪ್ರಾಚೀನಶಾಲ, ಸತ್ಯಯಜ್ಞ, ಇಂದ್ರ ದ್ಯುಮ್ನ, ಜನ, ಬುಡಿಲ ಎಂಬುವರು ಮಹಾ ಶ್ರೋತ್ರಿಯರು. ಅವರು ಆತ್ಮವಿಚಾರ ನಡೆಸಿದರು. ಅವರು ಉದ್ದಾಲಕನು ಹೇಳಿದಂತೆ ಹೋಗಿ ಅಶ್ವಪತಿಯನ್ನು ಆಶ್ರಯಿಸಿದರು; ಆತನ ಅಪ್ಪಣೆ ಪಡೆದು ಸಮಿತ್ಪಾಣಿಗಳಾಗಿ ಆತನ ಬಳಿ ಸಾರಿದರು. ಆತನು ಅವರಿಗೆ ಉಪ ನಯನಮಾಡಿ, ಆತ್ಮವಿದ್ಯೆಯನ್ನು ಕಲಿಸಿದನು. ಅವರು ಮಹಾ ಶ್ರೋತ್ರಿಯರು; ಕರ್ಮರಹಸ್ಯವನ್ನು ಬಲ್ಲವರು; ಆದರೂ ಅವರಿಗೆ ಆತ್ಮವಿದ್ಯೆಯನ್ನು ಪಡೆಯಲು ಅಧಿಕಾರವು ಬರಲೆಂದು ಉಪನಯನ ಮಾಡಿಸಿದನು.

ತೈತ್ತರೀಯದಲ್ಲಿ ಇನ್ನೊಂದು ಕಥೆಯಿದೆ (ಭೃಗುವಲ್ಲಿ ನೋಡಿ). ವರುಣನ ಮಗನಾದ ಭೃಗುವು ತಂದೆಯಬಳಿಗೆ ಹೋಗಿ ನನಗೆ ಬ್ರಹ್ಮ ವಿದ್ಯೆಯನ್ನು ಕಲಿಸು ಎಂದನು. ಆತನು ಅನ್ನ ಪ್ರಾಣ ಚಕ್ಷುಃ ಶ್ರೋತ್ರ ಮನೋ ವಾಕ್ ಎಂದನು. ಜೊತೆಗೆ "ಬ್ರಹ್ಮದ ಲಕ್ಷಣವಿದು. ಯಾವು ದರಿಂದ ಈ ಭೂತಗಳೆಲ್ಲವೂ ಹುಟ್ಟುವುವೋ, ಹುಟ್ಟಿದವು ಯಾವು ದರಿಂದ ಬದುಕುವುವೋ, ಕೊನೆಗೆ ಯಾವುದರಲ್ಲಿ ಎಲ್ಲವೂ ಲಯವಾಗು ವುವೋ ಅದು ಬ್ರಹ್ಮ" ಎಂದು ಹೇಳಿದನು. ಭೃಗುವು ಅನ್ನಾದಿಗ ಳಲ್ಲಿ ಬ್ರಹ್ಮದ ಲಕ್ಷಣವಿದೆ; ಆದರೂ ಅವು ಬ್ರಹ್ಮವಲ್ಲ; ಅಲ್ಲಿಂದ ಆಚಿನದು ಬ್ರಹ್ಮ ಎಂದು ತಪಸ್ಸಿನಿಂದ ಕಂಡುಕೊಂಡನು. ಹಾಗೆ ಕೊನೆಯಲ್ಲಿ ಬ್ರಹ್ಮ ಎಂದು ತಿಳಿಯುವವರೆಗೂ ಭೃಗುವು ಬ್ರಹ್ಮವಾದಿ, ಬ್ರಹ್ಮನಿಷ್ಠ, ಬ್ರಹ್ಮಪರ, ಬ್ರಹ್ಮಪರಾಯಣ, ಆದರೂ ಬ್ರಹ್ಮವಿತ್ ಅಲ್ಲ.

ಕಠದಲ್ಲಿ (೨-೨೩) "ಈ ಆತ್ಮನು ಪ್ರವಚನದಿಂದ ಲಭ್ಯ ನಲ್ಲ; ಮೇಧಾಶಕ್ತಿ, ಬಹುಶ್ರುತತ್ವ ಇವುಗಳಿಂದಲೂ ದೊರೆಯುವುದಿಲ್ಲ. ಆತನು ಯಾವನಿಗೆ ಒಲಿಯುವನೋ ಆತನಿಗೆ ಮಾತ್ರ ದೊರೆಯು ವನು." ಎಂದಿದೆ ಆತನ ಒಲುಮೆಯನ್ನು ಪಡೆಯುವುದಕ್ಕೆ

ಒದ್ದಾಡುವುದು ಬೇರೆ; ಆತನ ಒಲುಮೆಯನ್ನು ಪಡೆಯುವುದು ಬೇರೆ. ಆ ಒಲುಮೆಯು ಬೇಕೆಂದವನು ಬ್ರಹ್ಮವಾದಿ; ಆ ಒಲುಮೆ ಸಿಕ್ಕಿದವನು ಬ್ರಹ್ಮವಿತ್.

ಬ್ರಹ್ಮವಿತ್ತನ್ನು ಮಾಡುವ ಬ್ರಹ್ಮವಿದ್ಯೆಯನ್ನು ಬೋಧಿಸುವುದು ಉಪನಿಷತ್ತು.

ಈ ಬ್ರಹ್ಮವಿದ್ಯೆಯು ಇಂಥವರಲ್ಲಿ ಉಂಟು; ಇಂಥವರಲ್ಲಿ ಇಲ್ಲ; ಈ ದೇಶದಲ್ಲುಂಟು; ಇನ್ನೊಂದು ದೇಶದಲ್ಲಿ ಇಲ್ಲ ಎನ್ನುವಂತಿಲ್ಲ. ಇದು ನೀರು ಸಿಕ್ಕುವವರೆಗೂ ಅಗೆ ಎಂಬ ಉಪದೇಶದಂತೆ. ಕೆಲವು ಕಡೆ ಮೇಲೆಯೇ ನೀರು ಸಿಕ್ಕಬಹುದು; ಇನ್ನು ಕೆಲವುಕಡೆ ನೀರು ಬಲು ಆಳ ತೋಡಿದಮೇಲೆ ಸಿಕ್ಕಬಹುದು. ಅಂತೂ ಜನ ನೀರಿಲ್ಲದೆ ಬದುಕುವುದಿಲ್ಲ. ಉಪ್ಪುನೀರೋ ಸಿಹಿನೀರೋ ಅಂತೂ ನೀರಿಲ್ಲದೆ ಜೀವನವಿಲ್ಲ. ಅದರಂತೆಯೇ, ಅಲ್ಪಾಲ್ಪವಾಗಿ, ಬಹುಬಹುವಾಗಿ ಎಲ್ಲರೂ ಬ್ರಹ್ಮವನ್ನು ಹಿಡಿದೇ ಬದುಕುವುದು. ಅಷ್ಟೇ ಅಲ್ಲ. ಉತ್ಪತ್ತಿ ಸ್ಥಿತಿ ಲಯಗಳೆಲ್ಲವೂ ಬ್ರಹ್ಮದಿಂದ. ಅದರಿಂದ, ಈ ಮೂರು ಕಾರ್ಯ ಗಳು ಎಲ್ಲೆಲ್ಲಿ ನಡೆಯುವುವೋ ಅಲ್ಲೆಲ್ಲ ಬ್ರಹ್ಮವಿದ್ದೇ ಇದೆ. ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮಜೀವಿಯಾದ ಅಮೀಬಾ, ಯೀಸ್ಟ್ ಮೊದಲಾ ದವೂ ಅದರಿಂದಲೇ ಹುಟ್ಟುವುದು. ತಿಮಿಂಗಿಲ, ಆನೆಗಳೂ ಅದ ರಿಂದಲೇ! ಈ ತತ್ವವನ್ನು ಹಿಡಿದು, ಉಪನಿಷತ್ತುಗಳು, "ಆ ಆನಂದ ಸ್ವರೂಪವಾದ ಬ್ರಹ್ಮದ ಮಾತ್ರಾ ಎಂದರೆ ಒಂದು ಸಣ್ಣಭಾಗ, ಅದನ್ನು ಹಿಡಿದು ಎಲ್ಲವೂ ಬದುಕುವುವು.", "ಅದಿಲ್ಲದಿದ್ದರೆ ಯಾವುದು ತಾನೇ ಇರಬಲ್ಲುದು?" ಎಂದು ಮುಂತಾಗಿ ಹೇಳಿದುದು: ಇದು ಉಪನಿಷ ತ್ತುಗಳ ವೈಶಿಷ್ಟ್ಯ.

ಉಪನಿಷತ್ತುಗಳಲ್ಲಿ ಹೇಳಿರುವುದು ಪೂರ್ಣವಾದ. "ಬ್ರಹ್ಮ ಪೂರ್ಣವಾಗಿದೆ. ಅದರ ಪೂರ್ಣತ್ವಕ್ಕೆ ಹೇಗೆ ಹೇಗೂ ಯಾವಾಗಲೂ ಕೊರತೆ ಇಲ್ಲ. ಅದರಿಂದ ಬರುವುದೂ ಪೂರ್ಣವೇ! ಪೂರ್ಣದಿಂದ ಏನನ್ನು ಈಚೆಗೆ ತೆಗೆದರೂ ಅದೂ ಪೂರ್ಣವೇ! ಪೂರ್ಣದಿಂದ ತೆಗೆದರೂ

ಪೂರ್ಣಕ್ಕೆ ಸೇರಿಸಿದರೂ ಆ ಪೂರ್ಣವು ಪೂರ್ಣವಾಗಿಯೇ ಇರುವುದು.''

ಮನುಷ್ಯನನ್ನು ಅಳೆಯುವ ಕೋಲು ಯಾವುದು ಎಂಬುದು ಇನ್ನೊಂದು ಪ್ರಶ್ನೆ. ಮನುಷ್ಯನು ಎಷ್ಟು ಆನಂದವನ್ನು ಅನುಭವಿಸಬಲ್ಲನು ಎಂಬುದು, ಅವನ ಆನಂದಾನುಭವ ಶಕ್ತಿ ಅವನವನ ಅಳತೆಗೋಲು. ಈ ವಿಷಯವನ್ನು ಉಪನಿಷತ್ತು ಅಲ್ಲದೆ ಇನ್ನು ಯಾವುದೂ ಹೇಳಿಲ್ಲ.

೫. ವಿಶಾಲದೃಷ್ಟಿ

ಹಾಗೆಯೇ, ಈ ಲಕ್ಷಣವನ್ನು ಹಿಡಿದು ಯಾರು ಏನು ಹೇಳಿದರೂ ಅದೂ ಉಪನಿಷತ್ತೇ! ಆದರೆ ಉಪನಿಷತ್ತು ತನ್ನಂತಿರುವ ಕಾಳನ್ನು ಕಾಯಬಲ್ಲ ಕಾಳು. ಅದನ್ನು ಕುರಿತು ನಡೆಸುವ ಪ್ರವಚನವು ಜಳ್ಳು. ಅದರಲ್ಲಿ ಕಾಳಿನ ಲಕ್ಷಣವೆಲ್ಲ ಇದೆ; ಆದರೆ ಅದರಲ್ಲಿ ಮೊಳೆತು, ಬೆಳೆದು, ತೆನೆ ಬಿಡುವ ಸಾಮರ್ಥ್ಯವಿಲ್ಲ. ಜೊತೆಗೆ ಬೀಜದ ಕಾಳಾಗದಿರುವ ಕಾಳುಗಳೂ ಉಂಟು. ಹಾಗೆಂದು, ಉಪನಿಷತ್ತುಗಳು ಇರುವುದು ನಮ್ಮಲ್ಲಿಯೇ ಎಂಬ ಅಹಂಕಾರವು ಬಂದರೆ ಅದು ಮಮತೆಯ ವಿಕಾರವೆನ್ನಬೇಕು.

ಈ ಮಮತೆ ನಮ್ಮಲ್ಲಿ ಬಹಳವಾಗಿ ಬೆಳೆದಿದೆ. ನಮ್ಮ ಹಿಂದಿನ ಸಂಪ್ರದಾಯಗಳಲ್ಲಿ ಬೆಳೆದವರು ಕರ್ಮಾನುಷ್ಠಾನಗಳಲ್ಲಿ ಬೇಕಾದ ಶೌಚಾಚಾರಧರ್ಮಗಳನ್ನು ಬ್ರಹ್ಮ ವಿಚಾರದಲ್ಲಿಯೂ ಅನ್ವಯಿಸುವಮಟ್ಟಿಗೆ ಆವರಣರೂಪವಾದ ಅವಿದ್ಯೆಗೆ ಬಲಿಯಾಗಿದ್ದಾರೆ. ಈಗಿನವರು ವಿಕ್ಷೇಪರೂಪವಾದ ಅವಿದ್ಯೆಗೆ ಬಲಿಯಾಗಿ ನಾಮಸಾಮಾನ್ಯ ರೂಪಸಾಮಾನ್ಯಗಳಿಂದ ವಸ್ತುಸಾಮಾನ್ಯವೆನ್ನುವಮಟ್ಟಿಗೆ ಆಗಿದ್ದಾರೆ. ಬಲ್ಲವರ ದೃಷ್ಟಿಯಲ್ಲಿ ಆವರಣ ವಿಕ್ಷೇಪಗಳೆರಡೂ ಅವಿದ್ಯೆಗಳೇ! ಇವೆರಡೂ ಅವಲಕ್ಷಣಗಳೇ! ಇವೆರಡೂ ಕಳೆಯುವ ಕಾಲ ಬಂದಿದೆ. ಇವೆರಡೂ ನಿರ್ಮೂಲಗಳಾಗಿ, ವಸ್ತುವನ್ನು ವಸ್ತುತಂತ್ರವಾಗಿ ನೋಡುವುದರ

ಜೊತೆಗೆ ಎಲ್ಲವೂ ಚೈತನ್ಯ, ಆ ಚೈತನ್ಯ ಮಾತ್ರವೇ ಶರೀರವಾಗಿರುವ ಆ ವಸ್ತುವು ಎಲ್ಲಕ್ಕೂ ದೊಡ್ಡದು ಎಂಬ ಸನ್ಮಾರ್ಗವು ದೊರೆಯ ಬೇಕು.

ಚಿನ್ನವು ಆಸ್ಟ್ರೇಲಿಯದ್ದೋ, ಕ್ಯಾಲಿಫೋರ್ನಿಯದ್ದೋ, ಆಫ್ರಿಕದ್ದೋ, ಇಂಡಿಯದ್ದೋ ಎಂಬುದು ಪ್ರಶ್ನವಲ್ಲ, ಚಿನ್ನವು ಎಷ್ಟು ಬಣ್ಣದ್ದು ಎಂಬ ಪ್ರಶ್ನ. ಅದರಂತೆ, 'ಸ್ಕ್ರಿಪ್ಚರ್' ಯಾರದು ಎಂಬುದಲ್ಲ ಪ್ರಶ್ನೆ. ಅದೆಷ್ಟು ದೂರ ನಮ್ಮನ್ನು ಬ್ರಹ್ಮದತ್ತ ಕರೆದೊಯ್ಯುವುದು ಎಂಬುದು ಪ್ರಶ್ನವಾಗಬೇಕು. ಆ ವಿಶಾಲದೃಷ್ಟಿ ನಮ್ಮಲ್ಲಿ ಮೂಡಲಿ.

ಕಮಲವು ಅರಳಿದಾಗ ಅದರ ಪರಿಮಳವು ಸುತ್ತಲೂ ಹರಡುವುದು. ಅದು ಮುಚ್ಚಿಕೊಂಡಾಗ ಪರಿಮಳವೂ ಇಲ್ಲವಾಗುವುದು. ಹಾಗೆ, ಭಾರತ ಸಂಸ್ಕೃತಿಯು ಒಂದಾನೊಂದು ಕಾಲದಲ್ಲಿ ಅರಳಿ ಸುತ್ತಲೂ ತನ್ನ ಪರಿಮಳವನ್ನು ಬೀರಿತು. ಸಂಜೆಯಾಗಿ ಸೂರ್ಯನು ಮುಳುಗಿದಾಗ ಕಮಲವು ಮುಚ್ಚಿಕೊಳ್ಳುವುದಂತೆ. ಹಾಗೆಯೇ ಭಾರತದ ಅದೃಷ್ಟ ಸೂರ್ಯನು ಮುಳುಗಿ ಭಾರತ ಸಂಸ್ಕೃತಿಯು ಮುಚ್ಚಿಕೊಂಡ ಕಮಲವಾಯಿತು. ಈಗ ಮತ್ತೆ ಸೂರ್ಯೋದಯವಾಗಿದೆ. ಕಮಲವು ಅರಳಲಿ, ಅರಳಿದ ಗುರುತಾಗಿ ಸೌರಭವು ಹರಡಲಿ.

೬. ಶ್ರೇಯಸ್ಸು : ಪ್ರೇಯಸ್ಸು

ಕಠೋಪನಿಷತ್ತಿನಲ್ಲಿ ಹೇಳಿರುವಂತೆ ಜೀವನದ ಗುರಿಗಳು ಎರಡು : ಶ್ರೇಯಸ್ಸು ; ಪ್ರೇಯಸ್ಸು. ಪ್ರೇಯಸ್ಸಿಗಿಂತಲೂ ಶ್ರೇಯಸ್ಸು ಹೆಚ್ಚು ಎಂದವನು ಬದುಕಿನ ಸಂಪೂರ್ಣವಾದ ಬೆಳೆಯನ್ನು ನೋಡುವನು. ಕಾಮ ಕಾಮುಗಳಿಗೆ ವಶನಾಗಿ ಅವುಗಳ ಪೂರ್ಣತೆಗಾಗಿ ಅಲೆಯುವುದು ಒಂದು ಘಟ್ಟ. ಇದ್ದೆಡೆ ಕಾಮಾನ್ನೀ, (ಪುಟ ೬೯-ಟಿಪ್ಪಣಿ ನೋಡಿ) ಕಾಮರೂಪಿಯಾಗಿ ಮೆರೆಯುವುದು ಒಂದು ಘಟ್ಟ. ಮೊದಲನೆಯದು ಪ್ರೇಯಸ್ಸು. ಎರಡನೆಯದು ಶ್ರೇಯಸ್ಸು. ಎರಡನೆಯದು ಉಪನಿಷತ್ತುಗಳಲ್ಲಿ ಹೇಳಿರುವುದು.

ಪ್ರೇಯಸ್ಸು ಸುಖ ದುಃಖಗಳನ್ನು ಒಪ್ಪಿಕೊಂಡ ಅಪೂರ್ಣವಾದ. ಸುಖ ದುಃಖಗಳ ಆಚೆ ಆನಂದ, ಅದನ್ನು ಪಡೆಯಲು ಸಾಧ್ಯವೆಂಬ ಪೂರ್ಣವಾದವು ಶ್ರೇಯಸ್ಸು.

ಈ ಪೂರ್ಣವಾದವು ನಮಗೆ ಚೆನ್ನಾಗಿ ಅರ್ಥವಾಗುವುದಕ್ಕೆ ಎರಡು ಅಡ್ಡಿಗಳಿವೆ. ಒಂದು ಕಾಲ ದೇಶ ಎಂಬ ಅಡ್ಡಿ. ಇವೆರಡೂ ಒಂದೆ! ಕಾಲವನ್ನು ಬಿಟ್ಟು ದೇಶವಿಲ್ಲ; ದೇಶವನ್ನು ಬಿಟ್ಟು ಕಾಲವಿಲ್ಲ. ಕಾಲ ದೇಶವೆಂಬ ಅಡ್ಡಿ ಹೊರಗಿನದು: ಎಂದರೆ—ಮನುಷ್ಯರು ಇದನ್ನು ಏನೂ ಮಾಡಲಾರರು. ಯಾವ ರೀತಿಯಾಗಿಯೂ ಇದನ್ನು ಹೆಚ್ಚುಕಡಿಮೆಮಾಡಲು ಸಾಧ್ಯವೇ ಇಲ್ಲ.

ವೇದಾಂತದಲ್ಲಿ ಪುರುಷತಂತ್ರ, ವಸ್ತುತಂತ್ರ ಎಂಬ ಎರಡು ಮಾತು ಬಹಳಸಲ ಬರುತ್ತದೆ. ಪುರುಷತಂತ್ರವೆಂದರೆ ಮನುಷ್ಯನು ತನಗೆ ತೋರಿದಂತೆ ಮಾಡಬಹುದಾದುದು. ಅಡುಗೆಯು ಪುರುಷ ತಂತ್ರ. ವಸ್ತುತಂತ್ರ ಎಂದರೆ ಹಾಗಲ್ಲ; ಪುರುಷನು ಅಲ್ಲಿ ಏನೂ ಮಾಡುವಂತಿಲ್ಲ. ಉದಾಹರಣೆಗೆ ನದಿಯ ನೀರು; ಬಿಸಿಲು; ಮೊದಲಾದವು.

ಇಂಗ್ಲಿಷಿನಲ್ಲಿ ಹೇಳುವುದಾದರೆ, ಪುರುಷನ ಕೈಯಲ್ಲಿರುವುದೆಲ್ಲ subjective. ಅವನ ಕೈಯಲ್ಲಿಲ್ಲದೆ ವಸ್ತುತಂತ್ರವಾಗಿರುವುದೆಲ್ಲ objective. (ತಂತ್ರ ಎಂಬ ಶಬ್ದವನ್ನು ಸ್ವ-ತಂತ್ರ, ಪರ-ತಂತ್ರ ಎಂಬಲ್ಲಿಯೂ ಇದೇ ಅರ್ಥದಲ್ಲಿ ಉಪಯೋಗಿಸುತ್ತೇವೆ). ಇದನ್ನು ಅರ್ಥಮಾಡಿಕೊಂಡರೆ, ನಾವು ಪೂರ್ಣವನ್ನು ಅರ್ಥಮಾಡಿಕೊಳ್ಳುವುದು ಎಷ್ಟು ಕಷ್ಟ ಎನ್ನುವುದು ತಿಳಿಯುವುದು. ಪುರುಷನು ಸ್ವತಂತ್ರ ಎನ್ನುತ್ತಿರುವಲ್ಲಿ, ತಾನು ಪ್ರತ್ಯೇಕ, ತನಗೆ ಎಲ್ಲವೂ ವಶವಾಗಿದೆ ಎಂಬ ಅರ್ಥ. ಆದರೆ ವಾಸ್ತವ್ಯವಾಗಿ ಪುರುಷನು ಕಾಲದೇಶಗಳಿಗೆ ವಶನಾಗಿ ನಡೆಯುತ್ತಿದ್ದಾನೆ. ಕಾಲಪುರುಷನಿಗೆ ಎಲ್ಲವೂ ವಶ ಎಂಬುದು ಸಾಮಾನ್ಯವಾಗಿ ನಮಗೆ ನೆನೆಪಿರುವುದಿಲ್ಲ. ನಾವು ಸೋತಾಗ ಕಾಲ ದೇಶಗಳು ನಮಗಿಂತ ಬಲವೆಂಬುದು ಅರಿವಾಗುತ್ತದೆ. ಆ ಕಾಲ

ದೇಶಗಳ ಪ್ರಭಾವದಿಂದ ಎಲ್ಲ ಅಪೂರ್ಣವಾಗಿ ಕಾಣುತ್ತಿದೆ. ನಾವು ಕಾಲ ದೇಶಗಳ ಪ್ರಭಾವವನ್ನು ಕಿತ್ತೊಗೆದರೆ, ಆಗ ನಮಗೆ ಗೋಚರ ವಾಗುವುದು ಪೂರ್ಣ. ಹೀಗೆ ಪೂರ್ಣವನ್ನು ಅಪೂರ್ಣವಾಗಿ ಕಾಣಿ ಸುವಂತೆ ಮಾಡುತ್ತಿರುವುದು, ಉಪಾಧಿ. ಉಪಾಧಿಯನ್ನು ದಾಟಿದರೆ ಬ್ರಹ್ಮ. ಅದು ಆನಂದಸ್ವರೂಪವಾದುದು. ಅದನ್ನು ಕಾಣುವ ದಾರಿಯೇ ಬ್ರಹ್ಮವಿದ್ಯೆ. ಅದನ್ನೇ ಉಪನಿಷತ್ತುಗಳು ಬೋಧಿಸು ವುದು.

ಈ ಅಂಶವು ಗಹನವಾದುದು. ಆದುದರಿಂದ ಇನ್ನೂ ಒಂದು ಸಲ ವಿಮರ್ಶಿಸೋಣ. ಬೃಹದಾರಣ್ಯಕೋಪನಿಷತ್ತಿನಲ್ಲಿ ಅಭ್ಯಾ ರೋಹಣ ಎಂಬ ಮಂತ್ರವೊಂದಿದೆ. ಅದನ್ನು ಜಪಮಾಡಿ ಸಿದ್ಧರಾದ ವರಿಗೆ ಇಲ್ಲಿಯೇ ದೇವತ್ವಬರುವುದಂತೆ. ಅದು ಇದು :

ಅಸತೋಮಾ ಸದ್ಗಮಯ । ತಮಸೋಮಾ ಜ್ಯೋತಿರ್ಗಮಯ । ಮೃತ್ಯೋರ್ಮಾಮಮೃತಂ ಗಮಯ । ಅದರರ್ಥವಿದು: " ಅಸತ್ತಿನಿಂದ ನನ್ನನ್ನು ಸತ್ತಿಗೆ ನಡೆಸು, ಕತ್ತಲಿನಿಂದ ನನ್ನನ್ನು ಬೆಳಕಿಗೆ ನಡೆಸು, ಮೃತ್ಯುವಿನಿಂದ ನನ್ನನ್ನು ಅಮೃತಕ್ಕೆ ನಡೆಸು ".

ಇದನ್ನು ವಿಚಾರಮಾಡಿ ನೋಡಿ. ಈಗಿನ ನಮ್ಮ ವ್ಯವಹಾರ ಹೇಗಿದೆ ? ಎಲ್ಲಾ ಅಸತ್ತಿನಲ್ಲಿ. ನಮ್ಮ ವ್ಯವಹಾರದಲ್ಲಿ ನಾವು ಸಾಧು ವೆಂದು ಅಂಗೀಕರಿಸಿರುವ ಸರ್ವವೂ " ಶ್ವೋಽಭಾವ "ಗಳು. ನಮ್ಮ ಮನಸ್ಸಿನ ಆಪ್ಯಾಯನ ಎಂದರೆ ಸಂತೋಷಕ್ಕಾಗಿ ನಾವು ಬೇಕೆನ್ನುತ್ತಿ ರುವ ಸರ್ವವೂ " ಶ್ವೋಽಭಾವ" ಎಂದರೆ, ನಾಳೆಯವರೆಗೂ ಇರುವ ವಲ್ಲ. ಈ ವಿಷಯ ನಮಗೆ ತಿಳಿಯದುದೂ ಅಲ್ಲ. ಆದರೂ ನಾವು ಹಂಬಲವನ್ನು ಬಿಟ್ಟಿದ್ದೇವೇನು ? ಇದನ್ನು ಕಣ್ಣಿಟ್ಟು ನೋಡಿ ಬೇಸತ್ತ ವನು ಏನು ಕೇಳಬೇಕು ? ಆ ಬೇಸತ್ತ ಮನಸ್ಸಿನ ಪ್ರಾರ್ಥನೆಯು ಅಸತೋ ಮಾ ಸದ್ಗಮಯ ಎಂದಲ್ಲದೆ ಇನ್ನೇನಾಗಬಲ್ಲುದು ? ಯೋಚಿಸಿ: ಈ ಪ್ರಾರ್ಥನೆ ಬೆಳೆದ ಬಲಿತ ಮನಸ್ಸಿನದೋ ? ಅಥವಾ ಎಳೆಯದೋ, ರುಗ್ಣ (sick) ವೋ ಆದ ಮನಸ್ಸಿನದೋ ?

ಎರಡನೆಯದು ತಮಸೋ ಮಾ ಜ್ಯೋತಿರ್ಗಮಯ. ಇದೂ ಅಷ್ಟೇ! ಅನೇಕರಿಗೆ ಅರ್ಥವಾಗದಿದ್ದರೂ ಸತ್ಯವಾದ ಒಂದು ಅಂಶ. ನಾವು ಈಗ ಜ್ಞಾನವನ್ನು ಆರ್ಜಿಸಬೇಕು ಎನ್ನುತ್ತಿದ್ದೇವೆ; ಸೈಸ್ಸ್ ಸತ್ಯವನ್ನು ಕಾಣಬೇಕೆಂಬ ಸದುದ್ದೇಶವನ್ನು ಇಟ್ಟುಕೊಂಡಿದೆ; ಎಲ್ಲರೂ ವಿದ್ಯಾರ್ಜನ ಮಾಡಬೇಕು ಎನ್ನುತ್ತಿದ್ದಾರೆ; ಇವೆಲ್ಲ ಹೇಳುವುದೇನು? ನಾವು ಕತ್ತಲಿನಲ್ಲಿದ್ದೇವೆ ಎಂದು ಮನಗಂಡವರ ಮಾತು. ಕತ್ತಲು ನಮ್ಮ ಹುಟ್ಟುಗುಣವಲ್ಲ; ಅದರಿಂದ ಅದನ್ನು ನಿವಾರಿಸಬೇಕು. ಅದರಿಂದ ಆಚೆಗೆ ಏನಿದೆ? ಬೆಳಕಿದೆ, ಜ್ಞಾನವಿದೆ. ಆದರೆ, ನಾವು ಬೆಳಕಿನಲ್ಲಿ, ಜ್ಞಾನದಲ್ಲಿ, ವೈವಿಧ್ಯವನ್ನು ನೋಡುತ್ತಿದ್ದೇವೆ. ಕೈಯಲ್ಲಿರುವ ಟಾರ್ಚ್, ಯಾವುದನ್ನು ಬೇಕಾದರೂ ಬೆಳಗಬಲ್ಲುದು. ಅದು ನಮಗೆ ಗೊತ್ತಿದೆ. ಹಾಗೆಯೇ ನಾವಾರ್ಜಿಸುವ ಜ್ಞಾನವು ಬೇಕೆಂದ ಕಡೆ ತಿರುಗಿ ಅದನ್ನು ನಮಗೆ ಅರಿಯಿಸಿ ಕೊಡಬಲ್ಲುದೆ? ಅಂತಹದೊಂದು ಜ್ಞಾನವಿದ್ದರೆ, ಅದು ಸಂತತವಾಗಿ ಸರ್ವತ್ರ ಬೆಳಗಬೇಕಲ್ಲವೆ? ಅಂತಹ, ಸರ್ವಕಾಲದಲ್ಲಿಯೂ ಸರ್ವದೇಶದಲ್ಲಿಯೂ ಬೆಳಗುವ ಜ್ಯೋತಿ ಯಾರಿಗೆ ಬೇಡ? ಅದು ಎರಡನೆಯ ವಾಕ್ಯದ ಅರ್ಥ.

ಮೂರನೆಯದು ಇನ್ನೂ ವಿಚಿತ್ರ. ಮೃತ್ಯೋರ್ಮಾಮೃತಂ ಗಮಯ. ಮೃತ್ಯುವಿನಿಂದ ನನ್ನನ್ನು ಅಮೃತದ ಕಡೆಗೆ ನಡೆಸು. ಈಗಿನ ನಮ್ಮ ವ್ಯವಹಾರದಿಂದಲೇ ಇದನ್ನು ಅಳೆಯೋಣ. ನಾವು ಈಗ ಎಲ್ಲೆಲ್ಲೂ ಕಾಣುತ್ತಿರುವುದು ಮೃತ್ಯುವನ್ನಲ್ಲವೇನು? ವ್ಯಕ್ತಿಯಾಗಿ, 'ನಾವು ಏನು ತಿಂದರೇನು ಆಗುವುದೋ? ಏನು ಮಾಡಿದರೆ ಏನು ಹಾನಿಯಾಗುವುದೋ?' ಎಂದು ತಾನೇ ನೋಡುತ್ತಿರುವುದು? ನಾವು ಇತರರನ್ನು, ಒಂದು ಸೊಳ್ಳೆ, ಒಂದು ಹುಳು, ಒಂದು ಹಾವು, ಇವುಗಳನ್ನು,—ನಮ್ಮೆದುರು ಬಂದವರನ್ನು, ಏನೆಂದು ಕಾಣುತ್ತಿದ್ದೇವೆ? ಶತ್ರುಗಳೆಂದೋ ಮಿತ್ರರೆಂದೋ? ಇಲ್ಲಿದೆ ಜೀವನದ ಗುಟ್ಟು. ಲೋಕವೆಲ್ಲಕ್ಕೂ ತಾನು ಪ್ರತಿಯಾಗಿರುವಂತೆ, ತನಗೆ ಲೋಕವೆಲ್ಲವೂ ಪ್ರತಿಯಾಗಿರುವಂತೆ ಭಾವಿಸುತ್ತಿರುವುದರ ಗುರುತೇನು? ಅಥವಾ ಗುಟ್ಟೇನು?

ಈ ಗುಟ್ಟು ಬಿಚ್ಚಿದರೆ, ಆಗ ನಾವು ಇರುವುದು ಮೃತ್ಯುಮಂಡಲದಲ್ಲಿ ಎಂಬುದು ಅರ್ಥವಾಗುವುದು. ಆಗ ನಾವೇನು ಮಾಡುವೆವು ?

ವ್ಯಕ್ತಿಗಳಂತೆಯೇ ರಾಷ್ಟ್ರಗಳೂ ಇತರರನ್ನು ಶತ್ರುವಿನಂತೆ ಕಾಣುತ್ತ, ತಾವಿರುವುದು ಶತ್ರುಮಂಡಲದಲ್ಲಿ ಎಂಬಂತೆ ವರ್ತಿಸುತ್ತಿದ್ದಾರಲ್ಲವೆ ? ಇದು, ಈ ದುಷ್ಟವರ್ತುಲ, ಭೇದಿಸುವುದೆಂತು ? ಅದಕ್ಕೆ ಉತ್ತರ ಮೃತ್ಯೋರ್ಮಾಮಮೃತಂ ಗಮಯ.

ಭಗವದ್ಗೀತೆಯು ತನ್ನದೇ ಆದ ರೀತಿಯಲ್ಲಿ ಈ ಅಭ್ಯೂಹನ ಮಂತ್ರದ ಅರ್ಥವನ್ನು ಉಪದೇಶಮಾಡಿದೆ :—ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ಎಂದು ಒಂದು ಕಡೆ ; ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ ಎಂದು ಇನ್ನೊಂದು ಕಡೆ. ಇದಕ್ಕೆ ಸಂವಾದಿಯಾಗಿ ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ಎಂದು ಮತ್ತೊಂದು ಕಡೆ. “ಒಬ್ಬರನ್ನೊಬ್ಬರು ಗೌರವಿಸಿ ಬಾಳಿ ಪರಮ ಶ್ರೇಯಸ್ಸನ್ನು ಪಡೆಯಿರಿ” “ಎಲ್ಲರ ಹೃದಯದಲ್ಲೂ ನಾನಿರುವೆನು” “ಈಶ್ವರನು ಸರ್ವ ಭೂತಗಳಲ್ಲಿಯೂ ಇದ್ದಾನೆ” ಎಂದು ಆ ಮಂತ್ರಗಳ ಅರ್ಥಗಳು*. ಆದರೆ ನಮ್ಮ ವ್ಯವಹಾರದಲ್ಲಿ ಹಾಗಿದೆಯೇ ? ಉಪನಿಷತ್ತುಗಳ ಅಧ್ಯಯನದಿಂದ ಇದು ಕಳೆದು ನಮ್ಮ ಹೃದಯವು ಬದಲಾಯಿಸುವುದು. ಮನೋಭಾವವು ಬೇರಾಗುವುದು. ನಮ್ಮನ್ನು ಹಿಡಿದು ಕಾಡುತ್ತಿರುವ ಶಂಕೆಯು ದೂರವಾಗಿ ನಂಬಿಕೆಯು ಹುಟ್ಟುವುದು. ಅಭಯವು ಬರುವುದು.

ಉಪನಿಷತ್ತಿನ ಪೂರ್ಣವಾದವು ಅರ್ಥವಾಗದಿರಲು ಎರಡು ಅಡ್ಡಿಯೆಂದು ಹೇಳಿ, ಕಾಲದೇಶಗಳ ಪ್ರಭಾವವೊಂದು ಎಂದು ಹೇಳಿದೆವು. ಇನ್ನೊಂದು ಬುದ್ಧಿಯ ಸ್ವಭಾವ. ಬುದ್ಧಿಯು ಸಹಜವಾಗಿ ಯಾವ ವಸ್ತುವನ್ನಾದರೂ ಒಂದು ಚೌಕಟ್ಟಿನಲ್ಲಿ ನೋಡಬಲ್ಲುದೇ ಹೊರತು, ಚೌಕಟ್ಟಿಲ್ಲದೆ ಯಾವುದನ್ನೂ ನೋಡಲಾರದು. ಅದು

---

*ಭಗವದ್ಗೀತೆಯಲ್ಲಿರುವ ಶ್ಲೋಕಗಳನ್ನೆಲ್ಲಾ ಹಿರಿಯರು ಮಂತ್ರಗಳು ಎನ್ನುತ್ತಾರೆ.

ಹುಟ್ಟುವಾಗಲೇ, ಆ ಚೌಕಟ್ಟನ್ನೂ ಹೊತ್ತೇ ಹುಟ್ಟಿದೆ. ಆ ಚೌಕಟ್ಟನ್ನು ಶಾಸ್ತ್ರದಲ್ಲಿ ತ್ರಿಪುಟಿ ಎನ್ನುತ್ತಾರೆ ತ್ರಿಪುಟಿಯೆಂದರೆ, ನಾನು ಮಾಡುವವನು ಅಥವಾ ಕರ್ತೃ, ಮಾಡುತ್ತಿರುವುದು ಈ ಕೆಲಸ ಅಥವಾ ಕರ್ಮ, ಅದಕ್ಕಾಗಿ ಮಾಡುತ್ತಿರುವ ವ್ಯಾಪಾರ ಅಥವಾ ಕ್ರಿಯೆ, ಎಂಬ ಮೂರರ ಗುಂಪು. ಈ ಜಗತ್ತೆಲ್ಲ ಕರ್ತೃ ಕರ್ಮ ಕ್ರಿಯಾ ಸಹಿತವಾದ ತ್ರಿಪುಟಿಯನ್ನು ಆಶ್ರಯಿಸಿದ ಬುದ್ಧಿಯ ಕಾರ್ಯ.

ಈ ತ್ರಿಪುಟಿಯಿಂದ ಲೋಕವನ್ನು ನೋಡುವಾಗ, ಲೋಕದಿಂದ ಎಲ್ಲವನ್ನೂ ಸಂಗ್ರಹಿಸುವಾಗ, ಬುದ್ಧಿಯು ಪೂರ್ಣವನ್ನೆಂತು ನೋಡಬಲ್ಲುದು ? ಇದನ್ನೇ ಕಠೋಪನಿಷತ್ತಿನಲ್ಲಿ ಬುದ್ಧೇರಾತ್ಮಾ ಮಹಾನ್ ಪರಃ, ಆತ್ಮನು ಬುದ್ಧಿಗಿಂತ ಆಚಿನವನು ಎಂದು ಹೇಳಿದುದು. ಆ ಆತ್ಮನನ್ನು ಬುದ್ಧಿಯಿಂದ ತಿಳಿಯಲು ಆಗುವುದಿಲ್ಲ. ಹಾಗೆಂದು ಆತನನ್ನು ತಿಳಿಯಲು ಬುದ್ಧಿಗಿಂತ ಬೇರೆ ಯಾವುದೂ ಸಾಧನವಿಲ್ಲ. ಅದರಿಂದ, ಉಪನಿಷತ್ತು ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ. ಮೊನಚಾದ ಬುದ್ಧಿಯಿಂದ ಕಾಣಬೇಕು ಎಂದಿತು. "ಬುದ್ಧಿಯೇ ಸಾರಥಿ ; ಅವನು ವಿಜ್ಞಾನವಾನ್ ಆಗಬೇಕು." ಅದು ಆಗುವುದು ಹೇಗೆ ? ಮನಸ್ಸನ್ನು ಯಾವ ಬುದ್ಧಿಯು ನುಂಗುವುದೋ ಅದು ವಿಜ್ಞಾನವಾನ್; ಅಷ್ಟೇ ಅಲ್ಲ. ತಾನೂ ಆತ್ಮನಲ್ಲಿ ಮುಳುಗಿ ಹೋಗಲು ಸಿದ್ಧವಾಗಿರಬೇಕು. ಅದು ವಿಜ್ಞಾನವಾನ್. ಹಾಗಾಗಲು ತಾನು ಧರಿಸಿರುವ ತ್ರಿಪುಟಿ ಎಂಬ ಕನ್ನಡಕವನ್ನು ತೆಗೆದು ಎಸೆಯಬೇಕು. ಆಗೇನಾಗುವುದು ? ಇದ್ದುದು ಇದ್ದಂತೆ ಕಾಣುವುದು. ಎಲ್ಲಿಂದೆಲ್ಲಿಯವರೆಗೂ ಯಾವಾಗಲೂ ಬ್ರಹ್ಮವೊಂದೇ ಕಾಣುವುದು. ಆಗ, ಏನಾಗುವುದು ಎಂಬುದನ್ನು ಛಾಂದೋಗ್ಯವು ಹೇಳಿತು : "ಯತ್ರ ನಾನ್ಯತ್ಪಶ್ಯತಿ, ನಾನ್ಯಚ್ಛೃಣೋತಿ, ನಾನ್ಯದ್ವಿಜಾನಾತಿ, ಸ ಭೂಮಾ–" "ಎಲ್ಲಿ ಮತ್ತೊಂದನ್ನು ನೋಡುವುದಿಲ್ಲವೊ, ಇನ್ನೊಂದನ್ನು ಕೇಳುವುದಿಲ್ಲವೋ, ಮಗದೊಂದನ್ನು ತಿಳಿಯುವುದಿಲ್ಲವೋ ಅದು ಭೂಮಾ ; ಅದೇ ಅಮೃತ. ಅದೇ ಗುರಿ."

ಹೀಗೆ ಆಗಬೇಕಾದರೆ ಕಠವು ಹೇಳುವಂತೆ "ಆವೃತ್ತ ಚಕ್ಷು"ವಾಗ ಬೇಕು. ಎಂದರೆ ಇಂದ್ರಿಯಗಳು ಹೊರಮೊಕವಾಗಿರುವುದು ತಪ್ಪಿ ಒಳಮೊಕವಾಗಭೇಕು. ಮೋಟಾರಿನ ಮುಂದಿರುವ ದೀಪಗಳಂತೆ, ಇಂದ್ರಿಯಗಳು ಹೊರಮೊಕವಾಗಿವೆ. ಅದು ತಪ್ಪಿ ಒಳಮೊಕವಾಗ ಬೇಕು. ಒಳಮೊಕವಾದರೆ ಅವುಗಳ ದುಶ್ಚೇಷ್ಟೆಯು ತಪ್ಪುವುದು. ಮನಸ್ಸೂ ಒಳಮೊಕವಾಗುವುದು. ಅದಷ್ಟು ಸಾಲದು. ಬುದ್ಧಿಶ್ಚ ನ ವಿ ಚೇಷ್ಟತಿ : ಬುದ್ಧಿಯ ವ್ಯಾಪಾರವೂ ನಿಲ್ಲಬೇಕು. ಹಾಗಾದರೆ, ಲೋಕ ವ್ಯವಹಾರವು ನಡೆಯುವುದು ಹೇಗೆ ? ಎಂದರೆ, ಬುದ್ಧಿಯು ಆ ಪರಾ ಕಾಷ್ಠವನ್ನು ಪರಮವನ್ನು ಕಂಡಾಗ ಸುಮ್ಮನಾಗುವುದು. ನಿದ್ದೆಯಲ್ಲಿ ಇರುವುದಿಲ್ಲವೆ ಹಾಗೆ ! ಮತ್ತೆ ನಿದ್ದೆಯಿಂದ ಎದ್ದ ಮೇಲೆ, ಜಾಗ್ರತ್ತಿ ನಲ್ಲಿ ಬುದ್ಧಿಯು ಎಂದಿನಂತೆ ತನ್ನಷ್ಟಕ್ಕೆ ತಾನೇ ವ್ಯವಹಾರದಲ್ಲಿ ತೊಡ ಗುವುದು. ಆದರೆ ಶುದ್ಧವಾದ ಆ ಬುದ್ಧಿಗೂ ಅಶುದ್ಧವಾದ ಬುದ್ಧಿಗೂ ಬೇಕಾದಷ್ಟು ವ್ಯತ್ಯಾಸ. ಶುದ್ಧವಾದ ಬುದ್ಧಿಯು ನ್ಯಾಯಧರ್ಮಗ ಳನ್ನು ಹಿಡಿದು ಸತ್ಯವಾಗಿ ನಡೆಯುವುದು. ಅಶುದ್ಧವಾದ ಬುದ್ಧಿಯು ಸ್ವಾರ್ಥಿಯಾಗಿ ಅಸತ್ಯವಾಗಿ ಅನ್ಯಾಯ ಅಧರ್ಮಗಳಲ್ಲಿ ನಡೆಯುವುದು.

ಅಲ್ಲಿ ಲೋಕಕ್ಕೂ ಬ್ರಹ್ಮವಿದ್ಯೆಯು ಬೇಕಾಗಿರುವುದು ; ಅಲ್ಲಿ ಬ್ರಹ್ಮವಿದ್ಯೆಯಿಂದ ಲೋಕಕ್ಕೆ ಉಪಕಾರವಾಗುವುದು. ಅಶುದ್ಧವಾದ ಬುದ್ಧಿಯು ಬೇಕೆನ್ನುವುದು ಪ್ರೇಯಸ್ಸು. ಬುದ್ಧಿಯು ಶುದ್ಧವಾಗ ಬೇಕಾಗಿದ್ದರೆ ಅಲ್ಲಿಂದ ಆಚೆಗೆ ಹೋಗಬೇಕು. ಶುದ್ಧವಾದ ಬುದ್ಧಿಯು ಬೇಕೆನ್ನುವುದು ಶ್ರೇಯಸ್ಸು.

೭. ಉಪನಿಷತ್ತುಗಳಲ್ಲಿ ಏನೇನು ಹೇಳಿದೆ ?

ಉಪನಿಷತ್ತು ಎಂದರೆ ಬ್ರಹ್ಮವಿದ್ಯೆ ಎಂದು ನಾವು ಆಗಲೇ ಹೇಳಿದ್ದೇವೆ. ಬ್ರಹ್ಮವಿದ್ಯೆಯು ಸಿದ್ಧಾಂತವೆಂದೂ ಹೇಳಿದ್ದೇವೆ. ಪ್ರತಿಯೊಂದು ಸಿದ್ಧಾಂತದಲ್ಲೂ ಜೀವ, ಜಗತ್ತು, ಜೀವನದ ಗುರಿ ಇವುಗಳನ್ನು ಹೇಳಬೇಕು. ಇದುವರೆಗೂ ಪ್ರಾಸಂಗಿಕವಾಗಿ ಎಂದರೆ

ಸಂದರ್ಭ ಬಂದಾಗ ಜೀವನದ ಗುರಿಯನ್ನು ಕುರಿತೂ ಹೇಳಿದ್ದೇವೆ. ಆದರಿಂದ ಈಗ ಜೀವ, ಜಗತ್ತು ಎರಡರ ವಿಚಾರವಾಗಿ ಹೇಳಿದರೆ ಉಪನಿಷತ್ತುಗಳಲ್ಲಿ ಏನು ಹೇಳುವುದು ಎಂಬುದನ್ನು ಹೇಳಿದಂತಾಯಿತು.

ಮೊದಲು ಜಗತ್ತನ್ನು ಕುರಿತು ಹೇಳಿ ಅನಂತರ ಜೀವ ವಿಚಾರವನ್ನು ತೆಗೆದುಕೊಳ್ಳೋಣ.

ಜಗತ್ತು ಸೃಷ್ಟಿಯಾದುದು : ಈಗ ಇರುವುದು ಎಂದರೆ ಸ್ಥಿತಿಯನ್ನು ಉಳ್ಳದ್ದು : ಕೊನೆಗೊಂದು ದಿನ ಲಯವಾಗುವುದು. ಜಗತ್ತು ಎಂಬ ಶಬ್ದವನ್ನೇ ಈಶಾವಾಸ್ಯವು ಉಪಯೋಗಿಸಿದೆ. ಮಿಕ್ಕ ಅನೇಕ ಉಪನಿಷತ್ತುಗಳಲ್ಲಿ ಜಗತ್ತಿನ ಎಂದರೆ ಲೋಕ ಲೋಕಗಳ ಸೃಷ್ಟಿಯನ್ನು ಹೇಳಿದೆ. (ಐತರೇಯವನ್ನೂ, ಪ್ರಶ್ನವನ್ನೂ ನೋಡಿ.) ಜಗತ್ಸೃಷ್ಟಿಯನ್ನು ಹೇಳುವುದರ ಜೊತೆಗೆ ನಾನಾ ಲೋಕಗಳನ್ನೂ ಹೇಳಿದೆ. ಕಠದಲ್ಲಿ ಅನಂದಾ ಎಂಬ, ಈಶದಲ್ಲಿ ಅಸುರ್ಯಾ ಎಂಬ, ಕತ್ತಲಿನ ಲೋಕಗಳನ್ನು ಹೇಳಿ, ಅದೇಯವಾದ ವಸ್ತುಗಳನ್ನು ಕೊಟ್ಟವರು, ಆತ್ಮಜ್ಞಾನವನ್ನು ಪಡೆದುಕೊಳ್ಳದೆ ಆತ್ಮಘಾತಿಗಳಾದವರು, ಆಯಾ ಲೋಕಗಳಿಗೆ ಹೋಗುವರು ಎಂದು ಹೇಳಿದೆ. ಜೊತೆಗೆ ಕರ್ಮಪರಾಯಣರಾದವರು ಪಡೆಯುವ ಪಿತೃಲೋಕ, ಮೊದಲಾದವುಗಳನ್ನೂ ಹೇಳಿದೆ. ಅಂಧಕಾರದಿಂದ ಕೂಡಿದ ಲೋಕಗಳನ್ನು ಹೇಳಿರುವಂತೆ ಎಂದೆಂದಿಗೂ ಬೆಳಗುತ್ತಿರುವ ಬ್ರಹ್ಮಲೋಕವನ್ನೂ ಹೇಳಿದೆ.

ಈ ಲೋಕಗಳೆಲ್ಲಾ ಸೃಷ್ಟಿಯಾಗಿ ಲಯವನ್ನು ಹೊಂದುವುದರಿಂದ ಎಲ್ಲವೂ ಮರ್ತ್ಯಗಳು ಎಂದರೆ ಮರಣಧರ್ಮ ವಿಶಿಷ್ಟವಾದುದರಿಂದ, ಈ ಮೃತ್ಯುವನ್ನು ದಾಟಿ ಅಮೃತನಾಗುವುದೇ ಸುಗತಿ, ಸದ್ಗತಿ, ಪರಮಾ ಗತಿ. ಅದೇ ಜೀವನದ ಗುರಿ.

ಈ ಜಗತ್ತು ಸತ್ಯವೋ ಅಸತ್ಯವೋ ಎನ್ನುವುದೊಂದು ಭಾರಿಯ ವಿವಾದದ ವಿಷಯ. ಸತ್ಯವಾದ ಬ್ರಹ್ಮದಿಂದ ಹುಟ್ಟಿದುದು

ಸತ್ಯವೇ ಆಗಿರಬೇಕಲ್ಲದೆ ಅಸತ್ಯವಾಗಿರುವುದು ಹೇಗೆ? ಎಂಬುದು ಒಂದು ವಾದ.

ಸರ್ವಂ ಖಲ್ವಿದಂ ಬ್ರಹ್ಮ ಎಂಬುದು ಒಂದು ಮಹಾ ವಾಕ್ಯ. ಮಹಾವಾಕ್ಯ ಎಂದರೆ, ಅನುಭವಗಳಲ್ಲೆಲ್ಲಾ ಶ್ರೇಷ್ಠವಾದ ಬ್ರಹ್ಮಾನುಭವವನ್ನು ತಂದುಕೊಡಬಲ್ಲ ವಾಕ್ಯ. ಅದರಂತೆ ಜಗತ್ತು ಬ್ರಹ್ಮವೇ ಎಂದು ಒಂದು ಸಿದ್ಧಾಂತ. ಪ್ರಪಂಚೋಪರಮಂ ಶಾಂತಂ ಎಂಬುದರಿಂದ ಪ್ರಪಂಚವೆಲ್ಲವೂ ಉಪಶಾಂತವಾದ ಮೇಲೆ ಬ್ರಹ್ಮಲಾಭ ಎನ್ನುವುದರಿಂದ ಪ್ರಪಂಚವು ಅಶಾಶ್ವತ, ಅದರಿಂದ ಮಿಥ್ಯಾ ಎಂದರೆ ವ್ಯರ್ಥವೆಂಬ ಇನ್ನೊಂದು ಸಿದ್ಧಾಂತ. ಈ ಎರಡು ಸಿದ್ಧಾಂತಗಳ ನಡುವೆ ಸತ್ಯಾಸತ್ಯವನ್ನು ಹೇಳುವುದು ಇನ್ನೊಂದು ಸಿದ್ಧಾಂತ. ಈ ಮೂರಕ್ಕೂ ಉಪನಿಷತ್ತುಗಳಲ್ಲಿ ಆಧಾರವಿದೆಯೆಂದರೆ ತಪ್ಪಿಲ್ಲ.

ಇನ್ನೊಂದು ವಿಷಯವನ್ನು ಉಪನಿಷತ್ತು ಒಪ್ಪಿದೆ. ಅದನ್ನಿಲ್ಲಿ ಚರ್ಚಿಸದೆ ಹೋದರೆ ಈ ವಿಷಯವು ಪೂರ್ಣವಾಗುವುದಿಲ್ಲ. ಅದು ವ್ಯಷ್ಟಿ ಸಮಷ್ಟಿ ಸಿದ್ಧಾಂತ. ವ್ಯಷ್ಟಿಯೆಂದರೆ ಬಿಡಿಬಿಡಿಯಾದುದು ಎಂದರೆ ಒಂದು ದೇಹವನ್ನು ಕುರಿತುದು. ಸಮಷ್ಟಿ ಎಂದರೆ ಎಲ್ಲವನ್ನೂ ಸೇರಿಸಿದುದು. ಹೀಗೆ ಲೋಕಗಳು, ಅಲ್ಲಿರುವ ಪ್ರಾಣಿಗಳು ಮನುಷ್ಯರು ಎಲ್ಲವನ್ನೂ ಸೇರಿಸಿಕೊಂಡಿರುವ ಸಮಷ್ಟಿಯಾದ ಹಿರಣ್ಯಗರ್ಭನು ಮೊದಲು ಹುಟ್ಟಿದನು. ಆತನಿಂದ ಪಂಚಭೂತ ಸೃಷ್ಟಿಯಾಯಿತು. ಆಕಾಶ, ವಾಯು, ಅಗ್ನಿ, ಜಲ, ಪೃಥಿವಿಗಳೆಂಬ ಈ ಪಂಚಭೂತಗಳು ಒಡೆದು ಒಡೆದು, ಒಂದಕ್ಕೊಂದು ಸೇರುತ್ತ ಹೊರಗೆ ಲೋಕಗಳನ್ನೂ ಒಳಗೆ ದೇಹಗಳನ್ನೂ ರಚಿಸಿದುವು. ಅದರಿಂದ ದೇಹವು ಪಿಂಡಾಂಡ; ಲೋಕಗಳು ಬ್ರಹ್ಮಾಂಡ ಅಥವಾ ದೇಹವು ವ್ಯಷ್ಟಿ, ಲೋಕಗಳು ಸಮಷ್ಟಿ. ಹೀಗೆ ಇದು ಚಿಕ್ಕದು ಅದು ದೊಡ್ಡದು ಆದರೂ ಎರಡೂ ಒಂದೇ! ಒಂದನ್ನು ಚೆನ್ನಾಗಿ ತಿಳಿದುಕೊಂಡರೆ ಮತ್ತೊಂದೂ ತಿಳಿಯುವುದು ಎಂಬುದೊಂದು ಸಿದ್ಧಾಂತ. ಇದರ ಪ್ರಕಾರ, "ಬ್ರಹ್ಮಾಂಡದಲ್ಲಿರುವ ಸರ್ವವೂ ಪಿಂಡಾಂಡದಲ್ಲಿ ಇರುವುದು"

ಈ ದೃಷ್ಟಿಯನ್ನು ಯೋಗಶಾಸ್ತ್ರ ಮಂತ್ರಶಾಸ್ತ್ರಗಳು ಚೆನ್ನಾಗಿ ಬೆಳೆಸಿವೆ. ಇದಕ್ಕೂ ಉಪನಿಷತ್ತುಗಳಲ್ಲಿ ಆಧಾರವಿದೆ.*

ಪಿಂಡಾಂಡವು ಐದು ಕೋಶಗಳಿಂದ ಆಗಿದೆಯೆಂಬುದೊಂದು ಸಿದ್ಧಾಂತ. ಈ ಪಂಚಕೋಶ ಸಿದ್ಧಾಂತವು ತೈತ್ತಿರೀಯದಲ್ಲಿ ಚೆನ್ನಾಗಿ ಹೇಳಲಾಗಿದೆ. ಈ ಪಂಚಕೋಶಗಳನ್ನು ದಾಟಿಹೋದವನು ಆರೂಢ.

ಈ ಪಿಂಡಾಂಡವೂ ಪಂಚಭೂತಗಳಿಂದಲೇ ಆಗಿದ್ದರೂ ಈ ದೇಹವು ಮುಖ್ಯವಾಗಿ ನಾಡೀಮಂಡಲ. ಇದನ್ನು ಛಾಂದೋಗ್ಯವು ನಾಡೀಖಂಡದಲ್ಲಿ "ಹೃದಯದ ಸುತ್ತಲೂ ಸೂರ್ಯನಿಂದ ಹೊರಡುವ ಕಿರಣಗಳಂತೆ ನಾಡಿಗಳು ಹೊರಟು ಆವರಿಸಿಕೊಂಡಿವೆ. ಅವುಗಳಲ್ಲಿ ಬಿಳುಪು, ಕಪ್ಪು, ಹಳದಿ, ಕೆಂಪುರಸಗಳು ತುಂಬಿವೆ. ಇವೇ ಪಿಂಡಾಂಡಕ್ಕೂ ಬ್ರಹ್ಮಾಂಡಕ್ಕೂ ಸಂಬಂಧವನ್ನು ಕಲ್ಪಿಸಿರುವ ಹಾದಿಗಳು. ಸೂರ್ಯಕಿರಣಗಳು ಈ ನಾಡಿಗಳಲ್ಲಿ ತುಂಬಿರುತ್ತವೆ. ಮರಣಕಾಲದಲ್ಲಿ ಜೀವನು ಈ ನಾಡಿಗಳನ್ನು ಸೇರಿ, ಅಲ್ಲಿರುವ ಸೂರ್ಯ ಕಿರಣಗಳ ಮೂಲಕ ಸೂರ್ಯನ ಬಳಿಗೆ ಹೋಗುತ್ತಾನೆ. ಆತ್ಮವೇತ್ತರಿಗೆ ಸೂರ್ಯನು ಬ್ರಹ್ಮಲೋಕದ ತೆರೆದ ಬಾಗಿಲು: ಆತ್ಮವೇತ್ತರಲ್ಲದವರಿಗೆ ಅದೇ ಸೂರ್ಯನೇ ಮುಚ್ಚಿದ ಬಾಗಿಲು" ಎಂದು ಹೇಳಿ ಪಿಂಡಾಂಡ ಬ್ರಹ್ಮಾಂಡಗಳ ಸಂಬಂಧವನ್ನು ತೋರಿಸುತ್ತದೆ.

ಪಿಂಡಾಂಡವು ಬದುಕಿರುವುದು ಜೀವನಿಂದ. ಆದರೂ ಜೀವನು ಉಂಟೇ ಇಲ್ಲವೇ? ಎಂಬ ವಿಚಾರದಲ್ಲಿ ದೇವತೆಗಳೂ ಬಹುವಾಗಿ ಚಿಂತಿಸಿದರಂತೆ! ಕೊನೆಗೆ ಮೃತ್ಯುವೇ ಜೀವನುಂಟು ಎಂದು ಹೇಳಿ ಆ ಜೀವನನ್ನು ಕಾಣುವ ದಾರಿಯನ್ನು ಹೇಳಿಕೊಟ್ಟನು. ದೇವನು ಈ ದೇಹವನ್ನು ಸೃಷ್ಟಿಮಾಡಿ, ತಲೆಯಲ್ಲಿರುವ ಬ್ರಹ್ಮರಂಧ್ರದಿಂದ

---

*ಈ ಪಂಚಭೂತಗಳಿಂದ ದೇಹವೆಲ್ಲವೂ ಆಗುವುದು ಎಂಬುದನ್ನು ಪಂಚೀಕರಣವು ಚೆನ್ನಾಗಿ ತೋರಿಸುತ್ತದೆ.

ಒಳಹೊಕ್ಕನು. [1]ಎಂದು ಒಂದು ಕಡೆ ಹೇಳಿದೆ.[2] ಇನ್ನೊಂದು ಉಪನಿಷತ್ತು[3] ಜೀವನು ಎಷ್ಟಿರುವನು ಎಂಬುದನ್ನೂ ಹೇಳಿತು : "ಒಂದು ಕೂದಲನ್ನು ನೂರುಪಾಲು ಮಾಡಿ, ಅದರಲ್ಲಿ ಒಂದು ಪಾಲನ್ನು ಮತ್ತೆ ನೂರುಪಾಲು ಮಾಡಿದರೆ, ಎಷ್ಟಾಗುವುದೋ ಅಷ್ಟು ಜೀವನ ಪ್ರಮಾಣ. ಜೀವವು ಹೆಣ್ಣಲ್ಲ ; ಗಂಡಲ್ಲ ; ನಪುಂಸಕನೂ ಅಲ್ಲ. ಯಾವ ಯಾವ ಶರೀರದಲ್ಲಿ ಇರುವನೋ ಅದರದರ ಲಿಂಗವು ಅವನಿಗೆ."

ಇನ್ನೊಂದೆಡೆ ಈ ಜೀವನು [4]ಈಶ್ವರನೊಡನೆ ಬುದ್ಧಿಯಲ್ಲಿ ಇದ್ದಾನೆ ಎಂದು ಹೇಳಿದೆ. ಮತ್ತೊಂದೆಡೆ "[5]ಸಂಸಾರವೆಂಬ ಒಂದೇ ವೃಕ್ಷದಲ್ಲಿ ಜೀವ ಪರಮರು ಇಬ್ಬರೂ ಇದ್ದಾರೆ. ಜೀವನು ಪರವಶನಾಗಿ ಕರ್ತೃತ್ವ, ಭೋಕ್ತೃತ್ವಗಳಿಂದ ಕೂಡಿದ್ದಾನೆ. ಪರಮನು ಸ್ವತಂತ್ರನಾಗಿ ಅಕರ್ತೃ, ಅಭೋಕ್ತೃವಾಗಿದ್ದಾನೆ" ಎಂದು ಹೇಳಿದೆ. ಅಲ್ಲದೆ, ಜೀವನಿಲ್ಲ ಎಂದರೆ ಉಪನಿಷತ್ತುಗಳು ಹೇಳುವ ದೇವಯಾನ, ಪಿತೃಯಾನ, ಹೀನಯಾನಗಳು ಇನ್ನಾರಿಗೆ ?

ಬಹುಶಃ ಶಂಕರರೊಬ್ಬರೇ ಜೀವನೆಂಬುವನು ಮತ್ತೊಬ್ಬನುಂಟೇ ಎಂದು ಪ್ರಶ್ನೆ ಮಾಡಿದವರು. ಅವರು "ಜೀವ ಪರಮರು ಬೇರೆ ಬೇರೆಯಲ್ಲ : ಉಪಾಧಿಯಿಂದ ಕೂಡಿದರೆ ಜೀವ, ಉಪಾಧಿ ತಪ್ಪಿದರೆ ಪರಮ" ಎನ್ನುತ್ತಾರೆ. ಉಪನಿಷತ್ತುಗಳನ್ನು ಒಂದಕ್ಕೊಂದು ಸಮನ್ವಯ ಮಾಡಿನೋಡಿದರೆ, ಅನೇಕ ಏಕಗಳನ್ನು ಏಕಸೂತ್ರದಲ್ಲಿ ಜೋಡಿಸಿ ನೋಡಿದರೆ, ಈ ಮಾತು ಒಪ್ಪಬೇಕಾಗುತ್ತದೆ. "ನೇಹ ನಾನಾಸ್ತಿ ಕಿಂಚನ. ಇಲ್ಲಿ ನಾನಾ ಎಂಬುದಿಲ್ಲ." "ನಾನಾ ಎಂದು ನೋಡುವವನಿಗೆ ಮರಣ ತಪ್ಪಿದ್ದಲ್ಲ : ಒಂದನ್ನು ನೋಡುವವನಿಗೆ ಭಯವೆಲ್ಲಿಯದು ? ನಾನಾ ನೋಡಿದವನಿಗೆ ಭಯವು ತಪ್ಪುವುದಾದರೂ ಹೇಗೆ ?" ಮೊದ

---

1. ಗರ್ಭಿಣಿಯರಿಗೆ ಆರನೇ ತಿಂಗಳಲ್ಲಿ ಮಾಡುವ ಸೀಮಂತೋನ್ನಯನ ಎಂಬ ಕರ್ಮವನ್ನು ವಿವರವಾಗಿ ನೋಡಿ.

2. ಐತರೇಯ, 3. ಶ್ವೇತಾಶ್ವತರ, 4. ಕಠ, 5. ಮುಂಡಕ ಮತ್ತು ಶ್ವೇತಾಶ್ವತರ.

ಲಾದವುಗಳಿಂದಲೂ, "ತತ್ಸೃಷ್ಟ್ವಾ ತದೇವ ಅನುಪ್ರಾವಿಶತ್ : ಅದನ್ನು (ಕ್ಷೇತ್ರವನ್ನು) ಸೃಷ್ಟಿಮಾಡಿ ಅದರೊಳ ಹೊಕ್ಕನು" ಮೊದಲಾದ ಮಾತುಗಳಿಂದಲೂ "ಜೀವನುಂಟು : ಆದರೆ ಪರಮನಿಂದ ಬೇರೆಯಾದ ಜೀವನೊಬ್ಬನಿಲ್ಲ" ಎಂದೇ ಹೇಳಬೇಕಾಗುತ್ತದೆ.

ಈ ದೇಹದಲ್ಲಿರುವ ಜೀವನಿಗೆ ದಿನ ದಿನವೂ ಮೂರು ಅವಸ್ಥೆಗಳು ಉಂಟು. ಹಾಗೆಯೇ ಜೀವನು ಈ ಮೂರು ಅವಸ್ಥೆಗಳಲ್ಲಿ ಮೂರು ಸ್ಥಾನಗಳಲ್ಲಿ ಇರುತ್ತಾನೆ. ಭ್ರೂಮಧ್ಯದಲ್ಲಿ ಕುಳಿತು ಮನೋಬುದ್ಧಿಗಳ ಸಹಾಯದಿಂದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೊಡನೆ ಕೂಡಿಕೊಂಡು ಸ್ಥೂಲಪ್ರಪಂಚದಲ್ಲಿ ಭೋಗಪಡುವುದು ಜಾಗ್ರದವಸ್ಥೆ. ಇಲ್ಲಿ ಈತನಿಗೆ ವಿಶ್ವ ಎಂದು ಹೆಸರು. ಕರ್ಮೇಂದ್ರಿಯಗಳ ಸಹಾಯವಿಲ್ಲದೆ, ಕೇವಲ ಜ್ಞಾನೇಂದ್ರಿಯ ಮನೋಬುದ್ಧಿಗಳನ್ನು ಹಿಡಿದು, ತನ್ನಲ್ಲಿಯೇ ತಾನೇ ವ್ಯವಹಾರ ಮಾಡುತ್ತಿರುವುದು ಸ್ವಪ್ನಾವಸ್ಥೆ. ಇಲ್ಲಿ ಈತನಿಗೆ ತೈಜಸನೆಂದು ಹೆಸರು. ಕರ್ಮೇಂದ್ರಿಯ ಜ್ಞಾನೇಂದ್ರಿಯ ಮನೋಬುದ್ಧಿಗಳೆಲ್ಲವೂ ಅಸ್ತವಾಗಲು, ತಾನು ಯಾವ ಸಂಪರ್ಕವೂ ಇಲ್ಲದೆ, ಏಕಾಕಿಯಾಗಿ ಆನಂದವಾಗಿರುವುದು ನಿದ್ರಾವಸ್ಥೆ: ಅಲ್ಲಿ ಈತನಿಗೆ ಪ್ರಾಜ್ಞನೆಂದು ಹೆಸರು. ವಿಶ್ವನು ಭ್ರೂಮಧ್ಯದಲ್ಲಿ, ತೈಜಸನು ಮನಸ್ಸಿನ ಕೊನೆಯಲ್ಲಿ, ಪ್ರಾಜ್ಞನು ಹೃದಯದಲ್ಲಿ ಇರುವನು.

ಇಲ್ಲಿ ವಿಚಾರವಿದೆ. ಜಾಗ್ರತ್ತಿನಲ್ಲಿರುವಂತೆಯೇ ಕನಸಿನಲ್ಲೂ ಸರ್ವವೂ ಇದೆ. ಆದರೆ ಅವೆಲ್ಲ ಎಲ್ಲಿಂದ ಬಂತು ? ಇದು ವೇದಾಂತಿಗಳಿಗೆ ಬಹು ಮುಖ್ಯವಾದ ವಿಚಾರ. ಹೊರಗಿನಿಂದ ಎಲ್ಲವನ್ನೂ ತಂದು ಒಳಗೆ ತುಂಬಿದೆಯೆಂಬುದು ಅಸಾಧ್ಯ. ಹಾಗಾದರೆ ಅವೆಲ್ಲ ಎಲ್ಲಿಂದ ಬಂತು ? "ಮನಸ್ಸು ಸೃಷ್ಟಿಮಾಡಿತು. ಜಾಗ್ರತ್ತಿನಲ್ಲಿ ಜೀವನು ಸಂಪಾದಿಸಿಕೊಂಡ ವಾಸನೆಗಳಿಂದ ಈ ಕನಸಾಯ್ತು" ಎನ್ನೋಣವೇ ? ಸಂಬಂಧವಿಲ್ಲದ ಅನೇಕ ವಿಷಯಗಳನ್ನು ಕಾಣುತ್ತೇವೆ. ಇಲ್ಲಿ ಉಪನಿಷತ್ತುಗಳು, "ದೃಷ್ಟಂಚಾದೃಷ್ಟಂಚ, ಶ್ರುತಂಚಾಶ್ರುತಂಚ," ಎಂದು

ಕನಸಿನ ಲಕ್ಷಣವನ್ನು ಹೇಳಿ ವಿಚಾರಮಾಡುತ್ತ, "ಜನ್ಮಾಂತರ ಸಂಗತಿಗಳೂ ಈ ಕನಸುಗಳಲ್ಲಿ ಬರುತ್ತವೆ" ಎನ್ನುತ್ತವೆ.

ವೇದಾಂತಿಗಳು ಈ ಕನಸನ್ನು ಇನ್ನೊಂದು ರೀತಿಯಾಗಿ ಉಪಯೋಗಿಸಿಕೊಳ್ಳುತ್ತಾರೆ. ತಾವು ನಡೆಸುತ್ತಿರುವ ಆತ್ಮವಿಚಾರ, ಶ್ರವಣ, ಮನನಗಳು ಎಷ್ಟು ದೃಢವಾಗಿವೆಯೆನ್ನುವುದಕ್ಕೆ ಕನಸು ಸಾಕ್ಷಿ. ಜಾಗ್ರತ್ತಿನಂತೆಯೇ ಕನಸಿನಲ್ಲಿಯೂ ಶ್ರವಣ ಮನನಾದಿಗಳು ನಡೆಯುತ್ತಿದ್ದರೆ, ಆಗ ತಮ್ಮ ಅಧ್ಯಯನವು ಪೂರ್ಣವಾಯಿತು ಎಂದು ಅವರ ವಿಶ್ವಾಸ.

ಕಠೋಪನಿಷತ್ತಿನಲ್ಲಿ ಆತ್ಮನನ್ನು ಕಾಣುವುದು ಜಾಗ್ರತ್ ಸ್ವಪ್ನಗಳ ಸಂಧಿಯಲ್ಲಿ ಎಂದಿದೆ. ಹಾಗೆಯೇ ಜೀವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂದವರು ಹೃದಯದಲ್ಲಿರುವ ಆಕಾಶವನ್ನು ಹಿಡಿಯಬೇಕು ಎಂದು ಹೇಳಿದೆ. ಎಲ್ಲಿ ಕನಸು ಜಾಗ್ರತ್ತು ಎರಡೂ ಇಲ್ಲವೋ ಅಲ್ಲಿ ಜೀವನು ತಾನೇ ತಾನಾಗಿರುತ್ತಾನೆ. ಆತನಿನ್ನೂ ವಿಶ್ವನೂ ಆಗಿಲ್ಲ : ತೈಜಸನೂ ಆಗಿಲ್ಲ. ಎರಡರ ಸಂಧಿ ಸ್ಥಾನವೆಂದುದರಿಂದ ಕಂಠಕ್ಕಿಳಿದಿಲ್ಲ : ಭ್ರೂಮಧ್ಯವನ್ನೂ ಬಿಟ್ಟಿದ್ದಾನೆ. ಅಲ್ಲಿ ಜೀವನನ್ನು ಗುರುತಿಟ್ಟು ಕಂಡು, ಆತನು ಜ್ಞಾನೇಂದ್ರಿಯ, ಕರ್ಮೇಂದ್ರಿಯ ವ್ಯಾಪಾರ ಶೂನ್ಯನಾಗಿದ್ದರೂ ಮನೋಬುದ್ಧಿಗಳನ್ನೂ ಸಂಪೂರ್ಣವಾಗಿ ಬಿಡದಿರುವಾಗ, ಶುದ್ಧ ಮನಸ್ಸಿನಿಂದ, ವಿಜ್ಞಾನಪೂರ್ಣವಾದ ಬುದ್ಧಿಯಿಂದ ಆತನನ್ನು ಕಾಣಬೇಕು. ಪ್ರಯತ್ನ ಬಲದಿಂದ ಆತನ ಜಾಡು ಹಿಡಿದು, ನಿದ್ರೆಯನ್ನೂ ಭೇದಿಸಬೇಕು. ಆ ನಿದ್ದೆಯೇ ನಮ್ಮನ್ನು ಆವರಿಸಿರುವ ತಮಸ್ಸು : ಅದೇ ಅಜ್ಞಾನ. ಅದರಿಂದಾಚೆಯೇ ದೇವನಿರುವುದು. ಅದನ್ನೇ ಶ್ರುತಿಯು "ವೇದಾಹಮೇತಂ ಪುರುಷಂ ಮಹಾಂತಂ ಆದಿತ್ಯವರ್ಣಂ ತಮಸಸ್ತು ಪಾರೇ — ತಮಸ್ಸಿನ ಆಚೆಯಿರುವ ಆದಿತ್ಯವರ್ಣದ ಆ ಮಹಾನ್ ಪುರುಷನನ್ನು ಅರಿತೆ" ಎನ್ನುವುದು.

ನಿದ್ದೆಗೆ ಹೋದವನನ್ನು ಹಿಂದಕ್ಕೆ ಎಳೆಯುತ್ತಿರುವುದು ಕಾಮ. ಆ ಕಾಮವಿಲ್ಲದವನು ನಿದ್ದೆಯನ್ನು ಭೇದಿಸುವನು. ಅದನ್ನೂ ಉಪನಿಷತ್ತು ಹೇಳಿತು. ಅದು ಹೇಗೆ ? ಎಂದರೆ "ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ। ಕ್ಷೀಯಂತೇಚಾಸ್ಯಕರ್ಮಾಣಿ ತಸ್ಮಿನ್ದೃಷ್ಟೇ ಪರಾವರೇ॥" ಹೃದಯಗ್ರಂಥಿ ಎನ್ನುವುದೇ ನಾನು ದೇಹವೆಂಬ ನಂಬಿಕೆ. ಅದು ಹೋದರೆ ಸಂಶಯಗಳು ಹೋಗುವುವು. ಕಾಮಸಂಕಲ್ಪಗಳಿಂದ ಹುಟ್ಟಿ ಕಾಮಸಂಕಲ್ಪಗಳನ್ನೇ ಬೆಳೆಸುತ್ತಿರುವ ಅಜ್ಞಾನ ಸಮೂಹಗಳಾದ ಕರ್ಮಗಳೆಲ್ಲ ಬಿಡುವುವು. ಆದರೆ ಅದು ಯಾವಾಗ ಆಗುವುದು ? ತಸ್ಮಿನ್ ದೃಷ್ಟೇ ಪರಾವರೇ। ಪರವೆಂದರೆ ಕಾರಣವಾದ ಪರಮ. ಅವರ ಎಂದರೆ ಎರಡನೆಯ ವರ್ಗದ, ಕಾರ್ಯವಾಗಿರುವ ಜಗತ್ತು. ಈ ಜಗತ್ತು ಆ ಪರಮಾತ್ಮನಿಂದ ಬಂದಿದೆ, ಎಂಬ ಜ್ಞಾನವು ದೃಢವಾದರೆ, ಆ ಕಾರ್ಯವು ಆಗುವುದು.

ಈ ಜೀವನು ತನ್ನನ್ನು ತಾನು ಕಂಡುಕೊಂಡರೆ ಏನಾಗುವನು ಎಂಬುದನ್ನು ತೈತ್ತಿರೀಯದಲ್ಲಿ ಹೇಳಿದೆ. "ನಾನು (ಸಂಸಾರ) ವೃಕ್ಷವನ್ನು ಬೆಳೆಸುವವನು. ಬೆಟ್ಟದ ಕೋಡಿನಂತೆ ಇರುವ ನನ್ನನ್ನು ಯಾರು ಕಾಣರು ? ಜ್ಞಾನ ಸ್ವರೂಪನು ನಾನು, ನಾನು ಅಮೃತನು. ಎಲ್ಲರೂ ಬೇಕು ಬೇಕು ಎನ್ನುವ ವಸ್ತುವೇ ನಾನು. ನಾನು ಉತ್ಪತ್ತಿ ಸ್ಥಿತಿ ಸಂಹಾರ ಮಾಡಬಲ್ಲವನು. ಅವ್ಯಯನು."

ಹೀಗೆ ಜೀವ, ಜಗತ್ತು, ಪರಮಗಳ ಸಂಬಂಧವನ್ನೂ ಆ ಸಂಬಂಧವನ್ನು ತಿಳಿಯುವುದರಿಂದ ಆಗುವ ಪ್ರಯೋಜನವನ್ನೂ ಕುರಿತು ಹೇಳುವುದೇ ಉಪನಿಷತ್ತು. ಒಟ್ಟಿನಲ್ಲಿ ಉಪನಿಷತ್ತುಗಳ ಬೋಧೆಯಿಷ್ಟು: "ಈ ಜಗತ್ತೆಲ್ಲವೂ ಒಂದು ವೃಕ್ಷ. ಜೀವ ಜೀವರೂ ಒಂದೊಂದು ಎಲೆ. ಈ ವೃಕ್ಷವನ್ನು ಬೆಳೆಸುವುದು ಕಾಮ-ಅದನ್ನು ಗೆದ್ದವನು ಈ ವೃಕ್ಷವನ್ನು ಒಟ್ಟಿಗೆ ಕಂಡು ಕೃತಾರ್ಥನಾಗುವನು."

೮. ಭಾಷ್ಯಾದಿಗಳು

ಈ ಉಪನಿಷತ್ತುಗಳು ಅರ್ಥವಾಗುವುದು ಸುಲಭವಲ್ಲ. ಮುಖ್ಯವಾಗಿ ಗುರುವು ಶಿಷ್ಯನನ್ನು ಕುಳ್ಳಿರಿಸಿಕೊಂಡು ಕಲಿಸುತ್ತಿದ್ದವಾದುದರಿಂದ, ಅದರಲ್ಲಿ ಎಷ್ಟೋ ಗುಟ್ಟುಗಳು ಇದ್ದೇ ಇರಬೇಕು. ಆ ಗುಟ್ಟು ಹೇಳುವ ಮಾತುಗಳೂ ಗುಟ್ಟಾಗಿಯೇ ಇರಬೇಕು. ಆದರೂ ಲೋಕಾನುಗ್ರಹ ದೃಷ್ಟಿಯಿಂದ ಉಪನಿಷತ್ತುಗಳಿಗೆ ಭಾಷ್ಯಗಳನ್ನು ಬರೆಯುವ ಕೆಲಸ ಬಹು ಪೂರ್ವದಿಂದ ನಡೆದುಬಂದಿದೆ. ಆದರೆ ಆಗಿನ ಭಾಷ್ಯಗಳು ಈಗ ಸಿಕ್ಕುವುದಿಲ್ಲ.

ಈಗಿರುವ ಭಾಷ್ಯಗಳಲ್ಲಿ ಶಂಕರರು, ರಾಮಾನುಜರು, ಆನಂದ ತೀರ್ಥರು ಬರೆದಿರುವ ಭಾಷ್ಯಗಳು ಮುಖ್ಯವಾದುವು. ಇವರು ಒಬ್ಬರ ಸಿದ್ಧಾಂತವನ್ನು ಇನ್ನೊಬ್ಬರು ದೂಷಿಸಿರುವುದೂ ಉಂಟು. ಹಾಗೆಂದು ಯಾರ ಸಿದ್ಧಾಂತವೂ ಲೋಪವಾಗಿಲ್ಲ. ಈಗಲೂ ಸಹಸ್ರ ಸಹಸ್ರ ಜನರು ಈ ಭಾಷ್ಯಗಳ ಮೂಲಕವಾಗಿ ಉಪನಿಷತ್ತುಗಳನ್ನು ಅಧ್ಯಯನಮಾಡುತ್ತಿದ್ದಾರೆ; ಕೃತಾರ್ಥರಾಗುತ್ತಿದ್ದಾರೆ.

ವೀರಶೈವರು, ಶಾಕ್ತೇಯರು, ಮೊದಲಾದವರೂ ಈ ಉಪನಿಷತ್ತುಗಳಿಗೆ ತಮ್ಮ ತಮ್ಮ ಸಿದ್ಧಾಂತದ ಪ್ರಕಾರವಾಗಿ ಭಾಷ್ಯಗಳನ್ನು ಬರೆದಿದ್ದಾರೆ.

ಈಗಿನ ವಿದ್ವಾಂಸರು "ಈ ಭಾಷ್ಯಗಳೆಲ್ಲವೂ ಹುಟ್ಟಿರುವುದು ಉಪನಿಷತ್ತುಗಳ ಅರ್ಥವನ್ನು ವಿವರಿಸುವುದಕ್ಕಾಗಿ. ಅದರಿಂದ ಈ ಭಾಷ್ಯಗಳ ಸಹಾಯವನ್ನು ಪಡೆದುಕೊಂಡು ಉಪನಿಷತ್ತುಗಳ ಅರ್ಥವನ್ನು ಸ್ವತಂತ್ರವಾಗಿ ಮಾಡಿಕೊಳ್ಳಲು ಪ್ರಯತ್ನಪಡೋಣ" ಎನ್ನುತ್ತಾರೆ.

ಆದರೆ ಹಿಂದಿನವರು ಈ ಮಾತು ಒಪ್ಪುವುದಿಲ್ಲ. ಅವರು "ಗುರು ಸಂಪ್ರದಾಯದಲ್ಲಿ ಒಂದು ಗುಟ್ಟಿದೆ. ಅದು ತಿಳಿಯದಿದ್ದರೆ ಉಪನಿಷತ್ತುಗಳು ಅರ್ಥವೇ ಆಗುವುದಿಲ್ಲ" ಎನ್ನುತ್ತಾರೆ.

ನಾವು ಮಧ್ಯಸ್ಥವಾದಿಗಳು. ನಮಗೆ ದ್ವೈತಾದ್ವೈತವಿಶಿಷ್ಟಾದ್ವೈತಗಳ ಹೋರಾಟ ಬೇಕಿಲ್ಲ. ಜಗತ್ತೆಲ್ಲವೂ ಒಂದಾಗಬೇಕೆಂಬ ಈ ಕಾಲದಲ್ಲಿ ಗೋಡೆಗಳನ್ನು ಎಬ್ಬಿಸುವುದಕ್ಕಿಂತ ಗೋಡೆಗಳನ್ನು ತೆಗೆಯಬೇಕು ಎಂಬ ಮಾತು ನಮಗೆ ಪ್ರಿಯ; ಹಿತ.

ಈ ದೃಷ್ಟಿಯಿಂದ ನೋಡುವಾಗ "ನಮ್ಮ ತಂದೆಯ ಸಿದ್ಧಾಂತ ನಮ್ಮದು" ಎಂದು ಹೊರಡುವುದಕ್ಕಿಂತ "ನಾವು ಅಧ್ಯಯನ (ಅಧ್ಯಯನ ಬರಿಯ ಓದಲ್ಲ) ಮಾಡೋಣ. ಅನಂತರ ಶುದ್ಧವಾದ ಮನೋಬುದ್ಧಿಗಳು ಆತ್ಮಪ್ರೇರಣೆಯಿಂದ ಯಾವ ದಾರಿಯನ್ನು ಹಿಡಿದರೆ, ಆ ಮಾರ್ಗದಲ್ಲಿ ಹೋಗಿ ಗುರು-ದೇವ-ಕೃಪೆಯನ್ನು ಸಂಪಾದಿಸಿ ಕೃತಾರ್ಥರಾಗೋಣ ಎನ್ನುವುದೇ ಸರಿ" ಎಂದು ತೋರುತ್ತದೆ.

"ನಮ್ಮ ತಂದೆಯ ಸಿದ್ಧಾಂತ ನಮ್ಮದು" ಎಂಬುದು ಧರ್ಮಸಿದ್ಧಾಂತ. ಅಲ್ಲಿ ಧರ್ಮವು ಎದುರಿಗಿರುವ ಪದಾರ್ಥವಲ್ಲ. ಅದು ಭವಿಷ್ಯದಲ್ಲಿ ಸಾಧ್ಯವಾದ ವಿಷಯ. ಅಲ್ಲಿ ಪೂರ್ವಪದ್ಧತಿಯು ಬೇಕು. ಆ ಮಾತನ್ನು ಬ್ರಹ್ಮ ವಿಚಾರದಲ್ಲಿ ಎತ್ತುವುದು ಹೇಗೆ? ಬ್ರಹ್ಮವು ಸಿದ್ಧ ವಿಷಯ. ಬ್ರಹ್ಮವು ಎಲ್ಲೆಲ್ಲಿಯೂ ಯಾವಾಗಲೂ ಇದೆ. ಅಲ್ಲಿ ಹಿಂದೆ ಹೇಳಿದಂತೆ ಆವೃತ್ತ ಚಕ್ಷುವಾಗಬೇಕು. ಅಲ್ಲಿಗೆ "ನಮ್ಮ ತಂದೆಯ ಸಿದ್ಧಾಂತ ನಮ್ಮದು" ಎಂಬ ಮಾತು ಹೊಂದುವುದಿಲ್ಲ. ಮೂರು ಜನ ಆಚಾರ್ಯರೂ "ಲುಪ್ತವಾಗಿದ್ದ ಪೂರ್ವಸಿದ್ಧಾಂತವನ್ನು ಪ್ರತಿಷ್ಠಿಸಿದರು" ಎಂಬ ಮಾತು ನೋಡಿ.

ಈಗ ಬೇಕಾಗಿರುವುದು ಇಳಿದ ಶ್ರುತಿಯ ತಂತಿಯನ್ನು ಬಿಗಿಮಾಡಿ ಶ್ರುತಿಯನ್ನು ಏರಿಸುವ ಕೆಲಸ. ಅದು ಹೋರಾಡುವ ಸಿದ್ಧಾಂತಗಳಿಗಿಂತ, ಸಮನ್ವಯ ಸಿದ್ಧಾಂತದಿಂದ ಸುಲಭವಾಗುವುದು. ಸಮನ್ವಯ ಸಿದ್ಧಾಂತವು ತೆರೆದ ಮನಸ್ಸಿನ ವಿಚಾರಲಹರಿ. ಅದು ತಲೆಗಳು ಒಡೆದು ರಕ್ತಪ್ರವಾಹ ಹರಿಯಿಸುವಕಡೆ ತಿರುಗುವುದಿಲ್ಲ. ಶ್ರೀ ಭಗವಾನ್ ವ್ಯಾಸರು ಬ್ರಹ್ಮಸೂತ್ರಗಳಲ್ಲಿ ರಚಿಸಿದ ನಾಲ್ಕು

ಅಧ್ಯಾಯಗಳಲ್ಲಿ ಮೊದಲನೆಯದರ ಹೆಸರು ಸಮನ್ವಯ; ಎರಡನೆಯದು ಅವಿರೋಧ. ಅದು ನೆನಪಿನಲ್ಲಿರಬೇಕು.

೯. ಉಪನಿಷತ್ತುಗಳ ಹರಡುವಿಕೆ

ಆರಣ್ಯಕಗಳ ಕೊನೆಯ ಭಾಗಗಳು ಉಪನಿಷತ್ತು. ಇವುಗಳ ಮೊದಲ ಭಾಗಗಳಾದ ಆರಣ್ಯಕಗಳು ಅರಣ್ಯದಲ್ಲಿ ಕುಳಿತು ಕಲಿಯಬೇಕಾದವಾಗಿದ್ದರೂ ಉಪನಿಷತ್ತುಗಳಲ್ಲಿ ಕೆಲವು ಭಾಗಗಳಾದರೂ ರಾಜಸಭೆಗಳಲ್ಲಿ ನಡೆದವು. ಜೊತೆಗೆ ಕೆಲವು ಬ್ರಾಹ್ಮಣರಲ್ಲಿ, ಕೆಲವು ರಾಜನ್ಯರಲ್ಲಿ ಇದ್ದವು. ವ್ರತವನ್ನು ಆಚರಿಸದವರಿಗೆ, ಬ್ರಹ್ಮಚಾರಿಗಳಲ್ಲದವರಿಗೆ, ಶಿಷ್ಯರಾಗಿಲ್ಲದವರಿಗೆ, ಇವುಗಳನ್ನು ಹೇಳಬಾರದು ಎಂಬ ನಿಯಮವಿದ್ದರೂ, ಉಪನಿಷತ್ತುಗಳಲ್ಲಿ ಹೇಳಿರುವ ವಿದ್ಯೆಗಳು ಅಲ್ಲಲ್ಲಿ ಜನಸಾಮಾನ್ಯದಲ್ಲಿ ಹರಡಿದ್ದುವು. ಗುರುವು ಅವರವರ ಯೋಗ್ಯತಾನುಸಾರವಾಗಿ ಕೃತಾರ್ಥರಾಗಲು ಒಂದೊಂದು ಉಪಾಯವನ್ನು ಹೇಳಿಕೊಟ್ಟು ಆಶೀರ್ವದಿಸುತ್ತಿದ್ದನು.

ಸುಮಾರು ೪೦೦ ವರ್ಷಗಳ ಹಿಂದೆ ಷಹಜಾನನ ಮಗನಾದ ದಾರಾಷೂಕೋನು ಉಪನಿಷತ್ತುಗಳನ್ನು ಕಲಿತು ಆದರದಿಂದ ಅವನ್ನು ಪರ್ಷಿಯನ್ನಿಗೆ ಭಾಷಾಂತರಮಾಡಿಸಿದನು. ಆ ಭಾಷಾಂತರವು ದೇಶಾಂತರಗಳಲ್ಲಿ ಹಬ್ಬಿ, ಈಗಿನ ಆಧುನಿಕ ಭಾಷಾಂತರಗಳಿಗೆ ಕಾರಣವಾಯಿತು. ಈಗ ವಿವೇಕಾನಂದರ ಕಾಲದಿಂದ ಈಚೆಗೆ ಇವು ಪಶ್ಚಿಮ ದೇಶದಲ್ಲಿ ಹೆಚ್ಚಾಗಿ ಹರಡಿ ಅಲ್ಲಿನ ವಿದ್ವಾಂಸರ ಮನಸ್ಸನ್ನೂ ಸೆಳೆದಿವೆ. ಅವರಲ್ಲಿ ಕೆಲವರು ಸ್ವತಂತ್ರ ವಿಚಾರದಿಂದ "ಈ ಪ್ರಪಂಚವು ಆಗಿರುವುದು ಕನಸನ್ನು ಮಾಡುವ ದ್ರವ್ಯದಿಂದಲೇ ಇರಬೇಕು" ಎಂಬಲ್ಲಿಗೆ ಬಂದಿದ್ದಾರೆ.

೧೦. ಉಪಸಂಹಾರ

ಉಪನಿಷತ್ತುಗಳಲ್ಲಿ ಹೇಳಿರುವ ಪ್ರಾಣವಿಚಾರ, ದೇವತಾ ವಿಚಾರ, ಸೃಷ್ಟಿಕ್ರಮಗಳು, ಇವುಗಳನ್ನೆಲ್ಲಾ ಕುರಿತು ವಿಚಾರಮಾಡ ಬೇಕಾಗಿತ್ತು. ಆದರೆ ಅವೆಲ್ಲ ವಿದ್ವಾಂಸರಿಗೆ ಬೇಕಾದವು. ಈ ಗ್ರಂಥವು ಹುಟ್ಟಿರುವುದು ಸಾಮಾನ್ಯರಿಗಾಗಿ. ಅವರಿಗೆ ಈ ಪುಸ್ತಕ ವನ್ನು ಓದಿ, ಉಪನಿಷತ್ತುಗಳನ್ನು ವಿಸ್ತಾರವಾಗಿ ಅಧ್ಯಯನಮಾಡ ಬೇಕು ಎಂಬ ಆಸೆ ಹುಟ್ಟಿದರೆ, ಈ ಪುಸ್ತಕವು ಸಾರ್ಥಕವಾಯಿತು. ಆದರಿಂದ ಗಹನವಿಚಾರಗಳಲ್ಲಿ ಧುಮುಕಲಿಲ್ಲವೆಂದು ಓದುಗರು ಆಯಾಸಪಡದಿರಲಿ.

ಇನ್ನೂ ಒಂದು ಮಾತು. ಈ ಗ್ರಂಥದಲ್ಲಿ ಎಂಟೇ ಉಪನಿಷತ್ತು ಗಳಿವೆ. ಬೃಹದಾರಣ್ಯಕ, ಛಾಂದೋಗ್ಯಗಳು ಸೇರಿಲ್ಲ. ಹಾಗೆಯೇ ಸಾಮಾನ್ಯವಾಗಿ ದಶೋಪನಿಷತ್ತುಗಳಲ್ಲಿ ಸೇರುವ ಮಾಂಡೂಕ್ಯೋಪ ನಿಷತ್ತಿಗೆ ಬದಲಾಗಿ ಶ್ವೇತಾಶ್ವತರವನ್ನು ಸೇರಿಸಿದೆ. ಮಾಂಡೂಕ್ಯವು ಶುದ್ಧಾದ್ವೈತಪರ. ಆದರಿಂದ ಅದನ್ನು ಬಿಡಲಾಗಿದೆ. ಉಳಿದೆರಡು ಉಪನಿಷತ್ತುಗಳು ಬಲು ದೊಡ್ಡವು. ಇಲ್ಲಿ ಈ ಎಂಟು ಉಪನಿಷತ್ತು ಗಳೂ ಸೇರಿ ಒಟ್ಟು ೫೦೩ ಮಂತ್ರಗಳಾದರೆ, ಅವೆರಡರಿಂದಲೇ ೧,೦೭೩ ಮಂತ್ರಗಳಿವೆ. ಆದರಿಂದ ಗ್ರಂಥಬಾಹುಳ್ಯ ಭೀತಿಯಿಂದ ಸದ್ಯಕ್ಕೆ ಅವನ್ನು ಬಿಡಲಾಗಿದೆ. ಅದನ್ನು ಓದುಗರು ಮನ್ನಿಸುವುದು.

ಭಾಷಾಂತರವನ್ನು ಆದಷ್ಟು ಸುಲಭವಾಗಿ ಮಾಡಿದೆ. ಅಲ್ಲದೆ, ಸಂಸ್ಕೃತ ಮೂಲದ ಅರ್ಥಕೆಡದಂತೆ, ಕನ್ನಡದ ವಾಗ್ಧೋರಣಕ್ಕೆ ಹಿಡಿಯುವಂತೆ ಬರೆಯಲಾಗಿದೆ. ಅವಶ್ಯವೆಂದು ತೋರಿದೆಡೆ, ಅವ ಗ್ರಹಗಳಲ್ಲಿ ಬರೆದು, ಟಿಪ್ಪಣಿಗಳನ್ನು ಕೊಟ್ಟು ವಿವರಿಸಲಾಗಿದೆ. ಪೀಠಿಕೆ ಯನ್ನು ನಮ್ಮವರಿಗೆಂದು ಬರೆದಿರುವುದರಿಂದ ಪಾಶ್ಚಾತ್ಯ ಪಂಡಿತರ ಆನುಪೂರ್ವಿಯನ್ನು ಹಿಡಿದು ವಿಚಾರಮಾಡಿಲ್ಲ. ಸಾಮಾನ್ಯವಾಗಿ ಶಂಕರಭಾಷ್ಯವನ್ನೇ ಅನುಸರಿಸಲಾಗಿದೆ.

ಅನುವಾದ

೧. ತೈತ್ತಿರೀಯೋಪನಿಷತ್ತು

ಇದು ಕೃಷ್ಣಯಜುರ್ವೇದದ ಉಪನಿಷತ್ತು. ಇದರಲ್ಲಿ ಶಿಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ ಎಂಬ ಮೂರು ಭಾಗಗಳಿವೆ. ಒಂದೊಂದು ಭಾಗವೂ ಅನುವಾಕಗಳೆಂಬ ವಿಭಾಗಗಳಿಂದ ಕೂಡಿವೆ. ಇದರಲ್ಲಿ ಒಟ್ಟು ೩೧ ಅನುವಾಕಗಳೂ ೫೨ ಮಂತ್ರಗಳೂ ಇವೆ.

ಇದರಲ್ಲಿ ವಿಶೇಷವೆಂದರೆ ಶಿಕ್ಷಾವಲ್ಲಿಗೆ ಬೇರೆ ಶಾಂತಿಮಂತ್ರ, ಉಳಿದ ಇನ್ನೆರಡು ಭಾಗಗಳಿಗೆ ಇನ್ನೊಂದು ಶಾಂತಿಮಂತ್ರ.

ಇತರ ಉಪನಿಷತ್ತುಗಳಲ್ಲಿ ಇಲ್ಲದ ಅನೇಕ ವಿಷಯಗಳು ಈ ಉಪನಿಷತ್ತಿನಲ್ಲಿ ಬಂದಿವೆ. ಅವುಗಳನ್ನೆಲ್ಲಾ ಆಯಾ ಕಡೆಗಳಲ್ಲಿ ವಿಸ್ತರಿಸಿದೆಯಾಗಿ ಇಲ್ಲಿ ಅವುಗಳನ್ನು ಪ್ರತ್ಯೇಕವಾಗಿ ವಿಸ್ತರಿಸಿಲ್ಲ.*

ಈ ಉಪನಿಷತ್ತು ಒಂದು ವಿಧದಲ್ಲಿ ಪೂರ್ಣವಾದುದು ಎಂದು ಇದನ್ನು ಮೊದಲಲ್ಲಿ ಕೊಟ್ಟಿದೆ.

---

*ಈ ಉಪನಿಷತ್ತಿಗೆ ಭಾಷ್ಯವನ್ನು ಬರೆಯುವಾಗ ಶ್ರೀ ಶಂಕರರು ಮಂಗಳ ಶ್ಲೋಕಗಳನ್ನು ಹೇಳಿದ್ದಾರೆ. ಮಾಂಡೂಕ್ಯೋಪನಿಷತ್ತಿನ ಭಾಷ್ಯಕ್ಕೂ ಮಂಗಳ ಶ್ಲೋಕಗಳಿವೆ. ಆದರೆ, ಎರಡನೆಯದರಲ್ಲ ಅವರ ಪರಮಗುರುಗಳಾದ ಶ್ರೀ ಗೌಡಪಾದರ ಗ್ರಂಥವೆಂದು ಅದಕ್ಕೆ ವಿಶೇಷ ಗೌರವವನ್ನು ಕೊಟ್ಟು ಮಂಗಳಶ್ಲೋಕಗಳನ್ನು ಬರೆದಿರಬಹುದು ಎನ್ನಬಹುದು. ಆದರೆ, ತೈತ್ತಿರೀಯದ ವಿಷಯದಲ್ಲಿ ಹಾಗಿಲ್ಲವಾಗಿ, ಆಚಾರ್ಯರ ಉಪನಿಷದ್ಭಾಷ್ಯಗಳಲ್ಲೆಲ್ಲ ಇದೇ ಮೊದಲಾಗಿರಬಹುದು ಎನ್ನಬಹುದಾಗಿದೆ.

ಶಿಕ್ಷಾವಲ್ಲೀ

ಅನುವಾಕ ೧

ಶಾಂತಿಮಂತ್ರ

ಓಂ ಶಂನೋಮಿತ್ರಃ ಶಂವರುಣಃ । ಶಂನೋಭವತ್ವರ್ಯಮಾ । ಶಂನಇಂದ್ರೋ ಬೃಹಸ್ಪತಿಃ । ಶಂನೋವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ ತನ್ಮಾಮವತು । ತದ್ವಕ್ತಾರಮವತು । ಅವತು ಮಾಂ । ಅವತುವಕ್ತಾರಂ । ಓಂ ಶಾಂತಿಶ್ಶಾಂತಿಶ್ಶಾಂತಿಃ ॥

ಓಂ. ಮಿತ್ರನು[1] ನಮಗೆ ಒಳ್ಳೆಯದನ್ನು ಮಾಡಲಿ. ವರುಣನು[2] ನಮಗೆ ಒಳ್ಳೆಯದನ್ನು ಮಾಡಲಿ. ಅರ್ಯಮನು[3] ನಮಗೆ ಒಳ್ಳೆಯವನಾಗಲಿ. ಇಂದ್ರನೂ[4] ಬೃಹಸ್ಪತಿಯೂ[5] ನಮಗೆ ಒಳ್ಳೆಯವರಾಗಲಿ. ದಾಪುಗಾಲಿನ ವಿಷ್ಣುವು[6] ನಮಗೆ ಒಳ್ಳೆಯವನಾಗಲಿ.

---

1. ಹಗಲಿಗೂ ಪ್ರಾಣವೃತ್ತಿಗೂ ದೇವತೆಯು ಮಿತ್ರನು.
2. ರಾತ್ರಿಗೂ ಅಪಾನವೃತ್ತಿಗೂ ದೇವತೆಯು ವರುಣನು.
3. ಚಕ್ಷುಸ್ಸಿಗೂ ಆದಿತ್ಯನಿಗೂ ಅಭಿಮಾನಿಯು ಅರ್ಯಮನು.
4. ಬಲದ ಅಭಿಮಾನಿಯು ಇಂದ್ರನು.
5. ವಾಕ್ಕಿನ ಬುದ್ಧಿಯ ಅಭಿಮಾನಿಯು ಬೃಹಸ್ಪತಿಯು.
6. ವಿಷ್ಣುವು ದೊಡ್ಡ ಹಜ್ಜೆಯವನು : ಆತನು ಪಾದಗಳ ಅಭಿಮಾನಿಯು.

ಇವರೆಲ್ಲರೂ ಅಧ್ಯಾತ್ಮ ದೇವತೆಗಳು : (ಎಂದರೆ, ದೇಹದಲ್ಲಿರುವವರು) ಇವರು ಪ್ರಸನ್ನರಾಗಿದ್ದರೆ, ಬ್ರಹ್ಮವಿದ್ಯೆಯ ಶ್ರವಣ, ಧಾರಣ, ಉಪಯೋಗಗಳು ನಿರ್ವಿಘ್ನವಾಗಿ ನಡೆಯುವುವು. ಅದರಿಂದ ಇವರನ್ನು ಸುಖಕೊಡಿರೆಂದು ಪ್ರಾರ್ಥಿಸಲಾಗಿದೆ.

ಬ್ರಹ್ಮನಿಗೆ[1] ನಮಃ. ವಾಯುವೆ,[2] ನಿನಗೆ ನಮಃ. ಪ್ರತ್ಯಕ್ಷ ಬ್ರಹ್ಮನು[3] ನೀನು. ನಿನ್ನನ್ನೇ ಪ್ರತ್ಯಕ್ಷ ಬ್ರಹ್ಮನೆಂದು ಹೇಳುವೆನು. ಋತವನ್ನು[4] ಹೇಳುವೆನು. ಸತ್ಯವನ್ನು[5] ಹೇಳುವೆನು. ಅದು ನನ್ನನ್ನು ಕಾಯಲಿ. ಅದು (ನನಗೆ) ಹೇಳುವವನನ್ನು[6] ಕಾಯಲಿ. ನನ್ನನ್ನು ಕಾಯಲಿ. ಹೇಳುವವನನ್ನು ಕಾಯಲಿ. ಓಂ ಶಾಂತಿಯು: ಶಾಂತಿಯು: ಶಾಂತಿಯು.

1-2. ಬ್ರಹ್ಮವನ್ನು ಕುರಿತು ಚಿಂತಿಸಬೇಕು ಎಂದವನು ಬ್ರಹ್ಮವನ್ನೂ, ಬ್ರಹ್ಮವಿದ್ಯೆಯ ಹಾದಿಯಲ್ಲಿರುವ ಅಡ್ಡಿಆತಂಕಗಳು ಶಮನವಾಗಲೆಂದು ವಾಯುವನ್ನೂ ನಮಸ್ಕರಿಸಬೇಕು.

3. ಸರ್ವ ಕ್ರಿಯಾಫಲಗಳೂ ಆತನ ಅಧೀನವಾದ್ದರಿಂದ ವಾಯುವು ಬ್ರಹ್ಮನು. ನಮ್ಮ ಸುತ್ತಲೂ ಇರುವವನು ಆದ್ದರಿಂದ ವಾಯುವು ಪ್ರತ್ಯಕ್ಷ ಬ್ರಹ್ಮನು.

4. ಋತವೆಂದರೆ ಶಾಸ್ತ್ರವು ಹೇಳಿದಂತೆ, ಕರ್ತವ್ಯವೆಂದು ಬುದ್ಧಿಯಲ್ಲಿ ಗೊತ್ತಾಗಿರುವ ಅರ್ಥವು.

5. ಸತ್ಯವೆಂದರೆ ವಾಕ್ಕು, ದೇಹಗಳಿಂದ ಸಂಪಾದಿಸಬೇಕಾದುದು.

6. ಸರ್ವಾತ್ಮಕನಾಗಿ ವಾಯುವೆನಿಸಿಕೊಳ್ಳುವ ಬ್ರಹ್ಮವನ್ನು ಇಲ್ಲಿ 'ಅದು' ಎಂದು ಹೇಳಲಾಗಿದೆ. ಅದು ವಿದ್ಯಾರ್ಥಿಯಾದ ನನಗೆ ವಿದ್ಯೆಯನ್ನು ಕೊಟ್ಟು, ಆ ವಿದ್ಯೆಯನ್ನು ಹೇಳುವ ನನ್ನ ಆಚಾರ್ಯನಿಗೆ ವಿದ್ಯೆಯನ್ನು ಬೋಧಿಸುವ ಸಾಮರ್ಥ್ಯವನ್ನು ಕೊಟ್ಟು, ಕಾಪಾಡಲಿ.

ಶಾಂತಿ, ಶಾಂತಿ, ಶಾಂತಿ, ಎಂದು ಮೂರುಸಲ ಹೇಳುವುದು ಆಧ್ಯಾತ್ಮಿಕ, ಆಧಿಬೌತಿಕ, ಆಧಿದೈವಿಕವಾಗಿ ಒದಗುವ, ವಿದ್ಯಾ ಪ್ರಾಪ್ತಿಯ ವಿಘ್ನಗಳು ನಿವಾರಣವಾಗಲಿ—ಎಂದು (ಶಂಕರರು).

ಉಪನಿಷತ್ತು

ಅನುವಾಕ ೨

ಓಂ. ಶೀಕ್ಷೆ[1]ಯನ್ನು ವ್ಯಾಖ್ಯಾನಮಾಡುವೆವು: ವರ್ಣ[2], ಸ್ವರ[3], ಮಾತ್ರಾ[4], ಬಲ[5], ಸಾಮ[6], ಸಂತಾನ[7] ಎಂದು ಶಿಕ್ಷಾಧ್ಯಾಯವು.

(ನಮ್ಮ ಶಾಸ್ತ್ರಗಳಲ್ಲಿ ವಾಕ್ಕು ಪ್ರಕಟವಾಗುವುದು ನಾಲ್ಕು ಮೆಟ್ಟಲುಗಳಲ್ಲಿ ಎನ್ನುತ್ತಾರೆ. ನಾಭಿಯಲ್ಲಿರುವ ವಾಕ್ಕು ಪರಾ, ಹೃದಯದಲ್ಲಿರುವ ವಾಕ್ಕು ಪಶ್ಯಂತೀ, ಕಂಠದಲ್ಲಿರುವ ವಾಕ್ಕು ಮಧ್ಯಮಾ, ಬಾಯಲ್ಲಿ ನುಡಿಯುವ ವಾಕ್ಕು ವೈಖರೀ. ಈ ವಾಕ್ ಸ್ಥಾನಗಳನ್ನು ತಿಳಿದು ವೇದವನ್ನು ಹೇಳಬೇಕು. ವೈಖರಿಯನ್ನು ನುಡಿಯುವಾಗ ಪಶ್ಯಂತೀ ಮಧ್ಯಮಾಗಳ ಗತಿ ಅದರಲ್ಲಿ ಕಂಡರೆ ಅದು ಮಂತ್ರವಾಗುತ್ತದೆ. ಮಂತ್ರವು ಪರಾಸ್ಥಾನದವರೆಗೂ ವ್ಯಾಪಿಸುವುದೇ ಉಪಾಸನ. ಈ ಉಪಾಸನವು ಮುಂದೆ ಹೇಳುವ ಐದು ಅಧಿಕರಣಗಳಲ್ಲಿ ನಡೆದರೆ ಪೂರ್ಣವಾಗುತ್ತದೆ. ಆಗ ಸಂಹಿತೆಯ ರಹಸ್ಯ ತಿಳಿಯುತ್ತದೆ. ಆಗ ಸಂಹಿತೆಯು ಮಹಾಸಂಹಿತೆಯಾಗುತ್ತದೆ.)

---

1. ಶಿಕ್ಷೆ.—ಎಂದರೆ, ಅಕ್ಷರಗಳು ಹುಟ್ಟುವುದು ಮೊದಲಾದುವನ್ನು ಹೇಳುವುದು. ವೇದಗಳಲ್ಲಿ ಶಿಕ್ಷೆಯನ್ನು ಶೀಕ್ಷೆ ಎಂದು ದೀರ್ಘವಾಗಿ ಹೇಳುವುದು ಉಂಟು.

2. ವರ್ಣ.—ಅಕಾರಾದಿಸ್ವರಗಳು, ಕಕಾರಾದಿವ್ಯಂಜನಗಳು—ಎಲ್ಲವೂ ವರ್ಣಗಳು.

3. ಸ್ವರ.—ವೇದಗಳಲ್ಲಿ ಮಾತ್ರ ಈ ಸ್ವರಗಳುಂಟು. ಇವು ಉದಾತ್ತ, ಅನುದಾತ್ತ, ಸ್ವರಿತ ಎಂದು ಮೂರು ವಿಧ. ಮೇಲು, ತಗ್ಗು, ನಡುವೆ ಉಚ್ಚರಿಸುವ ವಿಧಾನವಿದು.

4. ಮಾತ್ರಾ.—ಹ್ರಸ್ವ, ದೀರ್ಘ, ಪ್ಲುತ ಎಂದು ಒಂದು ಸ್ವರವನ್ನು ಉಚ್ಚರಿಸುವ ಕಾಲ.

5. ಬಲ.—ಪ್ರಯತ್ನ. ಕೆಲವು ಅಕ್ಷರಗಳನ್ನು ಪ್ರಯತ್ನವಿಲ್ಲದೆ ಉಚ್ಚರಿಸಬೇಕು: ಕೆಲವನ್ನು ಹೆಚ್ಚು ಪ್ರಯತ್ನದಿಂದ: ಕೆಲವನ್ನು ಅಲ್ಪ ಪ್ರಯತ್ನದಿಂದ ಉಚ್ಚರಿಸಬೇಕು ಎಂದು ಶಿಕ್ಷಾಶಾಸ್ತ್ರ.

6. ಸಾಮ.—ಅಷ್ಟು ಮೆತ್ತಗೂ ಅಲ್ಲ: ಗಟ್ಟಿಯಾಗೂ ಅಲ್ಲ: ಹಾಗೆ ಮಧ್ಯಮವಾಗಿ ಉಚ್ಚರಿಸುವುದು.

7. ಸಂತಾನ.—ಒಂದೇ ಸ್ವರವನ್ನು ಬೆಳೆಸಿಕೊಂಡು ಹೋಗುವುದು.

ಅನುವಾಕ ೩

ನಮ್ಮಿಬ್ಬರಿಗೂ (ಶಿಷ್ಯ-ಆಚಾರ್ಯ) ಯಶಸ್ಸು ಒಟ್ಟಿಗೆ (ಬರಲಿ). ಬ್ರಹ್ಮವರ್ಚಸ್ಸು ನಮ್ಮಿಬ್ಬರಿಗೂ ಒಟ್ಟಿಗೆ (ಬರಲಿ). ಇನ್ನು,[1] ಅದ ರಿಂದ[2] ಸಂಹಿತೆಯ ಉಪನಿಷತ್ತನ್ನು ವ್ಯಾಖ್ಯಾನಮಾಡುವೆವು : ಐದು ಅಧಿಕರಣ[3] ಗಳಲ್ಲಿ (ವ್ಯಾಖ್ಯಾನ ಮಾಡುವೆವು) : (ಅವು ಯಾವುವೆಂದರೆ) ಅಧಿಲೋಕ, ಅಧಿಜ್ಯೌತಿಷ, ಅಧಿವಿದ್ಯ, ಅಧಿಪ್ರಜ, ಅಧ್ಯಾತ್ಮ (ಎಂಬವು): ಇವುಗಳನ್ನು ಮಹಾಸಂಹಿತೆ[4] ಎನ್ನುವರು.

ಅಧಿಲೋಕವು : ಪೃಥಿವಿಯು ಪೂರ್ವರೂಪವು : ದ್ಯುಲೋಕವು ಉತ್ತರರೂಪವು : ಆಕಾಶವು (ಇವೆರಡಕ್ಕೂ) ಸಂಧಿಯು : ವಾಯುವು ಸಂಧಾನವು. ಇದು ಅಧಿಲೋಕವು.

ಇನ್ನು[5] ಅಧಿಜ್ಯೌತಿಷವು ; ಅಗ್ನಿಯು ಪೂರ್ವರೂಪವು : ಆದಿತ್ಯನು ಉತ್ತರರೂಪವು : ಅಪ(ಜಲ)ವು ಸಂಧಿಯು : ಮಿಂಚು ಸಂಧಾನವು : ಇದು ಅಧಿಜ್ಯೌತಿಷವು.

---

1. ಇನ್ನು-ಮೊದಲು ಅಧ್ಯಯನವಾಗಿದೆಯಾದ್ದರಿಂದ, ಇನ್ನು.

2. ಅದರಿಂದ—ಪುಸ್ತಕ ಪಾಠವನ್ನೇ ಹಿಡಿದು ಹೊರಟ ಬುದ್ಧಿಯು ಅರ್ಥಜ್ಞಾನದ ಕಡೆಗೆ ಹೋಗುವುದು ಕಷ್ಟ. ಅದರಿಂದ ಅಧ್ಯಯನವಾದ ಸಂಹಿತೆಯ ರಹಸ್ಯವನ್ನು ಹೇಳಬೇಕೆಂದು ಹೊರಟಿರುವುದು.

3. ಅಧಿಕರಣ :—ಆಶ್ರಯ ಇರುವ ಸ್ಥಾನ. ಐದು ಅಧಿಕರಣಗಳು ಎಂದರೆ, ಸಂಹಿತೆಯನ್ನು ಐದು ರೂಪವಾಗಿ ಅರ್ಥಮಾಡಿಕೊಳ್ಳಬೇಕು ಎಂದು ಅಭಿಪ್ರಾಯ. ಇದೇ ಸಂಹಿತೆಯನ್ನು ಅರ್ಥಮಾಡಿಕೊಳ್ಳುವ ರಹಸ್ಯ.

4. ಮಹಾಸಂಹಿತೆ :—ಸಂಹಿತೆಯು ಒಂದೇ ರೂಪವಾಗಿರುತ್ತದೆ. ಐದು ಸ್ಥಾನಗಳಲ್ಲಿ ಅದಕ್ಕೆ ಅದಕ್ಕೆ ತಕ್ಕಂತೆ ಅರ್ಥಮಾಡಿಕೊಳ್ಳಬೇಕು. ಹಾಗೆ ಬೆಳೆಸಿಕೊಳ್ಳುವುದು ಮಹಾಸಂಹಿತೆಗಳು.

5. ಇನ್ನು, ಇಲ್ಲಿ ಕ್ರಿಯಾರೂಪವಾದ ರಹಸ್ಯವನ್ನು ಹೇಳಿರುವುದರಿಂದ ಒಂದಾದ ಮೇಲೆಯೇ ಇನ್ನೊಂದು ಎಂದು ಅರ್ಥ.

(ಪೂರ್ವರೂಪ, ಉತ್ತರರೂಪ, ಸಂಧಿ, ಸಂಧಾನ : ಮೊದಲನೆಯ ವರ್ಣವು ಪೂರ್ವರೂಪ, ಎರಡನೆಯ ವರ್ಣವು ಉತ್ತರ ರೂಪ, ಈ ವರ್ಣವನ್ನು ಉಚ್ಚರಿಸಿ ಆ ವರ್ಣಕ್ಕೆ ಹೋಗುವುದು ಸಂಧಿ : ಅಲ್ಲಿ ಬೇಕಾಗಿರುವ ಪ್ರಯತ್ನ ಸಂಧಾನ—ಶಂಕರರು).

ಅಧಿವಿದ್ಯವು: ಆಚಾರ್ಯನು ಪೂರ್ವರೂಪವು: ಶಿಷ್ಯನು ಉತ್ತರರೂಪವು: ವಿದ್ಯೆಯು ಸಂಧಿಯು: ಪ್ರವಚನವು ಸಂಧಾನವು: ಇದು ಅಧಿವಿದ್ಯವು.

ಅಧಿಪ್ರಜವು : ಮಾತೆಯು ಪೂರ್ವರೂಪವು : ಪಿತೃವು ಉತ್ತರರೂಪವು : ಪ್ರಜೆಯು ಸಂಧಿಯು : ಪ್ರಜನನವು ಸಂಧಾನವು : ಇದು ಅಧಿಪ್ರಜವು.

ಅಧ್ಯಾತ್ಮವು : ಕೆಳಗಿನ ದವಡೆಯು ಪೂರ್ವರೂಪವು : ಮೇಲಿನ ದವಡೆಯು ಉತ್ತರರೂಪವು : ವಾಕ್ಕು ಸಂಧಿಯು : ಜಿಹ್ವೆಯೇ ಸಂಧಾನವು. ಇದು ಅಧ್ಯಾತ್ಮವು.

ಹೀಗೆಂದು ಮಹಾಸಂಹಿತೆಯು : ಈ ಮಹಾಸಂಹಿತೆಗಳನ್ನು ವ್ಯಾಖ್ಯಾನ ಮಾಡಿದುದನ್ನು ಯಾವನು ಅರಿಯುವನೋ ಅವನಿಗೆ ಪ್ರಜೆಯೂ ಪಶುಗಳೂ ಬ್ರಹ್ಮವರ್ಚಸವೂ ಭೋಗಗಳೂ ಉತ್ತಮವಾದ ಲೋಕಗಳೂ ಲಭಿಸುವುವು.[1]

ಅನುವಾಕ ೪

(ಮೇಧಾಕಾಮನೂ ಶ್ರೀಕಾಮನೂ ಇಷ್ಟಾರ್ಥಸಿದ್ಧಿಗಾಗಿ ಮಾಡಬೇಕಾದ ಜಪ ಹೋಮಗಳನ್ನು ಹೇಳುತ್ತಾರೆ—ಶಂಕರರು).

ಛಂದಸ್ಸುಗಳಿಗೆಲ್ಲ ಮುಖ್ಯನಾದ ವಿಶ್ವರೂಪನು (ಯಾರೋ ಆ ಪ್ರಣವವು)[2] ವೇದಗಳು ಎಂಬ ಅಮೃತದಿಂದ ಸಂಭವಿಸಿದನು.

---

1. ವೇದ ಪಾರಾಯಣದಲ್ಲಿ ಪದ, ಕ್ರಮ, ಘನ, ಜಟಾ ಎಂಬ ಪದ್ಧತಿಗಳುಂಟು. ಹಾಗೆಯೇ ಇದೂ ಒಂದು ಪದ್ಧತಿ. ಇದು ವ್ಯರ್ಥ ಪ್ರಯತ್ನವಲ್ಲ ಎನ್ನುವುದಕ್ಕೆ "ಈ ಮಹಾ ಸಂಹಿತೆಯನ್ನು ಇಲ್ಲಿ ವ್ಯಾಖ್ಯಾನ ಮಾಡಿರುವಂತೆ ತಿಳಿದರೆ, ಪ್ರಜೆ, ಪಶು, ಬ್ರಹ್ಮವರ್ಚಸ್ಸು, ಭೋಗಗಳು, ಉತ್ತಮ ಲೋಕಗಳು ಸಿಕ್ಕುವುವು" ಎಂದು ಫಲಶ್ರುತಿಯನ್ನು ಹೇಳಿರುವುದು.

(ಫಲಶ್ರುತಿ : ಫಲವೇನು ಎಂದು ಹೇಳುವ ಶಾಸ್ತ್ರ.)

2. ಪ್ರಜಾಪತಿಯು ಲೋಕ, ದೇವ, ವೇದ, ವ್ಯಾಹೃತಿಗಳಿಂದ ಸಾರತಮವಾದುದನ್ನು ಗ್ರಹಿಸಬೇಕೆಂದು ತಪಸ್ಸು ಮಾಡಿದನು. ಆಗ ಆತನಿಗೆ ಓಂಕಾರವು ಸಿಕ್ಕಿತು. ಅದೇ ಮುಂದೆ ಇಂದ್ರನಾಯಿತು.

3. ಅಮೃತ—ಅಮೃತವೆಂದರೆ ಮರಣವಿಲ್ಲದುದು : ಅದಕ್ಕೆ ಸಾಧನವಾದ ಬ್ರಹ್ಮವಿದ್ಯೆ—(ಶಂಕರರು).

(ಆ ಓಂಕಾರವೇ ಸರ್ವಕಾಮಗಳನ್ನೂ ಅನುಗ್ರಹಿಸುವ ಇಂದ್ರನು). ಆ ಇಂದ್ರನು ನನ್ನನ್ನು ಮೇಧೆ[1] ಯಿಂದ ಬಲಪಡಿಸಲಿ. (ನನಗೆ ಮೇಧಾಶಕ್ತಿಯನ್ನು ಕೊಟ್ಟು ಬಲಗೊಳಿಸಲಿ). ಎಲೈ ದೇವನೆ, ಅಮೃತವನ್ನು ನಾನು ಧರಿಸುವಂತಾಗಲಿ. ನನ್ನ ಶರೀರವು (ಮೇಧೆಯನ್ನೂ ಅಮೃತವನ್ನೂ ಧರಿಸಲು) ಶಕ್ತವಾಗಲಿ. ನನ್ನ ನಾಲಗೆಯು ಜೇನಿನಂತೆ ನುಡಿಯಬಲ್ಲುದಾಗಲಿ. ಕಿವಿಗಳಿಂದ ಬಹುವಾಗಿ ಕೇಳುವಂತಾಗಲಿ.[2] (ಎಲೈ ಜೀವವೇ, ನೀನು) ಮೇಧೆಯು ಮುಚ್ಚಿಕೊಂಡಿರುವ ಬ್ರಹ್ಮಶಕ್ತಿಯು ಕೋಶವು. ನಾನು ಕೇಳಿದುದು ನನ್ನನ್ನು ಕಾಪಾಡಲಿ.[3]

[ಅಪರಾವಿದ್ಯೆಯು ಶಾಸ್ತ್ರಮುಖವಾಗಿಯಾದರೂ ಸ್ವಂತ ವ್ಯಾಸಂಗದಿಂದಲಾದರೂ ಲಭಿಸಬಹುದು. ಅಲ್ಲಿಂದ ಮುಂದೆ ಪರಾವಿದ್ಯೆಗೆ ಹೋಗುವಾಗ ಅಲ್ಲಿ ಶಾಸ್ತ್ರಮುಖವಾಗಿ ಪಡೆದ ಪಾಂಡಿತ್ಯವು ಆವರಣವೆಂಬ, ಸ್ವಂತ ವ್ಯಾಸಂಗವು ವಿಕ್ಷೇಪವೆಂಬ, ದೋಷಗಳಿಗೆ ಎಡೆಕೊಟ್ಟು, ಅಂತಃಕರಣವನ್ನು ದೂಷಿಸುವುದು. ಹಾಗಾಗಬಾರದು ಎಂದು ಪ್ರಾರ್ಥನೆಯು. ಇದಕ್ಕಿಂತ ಮೇಲೆ ಶರೀರವು ಪ್ರಜ್ಞೆ (ಮೇಧೆ) ಯನ್ನೂ ಪ್ರಜ್ಞಾನ (ಅಮೃತತ್ವ)ವನ್ನೂ ಧರಿಸಲು ಶಕ್ತವಾಗಲಿ ಎಂದು ಪ್ರಾರ್ಥಿಸಿರುವುದನ್ನು ಗಮನಿಸಿ.]

(ಮೇಲೆ ಹೇಳಿರುವುದು ಮೇಧಾಕಾಮನು ಮಾಡಬೇಕಾದ ಜಪ. ಇನ್ನು ಮುಂದೆ ಹೇಳುವುದು ಶ್ರೀಕಾಮನು ಮಾಡಬೇಕಾದ ಹೋಮದ ಮಂತ್ರಗಳಿವು).

---

1. ಮೇಧಾ—ಮಾ (ಅಳೆ) ಧಾ—(ಧರಿಸು) ಎಂಬ ಧಾತುಗಳಿಂದ ಆದ ಪದವಿದು. ಲೌಕಿಕ ಪ್ರಜ್ಞೆಯೆಂದು ಶಂಕರರು. ಪ್ರಜ್ಞೆ, ಒಳ್ಳೆಯ ಅರಿವು, ಅದರ ಅರ್ಥ.

2. ಬಹುವಾಗಿ ಕೇಳುವುದು ಶ್ರುತವು. ಬಹುಶ್ರುತನಾಗದಿದ್ದರೆ ವೇದವು ಅರ್ಥವಾಗುವುದಿಲ್ಲ. ಆದರಿಂದ ವೇದವಿದ್ವಾಂಸನಾಗಲು ಬಹುಶ್ರುತನಾಗಬೇಕು. (ಹೋಲಿಸಿ. ಅಲ್ಪಶ್ರುತನು ನನ್ನನ್ನು ಘಾತಿಸುವನೆಂದು ಶ್ರುತಿಯು ಹೆದರುವಳು—ವಿದ್ಯಾರಣ್ಯರು).

3. ಕೇಳಿದುದು ನನ್ನನ್ನು ಕಾಪಾಡಲಿ—ಕೇಳಿದುದು ಮನಸ್ಸಿನಲ್ಲಿ ಆವರಣ ವಿಕ್ಷೇಪಗಳೆಂಬ ದೋಷಗಳನ್ನು ಹುಟ್ಟಿಸಿ ಕೆಡಿಸುವುದು. ಅದಾಗದಿರಲಿ ಎಂದು ಪ್ರಾರ್ಥನೆ.

ಅನುವಾಕ ೫

ನನಗೆ ಬಟ್ಟೆಗಳು, ಹಸುಗಳು, ಅನ್ನಪಾನಗಳು, ಇವುಗಳನ್ನು ಸರ್ವದಾ ತರುವವಳೂ, ಅವುಗಳನ್ನು ಹೆಚ್ಚಿಸುವವಳೂ, ಮತ್ತೆ ಮತ್ತೆ ಬರುವವಳೂ ಆದ ಶ್ರೀಯನ್ನು ಕರೆದು ತಾ.

(ಕುರಿ ಮೊದಲಾದ) ಪಶುಗಳಿಂದ ಕೂಡಿದ ಶ್ರೀಯನ್ನು ಕರೆದು ತಾ ಸ್ವಾಹಾ.

ಬ್ರಹ್ಮಚಾರಿ[1]ಗಳು ನನ್ನಬಳಿಗೆ ಬರಲಿ ಸ್ವಾಹಾ[1]

ಬ್ರಹ್ಮಚಾರಿಗಳು ನನ್ನನ್ನು ಬಿಟ್ಟು ಹೋಗದಿರಲಿ ಸ್ವಾಹಾ

ಬ್ರಹ್ಮಚಾರಿಗಳು ನನ್ನನ್ನು ಸೇರಿಕೊಂಡಿರಲಿ ಸ್ವಾಹಾ

ಬ್ರಹ್ಮಚಾರಿಗಳು ನನ್ನನ್ನು ದಮವಂತನನ್ನಾಗಿ ಮಾಡಲಿ ಸ್ವಾಹಾ

ಬ್ರಹ್ಮಚಾರಿಗಳು ನನ್ನನ್ನು ಶಮವಂತನಾಗಿ ಮಾಡಲಿ ಸ್ವಾಹಾ

ಜನರಲ್ಲಿ ನಾನು ಯಶಸ್ವಿಯಾಗುವಂತಾಗಲಿ ಸ್ವಾಹಾ

ಸಮಾನರಲ್ಲಿ ಶ್ರೇಷ್ಠನಾಗುವಂತಾಗಲಿ ಸ್ವಾಹಾ

(ಬ್ರಹ್ಮಶಕ್ತಿಯ ಕೋಶನಾದ ನಿನ್ನನ್ನು) ಭಗವನ್, ನಾನು ಪ್ರವೇಶಿಸುವಂತಾಗಲಿ ಸ್ವಾಹಾ

ಆ ಭಗವಂತನೇ ನನ್ನನ್ನು ಪ್ರವೇಶಿಸು ಸ್ವಾಹಾ

ನೀನು, ಎಲೈ ಭಗನೇ, ಒಂದು ಸಾವಿರ ಪಾಲು ಆಗಿರುವೆ. ನಿನ್ನನ್ನು ಶೋಧಿಸುವೆನು ಸ್ವಾಹಾ.

(ಮೇಧಾ ಜನನವಾದ ನಂತರ ಶ್ರೀಯನ್ನು ಕೋರುವುದು. ಅದಿಲ್ಲದಿದ್ದರೆ ಅನರ್ಥವಾದೀತು—ಶಂ.)

ಸ್ವಾಹಾ ಎಂದು ಬಂದಿರುವುದು ಈ ಮಂತ್ರದಿಂದ ಹೋಮ ಮಾಡಲಿ ಎಂದು. ಸ್ವಾಹಾ ಎಂದಾಗ ಇಷ್ಟದೇವತೆಗೆ ತೃಪ್ತಿಯಾಗಲಿ ಎಂದರ್ಥ.

1. ಬ್ರಹ್ಮಚಾರಿಗಳು ಬರಲಿ ಎಂದರೆ, "ತಾನು ಓದಿದ ಓದು ತನ್ನಲ್ಲಿಯೇ ನಿಲ್ಲಕೂಡದು. ಜ್ಞಾನವು ಸಂತಾನವಾಗಬೇಕು" ಎಂದು ನಮಗೆ ಉಪದೇಶ. ಉಪನಿಷತ್ತುಗಳಲ್ಲಿ ಒಂದೆಡೆ, ಅಪ್ರವಕ್ತೃವಿಗೆ ಎಂದರೆ, ಹೇಳದಿದ್ದವನಿಗೆ ಬೋಧಿಸಕೂಡದು ಎಂದಿದೆ. ಆದುದರಿಂದ ಈ ಪ್ರಾರ್ಥನೆಯು ತನಗೆ ಹೇಳಿಕೊಟ್ಟ ಋಷಿಗಳ ಋಣವನ್ನು ತೀರಿಸಲು ಅನುಕೂಲವಾಗಲಿ ಎಂದು.

ನೀರು ಹಳ್ಳವನ್ನು ಹಿಡಿದು ಹರಿಯುವಂತೆ, ತಿಂಗಳುಗಳೆಲ್ಲ ಸಂವತ್ಸರದಲ್ಲಿ ಸೇರಿಕೊಂಡಿರುವಂತೆ, ಬ್ರಹ್ಮಚಾರಿಗಳೂ ನನ್ನಲ್ಲಿಗೆ ಬಂದು ಸೇರಿಕೊಂಡಿರಲಿ. ಎಲೈ ವಿಧಾತನೆ, ಬ್ರಹ್ಮಚಾರಿಗಳು ನನ್ನಲ್ಲಿಗೆ ಎಲ್ಲೆಲ್ಲಿಂದಲೂ ಬರಲಿ ಸ್ವಾಹಾ.

ನೀನು (ಎಲೈ ವಿಧಾತನೆ) ಪ್ರತಿವೇಶನು[1]. ನನಗೆ ದರ್ಶನ ಕೊಡು : ನನ್ನನ್ನು ನಿನ್ನಲ್ಲಿ ಸೇರಿಸಿಕೊ.

ಅನುವಾಕ ೬

ಭೂಃ, ಭುವಃ, ಸುವಃ, ಎಂದು ಈ ಮೂರು ವ್ಯಾಹೃತಿ[2]ಗಳು. ಅವುಗಳ ಜೊತೆಗೆ ನಾಲ್ಕನೆಯದೂ ಒಂದುಂಟು. (ಅದನ್ನು) ಮಾಹಾಚಮಸ್ಯ[3]ನು ಬಲ್ಲನು. ಮಹ ಎಂದು ಅದು. ಅದೇ

---

1. ಪ್ರತಿವೇಶ ಎಂದರೆ ಮನೆ. ಮನೆಯು ತನ್ನಲ್ಲಿಗೆ ಬಂದವರ ಶ್ರಮಾದಿಗಳನ್ನು ಕಳೆಯುವಂತೆ, ನೀನು ನಿನ್ನಲ್ಲಿಗೆ ಬಂದವರ ಪಾಪಾದಿಗಳನ್ನು ಕಳೆಯುವವನು.

(ಇಲ್ಲಿ ಧನಾರ್ಥವಾಗಿ ಈ ಪ್ರಾರ್ಥನೆ. ಧನದಿಂದ ಕರ್ಮ: ಧನದಿಂದ ಕರ್ಮಸಿದ್ಧಿ: ಅದರಿಂದ ಅಂತಃಕರಣಶುದ್ಧಿ: ಅದರಿಂದ ವಿದ್ಯಾ (ಬ್ರಹ್ಮಜ್ಞಾನ) ಲಾಭ. ಜ್ಞಾನವು ಪಾಪಕರ್ಮವು ಕ್ಷಯವಾದಾಗ ದೊರೆಯುವುದು ಎಂದು ಸ್ಮೃತಿಯುಂಟು.—ಶಂ.)

(ಹಿಂದೆ ಸಂಹಿತಾ ವಿಷಯವಾದ ಉಪಾಸನವನ್ನು ಹೇಳಿ ಮೇಧಾ, ಶ್ರೀಗಳನ್ನು ಸಂಪಾದಿಸಿಕೊಡುವ ಮಂತ್ರಗಳನ್ನು ಹೇಳಿ ಈಗ ಬ್ರಹ್ಮವನ್ನು ಅಂತರ್ಮುಖವಾಗಿ ಉಪಾಸನಮಾಡಲು ಬೇಕಾದ ವ್ಯಾಹೃತಿಗಳನ್ನು ಹೇಳಿದೆ—ಶಂ.)

2. ವ್ಯಾಹೃತಿ : ರಹಸ್ಯವಾದ ಅರ್ಥವನ್ನುಳ್ಳ ಪವಿತ್ರ ಶಬ್ದ. ಗಾಯತ್ರಿಯ ಜೊತೆಯಲ್ಲಿ ಇದನ್ನು ಪಠಿಸುತ್ತಾರೆ.

3. ಮಾಹಾಚಮಸ್ಯ : ಮಹಾಚಮಸನ ಮಗ.

(ಭೂರ್ಭುವಸ್ಸುವಃ ಎಂಬ ಮೂರು ವ್ಯಾಹೃತಿಗಳು ಮಹಃ ಎಂಬ ವ್ಯಾಹೃತಿಯ ಅಂಗಗಳು ಎಂದು ಮೇಲೆ ಹೇಳಿತು. ಮಹಃ ಎಂಬ ಆ ಬ್ರಹ್ಮವು ಸಾಕ್ಷಾತ್ತಾಗಿ ದೊರೆಯಲು, ಉಪಾಸನವು ನಡೆಯಬೇಕು. ಅದಕ್ಕಾಗಿ ಹೃದಯಾಕಾಶವು ಸ್ಥಾನವು : ಅಲ್ಲಿ ಲಕ್ಷ್ಯವಿಟ್ಟು ಉಪಾಸನಮಾಡಿದರೆ ಬ್ರಹ್ಮಪ್ರಾಪ್ತಿಯಾಗುವುದು—ಮತ್ತು ಸಾರ್ವಾತ್ಮ್ಯಭಾವ ಪ್ರಾಪ್ತಿಗೆ ಮಾರ್ಗವನ್ನು ಹೇಳಬೇಕು ಎಂದು ಈ ಮುಂದಿನ ಅನುವಾಕವು.—ಶಂ.)

ಬ್ರಹ್ಮವು. ಅದೇ ಆತ್ಮನು. ಮಿಕ್ಕ ದೇವತೆಗಳೆಲ್ಲರೂ ಅದರ ಅಂಗಗಳು.

ಭೂಃ ಎಂದು ಈ ಲೋಕವು: ಭುವಃ ಎಂದು ಅಂತರಿಕ್ಷವು: ಸುವಃ ಎಂದು ಎದುರಿರುವ ಲೋಕವು. ಮಹ ಎಂದು ಆದಿತ್ಯನು. ಆದಿತ್ಯನಿಂದ ಎಲ್ಲಾ ಲೋಕಗಳೂ ಬೆಳೆಯುತ್ತವೆ.

ಭೂಃ ಎಂದರೆ ಅಗ್ನಿಯು: ಭುವಃ ಎಂದರೆ ವಾಯುವು: ಸುವಃ ಎಂದರೆ ಆದಿತ್ಯನು: ಮಹಃ ಎಂದು ಚಂದ್ರನು. ಚಂದ್ರನಿಂದ ಎಲ್ಲಾ ಬೆಳಕುಗಳೂ ಬೆಳೆಯುತ್ತವೆ.

ಭೂಃ ಎಂದು ಋಕ್ಕು: ಭುವಃ ಎಂದು ಸಾಮಗಳು: ಸುವಃ ಎಂದು ಯಜುಸ್ಸುಗಳು: ಮಹಃ ಎಂದು ಅಥರ್ವಣವು. ಅಥರ್ವಣದಿಂದ ಎಲ್ಲಾ ವೇದಗಳೂ ಬೆಳೆಯುತ್ತವೆ.

ಭೂಃ ಎಂದು ಪ್ರಾಣವು: ಭುವಃ ಎಂದು ಅಪಾನವು: ಸುವಃ ಎಂದು ವ್ಯಾನವು: ಮಹಃ ಎಂದು ಅನ್ನವು. ಅನ್ನದಿಂದ ಸರ್ವಪ್ರಾಣಗಳೂ ಬೆಳೆಯುತ್ತವೆ.

ಹೀಗೆ ಆ ವ್ಯಾಹೃತಿಗಳು ನಾಲ್ಕು ನಾಲ್ಕು ಪ್ರಕಾರವು, ವ್ಯಾಹೃತಿಗಳು ನಾಲ್ಕು ನಾಲ್ಕು, ಅವುಗಳನ್ನು ಬಲ್ಲನನು ಬ್ರಹ್ಮವನ್ನು ಬಲ್ಲವನು. ಆತನಿಗೆ ಸರ್ವದೇವತೆಗಳೂ ಕಾಣಿಕೆಯನ್ನು ಒಪ್ಪಿಸುವರು.

ಅನುವಾಕ ೭

ಹೃದಯದಲ್ಲಿ ಆಕಾಶವಿರುವುದಲ್ಲ! ಅದರಲ್ಲಿ ಮನೋಮಯನಾದ ಪುರುಷನು (ಇರುವನು). ಆತನು ಅಮೃತನು. ಹಿರಣ್ಮಯನು: (ಬೆಳಗುತ್ತಿರುವವನು) (ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು).

(ಹೃದಯದಿಂದ ಮೇಲಕ್ಕೆ ಸುಷುಮ್ನಾ ಎಂಬ ನಾಡಿಯು ಹೋಗುತ್ತದೆ. ಅದು ತಾಲುಪ್ರದೇಶವನ್ನು ಹಾದು ಹೋಗುತ್ತದೆ.)

ತಾಲುದೇಶದಲ್ಲಿ ಮಧ್ಯದಲ್ಲಿ ಸ್ತನದಂತೆ ಒಂದು ಮಾಂಸ ಖಂಡವಿದೆ. ಅದನ್ನು ಇಂದ್ರಯೋನಿ ಎನ್ನುತ್ತಾರೆ. ಅದು ನೆತ್ತಿಯವರೆಗೂ ಹೋಗಿ[1] ನೆತ್ತಿಯನ್ನು ಭೇದಿಸಿ (ಹಿಂತಿರುಗುತ್ತದೆ. ಅದು ಮಾರ್ಗವು).

(ಅಲ್ಲಿ ಹೋದಮೇಲೆ ಅಂಗಗಳಾದ ದೇವತೆಗಳು ಇವನನ್ನು ಅನುಗ್ರಹಿಸಿ ತಮ್ಮಲ್ಲಿ ಸೇರಿಸಿಕೊಳ್ಳುವರು.) ಭೂಃ ಎಂದು ಅಗ್ನಿಯಲ್ಲಿ ಪ್ರತಿಷ್ಠಿತನಾಗಿ (ಅಗ್ನಿಯಿರುವ ಎಡೆಗಳಲ್ಲೆಲ್ಲಾ ಇರುವವ)ನಾಗುವನು. ಭುವಃ ಎಂದು ವಾಯುವಿನಲ್ಲಿ, ಸುವಃ ಎಂದು ಆದಿತ್ಯನಲ್ಲಿ, ಮಹಃ ಎಂದು ಬ್ರಹ್ಮದಲ್ಲಿ ಪ್ರತಿಷ್ಠಿತನಾಗುವನು.

(ಆಗ) ಸ್ವಾರಾಜ್ಯ[2]ವನ್ನು ಹೊಂದುವನು : ಮನಸಸ್ಪತಿಯಾಗುವನು. ವಾಕ್ಪತಿಯೂ, ಚಕ್ಷುಷ್ಪತಿಯೂ, ಶ್ರೋತ್ರಪತಿಯೂ, ವಿಜ್ಞಾನಪತಿಯೂ ಆಗುವನು. ಎಲ್ಲವನ್ನೂ ವ್ಯಾಪಿಸಿದವನಾಗುವನು : ಬ್ರಹ್ಮವು ಆಕಾಶ ಶರೀರನು. (ಅದರಂತೆ ಇವನೂ ಆಗಲು ಮೂರ್ತ–ಅಮೂರ್ತವಾದ) ಸತ್ಯವು ಸ್ವಭಾವವಾಗುವುದು : ಪ್ರಾಣಗಳಲ್ಲಿ ಆಡುವನು.

---

1. ಇಲ್ಲಿ ವ್ಯಪೋಹ್ಯಶೀರ್ಷಕಪಾಲೇ ಎಂದು ಮೂಲದಲ್ಲಿದೆ. ಈ ಶ್ರುತಿಯನ್ನು ಅರ್ಥಮಾಡಿಕೊಂಡರೆ, ಕಪಾಲದಲ್ಲಿ ಬರೆದಿರುವ ಲಿಪಿಯನ್ನು ಓದಬಹುದು ಎಂದು ಬ್ರಹ್ಮರ್ಷಿ ಆನೇಕಲ್ಲು ಸುಬ್ಬರಾಯ ಶಾಸ್ತ್ರಿಗಳವರು ಹೇಳುತ್ತಿದ್ದರು.

2. ಸ್ವಾರಾಜ್ಯ :–ತಾನೇ ರಾಜನಾಗುವನು ಎಂಬುದರಿಂದ ಎಲ್ಲಕ್ಕೂ ಒಡೆಯನೆಂದಾಯಿತು. ಆಗ, ಮನಸ್ಸು ಎಲ್ಲೆಲ್ಲಿದ್ದರೆ ಅದಕ್ಕೆಲ್ಲ ಒಡೆಯನಾಗುವನು. ವಾಕ್ಕು, ಚಕ್ಷುಸ್ಸು, ಶ್ರೋತ್ರ, ವಿಜ್ಞಾನ, ಇವುಗಳಿಗೆ ಒಡೆಯರಾದ ದೇವತೆಗಳು ಇವನವರು ಆದಮೇಲೆ ಅವರ ವಶದಲ್ಲಿರುವ ಆ ವಾಗಾದಿಗಳಿಗೆ ಇವನೂ ಒಡೆಯನಾಗುವನು.—(ಶಂ.)

(ಹಿಂದೆ ಐದು ಮಹಾಸಂಹಿತೆಗಳನ್ನು ಹೇಳಿತ್ತು. ಈಗ ಈ ಪಾಂಕ್ತೋಪಾಸನದಲ್ಲಿ ಮತ್ತೆ ಅದನ್ನು ಹೇಳಲಾಯಿತು. ಈ ಪಾಂಕ್ತಕ್ರಮವನ್ನು ಬಲ್ಲವನು ಪಾಂಕ್ತ ಎಂದರೆ ಪ್ರಾಜಾಪತ್ಯಾತ್ಮನು ಆಗುವನು.—ಶಂ.)

(ಪ್ರಜಾಪತಿ ಎಂದರೆ ಎಲ್ಲರನ್ನೂ ಸೃಷ್ಟಿಸಿದವನು: ಹಿರಣ್ಯಗರ್ಭ.)

ಆನಂದವೇ ಇವನ ಮನಸ್ಸು ಆಗುವುದು. ಆಗ ಅಮೃತವೂ ಶಾಂತಿಯೂ ಸಮೃದ್ಧವಾಗುವುವು.

ಆದರಿಂದ, ಪ್ರಾಚೀನಯೋಗ್ಯ, ಹೀಗೆ ಉಪಾಸನ ಮಾಡು.

ಅನುವಾಕ ೭

(ಇನ್ನು ಪಾಂಕ್ತ ಎಂಬ ಉಪಾಸನವನ್ನು ಹೇಳುವರು).

ಪೃಥಿವಿ, ಅಂತರಿಕ್ಷ, ದ್ಯುಲೋಕ, ದಿಕ್ಕು, ಅಂತರ್ದಿಕ್ಕುಗಳು; ಅಗ್ನಿ, ವಾಯು, ಆದಿತ್ಯ, ಚಂದ್ರ, ನಕ್ಷತ್ರಗಳು ; ಆಪಸ್ಸು, ಓಷಧಿಗಳು, ವನಸ್ಪತಿಗಳು, ಆಕಾಶ, ಆತ್ಮಾ, ಇಂತಿದು ಅಧಿಭೂತವು.

ಇನ್ನು ಅಧ್ಯಾತ್ಮವು: ಪ್ರಾಣ, ವ್ಯಾನ, ಅಪಾನ, ಉದಾನ, ಸಮಾನ; ಕಣ್ಣು, ಕಿವಿ, ಮನಸ್ಸು, ವಾಕ್ಕು, ತ್ವಕ್ಕು, ಚರ್ಮ, ಮಾಂಸ, ರಕ್ತ, ಮೂಳೆ, ಮಜ್ಜೆ (ಇದು ಅಧ್ಯಾತ್ಮ).

ಇದನ್ನು ಹೀಗೆ ಗೊತ್ತುಮಾಡಿ ಋಷಿಯು (ಇದರ ರಹಸ್ಯವನ್ನು ತಿಳಿದವನು) ಹೀಗೆ ಹೇಳಿದನು: “ ಈ ಸರ್ವವೂ ಪಾಂಕ್ತವು (ಐದೈದಾಗಿರುವುದು.): ಪಾಂಕ್ತವನ್ನು ತಿಳಿದವನು ಪಾಂಕ್ತವನ್ನು ಪಡೆಯುವನು ” ಎಂದು.

ಅನುವಾಕ ೮[1]

ಓಂ ಎಂದು ಬ್ರಹ್ಮ ; ಓಂ ಎಂದು ಇದು ಎಲ್ಲವೂ : ಓಂ ಎಂದು ಅನುಕೃತಿ[2] ಯು ಪ್ರಸಿದ್ಧವು: ಮತ್ತು ಓಂ ಎಂದು ಕೇಳಿಸು

---

1. (ಈಗ ಓಂಕಾರದ ಉಪಾಸನವನ್ನು ಹೇಳಲಾಗುತ್ತದೆ. ಈ ಓಂಕಾರವನ್ನು ಪರ–ಅಪರ ಬ್ರಹ್ಮವೆಂದು ಉಪಾಸನ ಮಾಡಿದರೆ ಇದು ಶಬ್ದ ಮಾತ್ರವೇ ಆದರೂ ಪರ–ಅಪರ ಬ್ರಹ್ಮಪ್ರಾಪ್ತಿಗೆ, ವಿಷ್ಣುವನ್ನು ಪಡೆಯಲು ಪ್ರತಿಮೆಯಂತೆ, ಸಾಧನವಾಗುವುದು.—ಶಂ.)

2. ಅನುಕೃತಿ.—ಮಾಡು ಎಂದಾಗ ಮಾಡುವೆನು ಎನ್ನುವುದಕ್ಕೆ ಅನುಕೃತಿಯೆಂದು ಹೆಸರು. ಆಗ ಓಂ ಎಂದರೆ ಆಗಲಿ, ಮಾಡುವೆನು ಎಂದರ್ಥ.

ವರು: ಕೇಳುವರು. ಓಂ ಎಂದು ಸಾಮಗಳನ್ನು ಹಾಡುವರು. ಓಂ ಶೋಂ ಎಂದು ಶಸ್ತ್ರ[1]ಗಳನ್ನು ಹೊಗಳುವರು. ಓಂ ಎಂದು ಅಧ್ವರ್ಯು[2]ವು ಪ್ರತ್ಯುತ್ತರವನ್ನು ಹೇಳುವನು. ಓಂ ಎಂದು ಬ್ರಹ್ಮನು ಒಪ್ಪಿಗೆಯನ್ನು ಕೊಡುವನು. ಓಂ ಎಂದು ಅಗ್ನಿಹೋತ್ರವನ್ನು ಅಂಗೀಕರಿಸುವನು. ಓಂ ಎಂದು ಬ್ರಾಹ್ಮಣನು ಹೇಳುತ್ತ, ಬ್ರಹ್ಮವನ್ನು ಪಡೆದೆನೆಂದು ತೋರಿಸಿಕೊಳ್ಳುವನು. ಅದರಿಂದ (ಓಂ ಕಾರದಿಂದ) ಬ್ರಹ್ಮವನ್ನು ಪಡೆಯುವನು.

ಅನುವಾಕ ೧೦

(ವಿಜ್ಞಾನವೊಂದರಿಂದಲೇ ಬ್ರಹ್ಮಪ್ರಾಪ್ತಿಯೆಂದರೆ ಶ್ರೌತ ಸ್ಮಾರ್ತ ಕರ್ಮಗಳಿಗೆ ಪ್ರಯೋಜನವಿಲ್ಲದೆ ಹೋಗುವುದು ಎಂದು ಕರ್ಮಗಳೂ ಪುರುಷಾರ್ಥಸಾಧನಗಳು ಎಂದು ತೋರಿಸಲು ಈ ಉಪನ್ಯಾಸವು.—ಶಂ.)

ಸ್ವಾಧ್ಯಾಯ[3] (ವೇದವನ್ನು ಅಧ್ಯಯನ ಮಾಡುವುದು) ಪ್ರವಚನ[4] (ಇನ್ನೊಬ್ಬರಿಗೆ ಹೇಳುವುದು) ಈ ಎರಡೂ ಋತವು: ಈ ಎರಡೂ

---

1. ಶಸ್ತ್ರ—ಹೊಗಳುವ ಮಂತ್ರ.

2. ಅಧ್ವರ್ಯು—ಯಜ್ಞದಲ್ಲಿ ಎಲ್ಲಾ ಕೆಲಸವನ್ನೂ ಮಾಡುವವನು ಅಧ್ವರ್ಯು. ಈತನು ಯಜುರ್ವೇದದವನು ಈತನು ದೇವತೆಗಳನ್ನು ಕರೆ ಎಂದು ಋಗ್ವೇದದ ಹೋತೃವೆಂಬ ಋತ್ವಿಜನಿಗೆ ಹೇಳುವನು. ಆತನು ಓಂ ಎಂದು ಋಗ್ವೇದದ ಮಂತ್ರದಿಂದ ದೇವತೆಯನ್ನು ಕರೆಯುವನು. ಸಾಮವೇದದ ಸುಬ್ರಹ್ಮಣ್ಯವೆಂಬ ಋತ್ವಿಜನು ಸಾಮವನ್ನು ಹಾಡಿ ಆ ದೇವತೆಯನ್ನು ರೂಪಗಟ್ಟಿ ಕಾಣಿಸುವಂತೆ ಮಾಡುವನು. ಅದರಲ್ಲಿ ಹೆಚ್ಚು ಕಡಿಮೆಯಾದುದನ್ನು ಬ್ರಹ್ಮನೆಂಬ ಋತ್ವಿಜನು ಸರಿಪಡಿಸುವನು. ಆಗ ದೇವತೆಗೆ ಅಧ್ವರ್ಯುವು ಹೋಮಮಾಡುವನು.

3. ಸ್ವಾಧ್ಯಾಯವೆಂದರೆ ತನ್ನ ಶಾಖೆಯಾದ ವೇದವನ್ನು ಓದುವುದು. ಸ್ವಾಧ್ಯಾಯವಿಲ್ಲದಿದ್ದರೆ ಅರ್ಥಜ್ಞಾನವಾಗುವುದೆಂತು? ಅರ್ಥಜ್ಞಾನವಿಲ್ಲದಿದ್ದರೆ ಶ್ರೇಯಸ್ಸು ಲಭಿಸುವುದೆಂತು? ಅದರಿಂದ ಸ್ವಾಧ್ಯಾಯವು ಬೇಕೇ ಬೇಕು.—(ಶಂ.)

4. ಕಲಿತ ವಿದ್ಯೆಯು ಮರೆಯದೆ ಇರಲು ಮತ್ತು ಧರ್ಮಾಭಿವೃದ್ಧಿಯಾಗಲು ಪ್ರವಚನವು.—(ಶಂ.)

ಸತ್ಯವು : ಈ ಎರಡೂ ತಪವು : ಈ ಎರಡೂ ದಮವು : ಈ ಎರಡೂ ಶಮವು : ಈ ಎರಡೂ ಅಗ್ನಿಗಳು : ಈ ಎರಡೂ ಅಗ್ನಿಹೋತ್ರಗಳು : ಈ ಎರಡೂ ಅತಿಥಿಗಳು : ಈ ಎರಡೂ ಮಾನುಷವು (ಮನುಷ್ಯ ಲೋಕದ ವ್ಯವಹಾರವು): ಈ ಎರಡೂ ಪ್ರಜೆಗಳು: ಇವೇ ಪ್ರಜನ[1] ವು : ಇವೇ ಪ್ರಜಾತಿ[2]ಯು : ಇದು ಸತ್ಯವೆಂದು ಸತ್ಯವಾಕ್ಯನಾದ ರಾಥೀತರನೆಂಬ ಆಚಾರ್ಯನು (ಹೇಳಿರುವನು) : ಇದೇ ತಪಸ್ಸೆಂದು ತಪೋನಿರತನಾದ ಪೌರುಶಿಷ್ಟಿಯು (ಹೇಳಿದ್ದಾನೆ). ಸ್ವಾಧ್ಯಾಯ ಪ್ರವಚನಗಳನ್ನು ನಡೆಸಿಕೊಂಡೇ ಬರಬೇಕು ಎಂದು ಮೌದ್ಗಲ್ಯನಾಕನು (ಹೇಳಿದ್ದಾನೆ): ಅವೇ ತಪಸ್ಸು. ಅವೇ ತಪಸ್ಸು.

ಅನುವಾಕ ೧೧

" ನಾನು (ಈ ಸಂಸಾರ) ವೃಕ್ಷದ ಅಂತರ್ಯಾಮಿಯು. (ನನ್ನ) ಕೀರ್ತಿಯು ಬೆಟ್ಟದ ಬೆನ್ನಿನಂತೆ (ಎತ್ತರವಾಗಿರುವುದು). ಪರಮವಾದ ಬ್ರಹ್ಮವು (ನಾನು). ಸೂರ್ಯನಲ್ಲಿ ಪ್ರಸಿದ್ಧವಾದ (ವಿಶುದ್ಧವಾದ) ಯಾವ ಶ್ರೇಷ್ಠವಾದ ಅಮೃತ (ಬ್ರಹ್ಮ) ತತ್ವವುಂಟೋ ಅದೇ ನಾನು ಆಗಿದ್ದೇನೆ. ಪ್ರಕಾಶಮಾನವಾದ ಧನವು (ಬ್ರಹ್ಮವು) ಯಾವುದೋ ಅದೇ (ನಾನು). (ಸರ್ವಜ್ಞ ಲಕ್ಷಣವಾದ) ಸುಮೇಧೆಯು (ನನಗುಂಟು). ಮರಣವನ್ನು ದಾಟಿದವನು (ನಾನು)" ಎಂದು ತ್ರಿಶಂಕು[3]ವಿನ ವೇದಾನುವಚನವು.

---

1. ಪ್ರಜನ.—ಮಕ್ಕಳನ್ನು ಪಡೆಯುವುದು.
೨. ಪ್ರಜಾತಿ.—ಮೊಮ್ಮಕ್ಕಳನ್ನು ಪಡೆಯುವುದು.

3. ತ್ರಿಶಂಕುವು ಶ್ರೌತಸ್ಮಾರ್ತಗಳೆಂಬ ನಿತ್ಯಕರ್ಮಗಳನ್ನು ನಿಷ್ಕಾಮವಾಗಿ ಮಾಡಿ ಸಿದ್ಧಿಯನ್ನು ಪಡೆದು ಬ್ರಹ್ಮನಾಗಿ ತಾನು ತಿಳಿದುದನ್ನು ಮಾತಿನಲ್ಲಿ ಹೇಳಿದನು. ಅದರಿಂದ, ಆತನು ತಾನು ಕೃತಕೃತ್ಯನಾದೆನೆಂದು ಹೇಳಿದ ಈ ವಚನವು ಆತ್ಮವಿದ್ಯಾ ಪ್ರಕಾಶಕವಾಯಿತು. ಈ ಮಂತ್ರವನ್ನು ಜಪಮಾಡಿದರೆ ಬ್ರಹ್ಮವಿದ್ಯಾಲಾಭವಾಗುವುದು.—ಶಂ.

ಅನುವಾಕ ೧೨

ವೇದವನ್ನು (ವಿಧಿವತ್ತಾಗಿ) ಕಲಿಸಿ. ಆಚಾರ್ಯನು (ಸ್ನಾತಕನಾಗಿ ಎಂದರೆ ವಿದ್ಯೆಯನ್ನು ಕಲಿತು ಹಿಂತಿರುಗಲಿರುವ) ಶಿಷ್ಯನನ್ನು ಕುರಿತು ಹೀಗೆ ಅಪ್ಪಣೆ ಮಾಡುತ್ತಾನೆ :—

ಸತ್ಯವನ್ನು ಹೇಳು : ಧರ್ಮವನ್ನು ಮಾಡು : ಸ್ವಾಧ್ಯಾಯವನ್ನು ಬಿಡಬೇಡ : ಆಚಾರ್ಯನಿಗೆ ಪ್ರಿಯವಾದ ಧನವನ್ನು ಕೊಡು : ಸಂತತಿಯನ್ನು ಕಡಿಯಬೇಡ : ಸತ್ಯವನ್ನು ಮರೆಯಬಾರದು : ಧರ್ಮವನ್ನು ಮರೆಯಬಾರದು : ಕುಶಲವನ್ನು ಮರೆಯಬಾರದು : ಅಭಿವೃದ್ಧಿಯನ್ನು ಮರೆಯಬಾರದು : ಸ್ವಾಧ್ಯಾಯ ಪ್ರವಚನಗಳನ್ನು ಮರೆಯಬಾರದು.

ದೇವಪಿತೃಕಾರ್ಯಗಳನ್ನು ಮರೆಯಬಾರದು : ಮಾತೃವನ್ನು ದೇವರೆನ್ನು : ಪಿತೃವನ್ನು ದೇವರೆನ್ನು : ಆಚಾರ್ಯನನ್ನು ದೇವರೆನ್ನು : ಅತಿಥಿಗಳನ್ನು ದೇವರೆನ್ನು : ಇತರರು ಹೊಗಳುವಂತಹ ಕರ್ಮಗಳನ್ನೇ ಮಾಡಬೇಕು. ನಾವು ಮಾಡಿದವುಗಳಲ್ಲಿ ಯಾವವು ಸುಚರಿತಗಳೋ ಅವುಗಳನ್ನು ಮಾತ್ರ ನೀನು ಮಾಡು : ಇತರಗಳು ಬೇಡ.

ನಮಗಿಂತಲೂ ದೊಡ್ಡವರಾದ ಬ್ರಾಹ್ಮಣರು ಬಂದರೆ, ಅವರಿಗೆ ಆಸನಾದಿಗಳನ್ನು ಕೊಟ್ಟು ಗೌರವಿಸಬೇಕು. ಶ್ರದ್ಧೆಯಿಂದ ಕೊಡು. ಅಶ್ರದ್ಧೆಯಿಂದ ಕೊಡಬಾರದು. ನಿನ್ನ ವೈಭವಕ್ಕೆ ತಕ್ಕಂತೆ ಕೊಡಬೇಕು, ಲಜ್ಜೆ (ವಿನಯ)ಯಿಂದ ಕೊಡಬೇಕು. ಭಯದಿಂದ ಕೊಡಬೇಕು. ಮಂತ್ರಪೂರ್ವಕವಾಗಿ ಕೊಡಬೇಕು.

ಯಾವಾಗಲಾದರೂ ನಿನಗೆ ಈ ಕರ್ಮ ಹೇಗೆ ಮಾಡಬೇಕು ? ಈಗ ಹೇಗೆ ನಡೆದುಕೊಳ್ಳಬೇಕು ? ಎಂದು ಸಂಶಯ ಬಂದರೆ, ವಿಚಾರವಂತರೂ, ಕರ್ಮ ಆಚಾರಗಳಿಂದ ಉತ್ತಮರೂ, ಲೌಕಿಕ ಪ್ರಜ್ಞಾವಂತರೂ, ಅಕ್ರೂರಮತಿಗಳೂ, ಧರ್ಮದಲ್ಲಿ ಶ್ರದ್ಧೆಯುಳ್ಳವರೂ ಆದ ಬ್ರಾಹ್ಮಣರು ಆ ಕರ್ಮಗಳನ್ನು ಹೇಗೆ ಮಾಡುವರೋ, ಆ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳುವರೋ ಹಾಗೆ ಮಾಡು; ಹಾಗೆ ನಡೆ.

ಅಭ್ಯಾಖ್ಯಾತರಲ್ಲಿ (ದೋಷಿಗಳು ಎನ್ನಿಸಿಕೊಂಡವರಲ್ಲಿ) ಯೂ ವಿಚಾರವಂತರೂ, ಕರ್ಮ ಆಚಾರಗಳಿಂದ ಉತ್ತಮರೂ, ಲೌಕಿಕ ಪ್ರಜ್ಞಾವಂತರೂ, ಅಕ್ರೂರಮತಿಗಳೂ, ಧರ್ಮಶ್ರದ್ಧೆಯುಳ್ಳವರೂ ಆದ ಬ್ರಾಹ್ಮಣರು ನಡೆಯುವಂತೆ ನಡೆ.

ಇದು ಆದೇಶ[1]ವು: ಇದು ಉಪದೇಶ[2] ವು: ಇದೇ ವೇದದ ರಹಸ್ಯವು: ಇದು ಅನುಶಾಸನ[3] ವು: ಹೀಗೆ ನಡೆದುಕೊಂಡರೆ ಅದೇ ಉಪಾಸನವು: ಹೀಗೆಯೇ ನಡೆದು ಉಪಾಸನ ಮಾಡಬೇಕು.

ಅನುವಾಕ ೧೨

ಓಂ ಶಂ ನೋ ಮಿತ್ರಃ ಶಂ ವರುಣಃ। ಶಂ ನೋ ಭವತ್ವರ್ಯಮಾ। ಶಂ ನ ಇಂದ್ರೋ ಬೃಹಸ್ಪತಿಃ ॥ ಶಂನೋವಿಷ್ಣು ರುರುಕ್ರಮಃ। ನಮೋಬ್ರಹ್ಮಣೇ। ನಮಸ್ತೇವಾಯೋ। ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ। ತ್ವಾಮೇವ ಪ್ರತ್ಯಕ್ಷಂ ಬ್ರಹ್ಮಾವಾದಿಷಂ। ಋತಮವಾದಿಷಂ। ಸತ್ಯಮವಾದಿಷಂ। ತನ್ಮಾಮಾವೀತ್। ತದ್ವಕ್ತಾರಮಾವೀತ್। ಆವೀನ್ಮಾಂ। ಆವೀತ್ ವಕ್ತಾರಂ। ಓಂ ಶಾಂತಿಶ್ಶಾಂತಿಶ್ಶಾಂತಿಃ ॥

(ಇದಕ್ಕೆ ಮೊದಲನೆಯ ಅನುವಾಕದಲ್ಲಿ ಅರ್ಥ ಬರೆದಿದೆ.)

ಬ್ರಹ್ಮಾನಂದವಲ್ಲೀ

(ಇದಕ್ಕೆ "ಮಿತ್ರನೂ ವರುಣನೂ ನಮಗೆ ಒಳ್ಳೆಯದನ್ನು ಮಾಡಲಿ" ಎಂಬ ಶಾಂತಿ ಮಂತ್ರದ ಜೊತೆಗೆ "ನಮ್ಮಿಬ್ಬರನ್ನೂ ಕಾಪಾಡಲಿ" ಎಂಬ ಶಾಂತಿಮಂತ್ರವೂ ಇದೆ.)

---

1. ಆದೇಶ—ಶಾಸ್ತ್ರವಾಕ್ಯನಂತೆ ವಿಧಿ.
2. ಉಪದೇಶ—ತಂದೆ ಮೊದಲಾದವರು ಮಕ್ಕಳಿಗೆ ಹೇಳುವ ಮಾತು.
3. ಅನುಶಾಸನ—ಈಶ್ವರ ವಚನದಂತೆ ಕಟ್ಟುನಿಟ್ಟಾಗಿ ಮಾಡಬೇಕಾದುದು.

ಓಂ ಸಹನಾವವತು । ಸಹನೌ ಭುನಕ್ತು । ಸಹವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ । ಓಂ ಶಾಂತಿಶ್ಶಾಂತಿಶ್ಶಾಂತಿಃ ॥

ಶಿಷ್ಯಾಚಾರ್ಯರಿಬ್ಬರನ್ನೂ ರಕ್ಷಿಸಲಿ. (ಬ್ರಹ್ಮವು) ನಮ್ಮಿಬ್ಬರಿಗೂ ಫಲವನ್ನು ಕೊಡಲಿ. ನಾವಿಬ್ಬರೂ ಆ ವಿದ್ಯೆಯು ವೀರ್ಯವತ್ತಾಗುವಂತೆ ಮಾಡೋಣ. ನಾವು ಕಲಿತ ಈ ವಿದ್ಯೆಯು ತೇಜಸ್ವಿಯಾಗಲಿ. ಶಿಷ್ಯಾಚಾರ್ಯರು ನಾವಿಬ್ಬರೂ ಪರಸ್ಪರ ದ್ವೇಷವಿಲ್ಲದವರಾಗೋಣ.

ಅನುವಾಕ ೧

ಓಂ. ಬ್ರಹ್ಮವನ್ನು ಬಲ್ಲವನು ಪರವನ್ನು ಹೊಂದುವನು. ಇದನ್ನು (ಋಕ್ಕು) ಹೇಳುತ್ತದೆ. ಸತ್ಯವೂ ಜ್ಞಾನವೂ ಅನಂತವೂ[1] (ಆದುದು) ಬ್ರಹ್ಮ. ಯಾರು ಗುಹೆ[2]ಯಲ್ಲಿ ಪರಮಾಕಾಶ[3]ದಲ್ಲಿ ಇರುವ (ಬ್ರಹ್ಮವನ್ನು) ಬಲ್ಲನೋ ಆತನು ಸರ್ವ ಕಾಮುಗಳನ್ನೂ ಸರ್ವಜ್ಞ (ಬ್ರಹ್ಮ)ನಾಗಿ (ಏಕಕಾಲದಲ್ಲಿ) ಅನುಭವಿಸುವನು.

ಈ ಆತ್ಮನಿಂದಲೇ ಆಕಾಶವು ಸಂಭವಿಸಿತು. ಆಕಾಶದಿಂದ ವಾಯುವು : ವಾಯುವಿನಿಂದ ಅಗ್ನಿಯು : ಅಗ್ನಿಯಿಂದ ಜಲವು :

(ಈ ನಮ್ಮಿಬ್ಬರನ್ನೂ ಕಾಪಾಡಲಿ ಎಂಬ ಮಂತ್ರಕ್ಕೆ ಇಲ್ಲಿ ಆಚಾರ್ಯರು ಅರ್ಥವನ್ನು ಬರೆದಿದ್ದಾರೆ. ಅದರಿಂದಲೂ ಅವರು ಈ ತೈತ್ತಿರಿಯೋಪನಿಷತ್ತಿನಿಂದ ಅವರ ಉಪನಿಷದ್ಭಾಷ್ಯವನ್ನು ಆರಂಭಿಸಿರಬಹುದು ಎನ್ನಲು ಸಾಧ್ಯವಿದೆ.)

1. ಸತ್ಯ ಜ್ಞಾನ ಅನಂತ : ಇವು ಬೇರೆ ಬೇರೆಯಲ್ಲ, ಇವೆಲ್ಲವೂ ಸೇರಿ ಬ್ರಹ್ಮ.

2. ಗುಹೆ : ಬುದ್ಧಿ. ಜ್ಞಾನ–ಜ್ಞೇಯ–ಜ್ಞಾತೃ–ಎಂಬುವ ಮೂರೂ ಇಲ್ಲದೆ ಯಾವುದೂ ತಿಳಿಯುವುದಿಲ್ಲ. ಅದರಿಂದ ಇದಕ್ಕೆ ತ್ರಿಪುಟಿ ಎಂದು ಹೆಸರು. ಬುದ್ಧಿಯಲ್ಲ ಈ ಮೂರೂ ಇರುವುವು. ಬುದ್ಧಿಯಿಂದ ತಿಳಿಯುವುದು ಎಂದರೆ, ಈ ಮೂರೂ ರೂಪವಾಗಿ ತಿಳಿಯುವುದು. ಆದರೆ ಈ ಬುದ್ಧಿಯಿಂದ ಆಚೆ ಹೋದವರಿಗೆ ಈ ತ್ರಿಪುಟೀ ದೋಷವಿರುವುದಿಲ್ಲ.

3. ಈ ಬುದ್ಧಿಯನ್ನೇ ಪರಮಾಕಾಶವೆನ್ನುವರು. ಇದನ್ನೇ ಹೃದಯದ ಚಿದಾಕಾಶ ಎನ್ನುವುದೂ ಉಂಟು.

ಜಲದಿಂದ ಪೃಥ್ವಿಯು: ಪೃಥ್ವಿಯಿಂದ ಓಷಧಿಗಳು: ಓಷಧಿಗಳಿಂದ ಅನ್ನವು: ಅನ್ನದಿಂದ ಪುರುಷ[1]ನು, ಆ ಪುರುಷನೇ ಅನ್ನರಸಮಯ (ದೇಹ)ನು.

---

1. ಪುರುಷ: ಇಲ್ಲಿ ತಲೆ ಕೈಕಾಲು ಉಳ್ಳ ಆಕೃತಿಯುಳ್ಳ ಪುರುಷನು.

ಆಕಾಶವು ನಿರ್ಗುಣವು ಸಗುಣವಾಗುವ ಸ್ಥಾನವು. ಅದರಲ್ಲಿ ಶಬ್ದವೆಂಬ ಒಂದು ಗುಣವು. ಆ ಶಬ್ದವು ಅನಾಹತವಾದುದು. ಅದೇ ಪ್ರಣವವು. ಅದನ್ನು ಹಿಡಿದರೆ ಅದು ಆಕಾಶವನ್ನು ದಾಟಿಸಿ, ತನ್ಮೂಲವಾದ ಆತ್ಮನಲ್ಲಿಗೆ ಒಯ್ಯುವುದು—ಅದೇ ಓಂಕಾರೋಪಾಸನವು.

ಈ ಶಬ್ದವು ಆಹತರೂಪವನ್ನು ತೆಗೆದುಕೊಂಡು ಮುಂದೆ ಹೊರಟಾಗ ವಾಯುವಾಯಿತು. ಅದು ಆಕಾಶದಿಂದ ಬೇರೆಯಾಗಿ ಸ್ಪರ್ಶವೆಂಬ ಇನ್ನೊಂದು ಗುಣವನ್ನು ಪಡೆಯಿತು. ಇದಕ್ಕೆ ಆಕಾಶದಿಂದ ಬಂದ ಶಬ್ದ, ತನ್ನದಾದ ಸ್ಪರ್ಶ, ಹೀಗೆ ಎರಡು ಗುಣವು ಬಂತು.

ವಾಯುವಿಂದ ಅಗ್ನಿಯು ಹುಟ್ಟಿತು: ಅದಕ್ಕೆ ವಾಯುವಿನ ಎರಡು ಗುಣದ ಜೊತೆಗೆ ತನ್ನ ರೂಪವೆಂಬ ಗುಣವೂ ಸೇರಿ ಮೂರು ಗುಣವಾಯಿತು.

ಅಗ್ನಿಯಿಂದ ಜಲವು ಹುಟ್ಟಿತು: ಅದಕ್ಕೆ ಅಗ್ನಿಯ ಮೂರು ಗುಣದ ಜೊತೆಗೆ ರುಚಿಯೆಂಬ ನಾಲ್ಕನೆಯ ಗುಣವು ಹುಟ್ಟಿ ಅದಕ್ಕೆ ಶಬ್ದಸ್ಪರ್ಶರೂಪರಸಗಳೆಂಬ ನಾಲ್ಕು ಗುಣಗಳು ಆದುವು. ಜಲಕ್ಕೆ ತೂಕವು ಬಂತು.

ಜಲದ ಭಾರಾಂಶವು ಪ್ರತ್ಯೇಕವಾಗಿ ಭೂಮಿಯಾಯಿತು. ಅದಕ್ಕೆ ಶಬ್ದಸ್ಪರ್ಶರೂಪರಸಗಳೆಂಬ ನಾಲ್ಕು ಗುಣಗಳ ಜೊತೆಗೆ ಗಂಧವೆಂಬ ಗುಣವೂ ಸೇರಿತು. ಅದು ಘನವಾದ್ದರಿಂದ, ಇದಕ್ಕೆ ಭಾರವು ಹೆಚ್ಚಿತು.

ಪೃಥಿವಿ ಮುಂತಾದ ಭೂತಗಳನ್ನು ಗೆಲ್ಲಲು ಸಾಧ್ಯವುಂಟು. ಪೃಥಿವೀ ಜಯದಿಂದ ದೇಹದ ಭಾರವು ಕಡಿಮೆಯಾಗಿ ಹಕ್ಕಿಯಂತೆ ಹಾರಲು ಆಗುವುದು. (ಇದನ್ನು ಯೋಗಸೂತ್ರ ವಿಭೂತಿಪಾದದಲ್ಲಿ ನೋಡಿ. ಯೋಗವಾಸಿಷ್ಠ—ನಿರ್ವಾಣಪ್ರಕರಣ—ಭುಶುಂಡೋಪಾಖ್ಯಾನದಲ್ಲಿ ನೋಡಿ)—(ಈ ಪಂಚಭೂತಗಳ ವಿಚಾರವಾಗಿ ತಿಳಿಯಬೇಕು ಎನ್ನುವವರು ವಿದ್ಯಾರಣ್ಯರ ಪಂಚದಶಿಯಲ್ಲಿ ಪಂಚಭೂತ ವಿವೇಕ ನೋಡಿ.)

ಈ ಭೂತಗಳು ತುಂಡುತುಂಡಾಗಿ ಲೋಕದಲ್ಲಿರುವ ಸರ್ವದೇಹಗಳನ್ನು ಕಟ್ಟುವುವು. ದೇಹದಲ್ಲಿರುವ ಇಂದ್ರಿಯ ಮನೋಬುದ್ಧಿಗಳನ್ನೂ ಇವೇ ಕಟ್ಟುವುವು. (ಈ ಅಂಶವನ್ನು ಪಂಚೀಕರಣದಿಂದ ತಿಳಿಯುವುದು.) ಇದೆಲ್ಲವೂ ಸೇರಿ ಆಗಿರುವವನು ಪುರುಷ.

ಇಲ್ಲಿ ಜ್ಞಾನವೆಂದು ಹೇಳಿರುವುದು ಬ್ರಹ್ಮಲಕ್ಷಣವಾದ ಜ್ಞಾನವನ್ನು. ಬುದ್ಧಿಯಲ್ಲಿ ಜ್ಞಾನಜ್ಞಾತೃಜ್ಞೇಯ ರೂಪವಾಗಿ ಬರುವ ಜ್ಞಾನವೃತ್ತಿಯನ್ನಲ್ಲ. ಆ ಜ್ಞಾನವೃತ್ತಿಯು ಯಾವುದಾದರೂ ಒಂದನ್ನು ಹಿಡಿದು ತಿಳಿದೆನೆನ್ನುವುದು. ತಿಳಿಯುವ ಶಕ್ತಿಯು ಯಾವುದೋ ಅದು ಬ್ರಹ್ಮ.

ಆ ದೇಹಕ್ಕೆ ಇದು ಶಿರವು. ಇದು ದಕ್ಷಿಣ ಪಕ್ಷವು. ಇದು ಉತ್ತರ ಪಕ್ಷವು. ಇದು ಆತ್ಮ (ದೇಹಮಧ್ಯ ಭಾಗ)ವು. ಇದು (ನಾಭಿಯಿಂದ ಕೆಳಭಾಗವು) ಪುಚ್ಛವು. (ಇದೇ) ಪ್ರತಿಷ್ಠೆಯು (ಇವನನ್ನು ಹೊತ್ತಿರುವುದು.) ಈ ಅರ್ಥದಲ್ಲಿ ಶ್ಲೋಕವು ಉಂಟು.

ಅನುವಾಕ ೨

ಭೂಮಿಯಲ್ಲಿರುವ ಎಲ್ಲಾ ಪ್ರಜೆಗಳೂ ಅನ್ನದಿಂದಲೇ ಹುಟ್ಟುವರು. ಹುಟ್ಟಿದ ಮೇಲೂ ಅನ್ನದಿಂದಲೇ ಜೀವಿಸುವರು: ಕೊನೆಗೆ ಲಯದಲ್ಲಿ ಅದನ್ನೇ ಹೊಂದುವರು. ಅನ್ನವು ಎಲ್ಲಾ ಪ್ರಾಣಿಗಳಿಗೂ ಮೊದಲು ಹುಟ್ಟಿದುದು. ಅದರಿಂದ ಎಲ್ಲಕ್ಕೂ ಅದು ಔಷಧ (ಸಮಾಧಾನಕಾರಕ)ವು ಎನ್ನುವರು. ಯಾರು ಅನ್ನವನ್ನು ಬ್ರಹ್ಮವೆಂದು ಉಪಾಸನ ಮಾಡುವರೋ ಅವರು ಸಮಸ್ತವಿಧವಾದ ಅನ್ನವನ್ನೂ ಪಡೆಯುವರು.

ಅನ್ನವು ಎಲ್ಲಾ ಪ್ರಾಣಿಗಳಿಗೂ ಮೊದಲು ಹುಟ್ಟಿದುದು: ಅದರಿಂದ ಅದನ್ನು ಸರ್ವೌಷಧವೆನ್ನುವರು. ಅನ್ನದಿಂದ ಪ್ರಾಣಿಗಳು ಹುಟ್ಟುವುವು: ಹುಟ್ಟಿದವು ಅನ್ನದಿಂದ ಬೆಳೆಯುವುವು. (ಆ ಅನ್ನವನ್ನು) ಭೂತಗಳು ತಿನ್ನುವುವು: ಅದು ಭೂತಗಳನ್ನು ತಿನ್ನುವುದು. ಅದರಿಂದಲೇ ಅದನ್ನು ಅನ್ನ ಎನ್ನುವುದು. (ಎಂದು ಹೇಳುವರು).[1]

---

[1] ಮೊದಲು ಅನ್ನವು ಹುಟ್ಟಿ ಅನನ್ನಾದನು ಆಮೇಲೆ ಹುಟ್ಟುವುದು ಜ. ಅದರಿಂದ ಅನ್ನವು ಎಲ್ಲವಕ್ಕಿಂತ ಜ್ಯೇಷ್ಠವು. ಅನ್ನವನ್ನು ತಿಂದು ವು ಬದುಕುವುದು. ಜೀವವು ಹೋದಮೇಲೆ ಅದು ಕಟ್ಟಿದ ಗೂಡ ಶ್ರಾಂದಕ್ಕೆ ಅನ್ನವಾಗುವುದು.

ಅದರಿಂದ, ಈ ಅನ್ನರಸದಿಂದ ಆದ (ಅನ್ನಮಯ ಕೋಶ)ದಿಂದ, ಬೇರೆಯಾದ ಅದರೊಳಗಿರುವ ಆತ್ಮನು (ಇನ್ನೊಬ್ಬ)ನಿರುವನು. (ಆತನ ಹೆಸರು) ಪ್ರಾಣಮಯ. ಆತನು ಈತ (ಅನ್ನಮಯ)ನನ್ನು ತುಂಬಿರುವನು. ಆ ಪ್ರಾಣಮಯನೂ ಪುರುಷನಂತೆಯೇ ಇರುವನು. ಅವನು ಪುರುಷನಂತಿರುವುದೂ ಅನ್ನಮಯನಂತೆಯೆ! ಆ ಪ್ರಾಣಮಯನಿಗೆ ಪ್ರಾಣವೇ ಶಿರವು: ವ್ಯಾನವು ಬಲಗಡೆಯ ರೆಕ್ಕೆಯು, ಅಪಾನವು ಎಡಗಡೆಯ ರೆಕ್ಕೆಯು, ಆಕಾಶವೇ ಆತ್ಮವು, ಪೃಥಿವಿಯು ಬಾಲದಂತೆ ಇದ್ದು ಇವನನ್ನು ಹಿಡಿದುಕೊಂಡಿರುವುದು: ಈ ಅರ್ಥದಲ್ಲಿ ಶ್ಲೋಕವೂ ವುಂಟು.

ಅನುವಾಕ ೩

ದೇವತೆಗಳೂ, ಮನುಷ್ಯರೂ, ಪಶುಗಳೂ ಎಲ್ಲರೂ ಪ್ರಾಣವನ್ನು ಹಿಡಿದು ಬದುಕುವುದು. ಪ್ರಾಣವೇ ಪ್ರಾಣಿಗಳ ಆಯಸ್ಸು. ಅದರಿಂದ ಪ್ರಾಣವನ್ನು ಸರ್ವಾಯುಷ ಎನ್ನುವರು. ಪ್ರಾಣವನ್ನು ಬ್ರಹ್ಮ ಎಂದು ಉಪಾಸನ ಮಾಡಿದವರು ಸರ್ವ-ಆಯುವನ್ನೂ ಹೊಂದುವರು. ಪ್ರಾಣವೇ ಪ್ರಾಣಿಗಳ ಆಯುಸ್ಸು. ಅದರಿಂದಲೇ ಪ್ರಾಣವನ್ನು ಸರ್ವಾಯುಷವೆನ್ನುವರು.

ಮೊದಲು ಹೇಳಿದ ಅನ್ನಮಯದ ಶರೀರಕ್ಕೆ ಆತ್ಮನು ಈ ಪ್ರಾಣಮಯನು.

ಈ ಪ್ರಾಣಮಯಕ್ಕಿಂತ ಬೇರೆಯಾಗಿ, ಇದರೊಳಗಿರುವ ಆತ್ಮನು ಮನೋಮಯನು. ಮನೋಮಯನು ಪ್ರಾಣಮಯನನ್ನು ತುಂಬಿರುವನು. ಅವನೂ ಇವನಂತೆಯೇ ಪುರುಷಾಕೃತಿಯು. ಆತನಿಗೆ

ಯಜುಸ್ಸು ಶಿರವು[1]. ಋಕ್ಕು ಬಲಗಡೆಯ ರೆಕ್ಕೆಯು. ಸಾಮವು ಎಡಗಡೆಯ ರೆಕ್ಕೆಯು. ಆದೇಶವು ಆತ್ಮವು. ಅಥರ್ವಾಂಗಿರಸವು ಬಾಲದಂತಿದ್ದು ಇವನನ್ನು ಹಿಡಿದುಕೊಂಡಿರುವುದು. ಈ ಅರ್ಥದಲ್ಲಿ ಶ್ಲೋಕವೂ ಇರುವುದು.

ಅನುವಾಕ ೪

ವಾಕ್ಕು ಮನಸ್ಸಿನಿಂದ ಕೂಡ ಮುಟ್ಟಲಾರದೆ ಎಲ್ಲಿಂದ ಹಿಂತಿರುಗುತ್ತದೋ ಅದು ಆನಂದವು: ಅದು ಬ್ರಹ್ಮನದು: ಅದನ್ನು ಬಲ್ಲವನು ಯಾವಾಗಲೂ ಹೆದರುವುದಿಲ್ಲ. ಎಂದು,

---

[1]ಯಜುಸ್ಸಿನಿಂದಲೇ ಸರ್ವ ಕರ್ಮಗಳೂ ನಡೆಯುವುದರಿಂದ ಅದಕ್ಕೆ ಪ್ರಾಧಾನ್ಯವು ಎಂದು ಶಿರಸ್ಸೆಂದು ಹೇಳಿದೆ. ಹೀಗೆಯೇ ಮಂತ್ರಗಳು ಬರಬೇಕಾದರೆ ಮನಸ್ಸು ಮುಖ್ಯ. ಅದರಿಂದ ಮನಸ್ಸಿಗೆ ಋಕ್‌ಸಾಮಗಳು ಪಕ್ಷಗಳಾದುವು. ಶಾಂತಿಕ ಪೌಷ್ಟಿಕ ಎಂಬ ಪ್ರತಿಷ್ಠಾ (ಸುಖವಾಗಿರುವುದು) ಸಾಧನವಾದ ಕರ್ಮಗಳನ್ನು ಹೇಳುವ ಅಥರ್ವ ವೇದವು ಪ್ರತಿಷ್ಠಾ ಎಂದು ಹೇಳುವುದೂ ಸರಿ.

(ಮನಸ್ಸನ್ನು ಪರಮಾಕಾಶ ಎನ್ನುತ್ತಾರೆ. "ಋಚೋ ಅಕ್ಷರೇ ಪರಮೇವ್ಯೋಮನ್ ಯಸ್ಮಿನ್ದೇವಾ ಅಧಿ ವಿಶ್ವೇ ನಿಷೇದುಃ" "ಪರಮಾಕಾಶದಲ್ಲಿ ಋಗ್ವೇದವಿರುವುದು. ಅಲ್ಲಿ ವಿಶ್ವದಲ್ಲಿರುವ ದೇವತೆಗಳೆಲ್ಲರೂ ಇರುವರು" "ಸರ್ವೇ ವೇದಾ ಯತ್ರೈಕಂ ಭವಂತಿ। ಸ ಮಾನಸೀನ ಆತ್ಮಾ" "ಎಲ್ಲಾ ವೇದಗಳೂ ಎಲ್ಲಿ ಒಂದಾಗುವವೋ, ಆತನು ಮಾನಸನೆಂಬ ಆತ್ಮನು."—ಶಂ.)

ಹೋಲಿಸಿ: ಉಪದೇಶಸಾಹಸ್ರಿ, ಪ್ರಕರಣ ೧೪. ಶ್ಲೋಕ ೪೦ :—

ಯಸ್ಮಿನ್ ದೇವಾಶ್ಚ ವೇದಾಶ್ಚ ಪವಿತ್ರಂ ಕೃತ್ಸ್ನ ಮೇಕತಾಂ ॥
ವ್ರಜೇತ್ತನ್ಮಾನಸಂತೀರ್ಥಂ ಯಸ್ಮಿನ್ ಸ್ನಾತ್ವಾಽಮೃತೋ ಭವೇತ್ ॥

ಎಲ್ಲಿ ಮಿಂದರೆ ದೇವತೆಗಳೂ ವೇದಗಳೂ ಒಂದೇ ಆಗುವುವೋ ಆ ಮಾನಸ ತೀರ್ಥದಲ್ಲಿ ಸ್ನಾನಮಾಡಿ ಅಮೃತನಾಗಬೇಕು.

ಆ ಮನೋಮಯದ ಒಳಗೆ ಒಬ್ಬನು ಆತ್ಮನುಂಟು. ಆತನು ಆ ಮನೋಮಯ ಶರೀರದ ಆತ್ಮನು. ಅತನ ಹೆಸರು ವಿಜ್ಞಾನ ಮಯನೆಂದು. ಆತನು ಈ ಮನೋಮಯವನ್ನು ತುಂಬಿರುವನು. ಆತನೂ ಪುರುಷನಂತೆಯೇ ಇರುವನು. ಆತನಿಗೆ ಶ್ರದ್ಧೆಯೇ ಶಿರವು, ಋತವು ಬಲಗಡೆಯ ರೆಕ್ಕೆಯು, ಸತ್ಯವು ಎಡಗಡೆಯ ರೆಕ್ಕೆಯು, ಯೋಗವು ಆತ್ಮವು: ಮಹ ಎಂಬುದು ಬಾಲದಂತಿದ್ದು ಪ್ರತಿಷ್ಠಾ (ಆಶ್ರಯ) ಆಗಿರುವುದು. ಈ ವಿಚಾರದಲ್ಲಿ ಶ್ಲೋಕವು ಉಂಟು.

ಅನುವಾಕ ೫

ವಿಜ್ಞಾನವು ಯಜ್ಞವನ್ನು ಮಾಡುವುದು : ಕರ್ಮಗಳನ್ನೂ ಮಾಡುವುದು. ವಿಜ್ಞಾನವೆಂಬುದು ಎಲ್ಲಾ ದೇವತೆಗಳು : ಅವರೆಲ್ಲರೂ ಅದನ್ನು ಜ್ಯೇಷ್ಠ, ಬ್ರಹ್ಮ, ಎಂದು ಉಪಾಸನ ಮಾಡುವರು : ವಿಜ್ಞಾನ ವನ್ನು ಬ್ರಹ್ಮ ಎಂದು ತಿಳಿದರೆ, ಆ ಬ್ರಹ್ಮ ಭಾವವನ್ನು ಬಿಡದೆ[1] ಹಿಡಿದರೆ, ಶರೀರದಲ್ಲಿರುವ ಪಾಪವನ್ನು ನೀಗಿಕೊಂಡು,[2] ಸಮಸ್ತ ಕಾಮ ಗಳನ್ನೂ ಪಡೆಯುವನು. ಎಂದು,

---

(ಪ್ರಾಣಮಯದಲ್ಲಿ ಆತ್ಮನಾಗಿ ಇರುವವನು ಮನೋಮಯನು. ಆ ಮನೋಮಯದೊಳಗೆ ವಿಜ್ಞಾನಮಯವು.

ಮನೋಮಯವು ವೇದಾತ್ಮನಾದರೆ ವಿಜ್ಞಾನಮಯನು ವೇದಾರ್ಥ ವಿಷಯವು. ನಿಶ್ಚಯಾತ್ಮಿಕಾ ಅದ ಬುದ್ಧಿಯೇ ವಿಜ್ಞಾನವು.

ಇದು ಸರಿಯೆಂದು ನಿಶ್ಚಯವಾದ ಮೇಲೆ ತಾನೇ ಕರ್ತವ್ಯಗಳಲ್ಲಿ ಶ್ರದ್ಧೆಯು ಹುಟ್ಟುವುದು. ಆದರಿಂದ ಅದು ಶಿರವು, ಯೋಗವೆಂದರ (ಇತರರ ಆಕ್ಷೇಪಣೆಗಳಿಗೆ ಹೇಳುವ) ಸಮಾಧಾನವೆಂಬ ಯುಕ್ತಿಯು. ಅದರಿಂದ, ಅದು ಆತ್ಮವು. ಮಹವೆಂದರೆ ಹಿರಣ್ಯಗರ್ಭನು. ಅದು ಎಲ್ಲಕ್ಕೂ ಕಾರಣವಾದುದು: ಆಶ್ರಯವಾದುದು ಎಂದು ಅದು ಪ್ರತಿಷ್ಠೆಯು.—ಶಂ.)

1. ಆ ಬ್ರಹ್ಮ ಭಾವವನ್ನು ಬಿಡದೆ ಹಿಡಿದರೆ=ಅನ್ನಮಯಾದಿಗಳಲ್ಲಿ, ಬಾಹ್ಯವಾದ ಅನಾತ್ಮ ವಸ್ತುಗಳಲ್ಲಿ, ಆತ್ಮಭಾವವನ್ನು ಮಾಡದೆ ವಿಜ್ಞಾನವೇ ಬ್ರಹ್ಮವೆಂದು ದೃಢಭಾವನೆ ಮಾಡಿದರೆ.

2. ಶರೀರದ ಮೇಲೆ ಅಭಿಮಾನವಿಟ್ಟುಕೊಂಡಿರುವುದರ ನಿಮಿತ್ತದಿಂದ ಎಲ್ಲಾ ಪಾಪಗಳೂ ಸಂಘಟಿಸುವುವು. ಶರೀರದಲ್ಲಿ ಹುಟ್ಟಿರುವ ಪಾಪಗಳ ನ್ನೆಲ್ಲಾ ಶರೀರದಲ್ಲಿಯೇ ಬಿಡುವನು.

ಈ ವಿಜ್ಞಾನಮಯಕ್ಕೂ ಶಾರೀರನಾದ ಆತ್ಮನುಂಟು. ಈ ವಿಜ್ಞಾನಮಯದೊಳಗೆ ಇನ್ನೊಬ್ಬನುಂಟು. ಆತನ ಹೆಸರು ಆನಂದ ಮಯ. ಆತನು ಈತನೊಳಗೆಲ್ಲಾ ತುಂಬಿರುವನು. ಆತನೂ ಈತ ನಂತೆಯೇ ಪುರುಷನಂತೆಯೇ ಇರುವನು[1].

ಆತನಿಗೆ ಪ್ರಿಯವೆಂಬುದು ಶಿರವು. ಮೋದವು ಬಲಗಡೆ ರೆಕ್ಕೆ. ಪ್ರಮೋದ ಎಂಬುದು ಎಡಗಡೆ ರೆಕ್ಕೆ. ಆನಂದವೇ ಆತ್ಮ. ಬ್ರಹ್ಮವು ಬಾಲದಂತೆ ಇದ್ದು ಪ್ರತಿಷ್ಠಾ ಆಗಿರುವುದು[2].

ಈ ಅರ್ಥದಲ್ಲಿ ಶ್ಲೋಕವೂ ಉಂಟು.

(ಅದ್ವೈತಿಗಳು ಆನಂದವನ್ನು ಬ್ರಹ್ಮ ಎನ್ನುತ್ತಾರೆ. ಆನಂದವು ಸುಖದುಃಖಗಳಲ್ಲ: ಅವೆರಡಕ್ಕೂ ಆಶ್ರಯವಾದ ಭಾವವು. ನೀರು ಉಪ್ಪಲ್ಲ: ಸೀಯಲ್ಲ: ಆದರೂ ಉಪ್ಪು ಸೀಯೂ ಎರಡೂ ಅಲ್ಲದ ನೀರಿಲ್ಲ. ಅದರಂತೆ. ಶರೀರವು ಇರುವವರೆಗೂ ಆನಂದವು ಸುಖ ದುಃಖ ರೀತಿಯಾಗಿ ತೋರಿ ಮನಸ್ಸನ್ನು ಕಲಕುವುದು. ಮನಸ್ಸಿನಲ್ಲಿ ಯಾವ ರೀತಿಯಾದ ಉದ್ವೇಗವೂ ಇಲ್ಲದೆ, ನಿದ್ದೆಯಲ್ಲಿ ಇರುವಂತೆ ಶಾಂತವೂ ಪ್ರೀತಿಕರವೂ ಆದ ಪೂರ್ಣ ಪ್ರಸನ್ನಭಾವವು ಆನಂದವು. ಇದನ್ನು ಶಾಸ್ತ್ರಗಳು "ನಿವಾತನಿಷ್ಕಂಪ ಪ್ರದೀಪದಂತೆ ತುಂಬಿರುವಿಕೆ" ಎನ್ನುವರು.)[3]

---

1. ಆನಂದವೆಂದರೆ ಮಾಡಿದ ಕರ್ಮಗಳ, ಉಪಾಸನಮಾಡಿದ ವಿದ್ಯೆಗಳ ಫಲವು. ಅದು ಇದರಲ್ಲಿ ತುಂಬಿದೆಯೆಂದು ಇದು ಆನಂದಮಯವು. ಇದು ವಿಜ್ಞಾನ ಮಯಕ್ಕೂ ಒಳಗಿನದು. ವಿಜ್ಞಾನವು ಯಜ್ಞಾದಿಗಳಾದರೆ ತತ್ಫಲ ವಾದ ಈ ಆನಂದ ಮಯವು ಅದರೊಳಗಿನದು.

2. ಪ್ರಿಯವೆಂದರೆ—ಇಷ್ಟ ಜನರ ದರ್ಶನದಿಂದ ಆಗುವ ಪ್ರೀತಿ ಪೂರ್ಣ ಮನೋಭಾವವು.

ಮೋದವೆಂದರೆ ಪ್ರಿಯವಸ್ತು ಲಾಭದಿಂದ ಆಗುವ ಹರ್ಷ. ಆ ಹರ್ಷವು ಇನ್ನೂ ಹೆಚ್ಚಾಗುವುದು ಪ್ರಮೋದವು.

3. ಅರಸು ನರ್ತಕಿ ತಾಳಧಾರಿ ಸೂರಿಗಳ ನಾವಗಿಸಿ ಬೆಳಗುವ ರಂಗದೆಡೆಯ ಸೊಡರಂತೆ ॥ ಶ್ರೀ ನಿಜಗುಣರು—ಕೈವಲ್ಯ ಪದ್ಧತಿಯಲ್ಲಿ—ಜ್ಞಾನಪ್ರತಿಪಾದನ ಸ್ಥಲ—ಹಾಡು ೧೮.

(ಈ ಆನಂದಮಯ ಕೋಶವು ಶುಭ ಕರ್ಮದಿಂದಲೂ, ಪುತ್ರ ಮಿತ್ರಾದಿಗಳ ದರ್ಶನ ಲಾಭಗಳಿಂದಲೂ, ಪ್ರಸನ್ನವಾಗಿ ಹೃದಯದಲ್ಲಿರುವ ತಮಸ್ಸನ್ನು ಅಷ್ಟು ಕಡಿಯುವುದು. ಆಗ, ಅಲ್ಲಿರುವ ಆನಂದವು ಪರಿಚಿತವಾಗುವುದು. ಇದು ವಿಷಯ ಸುಖದಿಂದಲೂ ಆಗುವುದಾದರೂ ಅದು ಕ್ಷಣಿಕವು. ಅದಕ್ಕೆ ಬದಲಾಗಿ ತಮಸ್ಸನ್ನು ಕಳೆಯುವ ಬ್ರಹ್ಮ ವಿದ್ಯೆಯನ್ನು ಉಪಾಸನಮಾಡುತ್ತ ಬಂದರೆ, ತಮಸ್ಸು ಕಳೆದಂತೆಲ್ಲ ಹೃದಯದಲ್ಲಿರುವ ಆನಂದವು ಬೆಳಗುವುದು. ಇದು ಕಾಮವನ್ನು ತ್ಯಜಿಸಿದಂತೆಲ್ಲ ಚೆನ್ನಾಗಿ ಗೊತ್ತಾಗುವುದು. ಈ ಕಾರ್ಯವು ಆಗುವುದು ಆನಂದಮಯದಿಂದ. ಆದುದರಿಂದ, ಇಲ್ಲಿ ಬಹ್ಮಾನಂದವು ವ್ಯಕ್ತವಾಗುವುದೆಂದು ಇಲ್ಲಿ ಬ್ರಹ್ಮವು ಪುಚ್ಛವಾಗಿ ಪ್ರತಿಷ್ಠಾ ಆಗಿರುವುದು ಎಂದು ಹೇಳಿದುದು.)

(ಆ ಆನಂದವು ಸುಖವೇ ಆಗಿರುವುದು ಎನ್ನುವುದನ್ನು ಬೇರೆ ಶ್ರುತಿಗಳು ಹೀಗೆ ಹೇಳಿವೆ. "ರಸೋ ವೈ ಸಃ-ಆತನೇ (ಆ ಬ್ರಹ್ಮವು) ರಸವು. ರಸಂ ಹ್ಯೇ ವಾಯಂ ಲಬ್ಧ್ವಾ ಆನಂದೀ ಭವತಿ, ರಸವಾಗಿರುವುದರಿಂದಲೇ ಅದನ್ನು ಪಡೆದವನು ಆನಂದೀ ಆಗುತ್ತಾನೆ, ಏಷ ಹ್ಯೇವಾನಂದಯತಿ, ಇದನ್ನು ಪಡೆದವನನ್ನು ಇದು ಆನಂದಪಡಿಸುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ಏತಸ್ಯೈವಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ॥ ಈ ಆನಂದದ ಒಂದು ಅಷ್ಟನ್ನು ಪಡೆದು ಮಿಕ್ಕ ಜೀವಿಗಳೆಲ್ಲ ಬದುಕಿವೆ." ಪುಟ ೫೫ ನೋಡಿ.)

(ಇಂತಹ ಆನಂದವು ಕಾಲದೇಶಗಳ ಹಂಗಿಲ್ಲದೆ ತಾನೇ ತಾನಾಗಿರುವುದು ಮುಕ್ತಿ).

ಅನುವಾಕ ೬

(ಹೀಗೆ ಅನ್ನಮಯಾದಿ ಪಂಚ ಕೋಶಗಳಲ್ಲಿ ಉತ್ಕೃಷ್ಟವಾದ ಆನಂದಮಯ ಕೋಶದ ಪ್ರತಿಷ್ಠೆಯಾಗಿರುವ) ಬ್ರಹ್ಮವನ್ನು ಅಸತ್-ಇಲ್ಲದ್ದು — ಎಂದುಕೊಂಡವನು ಅಸತ್-ಏ ಆಗುವನು.

ಬ್ರಹ್ಮವುಂಟು ಎಂದವನನ್ನು ಉಂಟು ಸತ್ ಎಂದು ಎಲ್ಲರೂ ತಿಳಿಯು ವರು[1].

(ಹೀಗೆ ಹೇಳಿದ ಆಚಾರ್ಯನನ್ನು ಕುರಿತು ಶಿಷ್ಯನು ಕೆಲವು ಅನು ಪ್ರಶ್ನಗಳನ್ನು ಕೇಳುವನು : ಅನುಪ್ರಶ್ನವೆಂದರೆ ಆಚಾರ್ಯನು ಹೇಳಿದ ಅರ್ಥವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಶಿಷ್ಯನು ಕೇಳುವ ಪ್ರಶ್ನಗಳು).

(ತಾವು ಹೇಳಿದ ಪಂಚಕೋಶಗಳೂ ಅವುಗಳಲ್ಲಿರುವ ಆತ್ಮನೂ ಸರ್ವರಿಗೂ ಸಾಮಾನ್ಯವಾಗಿವೆಯಷ್ಟೆ ? ಹೀಗಿರಲು,) ಅವಿದ್ವಾಂಸನೂ ಈ ಲೋಕವನ್ನು ಬಿಟ್ಟರೆ ಅಲ್ಲಿಗೆ ಹೋಗುವನೇ ? ಅಥವಾ (ಇವುಗಳನ್ನು ಪಡೆಯಲು) ವಿದ್ವಾಂಸನೇ ಆಗಬೇಕೆ ?[2]

(ಈ ಪ್ರಶ್ನಕ್ಕೆ ಉತ್ತರ ಹೇಳುವುದಕ್ಕೆ ಮುಂಚೆ ಬ್ರಹ್ಮವು ಏಕವಾ ಗಿದ್ದು ಅನೇಕವಾದುದನ್ನು ಹೇಳುತ್ತಾರೆ.) ಆ ಆತ್ಮನು ತಾನು ಬಹುವಾಗಬೇಕೆಂದು ಬಯಸಿದನು. ಅದಕ್ಕಾಗಿ ತಪಸ್ಸು ಮಾಡಿದನು : ತಪಸ್ಸುಮಾಡಿ ಇದನ್ನೆಲ್ಲಾ ಸೃಜಿಸಿದನು : ಅದನ್ನು ಸೃಷ್ಟಿಮಾಡಿ ಅದನ್ನು

---

1. ಲೋಕದಲ್ಲಿ ಆಸ್ತಿಕ—ನಾಸ್ತಿಕ ಭೇದವು ಹೀಗೆ. ಪಡೆಯಬೇಕಾ ದುದು ಉಂಟು ಎಂದರೆ, ಆಗ ಅದನ್ನು ಪಡೆಯಲು ಸಾಧನಗಳು ಯಾವುವು ? ಅದನ್ನು ಹೇಳಿಕೊಡುವವರು ಯಾರು ? ಅದು ನಮಗೆ ತಿಳಿಯುತ್ತೆ ? ಮೊದಲಾದ ಹಲವು ಅಂಶಗಳು ಏರ್ಪಡಬೇಕಾಗುವುವು. ಅದಿಲ್ಲ ಎಂದರೆ ಆಗ ಜೀವನದ ರೀತಿಯು ಬದಲಾಗುವುದು. ಭಾರತ ಸಂಸ್ಕೃತಿಯು ಇದನ್ನು ಒತ್ತಿಹೇಳುವುದು. "ಆಸ್ತಿಯೆಂದವನು ಸತ್ಪುರುಷನು—ನಾಸ್ತಿಯೆಂದವನು ಅಸತ್ಪುರುಷನು. ನಾಸ್ತಿಯೆಂದವನು ನಾಸ್ತಿಯೇ ಆಗುವನು " ಎಂದು ಒತ್ತೊತ್ತಿ ಹೇಳುವುದು. ನಾಸ್ತಿಯೆಂದವರಿಗೆ ಧರ್ಮಾಧರ್ಮಗಳೂ ಇಲ್ಲವಾಗಿ ಅವರು ಲೋಕ ಭಯಂಕರ ರಾಗಿರುವರು. ಇದು ಕೂಡದು : ಯಾವಾಗಲೂ ಲೋಕವು ಚೆನ್ನಾಗಿರಬೇಕು: ಅದಕ್ಕಾಗಿ ಆಸ್ತಿಕರು ಹೆಚ್ಚಾಗಬೇಕು.

2. (ಗೀತೆಯಲ್ಲಿಯೂ ಈ ಅರ್ಥವು ಬಂದಿದೆ. ಶ್ರೀಕೃಷ್ಣನು ಅರ್ಜುನ ನಿಗೆ ಜ್ಞಾನಾರ್ಜನ ಕ್ರಮವನ್ನು ಹೇಳುತ್ತಾನೆ. ತದ್ವಿದ್ಧಿ ಪ್ರಣಿಪಾತೇನ ಪರಿ ಪ್ರಶ್ನೇನ ಸೇವಯಾ ॥ ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ॥ "ತತ್ವದರ್ಶಿಗಳಾದ ಜ್ಞಾನಿಗಳು ನಿನಗೆ ಜ್ಞಾನವನ್ನು ಉಪದೇಶ ಮಾಡುವರು. ಅದನ್ನು ನಮಸ್ಕಾರ, ಪರಿಪ್ರಶ್ನ, ಸೇವೆ, ಇವುಗಳಿಂದ ತಿಳಿದುಕೋ "

ತಾನೇ ಪ್ರವೇಶ ಮಾಡಿದನು[1]. ಅದನ್ನು ಹೊಕ್ಕು ಅದು ಇದು ಎಲ್ಲವೂ ತಾನೇ ಆದನು. ನಿರುಕ್ತ-ಅನಿರುಕ್ತ, ನಿಲಯನ-ಅನಿಲಯನ, ವಿಜ್ಞಾನ-ಅವಿಜ್ಞಾನ, ಸತ್ಯ-ಅನೃತ, ಸತ್ಯ, ಎಂಬ ಯಾವುದು ಯಾವುದು ಇದೆಯೋ ಅದೆಲ್ಲವೂ ತಾನೇ ಅದನು.[2] ಇದನ್ನು ಸತ್ಯವೆಂದು (ಬಲ್ಲವರು) ಹೇಳುವರು. ಈ ಅರ್ಥದಲ್ಲಿ ಶ್ಲೋಕವೂ ಉಂಟು.

(ಹೀಗೆ, ಶಿಷ್ಯನು ಕೇಳಿದ ಅನುಪ್ರಶ್ನಗಳಿಗೆ ಉತ್ತರವಾಗಿ ಬ್ರಹ್ಮವು ಲೋಕವಾಯಿತು ಎಂದು ಹೇಳಿ ಅದೇ ಅರ್ಥವನ್ನು ಮುಂದು ವರಿಸುತ್ತಾರೆ.)

ಅನುವಾಕ ೭

(ಈ ಇಂದ್ರಿಯ ಗೋಚರವಾದ) ಇದು ಮೊದಲು ಇಲ್ಲವಾಗಿತ್ತು: ಆಮೇಲೆ, ಇದು ಇದೆಯಾಯಿತು. (ಈ ಪ್ರಪಂಚವು ಇಲ್ಲವಾಗಿದ್ದಾಗಲೂ ಇತ್ತಲ್ಲ) ಅದು ತನ್ನನ್ನು (ಹೀಗೆ ಪ್ರಪಂಚವಾಗಿ)

---

1. (ಇಲ್ಲಿ ಸೃಷ್ಟಿಕ್ರಮವನ್ನು ಹೇಳಿದೆ. ಇದನ್ನೇ ಐತರೇಯದಲ್ಲಿಯೂ ಹೇಳಿದೆ. ಐತರೇಯ ೧೧ ನೋಡಿ. ಇಲ್ಲಿ ಕಾಮದ ಪ್ರಸ್ತಾಪ ಬಂದಿದೆ. ಸರ್ವ ಪ್ರಾಣಿಗಳಿಗೂ ಕಾಮವೇ ಪ್ರವೃತ್ತಿಗೆ ಕಾರಣವು ಎಂದರೆ ಎಲ್ಲವೂ ಕಾಮವನ್ನು ಹಿಡಿದು ನಡೆಯುವುವು. ಎಂದರೆ ಎಲ್ಲದಕ್ಕೂ ಕಾಮವೇ ಪ್ರಭುವು. ಆದರೆ ಬ್ರಹ್ಮ ವಿಚಾರದಲ್ಲಿ ಹಾಗಲ್ಲ. ಅಲ್ಲಿ ಕಾಮಕ್ಕೆ ಎಡೆಯೇ ಇಲ್ಲ: ಆದರೂ ಬ್ರಹ್ಮವು ತಾನೇ ಕಾಮವನ್ನು ಪರಿಗ್ರಹಿಸಿ ಲೋಕದ ಸೃಷ್ಟಿಗೆ ತಾನೇ ಕಾರಣವಾಯಿತು ಎಂದು ಹೇಳಬೇಕು.)

(ಇಲ್ಲಿ ಶಾಸ್ತ್ರಾಂತರಗಳಲ್ಲಿ ಹೇಳುವ ಕಾರಣವಾದ ಎಂದರೆ, ನಿಮಿತ್ತ, ಉಪಾದಾನ ಮೊದಲಾದ ಕಾರಣಗಳ ವಿಚಾರವನ್ನು ತರುವುದು ಪ್ರೌಢಿವಾದ. ಅದು ನಮಗೆ ಬೇಕಿಲ್ಲವೆಂದು ಬಿಡೋಣ.)

ಬುದ್ಧಿಯಲ್ಲಿ ದ್ರಷ್ಟೃ, ಶ್ರೋತೃ, ಮಂತೃ, ವಿಜ್ಞಾತೃ ಎಂದು ಬ್ರಹ್ಮವು ತೋರುವುದು ಯಾವುದುಂಟೋ ಅದೇ ಬ್ರಹ್ಮವು ಪ್ರವೇಶಿಸಿತು ಎಂಬ ಅರ್ಥವು.

2. ನಿರುಕ್ತ—ಅನಿರುಕ್ತ. ರೂಪವುಳ್ಳದ್ದು—ರೂಪವಿಲ್ಲದ್ದು. ದೇಶ ಕಾಲಗಳಲ್ಲಿ ಇದು ಹೀಗೆ ಎಂದು ಗೊತ್ತಾದ್ದು ನಿರುಕ್ತ—ಹಾಗಿಲ್ಲದ್ದು ಅನಿರುಕ್ತ.

ನಿಲಯನ—ಅನಿಲಯನ ಸ್ಥಾನವುಳ್ಳದ್ದು—ಸ್ಥಾನವಿಲ್ಲದ್ದು.

ವಿಜ್ಞಾನ—ಅವಿಜ್ಞಾನ ಚೇತನ—ಅಚೇತನಗಳು, ಸತ್ಯ—ಅನೃತ ಇಂದ್ರಿಯಗಳಿಗೆ ಗೊತ್ತಾಗಿ ವ್ಯವಹಾರದಲ್ಲಿ ಇರುವುದು ಅನೃತ—ಅದಲ್ಲದು .

ಮಾಡಿಕೊಂಡಿತು. ಅದರಿಂದಲೇ ಈ ಪ್ರಪಂಚವನ್ನು ಎಲ್ಲರೂ ಸುಕೃತ ಎನ್ನುವರು. ಯಾವುದು ಸುಕೃತವೋ ಅದೇ ಬ್ರಹ್ಮವು.

ಆ ಬ್ರಹ್ಮವೇ ರಸವು. ರಸವನ್ನು ಪಡೆದವನೇ ಸುಖಿಯಾಗುವನು. ಈ ಆನಂದ (ರೂಪವಾದ ಬ್ರಹ್ಮವು ಹೃದಯದಲ್ಲಿರುವ) ಆಕಾಶದಲ್ಲಿ ಇಲ್ಲದೆ ಹೋಗಿದ್ದರೆ ಯಾರುತಾನೇ ಓಡಾಡುತ್ತಿದ್ದರು ? ಯಾರುತಾನೇ ಬದುಕಿರುತ್ತಿದ್ದರು ? ಈ ಆನಂದವೇ ಎಲ್ಲರನ್ನೂ ಆನಂದಪಡಿಸುವುದು.

ಯಾವನು ಈ ಅದೃಶ್ಯ, ಅನಾತ್ಮ್ಯ, ಅನಿರುಕ್ತ, ಅನಿಲಯನ,[1] ಆದ ಬ್ರಹ್ಮದಲ್ಲಿ ನಿರ್ಭಯವಾಗಿ ಆಶ್ರಯವನ್ನು ಪಡೆಯುವನೋ, ಅವನು ಅಭಯವನ್ನು ಪಡೆಯುವನು. (ಹಾಗಿಲ್ಲದೆ) ಯಾವನಾದರೂ ಕೊಂಚವಾದರೂ ಭೇದವನ್ನು ಮಾಡಿದರೆ, ಅವನಿಗೆ ಭಯವು ತಪ್ಪುವುದಿಲ್ಲ. (ಆತ್ಮನಿಗೂ ತನಗೂ ಭೇಧವಿಲ್ಲ ಎಂಬುದನ್ನು) ತಿಳಿಯದವನು ವಿದ್ವಾಂಸನೇ ಆದರೂ ಬ್ರಹ್ಮವೇ ಅವನಿಗೆ ಭಯವನ್ನು ಉಂಟು ಮಾಡುವುದು.

ಇದಕ್ಕೆ ಶ್ಲೋಕವೂ ಉಂಟು.

ಅನುವಾಕ ೮

೮. ಇದರ ಹೆದರಿಕೆಯಿಂದ ವಾತವು ಬೀಸುವುದು ; (ಇದಕ್ಕೆ) ಹೆದರಿಕೊಂಡು ಸೂರ್ಯನು ಉದಯಿಸುವನು ; ಅಗ್ನಿಯೂ ಇಂದ್ರನೂ

---

1. ಅದೃಶ್ಯ=ಇಂದ್ರಿಯ ಗೋಚರವಲ್ಲದ್ದು.
ಅನಾತ್ಮ್ಯ=ಆತ್ಮ ಸಂಬಂಧವಾದ ಇನ್ನೇನೋ ಅಲ್ಲದ್ದು.
ಅನಿರುಕ್ತ=ರೂಪವಿಲ್ಲದ್ದು.
ಅನಿಲಯನ=ದೇಹವಿಲ್ಲದ್ದು.

ಬ್ರಹ್ಮದಲ್ಲಿ ಆಶ್ರಯವನ್ನು ಪಡೆಯುವುದು—ಎಂದರೆ ಅಭೇದದಿಂದ ಬ್ರಹ್ಮವನ್ನು ಉಪಾಸನ ಮಾಡುವುದು.

(ಶ್ರೀ ವಿದ್ಯಾರಣ್ಯರ ಪಂಚದಶಿಯಲ್ಲಿ ಆನಂದ ಪ್ರಕರಣವನ್ನು ನೋಡಿ)

(ಇದಕ್ಕೆ) ಹೆದರಿಕೊಂಡು ನಡೆಯುವರು; ಐದನೆಯುವನಾದ ಮೃತ್ಯುವೂ (ಇದಕ್ಕೆ ಹೆದರಿ ತನ್ನ ಕಾರ್ಯವನ್ನು ಮಾಡಲು) ಓಡುವನು.[1]

(ಇನ್ನು ಆ) ಆನಂದವನ್ನು ವಿಚಾರಿಸುವ ಕಾರ್ಯವು (ಎಂದರೆ ಆನಂದವೆನ್ನುವುದು ವಿಷಯಗಳಿಂದ ಆದುದೇ ? ಅಥವಾ ಸಹಜವೇ ? ಎಂದು ವಿಚಾರಿಸುವುದು.)

ತರುಣನಾಗಿರಬೇಕು ; ಯೋಗ್ಯನಾದ ತರುಣನಾಗಿರಬೇಕು ; ವೇದ (ಶಾಸ್ತ್ರ)ಗಳನ್ನು ಓದಿದವನಾಗಿರಬೇಕು ; ಚೆನ್ನಾಗಿ ಆಳುವವನಾಗಿರಬೇಕು ; ಬಹುದೃಢನಾಗಿರಬೇಕು ; ಬಲಿಷ್ಠನಾಗಿರಬೇಕು. (ಹೀಗೆ ಆಧ್ಯಾತ್ಮಿಕ ಸಾಧನ ಸಂಪನ್ನನಾಗಿರಬೇಕು) ಆತನಿಗೆ ಈ ಪೃಥಿವಿಯೆಲ್ಲವೂ ಬೇಕಾದುದನ್ನು ಕೊಡಬಲ್ಲುದಾಗಿರಬೇಕು ; ಅಂತಹವನು (ಪಡೆಯುವುದು) ಒಂದು ಮಾನುಷ ಆನಂದವು.[2]

ಅಂತಹ ಮಾನುಷ ಆನಂದಗಳು ಒಂದು ನೂರು ಆದರೆ ಅದು ಮನುಷ್ಯ ಗಂಧರ್ವಾನಂದವು. ಇದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು. ಮನುಷ್ಯ ಗಂಧರ್ವರ ಆನಂದವು ನೂರಾದರೆ ಒಂದು ದೇವ ಗಂಧರ್ವಾನಂದವು. ಇದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

ದೇವ ಗಂಧರ್ವಾನಂದವು ನೂರರಷ್ಟಾದರೆ, ಚಿರಲೋಕ ಲೋಕಗಳಲ್ಲಿರುವ ಪಿತೃಗಳ ಆನಂದವು ; ಇದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

---

1. ಶರೀರವು ಇರುವವರೆಗೂ ಭಯವು ತಪ್ಪಿದ್ದಲ್ಲ. ಶರೀರವು ಇರುವತನಕ ದೊಡ್ಡದು ಚಿಕ್ಕದು ಉಂಟು. ದೊಡ್ಡದರಿಂದ ಚಿಕ್ಕದಕ್ಕೆ ಭಯವು ಯಾವಾಗಲೂ ತಪ್ಪಿದ್ದಲ್ಲ.

2. ಮಾನುಷ್ಯನು ಹೆಚ್ಚು ಕಡಿಮೆಯೆನ್ನುವುದಕ್ಕೆ ಇನ್ನೆಲ್ಲಿಯೂ ಅಳೆಯುವ ಕೋಲು ಕುರಿತು ಹೇಳಿಲ್ಲ. ಆ ಅಳತೆಯ ಕೋಲು ಅವನವನ ಆನಂದವನ್ನು ಅನುಭವಿಸಬಲ್ಲ ಶಕ್ತಿ.

ಚಿರಲೋಕ ಲೋಕಗಳ ಪಿತೃಗಳ ಆನಂದವು ನೂರರಷ್ಟಾದರೆ ಅಜಾನಜ (ಸ್ವರ್ಗದಲ್ಲಿ ದೇವತೆಗಳಾಗಿ ಹುಟ್ಟಿದ) ದೇವತೆಗಳ ಆನಂದವು; ಇದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

ಅಜಾನಜ ದೇವತೆಗಳ ಆನಂದವು ನೂರರಷ್ಟಾದರೆ ಅದು ಕರ್ಮ ದೇವತೆಗಳ ಆನಂದವು. (ತಮ್ಮತಮ್ಮ ಕರ್ಮಗಳಿಂದ ದೇವತೆಗಳಾದವರು ಕರ್ಮ ದೇವತೆಗಳು). ಇದನ್ನು ಅಕಾಮ ಹತನಾದ ಶ್ರೋತ್ರಿಯನು ಬಲ್ಲನು.

ಕರ್ಮ ದೇವತೆಗಳ ಆನಂದವು ನೂರರಷ್ಟಾದರೆ ಅದು ದೇವಾನಂದವು; ಅದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

ದೇವಾನಂದವು ನೂರರಷ್ಟಾದರೆ ಅದು ಇಂದ್ರಾನಂದವು; ಅದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

ಆ ಇಂದ್ರಾನಂದವು ನೂರರಷ್ಟಾದರೆ, ಅದು ಬೃಹಸ್ಪತಿಯ ಆನಂದವು; ಅದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

ಆ ಬೃಹಸ್ಪತಿಯ ಆನಂದವು ನೂರರಷ್ಟಾದರೆ, ಅದು ಪ್ರಜಾಪತಿ (ಹಿರಣ್ಯಗರ್ಭ; ಎಲ್ಲಾ ಜೀವರನ್ನೂ ತನ್ನ ಒಡಲಲ್ಲಿ ಇಟ್ಟುಕೊಂಡಿರುವವನು)ಯ ಆನಂದವು ಅದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

ಆ ಪ್ರಜಾಪತಿಯ ಆನಂದಗಳು ನೂರರಷ್ಟಾದರೆ, ಅದು ಬ್ರಹ್ಮದ ಆನಂದವು. ಅದನ್ನು ಅಕಾಮಹತನಾದ ಶ್ರೋತ್ರಿಯನು ಬಲ್ಲನು.

(ಇಂತಹ ಆನಂದವೇ ತಾನಾಗಿರುವ ಆತ್ಮನು) ಯಾರೋ ಆತನು ಈ ಪುರುಷನಲ್ಲಿ ಇರುವನು. ಆತನೇ ಆದಿತ್ಯನಲ್ಲಿಯೂ ಇರುವನು. ಇಬ್ಬರೂ ಒಬ್ಬನೇ!

ಹೀಗೆ ತಿಳಿದವನು ಯಾರೋ ಅವನು, ಈ ಲೋಕವನ್ನು ಬಿಟ್ಟು, ಈ ಅನ್ನಮಯ ಆತ್ಮನನ್ನು ದಾಟುವನು. ಪ್ರಾಣಮಯ ಆತ್ಮನನ್ನು ದಾಟುವನು; ಮನೋಮಯ ಆತ್ಮನನ್ನು ದಾಟುವನು; ವಿಜ್ಞಾನಮಯ ಆತ್ಮನನ್ನು ದಾಟುವನು; ಆನಂದಮಯ ಆತ್ಮನನ್ನೂ ದಾಟುವನು. ಈ ಅರ್ಥದಲ್ಲಿ ಶ್ಲೋಕವೂ ಉಂಟು.

(ಇದು ಪಂಚಾತ್ಮ ಸಂಕ್ರಮಣವಿದ್ಯವು. ಇಲ್ಲಿ ಆತ್ಮ ಸಂಕ್ರಮಣ ಎಂದರೆ, ಉಪಾಧಿಗಳನ್ನು ದಾಟುವುದು ಎಂದರ್ಥ. ಗಂಗಾಸ್ನಾನ ಮಾಡಿದವರಿಗೆ ಈ ವಿದ್ಯಾ ಫಲವು ಲಭಿಸುವುದು ಎಂದು ಹಿರಿಯರು ಹೇಳುವರು.

ಲಲಿತಾ ಸಹಸ್ರನಾಮದಲ್ಲಿ ಪಂಚ ಪ್ರೇತಾಸನಾ ಸೀನಾ ಪಂಚ ಬ್ರಹ್ಮ ಸ್ವರೂಪಿಣೀ ಎಂಬ ಎರಡು ನಾಮಗಳಿವೆ. ಬ್ರಹ್ಮ ವಿದ್ಯಾ ಲಾಭವಾಗುವ ತನಕ ಈ ಐದು ಕೋಶಗಳೂ ಪ್ರೇತಗಳು; ಬ್ರಹ್ಮ ವಿದ್ಯಾಲಾಭವಾದ ಮೇಲೆ ಆ ಐದು ಕೋಶಗಳೂ ಬ್ರಹ್ಮಗಳು, ಎಂಬ ಅರ್ಥವನ್ನು ಭಾವಿಸಿ ನೋಡಿ.)

ಅನುವಾಕ ೯

ವಾಕ್ಕು ಮನಸ್ಸಿನಿಂದಲೂ ಮುಟ್ಟಲಾರದೆ, ಎಲ್ಲಿಂದ ಹಿಂತಿರುಗುವುದೋ, ಅದು ಬ್ರಹ್ಮಾನಂದ, ಅದನ್ನು ಬಲ್ಲವನು ಯಾವ ಭಯವೂ ಇಲ್ಲದವನು ಎಂದು.

ಇವನನ್ನು ಯಾವುದೂ ಹೆದರಿಸಲಾರದು; ಇವನಿಗೆ "ನಾನು ಒಳ್ಳೆಯದನ್ನು ಮಾಡಲಿಲ್ಲವಲ್ಲ; ನಾನು ಪಾಪವನ್ನು ಮಾಡಿದೆನಲ್ಲ" (ಎಂಬ ತಾಪವೂ ಇರುವುದಿಲ್ಲ.) ಏಕೆಂದರೆ, ಈತನು, ಹೀಗೆ ಬಲ್ಲವನು (ಯಾರೋ ಅವನ) ಪುಣ್ಯ ಪಾಪಗಳು ಆತ್ಮನಲ್ಲಿ (ಸೇರಿಹೋಗಿ ಆತ್ಮ) ಪ್ರೀತಿ ಕಾರಣಗಳಾಗುವುವು. ಹೀಗೆ ಬಲ್ಲವನ ಆ ಎರಡೂ (ಪುಣ್ಯ ಪಾಪಗಳು) ಆತ್ಮನವಾಗುವುವು.[1]

ಇಂತಿದು ಬ್ರಹ್ಮಾನಂದವಲ್ಲಿಯೆಂಬ ಎರಡನೆಯ ಅಧ್ಯಾಯವು.

---

1. (ಗೀತೆಯ "ಯಸ್ಯನಾಹಂ ಕೃತೋಭಾವಃ ಯಸ್ಯಬುದ್ಧಿರ್ನಲಿಪ್ಯತೇ । ಹತ್ವಾಪಿ ಸ ಇಮಾಂಲ್ಲೋಕಾನ್ ನಹಪಾಪ್ಯೈಃ ನಿಬ ದ್ಧ್ಯತೇ—ಯಾವನಿಗೆ ತಾನು ಮಾಡಿದೆನೆಂಬ ಭಾವವಿಲ್ಲವೋ ಯಾವನ ಬುದ್ಧಿಗೆ ಕರ್ಮಲೇಪವಿಲ್ಲವೋ ಅವನು ಈ ಲೋಕಗಳನ್ನೆಲ್ಲ ಅಳಿಸಿದರೂ ಅವನಿಗೆ ಪಾಪಗಳು ಅಂಟುವುದಿಲ್ಲ." ಎಂಬ ಶ್ಲೋಕದ ಅರ್ಥವನ್ನು ಇಲ್ಲಿ ಚಿಂತನಮಾಡಿ.)

ಭೃಗುವಲ್ಲಿ

ಅನುವಾಕ ೧

ವರುಣನ ಮಗ[1]ನಾದ ಭೃಗುವು ತಂದೆಯಾದ ವರುಣನ ಬಳಿಗೆ ಹೋದನು. "(ನನಗೆ) ಬ್ರಹ್ಮವನ್ನು (ಕುರಿತು) ಬೋಧಿಸು" ಎಂದು (ಪ್ರಾರ್ಥಿಸಿದನು.)

ಆತನು ಮಗನಿಗೆ ಹೀಗೆ ಹೇಳಿದನು ; "ಅನ್ನ, ಪ್ರಾಣ, ಚಕ್ಷು, ಶ್ರೋತ್ರ, ಮನಸ್ಸು, ವಾಕ್ಕು"

ಆತನಿಗೆ ಹೇಳಿದನು ; "ಯಾವುದರಿಂದ ಈ ಪ್ರಾಣಿಗಳು ಎಲ್ಲವೂ ಹುಟ್ಟುವುವೋ, ಹುಟ್ಟಿದವು ಯಾವುದರಿಂದ ಬದುಕುವುವೋ, ಸತ್ತವು ಯಾವುದನ್ನು ಸೇರುವುವೋ, ಅದನ್ನು ಕುರಿತು ವಿಚಾರಿಸು ; ಅದು ಬ್ರಹ್ಮ" ಎಂದು. ಭೃಗುವು ತಪಸ್ಸು ಮಾಡಿದನು, ತಪಸ್ಸು ಮಾಡಿ,

ಅನುವಾಕ ೨

ಅನ್ನವು ಬ್ರಹ್ಮ ಎಂದು ಚೆನ್ನಾಗಿ ತಿಳಿದುಕೊಂಡನು. ಅನ್ನದಿಂದಲೇ ಅಲ್ಲವೇ ಈ ಪ್ರಾಣಿಗಳೆಲ್ಲವೂ ಹುಟ್ಟುವುದು ? ಹುಟ್ಟಿದವು ಅನ್ನದಿಂದಲೇ ಬದುಕುವುವು. ಸತ್ತವು ಅನ್ನವನ್ನು ಸೇರುವುವು. ಅದರಿಂದ, (ಅದೇ ಬ್ರಹ್ಮ) ಹೀಗೆ ತಿಳಿದು, ಮತ್ತೆ ತಂದೆಯಾದ ವರುಣನ ಬಳಿಗೆ ಹೋದನು. "(ನನಗೆ) ಬ್ರಹ್ಮವನ್ನು (ಕುರಿತು) ಬೋಧಿಸು" ಎಂದನು.

ಆತನು ಅವನಿಗೆ ಹೇಳಿದನು—"ತಪಸ್ಸಿನಿಂದ ಬ್ರಹ್ಮವನ್ನು ತಿಳಿದುಕೊಳ್ಳಲು ಯತ್ನಿಸು, ತಪವೇ ಬ್ರಹ್ಮ."

ಭೃಗುವು ತಪಸ್ಸು ಮಾಡಿದನು, ತಪಸ್ಸು ಮಾಡಿ,

---

1. ಮಗನೆಂದರೆ ತನ್ನ ಸರ್ವಸ್ವವನ್ನು ಪಡೆಯುವವನು.

ಅನುವಾಕ ೩

" ಪ್ರಾಣದಿಂದಲೇ ತಾನೇ ಈ ಭೂತಗಳೆಲ್ಲವೂ ಹುಟ್ಟುತ್ತವೆ ? ಹುಟ್ಟಿದವೂ ಪ್ರಾಣದಿಂದಲೇ ಬದುಕುತ್ತವೆ ; (ಕೊನೆಗೆ) ಪ್ರಾಣವನ್ನು ಕುರಿತು ಹೋಗಿ ಅದರಲ್ಲಿ ಲಯವಾಗುತ್ತವೆ ; ಅದರಿಂದ ಪ್ರಾಣವೇ ಬ್ರಹ್ಮ" ಎಂದು ತಿಳಿದುಕೊಂಡನು. ಹಾಗೆ ತಿಳಿದುಕೊಂಡು ತಂದೆಯಾದ ವರುಣನ ಬಳಿಗೆ ಮತ್ತೆ ಹೋದನು ; "ಭಗವನ್, ಬ್ರಹ್ಮವನ್ನು ಬೋಧಿಸು "ಎಂದನು. ಆತನು ಅವನನ್ನು ಕುರಿತು, " ತಪಸ್ಸಿನಿಂದ ಬ್ರಹ್ಮವನ್ನು ಕುರಿತು ತಿಳಿದುಕೊ, ತಪವೇ ಬ್ರಹ್ಮ " ಎಂದನು. ಭೃಗುವು ತಪಸ್ಸು ಮಾಡಿದನು. ತಪಸ್ಸು ಮಾಡಿ,

ಅನುವಾಕ ೪

ಮನಸ್ಸು ಬ್ರಹ್ಮವೆಂದು ತಿಳಿದನು—" ಮನಸ್ಸಿನಿಂದಲೇ ತಾನೇ ಈ ಭೂತಗಳೆಲ್ಲವೂ ಹುಟ್ಟುವುದು ? ಹುಟ್ಟಿದವು ಮನಸ್ಸಿನಿಂದ ಬದುಕುವುವು ; ಕೊನೆಗೆ ಮನಸ್ಸನ್ನು ಕುರಿತು ಹೋಗಿ ಅಲ್ಲಿಯೇ ಲಯವಾಗುವುವು " ಎಂದು ತಿಳಿದುಕೊಂಡು, ತಂದೆಯ ಬಳಿಗೆ ಮತ್ತೆ ಹೋಗಿ, " ಭಗವನ್, ಬ್ರಹ್ಮವನ್ನು ಬೋಧಿಸು " ಎಂದನು.

ಆತನು ಅವನನ್ನು ಕುರಿತು " ತಪಸ್ಸಿನಿಂದ ಬ್ರಹ್ಮವನ್ನು ಕುರಿತು ತಿಳಿದುಕೊ, ತಪವೇ ಬ್ರಹ್ಮ " ಎಂದನು.

ಭೃಗುವು ತಪಸ್ಸು ಮಾಡಿದನು, ತಪಸ್ಸುಮಾಡಿ,

ಅನುವಾಕ ೫

"ವಿಜ್ಞಾನವು ಬ್ರಹ್ಮ; ವಿಜ್ಞಾನದಿಂದ ತಾನೇ ಈ ಭೂತಗಳೆಲ್ಲವೂ ಹುಟ್ಟುವುವು ? ಹುಟ್ಟಿದವು ವಿಜ್ಞಾನದಿಂದಲೇ ಬದುಕುವುವು ; ವಿಜ್ಞಾನವನ್ನು ಕುರಿತು ಹೋಗಿ ಅದರಲ್ಲಿ ಲಯವಾಗುವುವು " ಎಂದು ತಿಳಿದನು. ಹಾಗೆ ತಿಳಿದು, ತಂದೆಯ ಬಳಿಗೆ ಮತ್ತೆ ಹೋಗಿ " ಭಗವನ್, ಬ್ರಹ್ಮವನ್ನು ಬೋಧಿಸು " ಎಂದನು.

ಆತನು "ತಪವೇ ಬ್ರಹ್ಮ, ತಪಸ್ಸಿನಿಂದ ಬ್ರಹ್ಮವನ್ನು ಕುರಿತು ತಿಳಿದುಕೊ," ಎಂದನು.

ಭೃಗುವು ತಪಸ್ಸು ಮಾಡಿದನು ; ತಪಸ್ಸು ಮಾಡಿ,

ಅನುವಾಕ ೬

"ಆನಂದವು ಬ್ರಹ್ಮ ; ಆನಂದದಿಂದ ತಾನೇ ಈ ಭೂತಗಳೆಲ್ಲವೂ ಹುಟ್ಟುವುವು ? ಹುಟ್ಟಿದವು ಆನಂದದಿಂದಲೇ ಬದುಕುವುವು; ಆನಂದವನ್ನೇ ಕುರಿತು ಹೋಗಿ ಅದರಲ್ಲಿ ಲಯವಾಗುವುವು" ಎಂದು ತಿಳಿದನು.

ಅದೇ ಭಾರ್ಗವೀ ವಾರುಣೀ ವಿದ್ಯೆಯು, ಅದು ಪರಮಾಕಾಶದಲ್ಲಿ ಪ್ರತಿಷ್ಠಿತವಾಗಿರುವುದು. ಅದನ್ನು ಹಾಗೆ ತಿಳಿದವನೂ ಪ್ರತಿಷ್ಠಿತನಾಗುವನು. ಅನ್ನವಂತನೂ ಅನ್ನಾದನೂ (ಅನ್ನವನ್ನು ತಿನ್ನುವವನು) ಆಗುವನು ; ಮಹಾನ್ ಆಗುವನು ; ಪ್ರಜೆಗಳಿಂದ, ಪಶುಗಳಿಂದ, ಬ್ರಹ್ಮವರ್ಚಸ್ಸಿನಿಂದ, ಕೀರ್ತಿಯಿಂದ, ಮಹಾನ್ ಆಗುವನು.

ಅನುವಾಕ ೭

ಅನ್ನವನ್ನು ನಿಂದಿಸಬಾರದು, ಅದೇ ವ್ರತವು. ಪ್ರಾಣವೇ ಅನ್ನವು. ಶರೀರವು ಅನ್ನಾದವು. ಪ್ರಾಣದಲ್ಲಿ ಶರೀರವು ಪ್ರತಿಷ್ಠಿತವಾಗಿರುವುದು : ಶರೀರದಲ್ಲಿ ಪ್ರಾಣವು ಪ್ರತಿಷ್ಠಿತವಾಗಿರುವುದು. ಅದರಿಂದ ಅನ್ನವು ಅನ್ನದಲ್ಲಿಯೇ ಪ್ರತಿಷ್ಠಿತವಾಗಿದೆ (ಎನ್ನಬೇಕು.) (ಅದರಿಂದ) ಅನ್ನದಲ್ಲಿ ಅನ್ನವು ಪ್ರತಿಷ್ಠಿತವಾಗಿದೆಯೆಂಬುದನ್ನು ಯಾವನು ತಿಳಿಯುವನೋ ಅವನು ಪ್ರತಿಷ್ಠಿತನಾಗುವನು. ಅನ್ನವುಳ್ಳವನೂ ಅನ್ನವನ್ನು ತಿನ್ನುವವನೂ ಆಗುವನು. ಮಹಾನ್ ಆಗುವನು. ಪ್ರಜೆಗಳಿಂದ, ಪಶುಗಳಿಂದ, ಬ್ರಹ್ಮವರ್ಚಸ್ಸಿನಿಂದ, ಕೀರ್ತಿಯಿಂದ, ಮಹಾನ್ ಆಗುವನು.

ಅನುವಾಕ ೮

ಅನ್ನವನ್ನು ತಿರಸ್ಕರಿಸಬಾರದು. ಅದು ವ್ರತ(ವಾಗಬೇಕು.) ಆಪ(ಜಲ)ವು ಅನ್ನ : ಜ್ಯೋತಿಯು ಅನ್ನಾದ. ಜಲದಲ್ಲಿ

ಜ್ಯೋತಿಯು ಪ್ರತಿಷ್ಠಿತವಾಗಿದೆ; ಜ್ಯೋತಿಯಲ್ಲಿ ಅನ್ನವು ಪ್ರತಿಷ್ಠಿತವು. ಅದನ್ನೇ ಅನ್ನದಲ್ಲಿ ಅನ್ನವು ಪ್ರತಿಷ್ಠಿತವಾಗಿದೆಯೆನ್ನುವುದು. ಹೀಗೆ ಅನ್ನದಲ್ಲಿ ಅನ್ನವಿರುವುದನ್ನು ತಿಳಿದವನೂ ಪ್ರತಿಷ್ಠಿತನಾಗುವನು; ಅನ್ನವಂತನೂ ಅನ್ನವನ್ನು ತಿನ್ನುವವನೂ ಆಗುವನು. ಮಹಾನ್ ಆಗುವನು: ಪ್ರಜೆಯಿಂದ, ಪಶುಗಳಿಂದ, ಬ್ರಹ್ಮವರ್ಚಸ್ಸಿನಿಂದ, ಕೀರ್ತಿಯಿಂದ, ಮಹಾನ್ ಆಗುವನು.

ಅನುವಾಕ ೯

ಅನ್ನವನ್ನು ಹೆಚ್ಚಿಸಬೇಕು: ಅದು ವ್ರತ. ಪೃಥಿವಿಯು ಅನ್ನವು: ಆಕಾಶವು ಅನ್ನಾದವು: ಪೃಥಿವಿಯಲ್ಲಿ ಆಕಾಶವಿರುವುದು: ಆಕಾಶದಲ್ಲಿ ಪೃಥಿವಿಯಿರುವುದು. ಇದನ್ನೇ ಅನ್ನದಲ್ಲಿ ಅನ್ನವಿದೆ ಎನ್ನುವುದು. ಹೀಗೆ ಅನ್ನದಲ್ಲಿ ಅನ್ನವಿರುವುದನ್ನು ಬಲ್ಲವನು ಪ್ರತಿಷ್ಠಿತನಾಗುವನು. ಅವನು ಅನ್ನವಂತನೂ ಅನ್ನವನ್ನು ತಿನ್ನುವವನೂ ಆಗುವನು. ಮಹಾನ್ ಆಗುವನು. ಪ್ರಜೆಯಿಂದ, ಪಶುಗಳಿಂದ, ಬ್ರಹ್ಮವರ್ಚಸ್ಸಿನಿಂದ, ಕೀರ್ತಿಯಿಂದ, ಮಹಾನ್ ಆಗುವನು.*

ಅನುವಾಕ ೧೦

ಮನೆಯಲ್ಲಿರುವವರು ಬಂದವರನ್ನು ತಿರಸ್ಕರಿಸಬಾರದು. ಅದು ವ್ರತ. ಆದರಿಂದ ಹೇಗೆ ಹೇಗಾದರೂ ಮಾಡಿ ಬಹು-ಅನ್ನವನ್ನು ಪಡೆಯಬೇಕು. (ಅದರಿಂದ ಬಲ್ಲವರು) ಬಂದವನಿಗೆ ಅನ್ನವನ್ನು ಹಿಡಿ ಎಂದು ಹೇಳುವರು. ಕೊಡುವಾಗ ಗೌರವವಾಗಿ ಅನ್ನವನ್ನು ಕೊಡಬೇಕು. ಹಾಗೆ ಕೊಟ್ಟವನಿಗೆ ಗೌರವವಾಗಿ ಅನ್ನವು ಸಿಕ್ಕುವುದು. ಯಾರು ಮಧ್ಯಮೋಪಚಾರದಿಂದ ಅನ್ನವನ್ನು ಕೊಡುವರೋ ಅವರಿಗೆ ಹಾಗೆ ಮಧ್ಯಮವಾಗಿಯೇ ಅನ್ನವು ದೊರೆಯುವುದು. ಕನಿಷ್ಠವೆಂದು ಕೊಟ್ಟವರಿಗೆ ಕನಿಷ್ಠವಾಗಿಯೇ ದೊರೆಯುವುದು.

---

*೫೧ನೆಯ ಪುಟದಲ್ಲಿರುವ ಟಿಪ್ಪಣಿ ನೋಡಿ.

(ಇದುವರೆಗೂ ಅನ್ನದಾನದ ಫಲವನ್ನು ಹೇಳಿ ಈಗ ಬ್ರಹ್ಮೋಪಾಸನವನ್ನು ಕುರಿತು ಹೇಳಲಾಗುವುದು.)

ವಾಕ್ಕಿನಲ್ಲಿ (ಬ್ರಹ್ಮವು) ಕ್ಷೇಮ (ಇದ್ದುದನ್ನು ಕಾಪಾಡಿಕೊಳ್ಳುವುದು)ವೆಂದು (ಉಪಾಸನ ಮಾಡಬೇಕು). ಪ್ರಾಣ, ಅಪಾನಗಳಲ್ಲಿ ಯೋಗ, (ಹೊಸದಾಗಿ ಸಿಕ್ಕುವುದು) ಕ್ಷೇಮ (ಇದ್ದುದನ್ನು ಕಾಪಾಡಿಕೊಳ್ಳುವುದು) ಎಂದು (ಉಪಾಸನಮಾಡಬೇಕು.) ಹಸ್ತಗಳಲ್ಲಿ ಕರ್ಮ (ವೆಂದೂ), ಪಾದಗಳಲ್ಲಿ ಗತಿ (ಯೆಂದೂ), ಪಾಯು(ವಿಸರ್ಗಸ್ಥಾನ)ವಿನಲ್ಲಿ ವಿಸರ್ಜನ(ವೆಂದೂ), (ಬ್ರಹ್ಮವನ್ನು ಉಪಾಸನಮಾಡಬೇಕು.)

(ಇವಿಷ್ಟೂ ಮಾನುಷ್ಯಕ್ಕೆ ಸಂಬಂಧಿಸಿದಂತೆ ನಡೆಯಬೇಕಾದ ಉಪಾಸನಗಳು. ಇನ್ನು ದೈವೀ ಉಪಾಸನಗಳು.)

ತೃಪ್ತಿಯೆಂದು ವೃಷ್ಟಿಯಲ್ಲಿ, ಬಲವೆಂದು ವಿದ್ಯುತ್ತಿನಲ್ಲಿ (ಬ್ರಹ್ಮವನ್ನು ಉಪಾಸನ ಮಾಡಬೇಕು.)

ಪಶುಗಳಲ್ಲಿ ಯಶಸ್ಸೆಂದು, ನಕ್ಷತ್ರಗಳಲ್ಲಿ ಜ್ಯೋತಿಯೆಂದು, ಉಪಸ್ಥೆಯಲ್ಲಿ ಪ್ರಜಾತಿ (ಜನ್ಮ), ಅಮೃತ, ಆನಂದ, ಎಂದೂ ಆಕಾಶದಲ್ಲಿ ಸರ್ವವೆಂದೂ ಉಪಾಸನ ಮಾಡಬೇಕು.

ಅದನ್ನು ಪ್ರತಿಷ್ಠಾ ಎಂದು ಉಪಾಸನಮಾಡಿದವನು ಪ್ರತಿಷ್ಠಾವಂತನಾಗುವನು.

ಅದನ್ನು ಮಹತ್ ಎಂದು ಉಪಾಸನ ಮಾಡಿದವನು ಮಹಾನ್ ಆಗುವನು.

ಅದನ್ನು ಮನಸ್ ಎಂದು ಉಪಾಸನ ಮಾಡುವವನು ಮಾನವಾನ್ ನಾಗುವನು.[1]

---

1. ಮನನವೇ ಮನವು. ಮಾನವಾನ್ ಎಂದರೆ ಮನನ ಸಮರ್ಥನಾಗುವನು "ತಂಯಥಾಯಥಾ ಉಪಾಸತೇ ತದೇವಭವತಿ" ಆ ಆತ್ಮನನ್ನು ಹೇಗೆ ಹೇಗೆ ಉಪಾಸನ ಮಾಡಿದರೆ ಹಾಗೆ ಹಾಗೆ ಆಗುವನು—ಎಂದು ಶ್ರುತ್ಯಂತರವು—ಶಂ.

ಅದನ್ನು ನಮ ಎಂದು ಉಪಾಸನಮಾಡಿದವನಿಗೆ ಕಾಮಗಳೆಲ್ಲ ಬಗ್ಗುವುವು.

ಅದನ್ನು ಬ್ರಹ್ಮ (ದೊಡ್ಡದು) ಎಂದು ಉಪಾಸನ ಮಾಡಿದವನು ಬ್ರಹ್ಮವಾನ್ ಆಗುವನು. ಅದು ಬ್ರಹ್ಮದ ಪರಿಮರ[1] ಎಂದು ಉಪಾಸನ ಮಾಡಿದರೆ, ಅವನ ಶತ್ರುಗಳೂ ಅಹಿತರೂ ಮೃತರಾಗುವರು. ಯಾರು ಅಪ್ರಿಯರೋ ಯಾರು ಶತ್ರುಗಳೋ ಅವರೆಲ್ಲ ಮೃತರಾಗುವರು.

ಆ ಬ್ರಹ್ಮವು ಪುರುಷನಲ್ಲಿರುವುದೂ ಆದಿತ್ಯನಲ್ಲಿರುವುದೂ ಎರಡೂ ಒಂದೇ !

(ಇದುವರೆಗೆ ಹೇಳಿರುವುದು ಕಾರ್ಯವಾದ ಲೋಕದಲ್ಲಿ ಯಾವ ಯಾವದರಲ್ಲಿ ಏನೇನು ಮಹತ್ತ್ವವುಂಟೋ ಅದನ್ನೆಲ್ಲ ಬ್ರಹ್ಮವೆಂದು ಉಪಾಸಿಸು ಎಂದು. ಬ್ರಹ್ಮವನ್ನು ನೀನು ಏನೆಂದು ಉಪಾಸನ ಮಾಡಿದರೆ ಅದು ನೀನಾಗುವೆ ಎಂದು ಹೇಳಿ ಇಲ್ಲಿ ಎದುರಿಗಿರುವ ಪುರುಷನಲ್ಲಿಯೂ ಅಲ್ಲಿ ಆಕಾಶದಲ್ಲಿರುವ ಆದಿತ್ಯನಲ್ಲಿಯೂ ಇರುವುದು ಒಂದೇ ಚೈತನ್ಯ ಎಂದು ಹೇಳಲಾಯಿತು. ಬ್ರಹ್ಮೋಪಾಸನ ಮಾಡಿದವನು ಏನಾಗುವನು ಎನ್ನುವುದನ್ನು ಕುರಿತು ಇನ್ನೂ ಹೇಳುತ್ತಾರೆ.)[2]

ಹೀಗೆ ಇದನ್ನು ತಿಳಿದವನು, ಈ ಲೋಕದಲ್ಲಿ ಸತ್ತು, ಅನ್ನಮಯವೆಂಬ ಆತ್ಮನನ್ನು ದಾಟಿ, ಪ್ರಾಣಮಯವೆಂಬ ಆತ್ಮನನ್ನು ದಾಟಿ, ಮನೋಮಯವೆಂಬ ಆತ್ಮನನ್ನು ದಾಟಿ, ವಿಜ್ಞಾನಮಯವೆಂಬ ಆತ್ಮನನ್ನು ದಾಟಿ, ಆನಂದಮಯವೆಂಬ ಆತ್ಮನನ್ನು ದಾಟಿ, ಲೋಕ

---

1. ಪರಿಮರ:—ವಿದ್ಯುತ್, ವೃಷ್ಟಿ, ಚಂದ್ರ, ಸೂರ್ಯ, ಅಗ್ನಿ ಎಂಬ ಐದು ದೇವತೆಗಳೂ ಯಾರಲ್ಲಿ ಲಯವಾಗುವರೋ ಅದು ಪರಿಮರ.

2. ಹಿಂದೆ ಹೇಳಿದ ಪಂಚಾತ್ಮ ಸಂಕ್ರಮಣ ವಿದ್ಯೆಯ ಫಲಶ್ರುತಿ ಇದು. ಫಲವನ್ನು ಹೇಳುವ ಶ್ರುತಿಗೆ ಫಲಶ್ರುತಿಯೆಂದು ಹೆಸರು.

ಲೋಕಗಳನ್ನೆಲ್ಲಾ ಕಾಮಾನ್ನಿಯಾಗಿ[1], ಕಾಮರೂಪಿಯಾಗಿ[2] ಸಂಚರಿಸುತ್ತ, ಹಾ೩-ಉ, ಹಾ೩-ಉ, ಹಾ೩-ಉ ಎಂದು ಸಾಮಗಾನ ಮಾಡುತ್ತ ಇರುವನು.

(ಇದುವರೆಗೂ ಆನಂದಮಯುವನ್ನು ದಾಟಿ ಆರೂಢನಾದವನ ಸ್ಥಿತಿಯನ್ನು ಹೇಳಿ, ಇನ್ನು ಆ ಮಹಾನುಭಾವನ ಬಾಯಿಂದ ಹೊರಡುವ ಆ ಸಾಮಗಾನದ ಅರ್ಥವೇನು ಎಂಬುದನ್ನು ಹೇಳಲಾಗುತ್ತದೆ.)[3]

ನಾನು ಅನ್ನ, ನಾನು ಅನ್ನ, ನಾನು ಅನ್ನ, ನಾನು ಅನ್ನಾದ, ನಾನು ಅನ್ನಾದ, ನಾನು ಅನ್ನಾದ.

ನಾನು ಶ್ಲೋಕಕೃತ್ (ಮಾಡುವವನು), ನಾನು ಶ್ಲೋಕಕೃತ್, ನಾನು ಶ್ಲೋಕಕೃತ್.

ನಾನು ಪ್ರಥಮಜನು. ನಾನೇ ಈ ಸರ್ವದ ಋತವು. ದೇವತೆಗಳಿಗಿಂತ ಮೊದಲು ಹುಟ್ಟಿದವನು (ನಾನು.) ಅಮೃತದ ನಾಭಿಯು ನಾನು. ಯಾರು ನನ್ನನ್ನು (ಅನ್ನವನ್ನು) ಕೊಡುವರೋ ಅವರು ನನ್ನನ್ನು ರಕ್ಷಿಸುವವರು. ನಾನು ಅನ್ನವು : ನಾನು ಅನ್ನವು : ನಾನು ಅನ್ನವು : ನಾನೇ ಅನ್ನಾದರಲ್ಲೆಲ್ಲ ಶ್ರೇಷ್ಠನು.

---

1. ಕಾಮಾನ್ನಿಯೆಂದರೆ ಮನಸ್ಸಿಗೆ ಬಂದ ಭೋಗಗಳನ್ನು ಅನುಭವಿಸಬಲ್ಲನು.

2. ಕಾಮರೂಪಿಯೆಂದರೆ ಬೇಕಾದ ರೂಪವನ್ನು ಧರಿಸಬಲ್ಲವನು.

ಅನ್ನಮಯ ಕೋಶವನ್ನು ದಾಟಿದ ಮೇಲೆ ಕಾಮಾನ್ನಿಯಾಗುವನು. ಪ್ರಾಣಮಯ ಕೋಶವನ್ನು ದಾಟಿದ ಮೇಲೆ ಕಾಮರೂಪಿಯಾಗುವನು. ವಿಜ್ಞಾನಮಯ ಕೋಶವನ್ನು ದಾಟಿದ ಮೇಲೆ ಲೋಕ ಸಂಚಾರಿಯಾಗುವನು. ಆನಂದಮಯುವನ್ನು ದಾಟಿದ ಮೇಲೆ ಸಾಮಗಾನ ತತ್ಪರನಾಗುವನು.

3. "ಘಂಟೆಯನಾದದಿಂದಲೇ ದೇವತೆಗಳು ಬರುವರು : ರಾಕ್ಷಸರು ಹೋಗುವರು" ಎಂದ ಮೇಲೆ, ಸಾಮಗಾನವನ್ನು ಕುರಿತು ಏನು ಹೇಳಬೇಕು ! ಅದನ್ನು ಚಿಂತಿಸಿ ನೋಡಿ. ಘಂಟಾನಾದ, ಅದಕ್ಕಿಂತ ಮನುಷ್ಯವಾಣಿ, ಅದಕ್ಕಿಂತ ಋಕ್ಕು, ಅದಕ್ಕಿಂತ ಸಾಮ, ಹೆಚ್ಚು.

ನಾನು ಆದಿತ್ಯನಂತೆ ಪ್ರಕಾಶಮಾನವಾದ ಜ್ಯೋತಿಯು: ನನ್ನಿಂದಲೇ ಈ ಭೂತನಿವಾಸಸ್ಥಾನಗಳಾದ ಸಮಸ್ತಭುವನಗಳೂ ಆಗಿರುವುದು. ಯಾವನು ಇದನ್ನು ಹೀಗೆ ತಿಳಿಯುವನೋ (ಅವನೂ ಅದೇ ಆಗುವನು) ಎಂದು ಉಪನಿಷತ್ತು.

(ಈ ಎರಡು ವಲ್ಲಿಗಳಲ್ಲಿಯೂ ಪರಮಾತ್ಮ ಜ್ಞಾನವನ್ನು ಹೇಳಿದೆ. ಇದನ್ನು ಶಾಂತನೂ ದಾಂತನೂ ಉಪರತನೂ ತಿತಿಕ್ಷುವೂ ಸಮಾಹಿತನೂ ಆಗಿ ಭೃಗುವಿನಂತೆ ತಪಸ್ಸುಮಾಡಿ ಈ ಮಹತ್ತನ್ನು ಸಾಧಿಸಿದವನಿಗೆ ಇಲ್ಲಿ ಹೇಳಿರುವ ಫಲವೆಲ್ಲ ದೊರಕುವುದು.—ಶಂ.)

ಇಂತಿದು ತೈತ್ತಿರೀಯವು

೨. ಶ್ವೇತಾಶ್ವತರೋಪನಿಷತ್

ಈ ಉಪನಿಷತ್ತು ಕೃಷ್ಣಯಜುರ್ವೇದಕ್ಕೆ ಸೇರಿದುದು: ಇದರಲ್ಲಿ ಆರು ಅಧ್ಯಾಯಗಳೂ ನೂರ ಹದಿಮೂರು ಮಂತ್ರಗಳೂ ಇವೆ.

ಇದನ್ನು ಶ್ವೇತಾಶ್ವತರನೆಂಬ ಮಹರ್ಷಿಯು ಶಿಷ್ಯರಿಗೆ ಹೇಳಿದನೆಂದು ಇದಕ್ಕೆ ಈ ಹೆಸರು ಬಂದಿದೆ. "ಇದು ವಿಚಿತ್ರವಾದ ಹೆಸರು. ಶ್ವೇತ+ಅಶ್ವ+ತರ ಎಂದರೆ ಶುದ್ಧವಾದ ಇಂದ್ರಿಯಗಳನ್ನುಳ್ಳವರಲ್ಲಿ ಹೆಚ್ಚಿನವನು ಎಂದು ಅರ್ಥ" ಎಂದು ಕೆಲವರ ಅಭಿಪ್ರಾಯ.

ಉಪನಿಷತ್ತುಗಳಲ್ಲಿ ಹಿರಿಯವು, ಕಿರಿಯವು ಎಂದು ವಿಭಾಗ ಮಾಡುವುದು ವಾಡಿಕೆ. ಬ್ರಹ್ಮಸೂತ್ರಗಳಲ್ಲಿ ಪ್ರತ್ಯಕ್ಷವಾಗಿ ಹೆಸರೆತ್ತಿ ಹೇಳಿರುವ ಉಪನಿಷತ್ತುಗಳು ಹಿರಿಯವು ಎಂದು ಅಭಿಪ್ರಾಯ. ಹಾಗೆ ಈ ಉಪನಿಷತ್ತನ್ನು ಹಿರಿಯದು ಎನ್ನದಿದ್ದರೂ ಭಾಷ್ಯಕಾರರು ಇದರಿಂದ ಅನೇಕ ಮಂತ್ರಗಳನ್ನು ಎತ್ತಿ ಬರೆದಿರುವುದರಿಂದ ಇದಕ್ಕೆ ಪ್ರಸ್ಥಾನಗೌರವವು ಉಂಟು. ಆದರೂ ಇದನ್ನು ಕಾಲಮಾನದಿಂದ ಈಚಿನದು ಎನ್ನುತ್ತಾರೆ. ಇದಕ್ಕೆ ಶಂಕರರು ಭಾಷ್ಯವನ್ನು ಬರೆದಿದ್ದಾರೆ.

ಇದರಲ್ಲಿಯೂ ಗೀತೆಯಲ್ಲಿರುವಂತೆ ಸಮನ್ವಯದೃಷ್ಟಿ ಪುಷ್ಟವಾಗಿದೆ. ಇದನ್ನು ಮೂರು ಜನ ಆಚಾರ್ಯರೂ ಒಪ್ಪಿಕೊಂಡಿದ್ದಾರೆ.

ಓಂ. ಶಾಂತಿ ಮಂತ್ರಗಳು

ಓಂ. ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ॥ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥

ಅದೂ ಪೂರ್ಣ : ಇದೂ ಪೂರ್ಣ : ಪೂರ್ಣದಿಂದ ಹುಟ್ಟುವುದು ಎಲ್ಲಾ ಪೂರ್ಣ: ಪೂರ್ಣದಿಂದ ಪೂರ್ಣವನ್ನು ತೆಗೆದರೂ ಪೂರ್ಣವು ಪೂರ್ಣವಾಗಿಯೇ ಉಳಿಯುವುದು.[1]

ಓಂ. ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ॥ ಭದ್ರಂ ಪಶ್ಯೇಮ ಅಕ್ಷಿಭಿಃ ಯಜತ್ರಾಃ। ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ। ವ್ಯಶೇಮ ದೇವಹಿತಂ ಯದಾಯುಃ॥

ಎಲೈ ದೇವತೆಗಳಿರಾ, ಕಿವಿಯಿಂದ ಒಳ್ಳೆಯದನ್ನು ಕೇಳೋಣ: ಒಳ್ಳೆಯದನ್ನು ಕಣ್ಣುಗಳಿಂದ ನೋಡೋಣ. ಯಜ್ಞದಲ್ಲಿ ಇದ್ದುಕೊಂಡು, ಸ್ಥಿರವಾದ ಅಂಗಗಳುಳ್ಳ ದೇಹಗಳಿಂದ ಕೂಡಿಕೊಂಡು ಹೊಗಳೋಣ. ಆಯುಸ್ಸು ಇರುವವರೆಗೂ ದೇವಹಿತವನ್ನು ಆಚರಿಸೋಣ.

ಮೊದಲನೆಯ ಅಧ್ಯಾಯ

ಬ್ರಹ್ಮವಾದಿಗಳು ಮಾತನಾಡಿಕೊಳ್ಳುತ್ತಾರೆ :—

೧. ಕಾರಣ (ಕಾರಣ)ವು ಯಾವುದು ? ಅದೇ ಬ್ರಹ್ಮವೇನು ? ನಾವು ಎಲ್ಲಿಂದ ಹುಟ್ಟಿದೆವು ? ಯಾವುದರಿಂದ ಜೀವಿಸುವೆವು ? ನಾವು ಇರುವುದು (ಸಂಪ್ರತಿಷ್ಠಾ) [2] ಎಲ್ಲಿ ? (ನಮಗೆ ಆಶ್ರಯವು ಯಾವುದು ?) ಸುಖದುಃಖಗಳಲ್ಲಿ ನಮ್ಮನ್ನು ಹಾಕಿದವರು ಯಾರು ? ಬ್ರಹ್ಮವನ್ನು ತಿಳಿದ ನಾವು ಯಾವ ವ್ಯವಸ್ಥೆ[3]ಯಲ್ಲಿ ಇರುವೆವು ?

---

1. ಪುಟ ೧೫೦ ನೋಡಿ.
2. ಸಂಪ್ರತಿಷ್ಠಾ ಎಂದರೆ ಕೊನೆಯಲ್ಲಿ ತಂಗುವ ಕಡೆ. ಎಂದು ಕೆಲವರು.
3. ವ್ಯವಸ್ಥೆ-ನಿಯಮಬದ್ಧವಾಗಿರುವಿಕೆ. ಕ್ರಮವಾಗಿರುವಿಕೆ.

(ಇಲ್ಲಿರುವ ಪ್ರಶ್ನೆಗಳನ್ನು ಪ್ರಶ್ನ, ಕೇನ, ಉಪನಿಷತ್ತುಗಳ ಪ್ರಶ್ನೆಗಳೊಡನೆ ಹೋಲಿಸಿ. ಹಾಗೆಯೇ ಬ್ರಹ್ಮವಾದಿಗಳು ಎಂಬುದನ್ನು ಪ್ರಶ್ನೋಪನಿಷತ್ತಿನ ಪೀಠಿಕೆಯಲ್ಲಿ ಬರುವ ಭಾರದ್ವಾಜಾದಿಗಳ ವಿಷಯದಲ್ಲಿ ಹೇಳಿರುವ ಬ್ರಹ್ಮಪರಾಃ ಬ್ರಹ್ಮನಿಷ್ಠಾಃ ಎಂಬುದರೊಡನೆ ಹೋಲಿಸಿ. "ಬ್ರಹ್ಮವನ್ನು ಕುರಿತು ಚಿಂತಿಸುವುದೇ, ಅದರ ವಿಚಾರ ಮನಸ್ಸಿನಲ್ಲಿ ಬರುವುದೇ ಬ್ರಹ್ಮೋಪಾಸನ" ಎಂಬ ಶಂಕರ ವಚನವನ್ನು ಸ್ಮರಿಸಿ. ಹಾಗೆಯೇ ವಿವೇಕಚೂಡಾಮಣಿಯಲ್ಲಿ ಹೇಳಿರುವ "ಆಸುಪ್ತೇರಾಮೃತೇಃ" ನಿದ್ದೆ ಬರುವವರೆಗೂ, ಮರಣದವರೆಗೂ ವಿಚಾರವು ನಡೆಯುತ್ತಲೇ ಇರಬೇಕು ಎಂಬುದನ್ನು ನೆನೆಸಿಕೊಳ್ಳಿ.)

೨. ಕಾರಣವು ಯಾವುದು ? ಎಂಬ ಪ್ರಶ್ನಕ್ಕೆ ಉತ್ತರವಿದು :—ಕಾಲ, ಸ್ವಭಾವ, ನೀತಿ, ಯದೃಚ್ಛಾ, ಭೂತಗಳು, ಪ್ರಕೃತಿ, ಪುರುಷ, ಎಂಬಿವು ಚಿಂತ್ಯಗಳು (ಕಾರಣಗಳು ಎಂದು ಚಿಂತಿಸುತ್ತಾರೆ.) (ಆದರೆ) ಇವೂ ಅಲ್ಲ: ಇವುಗಳ ಸಂಯೋಗವೂ ಅಲ್ಲ. (ಏಕೆಂದರೆ ಇವುಗಳಿಗಿಂತ ಪ್ರತ್ಯೇಕವಾದ) ಆತ್ಮ[1] ವೊಂದು ಇರುವುದು. (ಆ ಆತ್ಮನೂ ಈ ಸೃಷ್ಟಿಗೆ ಕಾರಣನಾಗಿರಲಾರನು :) ಸುಖದುಃಖಗಳು ಉಂಟು ಎಂಬುದರಿಂದ ಆ ಆತ್ಮನೂ ಅನೀಶನು (ಎಂದರೆ ಸ್ವತಂತ್ರನಾಗಲಾರನು)[2].

---

1. ಆತ್ಮ ಎಂದರಿಲ್ಲಿ ಜೀವ.

2. ಆತ್ಮನೇ ಕಾರಣನಾದರೆ ತಾನು ಸುಖವನ್ನೇ ಸೃಷ್ಟಿಮಾಡಿಕೊಳ್ಳುತ್ತಿದ್ದನೇ ಹೊರತು ದುಃಖವನ್ನೇಕೆ ಸೃಷ್ಟಿಮಾಡುತ್ತಿದ್ದನು ? ಎಂದು ಪ್ರಶ್ನೆ.

ಈ ಪ್ರಶ್ನವನ್ನು ಬ್ರಹ್ಮಸೂತ್ರದಲ್ಲಿಯೂ ಎತ್ತಿದ್ದಾರೆ. (ಅ.೨-ಪಾ. ೧. ಅಧಿ. ೧೨.) ಆ ಅಧಿಕರಣದ ಅಭಿಪ್ರಾಯವಿದು :—

ಈ ಲೋಕದಲ್ಲಿ ಎಲ್ಲ ನೋಡಿದರೂ ವೈಷಮ್ಯ, ನೈರ್ಘೃಣ್ಯಗಳು ಇರುವುದರಿಂದ ಈಶ್ವರನು ಈ ಲೋಕವನ್ನು ಮಾಡಿದನೆಂಬುದು ಹೇಗೆ ! ಈಶ್ವರನು ಮಾಡಿದನೆಂದರೆ ಆತನಿಗೆ ಕೆಲವರ ಮೇಲೆ ಪ್ರೀತಿ, ಕೆಲವರ ಮೇಲೆ ದ್ವೇಷ ಇದೆಯೆನ್ನಬೇಕಾದೀತು. ಎಂದು ಪೂರ್ವಪಕ್ಷ.

ಅದಕ್ಕೆ ಉತ್ತರ : ಈಶ್ವರನು ಪಕ್ಷಪಾತಿಯಲ್ಲ. ವೈಷಮ್ಯ, ನೈರ್ಘೃಣ್ಯ ಎಂಬ ಪದಗಳು ಸಾಪೇಕ್ಷಗಳು. ಪ್ರಾಣಿಗಳ ಧರ್ಮಾಧರ್ಮಗಳ ಫಲವಾಗಿ ಈ ವೈಷಮ್ಯ ನೈರ್ಘೃಣ್ಯಗಳು ಉಂಟೇ ಹೊರತು ಈಶ್ವರನ ಪಕ್ಷಪಾತದಿಂದಲ್ಲ. ಮಳೆಗರೆದರೆ ಎಲ್ಲಾ ಧಾನ್ಯಗಳೂ ಬೆಳೆಯುವುವು. ಧಾನ್ಯಗಳು ಒಂದೊಂದು ಒಂದೊಂದು ರೀತಿಯಲ್ಲಾ ! ಎಂದರೆ ಅದಕ್ಕೆ ಆಯಾ ಬೀಜಗಳು ಕಾರಣ. ಹೀಗೇ ಈಶ್ವರನು ದೇವಮನುಷ್ಯಾದಿಗಳಿಂದ ಕೂಡಿದ ಸೃಷ್ಟಿಗೆ ಸಾಧಾರಣ ಕಾರಣನು. ದೇವತ್ವ ಮನುಷ್ಯತ್ವ ಮೊದಲಾದುವು ಅಸಾಧಾರಣ ಕಾರಣಗಳು. ಪುಣ್ಯೋವೈ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ (ಬೃ. ೩.೨-೧೩) ಪುಣ್ಯಕರ್ಮದಿಂದ ಪುಣ್ಯವಂತನೂ ಪಾಪಕರ್ಮದಿಂದ ಪಾಪನೂ ಆಗುವರು. ಅದರಿಂದ ಈಶ್ವರನು ಈ ಪಾಪಪುಣ್ಯಗಳನ್ನು ಮಾಡಿಲ್ಲ.

ಆದರೆ, ಮೊದಲ ಸೃಷ್ಟಿಯಲ್ಲಿ ಹೇಗಾಯಿತು ? ಎಂದರೆ, ಆದಿಸೃಷ್ಟಿಯೊಂದನ್ನು ವೇದಾಂತ ಶಾಸ್ತ್ರವು ಒಪ್ಪುವುದಿಲ್ಲ : ಸಂಸಾರವು ಅನಾದಿ

(ಎರಡನೆಯ ಶ್ಲೋಕದಲ್ಲಿ ಚಿಂತ್ಯಗಳು, ಸಂಯೋಗಗಳು, ಇವೊಂದೂ ಕಾರಣವಲ್ಲ (ಅವೆಲ್ಲ ಕಾರ್ಯಗಳು) ಜೀವನೂ ಹಾಗೇ, ಎಂದು, ಈಗ ಕಾರಣವನ್ನು ತಿಳಿಯುವುದು ಹೇಗೆ ಎಂಬುದನ್ನು ಹೇಳಲಾಗಿದೆ).

೩. ಧ್ಯಾನಯೋಗದಲ್ಲಿ ನಿಂತ ಅವರು (ಹಿರಿಯರು) ತನ್ನ ಗುಣಗಳಿಂದಲೇ ಮುಚ್ಚಿಕೊಂಡಿರುವ ಆ ದೇವನ ಆತ್ಮಶಕ್ತಿ[1]ಯನ್ನು ಕಂಡರು. ಆತನು ಒಬ್ಬನೇ! ಆತನು ಕಾಲ[2]ದಿಂದ ಹಿಡಿದು ಆತ್ಮನವರೆಗಿರುವ ಸರ್ವಕಾರಣಗಳಿಗೂ ಕಾರಣನು.

ಯೆಂಬುದರಿಂದ ಬೀಜ-ಅಂಕುರಗಳಂತೆ ಕರ್ಮ-ಕರ್ಮಫಲಗಳು ಇದ್ದೇ ಇರುವುವು.—(ಶಂಕರಭಾಷ್ಯ).

ಸೃಷ್ಟಿಯು ಹೂವಿನ ಗೊಂಚಲಹಾಗೆ. ಅದು ಹುಟ್ಟಿ ಬರುವಾಗಲೇ ಕಾಲ ದೇಶ ವ್ಯಕ್ತಿ ವೈಚಿತ್ರ್ಯಗಳೂ ಜೊತೆಯಲ್ಲಿಯೇ ಬರುವುವು. ಮಳೆಯು ಸುರಿಯುವಾಗ ಕಾಲ ದೇಶ ಧರ್ಮಗಳಿಂದ ಅದರಲ್ಲಿ ವ್ಯಕ್ತಿತ್ವವು ಕಂಡುಬರುವಂತೆ, ಪ್ರತಿಯೊಂದೂ ಮೇಲೋ ಕೆಳಗೋ ಇರಲೇಬೇಕಾಗುವುದು. ಅದರಿಂದ, ಹುಟ್ಟುವಾಗಲೇ ದೈವಾಸುರವಿಭಾಗ, ಗುಣತ್ರಯವಿಭಾಗಗಳು ಇರುವುದರಿಂದ, ಈ ಹೆಚ್ಚು ಕಡಿಮೆಗಳೂ, ಸುಖದುಃಖಗಳೂ, ಬಂದೇ ಬರುವುವು. ಸಮಷ್ಟಿ ಎಲ್ಲಾ ಒಟ್ಟು ಸೇರಿದುದು, ಅದರಲ್ಲಿ ಈ ಸುಖದುಃಖದಿಂದ ಭೇದಗಳು ಇಲ್ಲ: ಬೆಳ್ಳುಳ್ಳಿಯಲ್ಲಿ ಮೊದಲಾವುದು ಕೊನೆಯಾವುದು? ಹಾಗೆ. ವ್ಯಷ್ಟಿಎಂದರೆ ಭಿನ್ನ ಭಿನ್ನವಾದುದು: ಅದರಲ್ಲಿ ಇವು ಉಂಟೇ ಉಂಟು.

ಶರೀರವು ಕರ್ಮವಶವಾಗಿ ಪ್ರಾಪ್ತವಾಗುವುದು: ಅದು ಬರುವುದು ಫಲಭೋಗಕ್ಕಾಗಿ. ಆ ಫಲಭೋಗವು ಸುಖವಾಗಬಹುದು. ದುಃಖವಾಗಬಹುದು: ಆದರೆ ಸುಖದುಃಖಗಳೆರಡೂ ಒಂದೇ ಅನುಭವದ ಎರಡು ಮುಖಗಳು. ಆ ಅನುಭವ ದೇಹಸಂಬಂಧಿಯಾದಾಗ ಎರಡರಲ್ಲಿ ಒಂದಾಗಿರಬೇಕು. ದೇಹವನ್ನು ದಾಟಿದಾಗ ಅದು ಆನಂದ. ಇದನ್ನೇ ಬೃಹದಾರಣ್ಯಕವು ಶರೀರೇ ವಾ ಸಂತಂ ಪ್ರಿಯಾಪ್ರಿಯೇ ಸ್ಪೃಶತಃ। ಅಶರೀರೇ ವಾ ಸಂತಂ ಪ್ರಿಯಾಪ್ರಿಯೇ ನ ಸ್ಪೃಶತಃ॥ ಶರೀರದಲ್ಲಿ ಇರುವವನನ್ನು ಪ್ರಿಯಾ ಪ್ರಿಯಗಳು ಮುಟ್ಟುವುವು: ದೇಹವಿಲ್ಲದಿರುವವನನ್ನು ಈ ಪ್ರಿಯಾ ಪ್ರಿಯಗಳು ಮುಟ್ಟುವುದಿಲ್ಲ—ಎಂದು ಹೇಳಿತು.

1. ದೇವಾತ್ಮ ಶಕ್ತಿ "The self-concious power in themselves; or the sources of intellect, emotions and will: or the God of religion, the self of philosophy and the energy of science—ಸ್ವಾಮಿ ತ್ಯಾಗೀಶಾನಂದರು.

2. ಕಾಲಾತ್ಮಯುಕ್ತಾನಿ: ಕಾಲವು ಎಲ್ಲವನ್ನೂ ಪಾಕಮಾಡುವುದು: ಎಂದರೆ ಪ್ರತಿಯೊಂದು ಬದಲಾವಣೆಯೂ ಕಾಲನಿಂದ ಆಗುವುದು. ಈ ಬದ

(ಆ ಕಾರಣದಿಂದ ಆದ ಕಾರ್ಯವನ್ನು ಕುರಿತು ಈ ಮಂತ್ರದಲ್ಲಿ ಹೇಳಿದೆ.)

೪. ಏಕನೇಮಿಯು[1], ತ್ರಿವೃತನು[2], ಷೋಡಶಾಂತನು[3], ಶತಾರ್ಧಾರನು[4], ವಿಂಶತಿಪ್ರತ್ಯರ[5]ಗಳಿಂದ ಕೂಡಿದವನು, ಆರು ಅಷ್ಟಕ

ರಾವಣ್—ವ್ಯಯವೊಂದೂ ಇಲ್ಲದೆ ಸ್ಥಿರನೂ ಶಾಶ್ವತನೂ ಆದವನು ಆತ್ಮ. ಅದರಿಂದ ವ್ಯಯದಿಂದ ಅವ್ಯಯದವರೆಗಿನ ಕಾರಣಗಳನ್ನೆಲ್ಲ ಆಳುವವನು—ಕಾರಣನು.

ಹೋಲಿಸಿ. ಗೀತೆ ೧೩—೨೫. ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ: ಕೆಲವರು ಧ್ಯಾನದಿಂದ ತಮ್ಮಲ್ಲಿಯೇ, ತಾವೇ, ತಮ್ಮ (ಆತ್ಮನ) ನ್ನು ನೋಡುವರು.

ಮತ್ತೆ ಗೀ—೭—೨೫. ನಾಹಂ ಪ್ರಕಾಶಸ್ಸರ್ವಸ್ಯ ಯೋಗಮಾಯಾಸಮಾವೃತಃ—ನಾನು ಯೋಗಮಾಯೆಯಿಂದ ಕೂಡಿರುವೆನು. ಅದರಿಂದ ಎಲ್ಲರಿಗೂ ಗೋಚರನಾಗುವುದಿಲ್ಲ.

ಕಾರಣವು ಕಾರ್ಯವಾಗುವುದು ಹೇಗೆ? ನಿರ್ಗುಣವು ಸಗುಣವಾಗುವುದು ಹೇಗೆ? ಎಂಬುದನ್ನು ಗೀತೆಯಲ್ಲಿ ಭಗವಂತನು ಹೇಳಿದ್ದಾನೆ: ೪—೬. ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ. ಆತನು ತನ್ನ ಪ್ರಕೃತಿಯನ್ನೇ ಅವಲಂಬಿಸಿ ಹುಟ್ಟುವನು: ಆದರದು ಆತನ ಮಾಯೆ. ಪ್ರಕೃತಿಯೂ ಆತನದೇ! ಅದರಿಂದ ಅದು ನಮಗೆ ತಿಳಿಯಲು ಬರುವುದಿಲ್ಲ. ಎಂದರೆ ನಮ್ಮ ಬುದ್ಧಿಗೆ ಗೋಚರವಾಗುವುದಿಲ್ಲ. ಆತನು ಬುದ್ಧಿಯ ಆಚೆಯಿರುವವನು. ಬುದ್ಧಿಯೂ ಆತನ ಪ್ರಕೃತಿಯ ಎಂಟು ರೂಪದಲ್ಲಿ ಒಂದು. (೭—೪). ಅದರಿಂದ ಬುದ್ಧಿಯು ಆತನನ್ನು ಆಗಲೀ, ಆತನ ಮಾಯೆಯನ್ನಾಗಲೀ ತಿಳಿಯಲಾರದು.

1. ಏಕನೇಮಿ—ಒಂದು ಗುಂಬವುಳ್ಳವನು. ಮಾಯೆಯನ್ನು ಇಲ್ಲಿ ಗುಂಬವಾಗಿ ಹೇಳಿದೆ.

2. ತ್ರಿವೃತನು—ಮೂರಾದವನು: ದೈವೀಹ್ಯೇಷಾಗುಣಮಯೀ ಮಮ ಮಾಯಾ ಎಂಬಂತೆ, ಮಾಯೆಯು ಮೂರು ಗುಣವುಳ್ಳುದು—ಅದರಿಂದ ಮೂರಾದವನು—ಎಂದರೆ ಮೂರು ಗುಣಗಳುಳ್ಳವನು. *or it may be taken as representing time, space and causation or the triputi of Vedantha—ಸ್ವಾಮಿ ತ್ಯಾಗೀಶಾನಂದರು.

ಆದರೆ ಇಲ್ಲಿ ಸಾಂಖ್ಯಮತವೇ ಪ್ರಧಾನವಾಗಿರುವುದರಿಂದ ಈ ಅಭಿಪ್ರಾಯವನ್ನು ಅಂಗೀಕರಿಸಲಾಗುವುದಿಲ್ಲ.

3. ಷೋಡಶಾಂತ—ಸಾಂಖ್ಯರು ಹೇಳುವ ಹದಿನಾರು ವಿಕೃತಿಗಳು: ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಪಂಚಭೂತಗಳೈದು,

ಗಳುಳ್ಳವನು[6], ವಿಶ್ವರೂಪವಾದ ಏಕಪಾಶವುಳ್ಳವನು[7], ತ್ರಿಮಾರ್ಗ ಭೇದವುಳ್ಳವನು[8], ಎರಡಕ್ಕೆ ಕಾರಣವಾದ ಒಂದು ಮೋಹವುಳ್ಳವನು[9]: ಅವನನ್ನು (ಕುರಿತು ಧ್ಯಾನಿಸಬೇಕು).

(ಹಿಂದಿನ ಮಂತ್ರದಲ್ಲಿ ಸಾಂಖ್ಯಮತಾನುಸಾರವಾಗಿ ಈ ಜಗತ್ತನ್ನು ಚಕ್ರಕ್ಕೆ ಹೋಲಿಸಿ, ಬ್ರಹ್ಮಚಕ್ರವನ್ನು ಧ್ಯಾನಿಸೋಣ

ಮನಸ್ಸೊಂದು—ಒಟ್ಟು ಹದಿನಾರು. ಇವಾಗುತ್ತಲೂ ಪರಿಣಾಮವು ಮುಗಿಯುವುದು. ಎಂದರೆ ಸೃಷ್ಟಿಯು ಆರಂಭವಾಗುವುದು.

4. ಶತಾರ್ಧಾರ—ಶತಾರ್ಧ—ಐವತ್ತು—ಅರಾ—ಅರೇ ಕಾಲುಗಳು ಇವು. ಹೀಗೆ:—ವಿಪರ್ಯಯಗಳು (ತಪ್ಪು ತಿಳಿವಳಿಕೆ) ಐದು: ಅಶಕ್ತಿಗಳು ಇಪ್ಪತ್ತೆಂಟು: ತುಷ್ಟಿಗಳು ಒಂಬತ್ತು: ಸಿದ್ಧಿಗಳು ಎಂಟು.

(ನೋಡಿ. ಸಾಂಖ್ಯ ಸೂತ್ರ—III—37· 45: ಸಾಂಖ್ಯಕಾರಿಕಾ 47 ಮುಂದಕ್ಕೆ: ಯೋಗ ಸೂತ್ರ I—8, ಮತ್ತು II—2.)

5 ವಿಂಶತಿಪ್ರತ್ಯರ—ವಿಂಶತಿ: ಇಪ್ಪತ್ತು, ಪ್ರತ್ಯರ—ಒಂದು ಚಕ್ರಕ್ಕೆ ಭದ್ರವಾಗಿರಲೆಂದು ಅದಕ್ಕೆ ಸೇರಿಸಿದಂತೆ ಇಡುವ ಎರಡನೆಯ ಚಕ್ರದ ಅರೇ ಕಾಲುಗಳು. ಹತ್ತು ಇಂದ್ರಿಯಗಳು ಮತ್ತು ಅವುಗಳ ಹತ್ತು ವಿಷಯಗಳು ಈ ಇಪ್ಪತ್ತು.

6. ಆರು ಅಷ್ಟಕಗಳು—(1) ಪ್ರಕೃತ್ಯಷ್ಟಕ (ಗೀತೆ VII—೪) (ಪಂಚಭೂತಗಳು ಮನೋಬುದ್ಧಿ ಅಹಂಕಾರಗಳು) (2) ಧಾತ್ವಷ್ಟಕ (ಚರ್ಮ, (ಹೊರಗಿನದು) ತ್ವಕ್ (ಒಳಗಿನದು), ರಕ್ತ, ಮಾಂಸ, ಮೇದಸ್, ಅಸ್ಥಿ, ಮಜ್ಜಾ, ಶುಕ್ರ) (3) ಐಶ್ವರ್ಯಾಷ್ಟಕ (ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕ್ಕಾಮ್ಯ, ಈಶತ್ವ, ವಶಿತ್ವ.) (4) ಭಾವಾಷ್ಟಕ (ಧರ್ಮ—ಅಧರ್ಮ, ಜ್ಞಾನ—ಅಜ್ಞಾನ, ವೈರಾಗ್ಯ—ಅವೈರಾಗ್ಯ, ಐಶ್ವರ್ಯ—ಅನೈಶ್ವರ್ಯ) (5) ದೇವಾಷ್ಟಕ (ಬ್ರಹ್ಮಾ, ಪ್ರಜಾಪತಿ, ದೇವ, ಗಂಧರ್ವ, ಯಕ್ಷಸ್, ರಕ್ಷ, ಪಿತೃ, ಪಿಶಾಚ.) (6) ಗುಣಾಷ್ಟಕ (ದಯಾ, ಕ್ಷಮಾ, ಅನಸೂಯ, ಶೌಚ, ಅನಾಯಾಸ, ಅಕಾರ್ಪಣ್ಯ, ಅಸ್ಪೃಹಾ, ಅಹಿಂಸಾ.)

7. ವಿಶ್ವರೂಪವಾದ ಏಕಪಾಶ: ಎಲ್ಲ ರೂಪಗಳಿಗೂ ಕಾರಣವಾದ ಕಾಮರೂಪವಾದ ಪಾಶವುಳ್ಳವನು. (ಹೋಲಿಸಿ:—ಕಾಮಸ್ವರೂಪ ಪಾಶಾಢ್ಯಾ—ಲಲಿತಾ ಸಹಸ್ರನಾಮ).

8. ತ್ರಿಮಾರ್ಗಭೇಧ—ದೇವಯಾನ, ಪಿತೃಯಾನ, ಹೀನಯಾನ.

9. ಎರಡಕ್ಕೆ ಕಾರಣವಾದ ಏಕಮೋಹ: ಗೀತೆ VII—೨೭ ಇಚ್ಛಾದ್ವೇಷ ಸಮುತ್ಥೇನ ದ್ವಂದ್ವಮೋಹೇನ ಭಾರತ । ಸರ್ವಭೂತಾನಿ ಸಂಮೋಹಂ ಸರ್ಗೇ ಯಾಂತಿ ಪರಂತಪ॥ ಸರ್ವಭೂತಗಳೂ ಸೃಷ್ಟಿಕಾಲದಲ್ಲಿ ಸಂಮೋಹವನ್ನು ಹೊಂದುವರು: ಅದು ಇಚ್ಛಾದ್ವೇಷಗಳೆಂಬ ದ್ವಂದ್ವವಾಗಿ ಕಾಣಿಸಿಕೊಳ್ಳುವುದು.

ಎಂದಂತೆ, ಈಗ ಜಗತ್ತನ್ನು ನದಿಗೆ ಹೋಲಿಸಿ ಬ್ರಹ್ಮನದಿಯನ್ನು ಧ್ಯಾನಿಸೋಣ ಎಂದು ಹೇಳಿದೆ.)

೫. ಐದು ನದಿಗಳ ನೀರುಳ್ಳ[1] ಐದು ಕಾರಣಗಳಿಂದಾದ[2] ಐದು ಅಂಜಿಸುವ ತಿರುಹುಗಳುಳ್ಳ[3], ಐದು ಪ್ರಾಣಗಳೆಂಬ ತೆರೆಗಳನ್ನುಳ್ಳ[4], ಐದು ಬುದ್ಧಿಗಳ ಮೂಲವಾದ[5], ಐದು ಸುಳಿಗಳುಳ್ಳ[6], ಐದು ದುಃಖಗಳೆಂಬ ಸೆಳವುಗಳುಳ್ಳ[7]. ಐವತ್ತು ಭೇದಗಳುಳ್ಳ[8], ಐದು ಗಂಟುಳ್ಳ[9], (ಆ ಬ್ರಹ್ಮನದಿಯನ್ನು) ಧ್ಯಾನಿಸೋಣ.

---

1. ಐದು ನದಿಗಳ ನೀರು : ಐದು ಭೂತಗಳೂ ಸೇರಿ ಆದ ದೇಹಗಳು.

2–3. ಐದು ಕಾರಣಗಳಿಂದಾದ ಐದು ಅಂಜಿಸುವ ತಿರುವು : ಪಂಚಕೋಶಗಳು ಅವುಗಳ ಪಂಚವೃತ್ತಿಗಳು. ಅವು ಹೀಗೆ (೧) ಅನ್ನಮಯ ಕೋಶವು ಉಪಚಯ (ಹೆಚ್ಚುವುದು) ಅಪಚಯ (ತಗ್ಗುವುದು) ಎಂಬ ಎರಡು ವೃತ್ತಿಗಳುಳ್ಳದು. (೨) ಪ್ರಾಣಮಯಕೋಶವು ಆದಾನ (ತೆಗೆದುಕೊಳ್ಳುವುದು), ವಿಸರ್ಗ (ಬಿಡುವುದು), ಪಚನ (ಪಕ್ವ ಮಾಡುವುದು), ಧಾರಣ (ಹೊತ್ತುಕೊಂಡಿರುವುದು), ಉಚ್ಚಾರಣ (ನುಡಿಯುವುದು) ಎಂಬ ಐದು ವೃತ್ತಿಗಳುಳ್ಳದು. (೩) ಮನೋಮಯಕೋಶವು ಸಂಕಲ್ಪ ವಿಕಲ್ಪ ಸ್ಮರಣ ವಿಸ್ಮರಣ ಧ್ಯಾನಗಳೆಂಬ ಪಂಚವೃತ್ತಿಯುಳ್ಳದು. (೪) ವಿಜ್ಞಾನಮಯವು ಕರ್ತೃತ್ವ ಭೋಕ್ತೃತ್ವ ಎಂಬ ಎರಡು ವೃತ್ತಿಗಳುಳ್ಳದು. (೫) ಆನಂದಮಯವು ಪ್ರಿಯ, ಮೋದ, ಪ್ರಮೋದಗಳೆಂಬ ಮೂರು ಹೆಸರಿನ ಒಂದೇ ವೃತ್ತಿಯುಳ್ಳದು. ಇವೆಲ್ಲವೂ ಬಹಿರ್ಮುಖಗಳಾದುದರಿಂದ ಇವು ಉಗ್ರವಕ್ರ ಎಂದರೆ ಅಂಜಿಸುವ ತಿರುಹುಗಳು.

(ಈ ಕೋಶಗಳೆಲ್ಲ ಬ್ರಹ್ಮಮಯವಾದರೆ ಇವು ಪಂಚ ಬ್ರಹ್ಮರು ಇಲ್ಲದಿದ್ದರೆ ಪಂಚಪ್ರೇತಗಳು—ಪಂಚಪ್ರೇತಾಸನಾಸೀನಾ ಪಂಚಬ್ರಹ್ಮ ಸ್ವರೂಪಿಣೀ ಎಂಬ ಲಲಿತಾ ಸಹಸ್ರನಾಮದ ನಾಮಗಳನ್ನು ಗಮನಿಸಿ).

4. ಐದು ಪ್ರಾಣಗಳೆಂಬ ತೆರೆಗಳು : ಮನೋಮಯ ವಿಜ್ಞಾನಮಯ ಕೋಶಗಳೆರಡೂ ಪ್ರಾಣಮಯ ಕೋಶದ ಪಂಚಪ್ರಾಣಗಳ ವ್ಯಾಪಾರವನ್ನು ಅನುಸರಿಸಿ ನಡೆಯುವುವು. ಅದರಿಂದ ಪ್ರಾಣಗಳನ್ನು ತೆರೆಗಳನ್ನಾಗಿ ವರ್ಣಿಸಿದೆ.

5. ಐದು ಬುದ್ಧಿಗಳ ಮೂಲವು: ಯೋಗಸೂತ್ರದಲ್ಲಿ ಹೇಳುವ, ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಿಗಳೆಂಬ ಪಂಚವೃತ್ತಿಗಳ ಮೂಲವಾದ ಚಿತ್ತ.

6. ಐದು ಸುಳಿಗಳು : ಪಂಚೇಂದ್ರಿಯಗಳ ವಿಷಯಗಳು.

7. ಐದು ದುಃಖಗಳು : ಗರ್ಭದುಃಖ, ಜನ್ಮದುಃಖ, ಜರಾದುಃಖ, ರೋಗದುಃಖ, ಮರಣದುಃಖ.

8. ಐವತ್ತು ಭೇದಗಳು : ನಾನಾ ರೂಪವಾಗಿ ತೋರುವ ಜಗತ್ತು.

9. ಐದು ಗಂಟು : ಪಂಚ ಗ್ರಂಥಿಗಳು : ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿ, ರುದ್ರಗ್ರಂಥಿ, ವರುಣಗ್ರಂಥಿ, ಮೃತ್ಯುಗ್ರಂಥಿ.

೬. ಯಾವುದರಲ್ಲಿ ಎಲ್ಲವೂ ಜೀವಿಸುವುದೋ, ಯಾವುದರಲ್ಲಿ ಎಲ್ಲವೂ ಆಶ್ರಯವನ್ನು ಪಡೆಯುವುದೋ, ಆ ಭಾರಿಯ ಬ್ರಹ್ಮ ಚಕ್ರದಲ್ಲಿ ಹಂಸ (ಜೀವ) ವು ಅಲೆಯುತ್ತಿರುವುದು. ತಾನು ಬೇರೆಯೆಂದು ಕೊಂಡಿದ್ದ (ಆ ಜೀವವು) ತಾನೂ ಬೇರೆಯಲ್ಲ, ತನ್ನನ್ನು ಪ್ರೇರಿಸುತ್ತಿರುವ ಶಕ್ತಿಯೂ ಬೇರೆಯಲ್ಲ ಎಂಬುದನ್ನು ತಿಳಿದಮೇಲೆ, ಅನುಗ್ರಹ[1]ವನ್ನು ಪಡೆದು ಅಮೃತತ್ವವನ್ನು ಹೊಂದುವುದು.[2]

೭. ಪರಮವಾದ ಈ ಬ್ರಹ್ಮವು ಉದ್ಗೀತವು (ಗಟ್ಟಿಯಾಗಿ ಹೇಳಲ್ಪಟ್ಟಿದೆ). ಅದರಲ್ಲಿ ಮೂರು (ಮೂರು)[3] ಉಂಟು. ಅದರಲ್ಲಿ ಎಲ್ಲವೂ ಸುಪ್ರತಿಷ್ಠಿತವಾಗಿರುವುದು: ಅದೇ ಅಕ್ಷರ[4]ವು. ಇದರ ಆಂತರ (ರಹಸ್ಯ)ವನ್ನು ಬ್ರಹ್ಮಜ್ಞಾನಿಗಳು ತಿಳಿದು, ತತ್ಪರರಾಗಿ ಬ್ರಹ್ಮದಲ್ಲಿ ಲೀನರಾಗಿ, ಸಂಸಾರದಿಂದ ಮುಕ್ತರಾಗುವರು.

೮. ಕ್ಷರ ಅಕ್ಷರವೆರಡೂ ಸೇರಿದುದು ಇದು. ವ್ಯಕ್ತ[5] ಅವ್ಯಕ್ತಗಳೆರಡೂ ಆದ ವಿಶ್ವ[6]ವನ್ನು ಈಶ್ವರನು ಕಾಪಾಡುವನು. ಆತ್ಮ (ಜೀವಾತ್ಮ)ನು ಭೋಕ್ತೃ (ಅನುಭವಿಸುವವನು) ವಾದ್ದರಿಂದ ಪರವಶ

---

1. ಅನುಗ್ರಹವೆಂದರೆ ಜೀವಬ್ರಹ್ಮೈಕ್ಯ.

2. ಈ ಮಂತ್ರದಲ್ಲಿ "ಪೃಥಗಾತ್ಮಾನಂಚ ಪ್ರೇರಿತಾರಂಚ ಮತ್ವಾ" ಎಂದಿದೆ. ಇಲ್ಲಿ ಆತ್ಮಾನಂ ತನ್ನನ್ನೂ ಪ್ರೇರಿತಾರಂಚ ತನ್ನನ್ನು ಪ್ರೇರಿಸುವವನನ್ನೂ ಪೃಥಗ್‌ಮತ್ವಾ-ಬೇರೆಯಾಗಿ ತಿಳಿದು ಹಂಸ (ಜೀವ) ವು ಅಲೆಯುವುದು ಎಂದು ಒಂದು ಮತ. ತನ್ನನ್ನೂ ತನ್ನ ಪ್ರೇರಿತಾರನನ್ನೂ ಬೇರೆ ಬೇರೆ ಎಂದು ತಿಳಿದು ಅಮೃತತ್ವವನ್ನು ಹೊಂದುವನು ಎಂದು ಇನ್ನೊಂದು ಮತ.

3. ಮೂರು ಮೂರು : ಮೂರು ಗುಣಗಳು, ಮೂರು ಅವಸ್ಥೆಗಳು, ಜೀವ ಪ್ರಕೃತಿ ಪರಮ (ಮುಂದಿನ ಪುಟದಲ್ಲಿ ಮಂತ್ರ ೯ ನೋಡಿ)

4. ಅಕ್ಷರ : ಕ್ಷರ ಎಂದರೆ ವ್ಯತ್ಯಾಸ, ಅದಿಲ್ಲದ್ದು ಅಕ್ಷರ

5. ವ್ಯಕ್ತ-ಇಂದ್ರಿಯ ಗೋಚರವಾದುದು : ಅವ್ಯಕ್ತ–ಅದು ಅಲ್ಲದ್ದು.

6. ವಿಶ್ವ-ಸರ್ವಸಮಸ್ತವೂ ಸೇರಿರುವುದು ವಿಶ್ವ. ಆತ್ಮನನ್ನು ಜೀವಾತ್ಮ, ಪರಮಾತ್ಮ, ಎಂದು ವ್ಯವಹಾರ ಮಾಡುವುದುಂಟು. ದೇಹದಲ್ಲಿರುವವನು ಜೀವಾತ್ಮ. ಹಾಗಿಲ್ಲದೆ, ನಿರ್ಗುಣನಾಗಿರುವವನು (ದೇಹವಿಲ್ಲದಿರುವವನು) ಪರಮಾತ್ಮ-ಜೀವಾತ್ಮನು ಅಜ್ಞನು, ತಿಳಿಯದವನು. ಪರಮಾತ್ಮನು ಜ್ಞಾನಿಯು.

ನಾಗಿರುವನು. ದೇವ (ಪರಮಾತ್ಮ)ನನ್ನು ತಿಳಿದುಕೊಂಡರೆ ಸರ್ವ ಪಾಶಗಳಿಂದಲೂ ಮುಕ್ತನಾಗುವನು.

೯. ಜ್ಞಾನಿಯಾದ ಪರಮನೂ ಅಜ್ಞಾನಿಯಾದ ಜೀವನೂ ಇಬ್ಬರೂ ಅಜರು ಎಂದರೆ ಜನ್ಮವಿಲ್ಲದವರು. ಭೋಕ್ತೃ (ಭೋಗಿಸುವವನು) ಭೋಗ್ಯಾರ್ಥ (ಭೋಗಿಸಬೇಕೆಂಬ ವಿಷಯ) ಎರಡನ್ನೂ ತಂದೊಡ್ಡುವ ಇನ್ನೊಂದು ಪ್ರಕೃತಿಯುಂಟು. ಆಕೆಯೂ ಜನ್ಮವಿಲ್ಲದವಳು. ಈ ಜೀವ, ಪರಮ, ಪ್ರಕೃತಿ, ಮೂವರೂ ಬ್ರಹ್ಮವೇ ಎಂದು ತಿಳಿದುಕೊಂಡರೆ, ಆಗ ಜೀವನು ಅನಂತ (ಅಂತವಿಲ್ಲದವ)ನೂ, ವಿಶ್ವರೂಪನೂ ಆಗಿ ಅ-ಕರ್ತಾ ಆಗುವನು.[1]

೧೦. ಕ್ಷರವು ಪ್ರಧಾನ[2]ವು : ಪರಮನು ಅಕ್ಷರನು, ಅಮೃತನು. ಕ್ಷರವೂ ಜೀವಾತ್ಮನೂ ಇಬ್ಬರೂ ಏಕನಾದ ಪರಮನ ಆಳ್ವಿಕೆಗೆ ಒಳಪಟ್ಟವರು. ಆ ಪರಮನನ್ನು ಧ್ಯಾನಿಸುವುದರಿಂದ, ಅವನೊಡನೆ ಸೇರುವುದರಿಂದ, ಅವನೊಡನೆ ಬೆರೆಯುವುದರಿಂದ, ಕೊನೆಯಲ್ಲಿ ವಿಶ್ವಮಾಯೆಯೆಲ್ಲವೂ ನಿವೃತ್ತವಾಗುವುದು.

೧೧. ಪರಮನನ್ನರಿತರೆ, ಎಲ್ಲ ಕಟ್ಟುಗಳೂ ಬಿಚ್ಚಿಹೋಗುವುವು. ಕ್ಲೇಶಗಳೆಲ್ಲವೂ ಕ್ಷೀಣಗಳಾಗಿ, ಜನನ ಮರಣಗಳು ಇಲ್ಲವಾಗುವುವು. ಪರಮನನ್ನು ಧ್ಯಾನಿಸುತ್ತಿದ್ದರೆ, ದೇಹವು ನಾನೆಂಬ ಅಜ್ಞಾನವು

---

1. ಜೀವನಿಗೆ ತಾನು ಕರ್ತಾ ಎಂಬ ಒಂದು ಅಹಂಕಾರವಿದೆ. ಅದರಿಂದ, ಸಮುದ್ರವು ಎಲ್ಲವೂ ತಾನೇ ಆಗಿದ್ದರೂ, ನಾನು ಒಂದು ತರಂಗ, ಸಮುದ್ರಕ್ಕಿಂತ ಬೇರೆ ಎಂದುಕೊಂಡಂತೆ, ಜೀವಾತ್ಮನು ವಿಶ್ವಾತ್ಮನಾಗಿದ್ದರೂ ಈ ದೇಹ ಮಾತ್ರವು ನಾನು ಎಂದುಕೊಳ್ಳುತ್ತಾನೆ. ಹೀಗಾಗಿರುವುದು ಭೋಕ್ತೃ-ಭೋಗ್ಯ-ಭೋಗ, ಎಂಬ ಮೂರು ಕಟ್ಟುಗಳನ್ನು ಮಾಯೆಯು ಹಾಕುವುದರಿಂದ. ಈ ಮೂರು ಕಟ್ಟನ್ನು ತ್ರಿಪುಟಿ ಎನ್ನುತ್ತಾರೆ.

ಈ ತ್ರಿಪುಟಿಯನ್ನೊಡ್ಡುವ ಮಾಯೆ, ಈ ತ್ರಿಪುಟಿಗೆ ಸಿಕ್ಕಿ ಚಿಕ್ಕವನೆಂದು ಕೊಳ್ಳುತ್ತಿರುವ ತಾನು, ತ್ರಿಪುಟಿಯ ಹೊರಗಿರುವ ಪರಮ, ಮೂವರೂ ಒಂದೇ ಎಂದು ತಿಳಿದಾಗ, ನಾನು ಎನ್ನುತ್ತಿರುವ ಜೀವಾತ್ಮನು ಪರಮಾತ್ಮನಾಗುವನು.

2. ಪ್ರಧಾನ–ಪ್ರಕೃತಿ.

ಹೋಗಿ ತುರೀಯು[1]ವು ಲಭಿಸುವುದು: ಎಲ್ಲದಕ್ಕೂ ಒಡೆಯನಾಗಿ, ಮನಸ್ಸಿನಲ್ಲಿರುವ ಆಶೆಗಳೆಲ್ಲವೂ ಮುಗಿದು ಎರಡಿಲ್ಲದ ಒಂದಾಗುವನು.

೧೨. ಈ ಪರಮವು ನಿನ್ನಲ್ಲಿಯೇ ಯಾವಾಗಲೂ ಇದೆಯೆಂದು ತಿಳಿ. ಇದಕ್ಕಿಂತ ಬೇರೆಯಾದ ಇನ್ನೇನನ್ನೂ ತಿಳಿಯಬೇಕಾಗಿಲ್ಲ. "ಭೋಕ್ತೃ, ಭೋಗ್ಯ, ಪ್ರೇರಿಸುವದು" ಎಂಬ ಮೂರೂ ಬ್ರಹ್ಮವೇ! ವೇದವು ಹೇಳುವುದೂ ಇದನ್ನೇ!

೧೩. ಅಪ್ರಕಟವಾದ ಬೆಂಕಿಗೆ ರೂಪವುಂಟೆ? ಹಾಗೆಂದು ಅದೇನಾದರೂ ಇಲ್ಲದೆ ಹೋಗಿದೆಯೆ? ಬೆಂಕಿಯಿರುವ ತುಂಡುಗಳು ಎರಡನ್ನು ಜೋಡಿಸಿ ಮಸೆದರೆ ಆ ಬೆಂಕಿಯು ಈಚೆಗೆ ಬರುವುದಲ್ಲವೆ? ಹಾಗೆಯೇ ದೇಹದಲ್ಲಿ ಆತ್ಮನಿದ್ದೂ ಕಾಣಿಸದಿರುವನು. ಪ್ರಣವವನ್ನು ಜೋಡಿಸಿ ಮಥಿಸಿದರೆ ಕಾಣಿಸುವನು.

೧೪. ತನ್ನ ದೇಹವನ್ನು ಅರಣಿಯನ್ನು ಮಾಡಿ, ಪ್ರಣವವನ್ನು ಉತ್ತರಾರಣಿಯನ್ನು ಮಾಡಬೇಕು. ಧ್ಯಾನವೆಂಬ ಕಡೆತವನ್ನು ಪದೇಪದೇ ಮಾಡಿ, ಮರೆಗೊಂಡಂತೆ ಇರುವ ಪರಮನನ್ನು ಕಾಣಬೇಕು.

೧೫. ಎಳ್ಳಿನಲ್ಲಿ ಎಣ್ಣೆ, ಮೊಸರಿನಲ್ಲಿ ಬೆಣ್ಣೆ, ಭೂಮಿಯಲ್ಲಿರುವ ಜಲನಾಡಿಗಳಲ್ಲಿ ನೀರು, ಮರದ ತುಂಡುಗಳಲ್ಲಿ ಅಗ್ನಿ ಇರುವಂತೆ ಈ ದೇಹದಲ್ಲಿ ಆತ್ಮನು (ಇರುವನು) ಸಿಕ್ಕುವನು. (ಬಲ್ಲವನು) ಸತ್ಯದಿಂದಲೂ ತಪಸ್ಸಿನಿಂದಲೂ ಈತನನ್ನು ಕಾಣುವನು.

೧೬. ಆತ್ಮನು, ಹಾಲಿನಲ್ಲಿರುವ ಬೆಣ್ಣೆಯಂತೆ, ಸರ್ವವ್ಯಾಪಿಯು. ಜ್ಞಾನ ತಪಸ್ಸುಗಳಿಂದ ಈತನನ್ನು ಕಾಣುವರು. ಅದೇ ಬ್ರಹ್ಮ. ಅದು ಪರಮ ರಹ್ಯಸವು.

ಇಂತಿದು ಮೊದಲನೆಯ ಅಧ್ಯಾಯವು.

---

1. ಈ ದೇಹದಲ್ಲಿ ಜಾಗ್ರತ್ತು, ಸ್ವಪ್ನ, ನಿದ್ರೆ ಎಂಬ ಮೂರು ಅವಸ್ಥೆಗಳು. ಈ ದೇಹವು ತಾನಲ್ಲ ಎಂದು ತಿಳಿದಮೇಲೆ, ಈ ಮೂರೂ ಇಲ್ಲದ ನಾಲ್ಕನೆಯ ಅವಸ್ಥೆಯೊಂದು ಬರುವುದು. ಅದಕ್ಕೆ ತುರೀಯ ಎಂದು ಹೆಸರು.

ಎರಡನೆಯ ಅಧ್ಯಾಯ

೧. (ಎಲ್ಲದಕ್ಕೂ ಕಾರಣನಾದ) ಸವಿತೃ[1]ವು ಮೊದಲು ಮನಸ್ಸನ್ನೂ ಇಂದ್ರಿಯಗಳನ್ನೂ ತತ್ವವನ್ನು ತಿಳಿಯಬೇಕೆಂದು ಜೋಡಿಸಿ, ಅಗ್ನಿಯಲ್ಲಿರುವ ಜ್ಯೋತಿಯ (ರಹಸ್ಯವ)ನ್ನು ತಿಳಿದು, ಈ ಪೃಥಿವಿಯಿಂದ ತಾನು ಬೇರೆಯಾದನು.[2]

೨. ಸವಿತೃ ದೇವನ ದರ್ಶನವಾಗಿ ಸುವರ್ಗ್ಯೆಯುವೆಂಬ ಅಮೃತವು ದೊರೆಯಲೆಂದು ಮನಸ್ಸನ್ನು ಬಿಗಿಹಿಡಿದು, ಶಕ್ತಿಯಿದ್ದಷ್ಟೂ (ಪ್ರಯತ್ನಮಾಡುವೆವು).

೩. ಭೋಗ ಬೇಕು ಎನ್ನುತ್ತಿರುವ ಇಂದ್ರಿಯಗಳನ್ನು ಮನಸ್ಸಿನಿಂದ ಬಿಗಿಹಿಡಿದು, ಪ್ರಕಾಶಮಾನವಾದ ಅನಂತವಾದ ಜ್ಯೋತಿಯನ್ನು ಮನಸ್ಸಿನಿಂದ ಧ್ಯಾನವನ್ನು ಮಾಡುವವರನ್ನು ಸವಿತೃವು ಪವಿತ್ರಗೊಳಿಸುವನು.

೪. ಆ ಸವಿತೃ ದೇವನ ಮಹಿಮೆಯು ಬಹಳ ದೊಡ್ಡದು. ತಿಳಿದವರು ಸರ್ವವ್ಯಾಪಿಯೂ ಅನಂತನೂ ಸರ್ವಜ್ಞನೂ ಆದ ಆತನಿಗಾಗಿ ಮನಸ್ಸನ್ನೂ ಇಂದ್ರಿಯಗಳನ್ನೂ ನಿಯಮದಲ್ಲಿಡುವರು. (ಅವರಲ್ಲಿ) ಮಾರ್ಗವನ್ನು ಬಲ್ಲವನೊಬ್ಬನು ಮಾತ್ರ (ತತ್ವಪ್ರಾಪ್ತಿಗಾಗಿ) ಯಜ್ಞಗಳನ್ನು ಮಾಡುವನು.

೫. ಜ್ಞಾನಿಗಳ ಹಾದಿಯಲ್ಲಿ (ಹೋಗಿ) ನಮಃ ನಮಃ ಎನ್ನುತ್ತ, ಮನೋಬುದ್ಧಿಗಳನ್ನು ಸನಾತನ ಬ್ರಹ್ಮದಲ್ಲಿ ಸೇರಿಸುವೆನು.

---

1. ಸವಿತೃ: ಒಳಗಿದ್ದುದನ್ನು ಹೊರಗೆ ತರುವವನು.

2. ನೋಡುವವನು ದೃಕ್ಕು: ನೋಡಿಸಿಕೊಳ್ಳುವುದು ದೃಶ್ಯ. ಲೋಕವೆಂದರೆ ಈ ಎರಡೂ ಬೆರೆತು ಹೋಗಿರುವುದು. ಇದೆರಡನ್ನೂ ಬೇರೆಬೇರೆ ಮಾಡುವುದು ಹೇಗೆಂದರೆ, ಮನಸ್ಸನ್ನೂ ಇಂದ್ರಿಯಗಳನ್ನೂ ಬಿಗಿಹಿಡಿದರೆ ಎರಡೂ ಬೇರೆಬೇರೆಯಾಗುವುವು : ಒಳಗಿನ ದೃಕ್ಕಿನ ದರ್ಶನವಾಗುವುದು.

ವಿಶೇಷ ಕೀರ್ತಿ (ಯುಳ್ಳ ಆ ಬ್ರಹ್ಮವು) ಪ್ರಸನ್ನವಾಗಲಿ. ದಿವ್ಯಧಾಮ ಗಳಲ್ಲಿರುವ ಅಮೃತದ ಪುತ್ರರು ಯಾರು ಯಾರು ಉಂಟೋ ಅವರೆಲ್ಲರೂ ಕೇಳಲಿ.[1]

೬. ಅಗ್ನಿಯನ್ನು ಕಡೆಯುವ ಕಡೆ, ವಾಯುವನ್ನು ನಿರೋಧಿ ಸುವ ಎಡೆ, ಸೋಮವು ಹೊರಸೂಸುವ ಕಡೆ, ಮನಸ್ಸು ಪರಿಪೂರ್ಣ ವಾಗುವುದು.[2]

೭. ಎಲ್ಲಿ(ಗೆ ಹೋದರೆ) ಜನ್ಮ (ಮರಣ)ವನ್ನು ನಾಶಗೊಳಿಸ ಬಲ್ಲೆಯೋ, ಎಲ್ಲಿ (ಗೆ ಹೋದರೆ) ಹಿಂದಿನ ಕರ್ಮಗಳು ನಿನ್ನನ್ನು ಕ್ಲೇಶ ಪಡಿಸುವುದಿಲ್ಲವೋ, ಅಂತಹ ಸನಾತನ ಬ್ರಹ್ಮವನ್ನೂ ಸವಿತೃವನ್ನೂ ಸಾಕ್ಷಾತ್ಕರಿಸಿಕೊಂಡು ಸೇವಿಸಬೇಕು.

೮. ಶರೀರವನ್ನು ಎದೆ, ಕತ್ತು, ತಲೆಗಳು ಸಮವಾಗಿರುವಂತೆ ಮಾಡಿಕೊಂಡು, ಇಂದ್ರಿಯಾದಿಗಳನ್ನು ಮನಸ್ಸಿನಲ್ಲಿ ಸೇರಿಸಿ, ಬ್ರಹ್ಮ ವೆಂಬ ಹರಿಗೋಲಿನಿಂದ, ಭಯಂಕರವಾದ ಸಮಸ್ತ ಪ್ರವಾಹಗಳನ್ನೂ ವಿದ್ವಾಂಸನು ದಾಟಬೇಕು.[3]

೯ ಪ್ರಪಂಚದ ವ್ಯಾಪಾರಗಳನ್ನೆಲ್ಲ ನಿರೋಧಿಸಿ, ಪ್ರಾಣಗ ಳನ್ನು ಬಿಗಿ ಹಿಡಿದು, ಮೂಗಿನಿಂದ ನಿದಾನವಾಗಿ ಉಸಿರುಬಿಡಬೇಕು. ಎಚ್ಚರಿಕೆಯಿಂದ, ದುಷ್ಟಾಶ್ವಗಳಿಗೆ ಕಟ್ಟಿದ ಹಗ್ಗಗಳನ್ನು ಹಿಡಿಯುವಂತೆ, ವಿದ್ವಾಂಸನು ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು.

---

1. ಈ ಐದು ಮಂತ್ರಗಳೂ ಸಂಹಿತಾ ಭಾಗದಲ್ಲವೆ. ಅಲ್ಲಲ್ಲಿ ಬ್ರಾಹ್ಮಣ ಗಳಲ್ಲಿಯೂ ಯಜ್ಞಕ್ಕೆ ಸಂಬಂಧಪಟ್ಟಂತೆ ಇವುಗಳಿಗೆ ಅರ್ಥಮಾಡಿರುವುದೂ ಉಂಟು. ಇಲ್ಲಿ ಅಧ್ಯಾತ್ಮ ಯೋಗವನ್ನು ಹೇಳಲು ಈ ಮಂತ್ರಗಳನ್ನು ಹೇಳಲಾಗಿದೆ.

2. ಅಗ್ನಿ, ವಾಯು, ಸೋಮ ಎಂಬ ಈ ಮೂರರಿಂದ ಜ್ಞಾನಯೋಗ, ರಾಜಯೋಗ ಕರ್ಮಯೋಗಗಳ ಸಮನ್ವಯವನ್ನುಹೇಳಿದೆಯೆಂದು ಹಿರಿಯರು.

3. ಹೋಲಿಸಿ. ಸಮಕಾಯಶಿರೋಗ್ರೀವಂ—ಇತ್ಯಾದಿ—ಭ. ಗೀ. ಅ. ೬. ಶ್ಲೋ. ೧೩.

೧೦. ಸಮವಾಗಿ ಶುಚಿಯಾಗಿ, ಕಲ್ಲು, ಬೆಂಕಿ, ಮರಳು, ಶಬ್ದ, ಜಲಪ್ರವಾಹ ಮೊದಲಾದುವುಗಳೂ, ಪ್ರಬಲವಾದ ಗಾಳಿಯೂ ಇಲ್ಲದೆ, ಮನಸ್ಸಿಗೆ ಅನುಕೂಲವಾಗಿ, ಕಣ್ಣಿಗೆ ಹಿತವಾಗಿರುವ ಗುಹೆಯಲ್ಲಿ ಯೋಗವನ್ನು ಮಾಡಬೇಕು.

೧೧. ಮಂಜು, ಹೊಗೆ, ಬಿಸಿಲು, ಗಾಳಿ, ಬೆಂಕಿ, ಮಿಂಚುಹುಳು, ಮಿಂಚು, ಸ್ಫಟಿಕ, ಬೆಳುದಿಂಗಳು, ಇವು ಮೊದಲು ಕಾಣಿಸಿ ಅನಂತರ ಯೋಗಿಗೆ ಬ್ರಹ್ಮದರ್ಶನವಾಗುವುದು.

೧೨. ಯೋಗವು ಪೂರ್ಣವಾಗಿ, ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶ, ಎಂಬಿವು ಬೇರೆಯೆಂಬುದು ಗೊತ್ತಾಗಲು, ಆ ಯೋಗಿಗೆ ಶರೀರವು ಯೋಗಾಗ್ನಿಮಯವಾಗುವುದು. ಅಂತಹ ಶರೀರಕ್ಕೆ ರೋಗ ಜರಾ ಮೃತ್ಯುಗಳು ಒಂದೂ ಇಲ್ಲ.

೧೩. ಯೋಗವು ಸಿದ್ಧಿಯಾದ ಗುರುತುಗಳು ಇವು:—ದೇಹವು ಹಗುರವಾಗಿರುವುದು. ಆರೋಗ್ಯವಾಗಿರುವುದು. ಯಾವ ಚಾಪಲ್ಯವೂ ಇಲ್ಲದಿರುವುದು. ದೇಹದ ವರ್ಣವು ಪ್ರಸನ್ನವಾಗಿರುವುದು ಸ್ವರವು ಮನೋಹರವಾಗಿರುವುದು. ದೇಹದ (ಬೆವರು) ಗಂಧವು ಶುಭವಾಗಿರುವುದು. ಮೂತ್ರ ಪುರೀಷಗಳೂ ಸ್ವಲ್ಪವಾಗಿರುವುವು.

೧೪. ಮಣ್ಣು ಕಟ್ಟಿದ ಲೋಹಬಿಂಬವು ತೊಳೆದಮೇಲೆ ಕಾಂತಿಮಯವಾಗಿ ಬೆಳಗುವಂತೆ, ಆತ್ಮ ತತ್ವವನ್ನು ಕಂಡವನು ಶೋಕವನ್ನು ಕಳೆದುಕೊಂಡು ಕೃತಾರ್ಥನಾಗಿ ವಿರಾಜಿಸುವನು.

೧೫. ಯೋಗಿಯು ದೀಪದಂತೆ ಬೆಳಗುವ ಜೀವಾತ್ಮನನ್ನು ಕಂಡು, ಅಜವೂ ಧ್ರುವವೂ ಸರ್ವತತ್ವಗಳಲ್ಲಿ ಯಾವುದೂ ಅಲ್ಲದ್ದರಿಂದ ಪರಿಶುದ್ಧವೂ ಆದ ಬ್ರಹ್ಮತತ್ವವನ್ನು ಕಾಣುವನು. ಆಗ ಆ ಪರಮನನ್ನು ಅರಿತು ಸರ್ವಪಾಪಗಳಿಂದಲೂ ವಿಮುಕ್ತನಾಗುವನು.

೧೬. ಈ ಪರಮನು ಎಲ್ಲಾ ದಿಕ್ಕುಗಳನ್ನೂ ಪೂರ್ಣವಾಗಿ ತುಂಬಿರುವನು. ಆತನೇ ಎಲ್ಲರಿಗಿಂತ ಮೊದಲು ಹುಟ್ಟಿದ ಹಿರಣ್ಯಗರ್ಭನು! ಗರ್ಭದಲ್ಲಿರುವವನೂ ಆತನೇ! ಆತನೇ ಹುಟ್ಟಿದವನು.

ಆತನೇ ಹುಟ್ಟುವವನು. ಎಲ್ಲರ ಒಳಗೂ ಇರುವವನು ಆತನೇ! ಆತನು ಸರ್ವತೋಮುಖನು.

೧೭. ಯಾರು ಅಗ್ನಿಯಲ್ಲಿಯೂ ನೀರಿನಲ್ಲಿಯೂ ಇರುವನೋ, ಯಾರು ಈ ಲೋಕ ಲೋಕಗಳನ್ನೆಲ್ಲಾ ವ್ಯಾಪಿಸಿರುವನೋ, ಯಾರು ಔಷಧಿ ವನಸ್ಪತಿಗಳಲ್ಲೆಲ್ಲ ತುಂಬಿರುವನೋ ಆ ದೇವನಿಗೆ ನಮೋ ನಮಃ.

ಇಂತಿದು ಎರಡನೆಯ ಅಧ್ಯಾಯವು.

ಮೂರನೆಯ ಅಧ್ಯಾಯ

೧. ಯಾವನು ತಾನೊಬ್ಬನೇ ಮಾಯಾವಿಯಾಗಿ ಶಕ್ತಿಗಳಿಂದ ಸರ್ವಲೋಕಗಳನ್ನೂ ಆಳುವನೋ, ಯಾವನು ಉದಯ ಪ್ರಲಯಗಳೆರಡರಲ್ಲೂ ಒಬ್ಬನೇ ಆಗಿರುವನೋ, ಅಂತಹವನನ್ನು ಅರಿತವರು ಅಮೃತರಾಗುವರು.

೨. (ಆ ಬ್ರಹ್ಮವು) ಒಬ್ಬನೇ ಒಬ್ಬನಾದ ರುದ್ರನು[1]: (ಭಯಂಕರನು) : ಅವನು ಯಾರಿಗೂ ಎರಡನೆಯವನಲ್ಲ. ಆತನು ಈ ಲೋಕಗಳನ್ನು ಶಕ್ತಿಗಳಿಂದ ಆಳುವನು. ಎಲೈ ಜನಗಳೇ, (ಆತನು) ಎಲ್ಲರ ಒಳಗೂ ಇರುವನು. ಆತನು ಅಂತಕಾಲವು ಬರಲು ಎಲ್ಲವನ್ನೂ ತನ್ನೊಳಕ್ಕೆ ಎಳೆದುಕೊಳ್ಳುವನು. ಆತನು ಎಲ್ಲಾ ಭುವನಗಳನ್ನೂ ಸೃಷ್ಟಿಮಾಡಿ ಕಾಪಾಡುವನು.

೩. ಆ ಆತ್ಮನು ಎಲ್ಲೆಲ್ಲಿಯೂ ಕಣ್ಣುಗಳು, ಎಲ್ಲೆಲ್ಲಿಯೂ ಮುಖಗಳು, ಎಲ್ಲೆಲ್ಲಿಯೂ ಬಾಹುಗಳು, ಎಲ್ಲೆಲ್ಲಿಯೂ ಪಾದಗಳು ಉಳ್ಳವನು. ಆತನು ಭೂಮಿ ಅಂತರಿಕ್ಷಗಳನ್ನು ಸೃಷ್ಟಿಸುವ ಒಬ್ಬನೇ ದೇವನು. ಆತನು ತಿದಿಗಳಿಂದ (ಒತ್ತಿದಂತೆ) ಈ ತನ್ನ ಎರಡು ಕೈಗಳಿಂದ[2] ಉರಿಸುವನು.

---

1. ರುದ್ರನೆಂದರೆ ಇಲ್ಲಿ "ತನ್ನ ನಿಯಮಗಳನ್ನು ಮೀರಿದವರನ್ನು ಶಿಕ್ಷಿಸುವವನು' ಎಂಬರ್ಥ.

2. ಎರಡು ಕೈಗಳಿಂದ.—ಒಬ್ಬರು "ಜ್ಞಾನ ಕರ್ಮ ವಾಸನೆಗಳಿಗೆ ಅನುಗುಣವಾಗಿ" ಎನ್ನುತ್ತಾರೆ: ಇನ್ನೊಬ್ಬರು "ಧರ್ಮ—ಅಧರ್ಮಗಳಿಂದ" ಎನ್ನುತ್ತಾರೆ.

೪. ದೇವತೆಗಳನ್ನು ಸೃಜಿಸುವವನೂ ಕಾಪಾಡುವವನೂ ಯಾರೋ, ಆ ರುದ್ರನು ಪ್ರತಿಯೊಂದಕ್ಕೂ ನಾಥನು: ಆತನು ಮಹರ್ಷಿಯು. ಆತನು ಪೂರ್ವದಲ್ಲಿ ಹಿರಣ್ಯಗರ್ಭನನ್ನು ಸೃಷ್ಟಿಸಿದನು. ಆತನು ಶುಭವಾದ ಬುದ್ಧಿಯನ್ನು ಕೊಟ್ಟು ನಮ್ಮನ್ನು ಕಾಪಾಡಲಿ.

೫. ಎಲೈ ರುದ್ರನೆ, ವೇದಗಳನ್ನು ಕೊಟ್ಟು ಕಾಪಾಡಿದವನೆ, ನಿನ್ನ ಯಾವ ಅಘೋರವೂ ಪಾಪವಿನಾಶಕವೂ ಆದ ಶಿವವಾದ ರೂಪವು ಉಂಟೋ, ಆ ಪರಮ ಸುಖಕರವಾದ ರೂಪದಿಂದ ನಮ್ಮನ್ನು ಸುಖಿಗಳನ್ನಾಗಿ ಮಾಡು.

೬. ಎಲೈ ವೇದಗಳನ್ನು ಕೊಟ್ಟು ಕಾಪಾಡಿದವನೆ, ಎಸೆಯಬೇಕೆಂದು ಯಾವ ಬಾಣವನ್ನು ಕೈಯಲ್ಲಿ ಇಟ್ಟುಕೊಂಡಿರುವೆಯೋ, ಎಲೈ ಭಕ್ತಪಾಲಕನೆ, ಅದನ್ನು ಶಿವವನ್ನಾಗಿ ಮಾಡು. ಜಗತ್ತಾಗಿರುವ ನಿನ್ನ ರೂಪವನ್ನು ನಾಶಮಾಡಬೇಡ.[1]

(ಹೀಗೆ ತನ್ನ ಇಷ್ಟದೇವತಾರೂಪದಿಂದ ಪ್ರಣವವನ್ನು ಆರಾಧಿಸಿದ ಭಕ್ತನು, ಅದಕ್ಕಿಂತ ದೊಡ್ಡದಾದ ಬ್ರಹ್ಮವನ್ನು ಆರಾಧಿಸುತ್ತಾನೆ.)

೭. ಅನಂತರ, ಆಯಾ ದೇಹಗಳಿಗೆ ಸರಿಯಾಗಿ ಸರ್ವ ಭೂತಗಳಲ್ಲಿಯೂ ಮರೆಯಾಗಿ ಇರುವ, ಈ ವಿಶ್ವವನ್ನೆಲ್ಲಾ ಆವರಿಸಿಕೊಂಡಿರುವ ಎಲ್ಲದಕ್ಕಿಂತಲೂ ದೊಡ್ಡದಾದ, ಒಬ್ಬನೇ ಆದ ಆ ಒಡೆಯನನ್ನು ತಿಳಿದವರು ಅಮೃತರಾಗುವರು.

೮. (ಅಜ್ಞಾನವೆಂಬ) ಕತ್ತಲೆಯ ಆಚೆ ಇರುವ, ಆದಿತ್ಯನಂತೆ ಬೆಳಗುವ, ಆ ಮಹಾನ್ ಪುರುಷನನ್ನು ನಾನು ತಿಳಿದೆನು.[2] ಆತನನ್ನು

---

1. ರುದ್ರನು ಕೈಯಲ್ಲಿ ಹಿಡಿದಿರುವ ಬಾಣವು ಪ್ರಣವವು. ಅದನ್ನು ಉಪಾಸನಮಾಡುವವರಿಗೆ ನಿರ್ಗುಣವು ದೊರೆತು ಸಗುಣವಿಲ್ಲದಾಗುವುದು. ಆದರೆ, ಇಲ್ಲಿ ಸಗುಣವನ್ನು ಕೆಡಿಸದ ನಿರ್ಗುಣವು ನಮಗೆ ಲಭಿಸುವಂತೆ ಅನುಗ್ರಹಿಸು ಎಂದು ಹಿರಿಯರು.

2. ಇಲ್ಲಿ ನಾನು ಎಂದು ಉತ್ತಮಪುರುಷನನ್ನು ಪ್ರಯೋಗಿಸಿರುವುದನ್ನು ನೋಡಿ. ಈ ಮಂತ್ರವು ಸಂಹಿತೆಯಲ್ಲಿದೆ.

ತಿಳಿದರೇನೇ ಮೃತ್ಯುವನ್ನು ದಾಟುವುದು. ಅದನ್ನು ಬಿಟ್ಟು ಮೃತ್ಯುವನ್ನು ದಾಟಲು ಬೇರೊಂದು ಮಾರ್ಗವಿಲ್ಲ.

೯. ಯಾವುದರಿಂದ ಆಚೆಗೆ ಇನ್ನು ಏನೂ ಇಲ್ಲವೋ, ಯಾವುದಕ್ಕಿಂತ ಚಿಕ್ಕದೂ ಯಾವುದಕ್ಕಿಂತ ದೊಡ್ಡದೂ ಇನ್ನಿಲ್ಲವೋ, ವೃಕ್ಷದಂತೆ ಸ್ತಬ್ಧನಾಗಿ ಯಾವನು ದಿವದಲ್ಲಿ ನಿಂತಿರುವನೋ, ಆ ಪುರುಷನು ಈ ಸರ್ವವನ್ನೂ ತುಂಬಿರುವನು.

೧೦. ಅಲ್ಲಿಂದ ಆಚಿನದು ರೂಪವಿಲ್ಲದ್ದು : ಯಾವ ವ್ಯಸನವೂ ಇಲ್ಲದ್ದು : ಅದನ್ನು ಬಲ್ಲವರು ಅಮೃತರಾಗುವರು. ಇನ್ನು ಉಳಿದವರು ದುಃಖವನ್ನೇ ಹೊಂದುವರು.

೧೧. ಸರ್ವವ್ಯಾಪಿಯಾದ ಆ ಭಗವಂತನು ಎಲ್ಲರ ಮುಖ ಶಿರಸ್ಸು ಕಂಠಗಳೂ ತನ್ನದೇ ಆದವನು : ಎಲ್ಲ ಪ್ರಾಣಿಗಳ ಹೃದಯದಲ್ಲೂ ಇರುವನು. ಅದರಿಂದ ಆ ಶಿವನು ಎಲ್ಲೆಲ್ಲೂ ಇರುವನು.

೧೨. ಆ ಪುರುಷನು ಮಹಾನ್ ಪ್ರಭುವು : (ಆತನಿಗೆ ಪ್ರಭುವು ಯಾರೂ ಇಲ್ಲ.) ಜಗತ್ತಿನಲ್ಲಿರುವ ಚೇತನ (ಪ್ರಾಣಿ)ಗಳೆಲ್ಲವನ್ನೂ ವ್ಯಾಪಾರಮಾಡುವಂತೆ ಪ್ರೇರಿಸುವವನು ಆತನು. ಆತನು ಜ್ಯೋತಿಸ್ಸ್ವರೂಪನು : ಅವ್ಯಯನು. ಆತನು ಮನಸ್ಸುಮಾಡಿದರೆ ಅಮೃತವೆಂಬ ಈ ಪರಿಶುದ್ಧ ಪ್ರಾಪ್ತಿಯನ್ನು ಕೊಡುವನು.

೧೩. ಎಲ್ಲರಲ್ಲಿಯೂ ಇರುವ ಈ ಪುರುಷನು (ಅವರವರ ಅಂಗುಷ್ಟದಷ್ಟು ಮಾತ್ರ ಇದ್ದುಕೊಂಡು) ಜನರ ಹೃದಯದಲ್ಲಿ ಯಾವಾಗಲೂ ಇರುವನು. ಹೃದಯದಿಂದ, ಬುದ್ಧಿಯಿಂದ, ಮನಸ್ಸಿನಿಂದ, ಈತನನ್ನು ಉಪಾಸನಮಾಡುವುದು. ಇದನ್ನು ಬಲ್ಲವರು ಅಮೃತರಾಗುವರು.[1]

---

1. ಹೃದಾ, ಮನೀಷಾ, ಮನಸಾ, ಅಭಿಕ್ಲಪ್ತಃ—ಎಂಬುದನ್ನು ಹೃದಯದಿಂದ, ಬುದ್ಧಿಯಿಂದ, ಮನಸ್ಸಿನಿಂದ, ಪರಿಮಿತಗೊಂಡವನು ಎಂದು ಕೆಲವರು ಹೇಳುತ್ತಾರೆ. ಆದರೆ, ಆ ಪರಿಮಿತಿಯು ಉಪಾಸನಾರ್ಥವಾಗಿ ಎಂದು ನಾವು ಉಪಾಸನಮಾಡುವುದು ಎಂದು ಭಾಷಾಂತರಿಸಿದ್ದೇವೆ.

೧೪. (ಈ) ಪುರುಷನು ಸಾವಿರಾರು ತಲೆಗಳುಳ್ಳವನು. ಸಾವಿರಾರು ಕಣ್ಣುಗಳು, ಸಾವಿರಾರು ಕಾಲುಗಳು ಉಳ್ಳವನು. ಆತನು ಈ ಭೂಮಿಯನ್ನೆಲ್ಲಾ ಕಡೆಯಲ್ಲೂ ಆವರಿಸಿ ಅಲ್ಲಿಂದಾಚೆಗೂ ಹತ್ತು ಅಂಗುಲ ಇರುವನು.

೧೫. ಈಗ ಇರುವುದು, ಹಿಂದೆ ಆದುದು, ಮುಂದೆ ಆಗುವುದು ಎಲ್ಲವೂ ಪುರುಷನೇ! ಆತನು ಅಮೃತದ ಒಡೆಯನು: ಆದರೂ ಈ ಜಗತ್ತಿನ ರೂಪವಾಗಿ ಕಾಣಿಸಿಕೊಳ್ಳುವನು.[1]

೧೬. (ಈ ಪುರುಷನು) ಸರ್ವ ದಿಕ್ಕುಗಳಲ್ಲಿಯೂ ಪಾಣಿಪಾದ (ಕೈಕಾಲು)ಗಳುಳ್ಳವನು: ಸರ್ವದಿಕ್ಕುಗಳಲ್ಲಯೂ ಕಣ್ಣು, ತಲೆ, ಮೊಗಗಳುಳ್ಳವನು. ಸರ್ವದಿಕ್ಕುಗಳಲ್ಲಿಯೂ ಕಿವಿಗಳುಳ್ಳವನು. ಆತನು ಎಲ್ಲವನ್ನೂ ಆವರಿಸಿ ಇರುವನು.

೧೭. ಸರ್ವೇಂದ್ರಿಯಗಳ ವ್ಯಾಪಾರವನ್ನೂ ಮಾಡಿಸುವನು: ಆದರೂ ಯಾವ ಇಂದ್ರಿಯವೂ ಇಲ್ಲದವನು. ಆತನು ಎಲ್ಲದಕ್ಕೂ ಪ್ರಭುವು: ಈಶ್ವರನು–ಎಲ್ಲದಕ್ಕೂ ಆಶ್ರಯವನ್ನು ಕೊಡುವನು; ಎಲ್ಲರ ಮಿತ್ರನು.[2]

೧೮. ಹಂಸ (ರೂಪಿಯಾದ ಆತ್ಮ)ನು ನವದ್ವಾರಗಳ ಪುರವಾದ ದೇಹದಲ್ಲಿಯೂ ಹೊರಗೂ ಆಟವಾಡುತ್ತಿರುವನು. ಸ್ಥಾವರ, ಜಂಗಮ, (ಅಚರ_ಚರ ಎಂಬ) ಸರ್ವಲೋಕವೂ ಆತನ ವಶದಲ್ಲಿರುವುದು.

೧೯. ಆತನಿಗೆ ಪಾದಗಳಿಲ್ಲ: ಆದರೂ ಓಡುವನು. ಆತನಿಗೆ ಕೈಗಳಿಲ್ಲ: ಆದರೂ ಹಿಡಿಯುವನು. ಕಣ್ಣಿಲ್ಲ: ಆದರೂ ನೋಡುವನು. ಕಿವಿಯಿಲ್ಲ: ಆದರೂ ಕೇಳುವನು. ಆತನು ಬೇಕಾದ ವೇದ್ಯವನ್ನು

---

1. ಇವೆರಡೂ ಮಂತ್ರಗಳು ಋಗ್ವೇದದ ಪುರುಷಸೂಕ್ತದವು.

2. ಮೇಲಿನ ಶ್ಲೋಕವೂ ಈ ಶ್ಲೋಕದ ಪೂರ್ವಾರ್ಧವೂ ಗೀತೆಯಲ್ಲಿವೆ.

(ತಿಳಿಯಬೇಕಾದುದನ್ನು) ತಿಳಿಯುವನು. ಆದರೆ ಅವನನ್ನು ತಿಳಿದವರಿಲ್ಲ. ಆತನನ್ನು "ಎಲ್ಲರ ಮೊದಲಿಗನು, ಈ ದೇಹಗಳಲ್ಲೆಲ್ಲ ಇರುವ ಪುರುಷನು: ಆತನಿಗಿಂತ ದೊಡ್ಡವರಿಲ್ಲ" ಎನ್ನುವರು.

೨೦. ಅಣುವಿಗಿಂತಲೂ ಚಿಕ್ಕವನು, ದೊಡ್ಡದಕ್ಕಿಂತ ದೊಡ್ಡವನು, ಆದ ಆತ್ಮನು ಪ್ರತಿಯೊಂದು ಜಂತುವಿನ ಹೃದಯದಲ್ಲೂ ಇರುವನು. ಅಕ್ರತುವಾದವನು, (ಬೇಕು ಬೇಡ ಎಂಬ ಸಂಕಲ್ಪಗಳನ್ನು ಬಿಟ್ಟವನು) ಶೋಕವನ್ನು ನೀಗಿದವನು. ಸೃಷ್ಟಿಕರ್ತನ ಅನುಗ್ರಹವನ್ನು ಪಡೆದು ಆತನನ್ನು ಮಹಾರ್ಹ ಎಂದು, ಈಶನೆಂದು ಕಾಣುವನು.[1]

೨೧. ಬ್ರಹ್ಮವಾದಿಗಳು ಈತನನ್ನು ನಿತ್ಯನು, ಜನ್ಮ (ಮರಣ) ವನ್ನು ನಿರೋಧಿಸುವವನು ಎಂದು ಹೇಳುತ್ತಾರೆ. ತಾನು ಎಲ್ಲೆಲ್ಲಿಯೂ ತುಂಬಿದವನಾದ್ದರಿಂದ ಸರ್ವಗತನಾದ ಈ ಆತ್ಮನನ್ನು, ಸರ್ವಾತ್ಮನು, ಸನಾತನನು, ಅಜರನು ಎಂದು ನಾನು ಬಲ್ಲೆನು.

ಇಂತಿದು ಮೂರನೆಯ ಅಧ್ಯಾಯವು.

ನಾಲ್ಕನೆಯ ಅಧ್ಯಾಯ.

೧. ಮೊಟ್ಟಮೊದಲಲ್ಲಿ ಆತನು ಏಕನು: ವರ್ಣವಿಲ್ಲದವನು. (ಆದರೂ) ತನ್ನ ಶಕ್ತಿಗಳು ಪ್ರಕಟವಾದಾಗ ಅನೇಕ ವರ್ಣಗಳನ್ನು ಸೃಷ್ಟಿಸುವನು. ಅದೇಕೆ ಹಾಗೆ ಮಾಡುವನೋ ಅದು ಯಾರಿಗೂ ತಿಳಿಯದು. ಮತ್ತು ಕೊನೆಗೆ ಈ ವಿಶ್ವವನ್ನೇ ನಾಶಮಾಡುವನು. ಆ ದೇವನು ನಮಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ.

೨. ಆತನೇ ಅಗ್ನಿಯು: ಆತನೇ ಆದಿತ್ಯನು: ಆತನೇ ವಾಯುವು: ಆತನೇ ಚಂದ್ರನು: ಆತನೇ ಶುಕ್ರವು: ಆತನೇ ಬ್ರಹ್ಮವು: ಆತನೇ ಆಪವು: ಆತನೇ ಪ್ರಜಾಪತಿಯು.[2]

---

1. ಇದೇ ಮಂತ್ರ, ಕಠ ೨-೨೦ ಆಗಿ ಬಂದಿದೆ. ಪುಟ ೧೯೧ ನೋಡಿ.
2. ಈ ಮಂತ್ರವು ಸಂಹಿತೆಯಲ್ಲದೆ.

೩. ನೀನು ಸ್ತ್ರೀಯು: ನೀನು ಗಂಡುಸು: ನೀನು ಕುಮಾರನು: ನೀನೇ ಕುಮಾರಿಯು: ನೀನೇ ಮುದುಕನಾಗಿ ಕೋಲು ಹಿಡಿದು ನಡೆಯುವೆ. ನೀನು ವಿಶ್ವತೋಮುಖನಾಗಿ ಹುಟ್ಟುವೆ.

೪. ನೀಲಿಯ ಬಣ್ಣದ ಚಿಟ್ಟೆಯ ಹುಳುವೂ ನೀನೇ! ಕೆಂಪು ಕಣ್ಣಿನ ಗಿಣಿಯೂ ನೀನೇ! ನೀರನ್ನು ಒಳಗಿಟ್ಟುಕೊಂಡಿರುವ ಮೋಡವೂ, ಋತುಗಳೂ, ಸಮುದ್ರವೂ ನೀನೇ! ಆದಿಯಿಲ್ಲದವನೂ, ಕಾಲದೇಶಗಳನ್ನು ಮೀರಿದವನೂ ಆಗಿ ನೀನು ಇರುವೆ. ನಿನ್ನಿಂದಲೇ ಈ ಭುವನಭುವನಗಳೆಲ್ಲವೂ ಹುಟ್ಟಿವೆ.

೫. ಕೆಂಪು ಬಿಳುಪು ಕಪ್ಪು ಬಣ್ಣದ ಹೆಣ್ಣು ಆಡು ಒಂದು. ತನ್ನಂತೆಯೇ ಇರುವ ಎಷ್ಟೋ ಮರಿಗಳನ್ನು ಹಾಕಬಲ್ಲದು ಅದು. ಅದನ್ನು ಹೋತವೊಂದು ಅನುಸರಿಸಿಕೊಂಡು ಮಗ್ಗುಲಲ್ಲಿ ಇದೆ. ಭೋಗವಾದ ಮೇಲೆ ಅದನ್ನು ಹೋತವು ಬಿಟ್ಟುಹೋಗುತ್ತದೆ.[1]

೬. ಬಣ್ಣ ಬಣ್ಣದ ಗರಿಗಳಿರುವ ಎರಡು ಹಕ್ಕಿಗಳುಂಟು. ಅವು ಒಂದನ್ನೊಂದು ಬಿಟ್ಟಿರದ ಗೆಳೆಯರು. ಅವು ಒಂದೇ ಮರದಲ್ಲಿ ಇರುವುವು. ಅವುಗಳಲ್ಲಿ ಒಂದು ಸೀಯಾದ ಹಣ್ಣನ್ನು ತಿನ್ನುತ್ತಿದೆ. ಇನ್ನೊಂದು ತಿನ್ನದೆ ನೋಡಿಕೊಂಡಿದೆ.[2]

೭. ಒಂದೇ ವೃಕ್ಷದಲ್ಲಿ (ಪರಮನೊಡನೆ ಇದ್ದರೂ) ಜೀವನು, ಮೋಹಕ್ಕೆ ಸಿಕ್ಕಿ, ಪರವಶನಾಗಿ, (ಸುಖದುಃಖಗಳಲ್ಲಿ) ಮಗ್ನನಾಗಿ, ದುಃಖಪಡುತ್ತಿದ್ದಾನೆ. ಎಲ್ಲರಿಂದಲೂ ಪೂಜೆಗೊಳ್ಳುತ್ತ ಇನ್ನೊಬ್ಬನು

---

1. ಆಡು ಎನ್ನುವುದಕ್ಕೆ ಸಂಸ್ಕೃತದಲ್ಲಿ ಅಜ ಎಂದು. ಅಜ ಎಂದರೆ, ಅ ಜ–ಜನ್ಮವಿಲ್ಲದ್ದು ಎಂದೂ ಆಗುವುದು. ''ಈ ಮಂತ್ರವು, ಅಜಾ ಎನ್ನುವುದು ಪ್ರಕೃತಿಯನ್ನು, ಇನ್ನು ಉಳಿದ ಎರಡು ಅಜಗಳಲ್ಲಿ ಒಂದು ಜೀವಾತ್ಮ, ಇನ್ನೊಂದು ಪರಮಾತ್ಮ, ಆದರಿಂದ ಈ ಮಂತ್ರವು ಸಾಂಖ್ಯಶಾಸ್ತ್ರವನ್ನು ಕುರಿತು ಹೇಳುತ್ತದೆ'' ಎಂದೂ ಹೇಳುತ್ತಾರೆ.

2. ಇಲ್ಲಿ ಹೇಳಿರುವ ಎರಡು ಹಕ್ಕಿಗಳು ಜೀವ, ಪರಮರು. ವೃಕ್ಷವು ದೇಹ. ಜೀವವು ತನ್ನ ಕರ್ಮಫಲಗಳನ್ನು ಭೋಗಿಸುತ್ತಿದ್ದರೆ ಇನ್ನೊಂದು ಸುಮ್ಮನೆ ಕುಳಿತಿದೆ. ಪುಟ ೧೯೩ ನೋಡಿ.

ಪ್ರಭುವಾಗಿ ಕುಳಿತಿರುವುದನ್ನೂ ಅವನ ಮಹಿಮೆಯನ್ನೂ ಕಂಡವನು ಶೋಕರಹಿತನಾಗುವನು.[1]

೮. ಅಕ್ಷರವಾದ ಯಾವ ಪರಮಾಕಾಶದಲ್ಲಿ ವೇದಗಳೂ ದೇವತೆಗಳೂ ಇರುವರೋ, ಆತನನ್ನು ಅರಿಯದವನಿಗೆ, ವೇದಗಳಿಂದ ಏನು ಪ್ರಯೋಜನ? ಆತನನ್ನು ಅರಿತವರು ಆತನ ಜೊತೆಯಲ್ಲಿ ಇರುವರು.

೯. ವೇದಗಳು, ಯಜ್ಞಗಳು, ಕ್ರತುಗಳು, ವ್ರತಗಳು, ಭೂತ (ಹೋದದ್ದು) ಭವ್ಯ (ಆಗುವದು), ವೇದಗಳು ಏನೇನು ಹೇಳುವುವೋ ಅದೆಲ್ಲವನ್ನೂ, ಸರ್ವವನ್ನೂ ಆ ಮಾಯಿಯು ಸೃಜಿಸುವನು. ಈ ಸೃಷ್ಟಿಯಲ್ಲಿ ಇನ್ನೊಬ್ಬನು ಮಾಯೆಯ ಬಂಧನಕ್ಕೆ ಒಳಗಾಗಿರುವನು.

೧೦. ಮಾಯೆಯನ್ನು ಪ್ರಕೃತಿಯೆಂದೂ, ಮಾಯಿಯನ್ನು ಮಹೇಶ್ವರನೆಂದೂ ತಿಳಿಯಬೇಕು. ಈ ಜಗತ್ತೆಲ್ಲವೂ ಆತನ ಅಂಗಾಂಗಗಳಿಂದ ತುಂಬಿಹೋಗಿದೆಯೆಂದು ತಿಳಿಯಬೇಕು.

೧೧. ಪ್ರಕೃತಿಗೆ ನಾನಾ ಮುಖಗಳು: ಅವೆಲ್ಲವನ್ನೂ ತಾನೊಬ್ಬನೇ ನೋಡಿಕೊಳ್ಳುವವನು ಯಾವನೋ, ಯಾವನಲ್ಲಿ ಈ ಪ್ರಕೃತಿಯೆಲ್ಲವೂ ತನ್ನ ನಾನಾ ರೂಪಗಳನ್ನು ವಹಿಸುವುದೋ, ಯಾವನಲ್ಲಿ ಈ ಪ್ರಕೃತಿಯೆಲ್ಲವೂ ಲಯವಾಗುವುದೋ, ಆ ಈಶ್ವರನನ್ನು, ವರಪ್ರದಾನಮಾಡಬಲ್ಲ, ಹೊಗಳಿಸಿಕೊಳ್ಳುವುದಕ್ಕೆ ಯೋಗ್ಯನಾದ ಆ ದೇವನನ್ನು, ತಿಳಿದವನು ಪರಮವಾದ ಶಾಂತಿಯನ್ನು ಪಡೆಯುವನು.

೧೨. ದೇವತೆಗಳನ್ನು ಸೃಷ್ಟಿಸಿ ಕಾಪಾಡುವವನು ಯಾರೋ, ಎಲ್ಲದಕ್ಕೂ ಒಡೆಯನಾದ ರುದ್ರನೂ ಮಹರ್ಷಿಯೂ ಯಾರೋ, ಆ ಹಿರಣ್ಯಗರ್ಭನು ಹುಟ್ಟುವುದನ್ನು ನೋಡಿರಿ. ಆ ದೇವನು ನಮಗೆ ಶುಭವಾದ ಬುದ್ಧಿಯನ್ನು ಕೊಡಲಿ.

---

1. ಈ ಎರಡು ಮಂತ್ರಗಳೂ ಜೀವ ಪರಮರು ಬೇರೆ ಬೇರೆಯೆಂದು ಹೇಳುತ್ತವೆಯೆಂದು ಒಂದು ಸಿದ್ಧಾಂತ. ಜೀವ ಪರಮರು ಒಂದೇ ಎಂದು ಇನ್ನೊಂದು ಸಿದ್ಧಾಂತ.

೧೩. ಯಾರು ದೇವತೆಗಳಿಗೆ ಅಧಿಪತಿ ? ಯಾವನಲ್ಲಿ ಲೋಕಗಳೆಲ್ಲ ಆಶ್ರಯವನ್ನು ಪಡೆದಿವೆ ? ಈ ಲೋಕದ ಎರಡು ಕಾಲಿನ ನಾಲ್ಕು ಕಾಲಿನ ಪ್ರಾಣಿಗಳನ್ನೆಲ್ಲ ಆಳುವವನು ಯಾರು ? ಅಂತಹ ಸುಖಸ್ವರೂಪನಾದ ದೇವನಿಗೆ ಹವಿಸ್ಸನ್ನು ಕೊಟ್ಟು ಆರಾಧಿಸೋಣ.[1]

೧೪. ಸೂಕ್ಷ್ಮಕ್ಕಿಂತಲೂ ಸೂಕ್ಷ್ಮನಾದ, ಕಲಿಲ[2]ದ ಮಧ್ಯೆ ಇದ್ದುಕೊಂಡು ವಿಶ್ವದ ಅನೇಕ ರೂಪಗಳನ್ನು ಸೃಷ್ಟಿಸುವವನಾದ, ವಿಶ್ವವನ್ನೆಲ್ಲ ಬಳಸಿಕೊಂಡಿರುವವನಾದ ಶಿವನನ್ನು ತಿಳಿದರೆ ಪರಮ ಶಾಂತಿಯನ್ನು ಹೊಂದುವನು.

೧೫. ಆತನೇ (ಸ್ಥಿತಿ) ಕಾಲದಲ್ಲಿ ಭುವನಗಳನ್ನೆಲ್ಲಾ ಕಾಪಾಡುವನು. ಸರ್ವ ಭೂತಗಳಲ್ಲಿಯೂ ಗುಟ್ಟಾಗಿ ಇದ್ದು ಎಲ್ಲವನ್ನೂ ಆಳುವವನು ಆತನು. ಬ್ರಹ್ಮರ್ಷಿಗಳೂ ದೇವತೆಗಳೂ ಆತನಲ್ಲಿ ಸೇರಿಹೋಗುವರು. ಆತನನ್ನು ಹಾಗೆಂದು ತಿಳಿದರೆ ಮೃತ್ಯುಪಾಶಗಳು ಕಳಚುವುವು.

೧೬. ತುಪ್ಪಕ್ಕಿಂತಲೂ ಸೂಕ್ಷ್ಮವಾದ ಮಂಡ[3]ದಂತೆ ಅತಿ ಸೂಕ್ಷ್ಮನಾಗಿ ಸರ್ವಭೂತಗಳಲ್ಲಿಯೂ ಗುಟ್ಟಾಗಿ ಇರುವ ಶಿವನನ್ನು ತಿಳಿದರೆ, ವಿಶ್ವವನ್ನೆಲ್ಲಾ ಬಳಸಿಕೊಂಡಿರುವ ಆ ದೇವನೊಬ್ಬನನ್ನು ತಿಳಿದರೆ, ಸರ್ವಪಾಶಗಳೂ ಬಿಡುವುವು.

೧೭. ಈ ದೇವನು ವಿಶ್ವಕರ್ಮನು. (ಎಲ್ಲಾ ಕೆಲಸಗಳನ್ನು ಮಾಡುವವನೂ ಇವನೇ !) ಈತನು ಮಹಾತ್ಮನು (ಜೀವಾತ್ಮನಿಗಿಂತ ದೊಡ್ಡವನು) : ಯಾವಾಗಲೂ ಜನರ ಹೃದಯದಲ್ಲಿ ಇರುವವನು.

---

1. ಈ ಮಂತ್ರವೂ ಸಂಹಿತೆಯದು.

2. ಕಲಲ=ಮೊಟ್ಟೆಯಲ್ಲಿನ ರಸದಂತೆ ವಿಶ್ವವನ್ನೆಲ್ಲ ಒಳಗೊಂಡಿರುವ ರಸ.

3. ಮಂಡ=ತುಪ್ಪವನ್ನು ಕೊಡುವುದು ಬೆಣ್ಣೆ. ಕಡೆದಾಗ ಆ ಬೆಣ್ಣೆಯನ್ನು ಕೊಡುವ ರಸ ಮಂಡ.

ಹೃದಯದಿಂದಲೂ ಬುದ್ಧಿಯಿಂದಲೂ ಮನಸ್ಸಿನಿಂದಲೂ ಈತನನ್ನು ಉಪಾಸನಮಾಡಬೇಕು. ಈತನನ್ನು ಬಲ್ಲವರು ಅಮೃತರಾಗುವರು.[1]

೧೮. ತಮಸ್ಸು (ಅಜ್ಞಾನ) ಕಳೆದಮೇಲೆ, ಹಗಲೂ ಇಲ್ಲ: ರಾತ್ರಿಯೂ ಇಲ್ಲ. ಸತ್ ಇಲ್ಲ: ಅಸತ್ ಇಲ್ಲ. ಆಗ ಇರುವುದು ಕೇವಲ ಶಿವನೊಬ್ಬನೇ! ಆತನು ಅಕ್ಷರನು. ಆತನೇ ಸವಿತೃವಿನ ಪೂಜಾರ್ಹವಾದ (ತೇಜಸ್ಸು). ಪ್ರಾಚೀನ ಕಾಲದ ಪ್ರಜ್ಞೆಯು[2] ಆತನಿಂದಲೇ ಬರುವುದು.

೧೯. ಈತನನ್ನು ಮೇಲೆ ಆಗಲಿ, ಅಡ್ಡವಾಗಿ ಆಗಲಿ, ನಡುವೆ ಯಾಗಲಿ, ಯಾರೂ ಹಿಡಿಯಲಾರರು. ಆತನಿಗೆ ಸಮನಾದವರು ಯಾರೂ ಇಲ್ಲ. ಆತನ ಹೆಸರು ದೊಡ್ಡ ಯಶಸ್ಸು.

೨೦. ನಮ್ಮ ಕಣ್ಣೆದುರಿಗೆ ನಿಲ್ಲುವ ರೂಪವು ಆತನಿಗಿಲ್ಲ. ಆತನನ್ನು ಕಣ್ಣಿಂದ ಕಂಡವರು ಯಾರೂ ಇಲ್ಲ. ಹೃದಯದಲ್ಲಿ ಇರುವ ಆತನನ್ನು ಹೃದಯದಿಂದ ಮನಸ್ಸಿನಿಂದ ಹೀಗೆ ತಿಳಿದವರು ಅಮೃತ ರಾಗುವರು.

೨೧. ಎಲ್ಲರೂ ಈತನನ್ನು ಅಜಾತನು–ಜನ್ಮವಿಲ್ಲದವನು ಎಂದು ಭಯದಿಂದ ಆಶ್ರಯಿಸುವರು. ರುದ್ರ, ನಿನ್ನ ದಕ್ಷಿಣಮುಖ[3] ವುಂಟಲ್ಲಾ, ಅದರಿಂದ ಯಾವಾಗಲೂ ನನ್ನನ್ನು ಕಾಪಾಡು.

೨೨. ನಮ್ಮ ಮಕ್ಕಳನ್ನು ನೋಯಿಸಬೇಡ. ನಮ್ಮ ಮೊಮ್ಮಕ್ಕಳನ್ನು ನೋಯಿಸಬೇಡ. ನಮ್ಮ ಆಯುಸ್ಸನ್ನು ಕಳೆಯ ಬೇಡ. ನಮ್ಮ ಹಸುಗಳನ್ನೂ ಕುದುರೆಗಳನ್ನೂ ಗೋಳಾಡಿಸಬೇಡ. ಎಲೈ ರುದ್ರನೆ, ನಿನ್ನ ಕೋಪದಲ್ಲಿ ನಮ್ಮ ವೀರರನ್ನು ಕೊಲ್ಲಬೇಡ.

---

1. ಇದೇ ಉಪನಿಷತ್ತಿನ ೩–೩, ಮಂ–೧೩ ನೋಡಿ. ಪುಟ ೮೬.

2. ಬ್ರಹ್ಮ ವಿದ್ಯೆಯನ್ನು ಪ್ರಾಚೀನ ಕಾಲದ ಪ್ರಜ್ಞೆ–ಪುರಾಣೀ ಪ್ರಜ್ಞಾ ಎನ್ನುತ್ತಾರೆ.

3. ದಕ್ಷಿಣಮುಖ=ರಕ್ಷಣಾ ಪರವಾದ ಮುಖ.

ಹಪಿಸ್ಸನ್ನು ಯಾವಾಗಲೂ ಹೀಗೆಯೇ ಕೊಡುತ್ತ ನಿನ್ನನ್ನು ಆರಾಧಿಸುವೆವು.[1]

ಇಂತಿದು ನಾಲ್ಕನೆಯ ಅಧ್ಯಾಯವು.

ಐದನೆಯ ಅಧ್ಯಾಯ

೧. ಅಕ್ಷರವೂ ಅನಂತವೂ ಗೂಢವೂ ಆದ ಪರಬ್ರಹ್ಮದಲ್ಲಿ ವಿದ್ಯೆ-ಅವಿದ್ಯೆ ಎರಡೂ ಇವೆ. ಅದರ ಅವಿದ್ಯೆಯು ಕ್ಷರವು (ಶಾಶ್ವತವಲ್ಲದ್ದನ್ನು ಹೇಳುವುದು) ವಿದ್ಯೆಯು (ಅಮೃತವನ್ನು ಕುರಿತು ಹೇಳುವುದು) ಆ ವಿದ್ಯಾ-ಅವಿದ್ಯಾ ಎರಡನ್ನೂ ಆಳುವವನು ಬೇರೆಯಾಗಿರುವನು.

೨. ತಾನೊಬ್ಬನೇ ಆಗಿದ್ದರೂ (ಪ್ರಕೃತಿಯ ಯೋನಿ ಯೋನಿಯನ್ನೂ ನಾನಾ ಯೋನಿಗಳನ್ನೂ (ಅಲ್ಲಿ ಹುಟ್ಟುವ) ಸರ್ವ ರೂಪಗಳನ್ನೂ ಆತನೇ ನೋಡಿಕೊಳ್ಳುವನು. ಮೊಟ್ಟ ಮೊದಲು ಹುಟ್ಟಿದ ಸರ್ವಜ್ಞನಾದ ಹಿರಣ್ಯಗರ್ಭನು ಹುಟ್ಟುವುದನ್ನು ಆತನು ನೋಡುವನು. ಆತನಿಗೆ ಜ್ಞಾನಗಳನ್ನು ಕೊಟ್ಟು ಕಾಪಾಡುವನು.

೩. ಒಂದೊಂದು ಗುಂಪನ್ನು ಬಹುವಾಗಿ ಮಾಡುವವನೂ ಅವನೇ! (ಹಾಗೆಯೇ) ಆ ದೇವನು ಈ ವಿಶ್ವವೆಂಬ ಕ್ಷೇತ್ರದಲ್ಲಿ (ಇರುವುದನ್ನೆಲ್ಲ) ಸಂಹಾರಮಾಡುವನು. ಮತ್ತೆ ಲೋಕಪಾಲರನ್ನು ಸೃಷ್ಟಿಸಿ, ಆ ಮಹಾತ್ಮನಾದ ಈಶ್ವರನು ಸರ್ವಾಧಿಪತ್ಯವನ್ನು ಮಾಡುವನು.

೪. ಸೂರ್ಯನು ಹೇಗೆ ಎಲ್ಲಾ ದಿಕ್ಕುಗಳನ್ನೂ ಮೇಲೆ ಕೆಳಗೆ ಅಡ್ಡವಾಗಿ ಬೆಳಗುತ್ತಾ ತಾನೂ ವಿರಾಜಿಸುವನೋ, ಹಾಗೆಯೇ ಭಗವಂತನೂ ಪೂಜ್ಯನೂ ಆದ ಆ ದೇವನೂ ಪ್ರಕೃತಿಯಲ್ಲಿ ಆದ ಎಲ್ಲ ಸ್ವಭಾವಗಳನ್ನೂ ತಾನೇ ನೋಡಿಕೊಳ್ಳುವನು.

---

1. ಈ ಮಂತ್ರವು ಸಂಹಿತೆಯಲ್ಲಿದೆ.

೫. ಪ್ರಕೃತಿಯನ್ನೂ ಪಡೆಯುವ ಆತನು (ಪ್ರಕೃತಿಯಿಂದಾದ) ಸ್ವಭಾವಗಳನ್ನೆಲ್ಲಾ ಪಕ್ವಮಾಡುವನು : ಪಕ್ವವಾಗಬೇಕಾದ ಸಮಸ್ತವನ್ನೂ ಹಣ್ಣುಮಾಡುವನು. ಈ ವಿಶ್ವವನ್ನೆಲ್ಲಾ ಆತನೇ ನೋಡಿಕೊಳ್ಳುವನು. ಗುಣಗಳೆಲ್ಲವನ್ನೂ ಆತನೇ (ಹೀಗೆ ಹೀಗೆ ಇರಬೇಕು ಎಂದು) ವಿನಿಯೋಗಿಸುವನು.

೬. ಆತನು ವೇದಗಳ ರಹಸ್ಯಗಳನ್ನು ಪ್ರಕಾಶಿಸುವ ಉಪನಿಷತ್ತುಗಳಲ್ಲಿ ಗೂಢವಾಗಿರುವನು. ವೇದಗಳ ಮೂಲವಾದ ಆತನನ್ನು ಚತುರ್ಮುಖ ಬ್ರಹ್ಮನು ಬಲ್ಲನು. ಹಿಂದೆ ದೇವತೆಗಳು ಋಷಿಗಳು ಯಾರು ಯಾರು ಆತನನ್ನು ತಿಳಿದರೋ ಅವರೆಲ್ಲ ತನ್ಮಯರೂ ಅಮೃತರೂ ಆದರು.

(ಈ ಮಂತ್ರದಲ್ಲಿ ಜೀವನನ್ನು ಕುರಿತು ಹೇಳುತ್ತಾರೆ.)

೭. ಯಾವನು ಗುಣಗಳಿಗೆ ವಶನಾಗಿ, ಫಲವತ್ತಾದ ಕರ್ಮಗಳನ್ನು ಮಾಡಿ, ತಾನು ಮಾಡಿದ ಆಯಾ ಕರ್ಮಗಳ ಫಲವನ್ನು ಅನುಭವಿಸುವನೋ, ಆ ಜೀವನು ಗುಣತ್ರಯ ಸಂಬಂಧವುಳ್ಳವನು: (ದೇವಯಾನ ಪಿತೃಯಾನ ಹೀನಯಾನಗಳೆಂಬ) ಮೂರು ಮಾರ್ಗಗಳಲ್ಲಿ, ಪ್ರಾಣವನ್ನು ಹಿಡಿದು, ತನ್ನ ಕರ್ಮಗಳಿಂದ ನಾನಾ ರೂಪಗಳನ್ನು ಪಡೆಯುತ್ತ ಸಂಚರಿಸುತ್ತಿರುವನು.

೮. ಆ ಪರಮನು ಅಂಕುಶದ ಕೊನೆಯಂತೆ ಸೂಕ್ಷ್ಮನಾದರೂ, ಸೂರ್ಯನಂತೆ ಪ್ರಕಾಶಮಾನನಾದರೂ, ತಾನೇ ಹೃದಯದಲ್ಲಿ ಇರುವುದರಿಂದ ಅಂಗುಷ್ಠಮಾತ್ರನಾಗಿ, ಬುದ್ಧಿಯ ಗುಣದಿಂದ ಸಂಕಲ್ಪ ಅಹಂಕಾರ ಸಹಿತನಾಗಿರುವ ಜೀವನಾಗಿ, ಅನ್ಯನಾದಂತೆ ಕಾಣುವನು.

೯. ಒಂದು ಕೂದಲನ್ನು ನೂರು ಪಾಲಾಗಿ ಸೀಳಿದರೆ, ಆ ಒಂದು ಪಾಲನ್ನು ಮತ್ತೆ ನೂರಾಗಿ ಸೀಳಿದರೆ, ಎಷ್ಟಾಗುವುದೋ ಅಷ್ಟು ಮಾತ್ರವೇ ಆ ಜೀವನು ಎಂದು ತಿಳಿಯಬೇಕು. ಆದರೂ ಆತನು ಅನಂತನಾಗಬಲ್ಲನು.

೧೦. ಈ ಜೀವನು ಹೆಣ್ಣಲ್ಲ: ಗಂಡಲ್ಲ: ನಪುಂಸಕನಲ್ಲ. ಯಾವ ಯಾವ ಶರೀರವನ್ನು ಹೊಂದುವನೋ ಅವನು ಅದನ್ನು ತಾನು ಎಂದು ಕೊಳ್ಳುವನು.

೧೧. ಅನ್ನಪಾನಗಳಿಂದ ದೇಹವು ಬೆಳೆಯುವಂತೆ, ಸಂಕಲ್ಪ, ಸಂಯೋಗ, ದೃಷ್ಟಿ, ಮೋಹಗಳಿಂದ, ಜೀವನು ನಾನಾ ಯೋನಿಗಳಲ್ಲಿ ಕ್ರಮ ಕ್ರಮವಾಗಿ, ತನ್ನ ಕರ್ಮಕ್ಕನುಸಾರವಾಗಿ, ಜನ್ಮಗಳನ್ನು ಪಡೆಯುವನು.

೧೨. ಜೀವನು ತನ್ನ ಗುಣಗಳು, ತಾನು ಮಾಡಿದ ಕರ್ಮ ಗುಣಗಳು, ಮನಸ್ಸಿನಲ್ಲಿರುವ ಗುಣಗಳು, ಇವುಗಳಿಗೆ ಅನುಸಾರವಾಗಿ ಸ್ಥೂಲ ಸೂಕ್ಷ್ಮಗಳಾದ ಬಹುರೂಪಗಳನ್ನು ಪಡೆಯುವನು. ಅವು ಗಳನ್ನು ಗೊತ್ತುಮಾಡುವವನು ಇನ್ನೊಬ್ಬನೂ ಇರುವನು.

೧೩. (ಆತನು) ಆದಿ ಅಂತಗಳಿಲ್ಲದವನಾಗಿ, ಕಲಿಲ (ರಸ)ದ ನಡುವೆ ಇದ್ದುಕೊಂಡು, ಅನೇಕ ರೂಪವಾದ ವಿಶ್ವವನ್ನು ಸೃಷ್ಟಿಸು ವನು. ಈತನು ವಿಶ್ವವನ್ನೆಲ್ಲಾ ಬಳಸಿರುವ ಏಕನು. ಈ ದೇವ(ಪರಮ) ನನ್ನು ತಿಳಿದರೆ ಸರ್ವಪಾಶಗಳೂ ಕಳಚಿಕೊಳ್ಳುವುವು.

೧೪. ಈತನು ಭಾವ (ಚೇತನ) ಅಭಾವ (ಅಚೇತನ) ಗಳೆ ರಡನ್ನೂ ಮಾಡುವ ಶಿವನು. ಈತನಿಗೆ ನಾಮರೂಪಗಳಿಲ್ಲವಾದುದ ರಿಂದ ಕೇವಲ ಶುದ್ಧವಾದ ಭಾವದಿಂದ ಮಾತ್ರ ಈತನನ್ನು ಹಿಡಿಯ ಬೇಕು. ಕಲಾ (ಮಾನವನ ಸೃಷ್ಟಿ), ಸರ್ಗ (ದೇವ ಸೃಷ್ಟಿ) ಎರಡಕ್ಕೂ ಕಾರಣನಾದ ಈ ಪರಮನನ್ನು ಅರಿತವರು ಮತ್ತೆ ಜನ್ಮವನ್ನು ಪಡೆಯು ವುದಿಲ್ಲ.[1]

ಇಂತಿದು ಐದನೆಯ ಅಧ್ಯಾಯವು.

---

1. ಭಾಗವತದಲ್ಲಿ ಹೇಳುವ ಸರ್ಗ ವಿಸರ್ಗಗಳನ್ನು ಕುರಿತು ಚಿಂತಿಸಿ.

ಆರನೆಯ ಅಧ್ಯಾಯ

೧. ಈ ಬ್ರಹ್ಮ ಚಕ್ರ (ವಿಶ್ವ) ವನ್ನು ಆಡಿಸುವ ಶಕ್ತಿಯನ್ನು ಬಲ್ಲವರು ಕೆಲವರು ಸ್ವಭಾವವೆಂದೂ, ಭ್ರಾಂತಿಗೊಂಡವರು ಕಾಲವೆಂದೂ ಹೇಳುವರು. ಆದರೆ (ಅದು ಯಾವುದೂ ಅಲ್ಲ) ಆ ಪರಮನ ಮಹಿಮೆ.

೨. ಈ ಸರ್ವವನ್ನೂ ಯಾವನು ಆವರಿಸಿರುವನೋ ಆತನು ಸರ್ವಜ್ಞನು : ಕಾಲಕಾಲನು : ಗುಣಗಳ ಒಡೆಯನು : ಸರ್ವವನ್ನೂ ಸಂಪೂರ್ಣವಾಗಿ ಬಲ್ಲವನು. ಅದರಿಂದಲೇ ಆತನು ಕರ್ಮಗಳಿಗೆಲ್ಲ ನಾಥನು. ಆತನೇ ಪೃಥಿವೀ ಅಪ್ಪು ತೇಜಸ್ಸು ವಾಯು ಆಕಾಶ(ಗಳೆಂಬ ಪಂಚಭೂತ)ಗಳಾಗಿರುವನು ಎಂದು ಚಿಂತಿಸಬೇಕು.

೩. ಸೃಷ್ಟಿಯೆಂಬ ಕರ್ಮವನ್ನು ಮಾಡಿ, ಮತ್ತೆ ಪುರುಷತತ್ವವನ್ನು ಪ್ರಕೃತಿತತ್ವದೊಡನೆ ಜೋಡಿಸುವನು. (ಅವಿದ್ಯೆಯೆಂಬ) ಒಂದು, (ಧರ್ಮಾಧರ್ಮಗಳೆಂಬ) ಎರಡು, (ಗುಣಗಳೆಂಬ) ಮೂರು, (ಅಷ್ಟ ಮೂರ್ತಿಗಳೆಂಬ) ಎಂಟು, ಇವುಗಳ ಜೊತೆಗೆ ಕಾಲವನ್ನೂ ಸೂಕ್ಷ್ಮವಾದ ಆತ್ಮಗುಣ (ವೆಂಬ ಅವರವರ ಯೋಗ್ಯತೆ) ಯನ್ನೂ ಸೇರಿಸಿ ತಾನು ಹಿಂದೆ ಮರೆಯಲ್ಲಿ ಇರುವನು.

೪. ಗುಣಗಳಿಂದ ಪ್ರೇರಿತನಾಗಿ ತಾನು ಮಾಡುವ ಕರ್ಮಗಳನ್ನೆಲ್ಲಾ ಅವುಗಳ ಫಲಗಳೊಡನೆ ಯಾರು ಆ ದೇವನಿಗೆ ಒಪ್ಪಿಸುವನೋ, ಅವನಿಗೆ ಕರ್ಮಫಲಗಳು ಇಲ್ಲವಾಗಿ, ಅವನು ಮಾಡಿದ ಕರ್ಮವೆಲ್ಲವೂ ನಾಶವಾಗುವುದು. ಕರ್ಮಕ್ಷಯವಾಗಲು ಅವನು ನಿಜವಾಗಿಯೂ ಬೇರೆಯೇ ಆಗುವನು.

೫. ವಿಶ್ವದ ರೂಪನಾಗಿ, ಭೂತ ಭೂತಕ್ಕೂ ಕಾರಣನಾಗಿ, ಹೊಗಳಿಸಿಕೊಳ್ಳಲು ಅರ್ಹನಾಗಿ, ತನ್ನ ಚಿತ್ತದಲ್ಲಿರುವ ಆ ಪರಮನನ್ನು ಮೊದಲು ಉಪಾಸನ ಮಾಡಬೇಕು. ಅನಂತರ, ಎಲ್ಲಕ್ಕೂ ಆದಿಯಾಗಿ, ಸಂಯೋಗಕ್ಕೆ ಕಾರಣನಾಗಿ, ತ್ರಿಕಾಲಗಳಿಂದ ಆಚೆ ಇರುವ, ಸಂಪೂರ್ಣನಾದ ಆತನನ್ನು ಕಾಣಲಾದೀತು.

೬. ಆತನು ಸಂಸಾರವೃಕ್ಷ, ಕಾಲ, (ನಾಮ) ರೂಪಗಳು ಇವುಗಳಿಂದ ಆಚೆನವನು. ಆತನಿಂದ ಈ ಜಗತ್ತು ತರಂಗ ತರಂಗ ವಾಗಿ ಬರುತ್ತಲೇ ಇರುವುದು. ಆತನು ಸಮಸ್ತ ಧರ್ಮಗಳಿಗೂ ಸ್ಥಾನವು. ಆತನು ಸರ್ವ ಪಾಪಗಳನ್ನೂ ತಳ್ಳಿಹಾಕಬಲ್ಲವನು. ಯಾವುದು ಯಾವುದು ಉತ್ತಮವಾದುದೋ ಅದೆಲ್ಲಕ್ಕೂ ಆತನು ಒಡೆಯನು. ಅಮೃತನಾದ ಆತನು ವಿಶ್ವವೆಲ್ಲ ಆತನ ಸ್ಥಾನವೇ ಆದರೂ ಪ್ರತಿಯೊಬ್ಬನ ಹೃದಯದಲ್ಲಿ(ಯೂ) ಇರುವನು. ಆತನನ್ನು ತಿಳಿದು (ಕೃತಾರ್ಥನಾಗಬೇಕು.)

೭. ಈಶ್ವರರಿಗೆಲ್ಲಾ ಶ್ರೇಷ್ಠನಾದ ಆ ಮಹೇಶ್ವರನನ್ನು, ದೇವತೆಗಳಿಗೆಲ್ಲಾ ಶ್ರೇಷ್ಠನಾದ ಆ ದೇವನನ್ನು, ಒಡೆಯರಿಗೆಲ್ಲಾ ಮೇಲನ ಒಡೆಯನಾದ ಆ ಪೂಜ್ಯನಾದ ಭುವನೇಶ್ವರನನ್ನು ಪಡೆಯೋಣ.

೮. ಆತನಿಗೆ ಕಾರ್ಯವಿಲ್ಲ: ಕರಣವಿಲ್ಲ. ಆತನಿಗೆ ಸಮರಿಲ್ಲ: ಆತನಿಗಿಂತ ಅಧಿಕರಿಲ್ಲ. ಆತನ ಶಕ್ತಿಯು ದೊಡ್ಡದು: ನಾನಾವಿಧ ವಾದುದು: ಜ್ಞಾನ, ಬಲ, ಕ್ರಿಯಾ, ಮೂರು ಆತನಿಗೆ ಸಹಜವಾದವು ಎಂದು ಕೇಳುತ್ತೇವೆ.

೯. ಲೋಕದಲ್ಲಿ ಆತನನ್ನು ಆಳುವವನು ಯಾರೂ ಇಲ್ಲ. ಆತನ ಮೇಲೆ ಅಧಿಕಾರ ಮಾಡುವವನೂ ಇಲ್ಲ. ಆತನಿಗೆ ಯಾವ ಗುರುತೂ ಇಲ್ಲ. ಆತನು ಎಲ್ಲದಕ್ಕೂ ಕಾರಣನು. ಕರಣ (ಇಂದ್ರಿಯ) ಗಳ ಒಡೆಯನಿಗೂ ಒಡೆಯನು. ಆತನಿಗೆ ತಂದೆಯಿಲ್ಲ: ಒಡೆಯನಿಲ್ಲ.

೧೦. ತನ್ನ ದಾರಗಳಿಂದ ತನ್ನನ್ನು ಮುಚ್ಚಿಕೊಳ್ಳುವ ಜೇಡರ ಹುಳುವಿನಂತೆ, ತನ್ನ ಸ್ವಭಾವಕ್ಕೆ ಅನುಗುಣವಾಗಿ ತನ್ನ ಪ್ರಕೃತಿಯಿಂದ ಹುಟ್ಟಿದ ಪದಾರ್ಥಗಳಿಂದ ತನ್ನನ್ನು ಮುಚ್ಚಿಕೊಳ್ಳುವ ದೇವನು ನಮಗೆ ಬ್ರಹ್ಮಾಪ್ಯಯ[1] ವನ್ನು ಕರುಣಿಸಲಿ.

---

1. ಬ್ರಹ್ಮ+ಅಪ್ಯಯ=ಅಪ್ಯಯವೆಂದರೆ ಅದರಲ್ಲಿ ಸೇರಿ ಹೋಗುವುದು.

೧೧. ಸರ್ವಭೂತಗಳಲ್ಲಿಯೂ ಅವಿತುಕೊಂಡಿರುವ ಆ ದೇವನು ಏಕನು. ಆತನು ಸರ್ವವ್ಯಾಪಿಯು. ಸರ್ವಭೂತಗಳಲ್ಲಿಯೂ ಅವರವರ ಅಂತರಾತ್ಮನಾಗಿರುವನು. ಕರ್ಮಗಳಿಗೆಲ್ಲ ಅಧ್ಯಕ್ಷನಾಗಿ ಸರ್ವಭೂತಗಳಲ್ಲಿಯೂ ವಾಸ ಮಾಡುತ್ತಿರುವನು. ಆತನು ಸಾಕ್ಷಿಯು: ಚೇತನನು: ಕೇವಲನು: ಗುಣಗಳು ಯಾವುದೂ ಇಲ್ಲದವನು.

೧೨. (ಸ್ವತಂತ್ರವಾಗಿ ಯಾವ ಕ್ರಿಯೆಯನ್ನೂ ಮಾಡಲಾರದ) ಅನೇಕಾನೇಕರಿಗೆ ಒಡೆಯನು ಯಾರೋ, ಒಂದು ಬೀಜವನ್ನು ಬಹುವಾಗಿ ಮಾಡುವವನು ಯಾರೋ, ಆತ್ಮನಲ್ಲಿರತಕ್ಕ ಅವನನ್ನು ಯಾವ ಧೀರರು ನೋಡುವರೋ ಶಾಶ್ವತವಾದ ಸುಖವು ಅವರಿಗೆ: ಇತರರಿಗಲ್ಲ.

೧೩. ಆ ಪರಮನು ನಿತ್ಯರಿಗೆಲ್ಲ ನಿತ್ಯನು: ಚೇತನರಿಗೆಲ್ಲ ಚೇತನನು. ತಾನು ಏಕನಾಗಿದ್ದರೂ ಬಹು ಜನರ ಕಾಮಗಳನ್ನು ಪೂರೈಸುವನು. ಕಾರಣಗಳಿಗೆಲ್ಲ ಕಾರಣನಾದ, ಸಾಂಖ್ಯಯೋಗ ಗಳಿಂದ ಮಾತ್ರ ದೊರೆಯುವ, ಆ ಪರಮನನ್ನು ತಿಳಿದವರು ಸರ್ವ ಪಾಶಗಳಿಂದಲೂ ಮುಕ್ತರಾಗುವರು.

೧೪. (ಆತನು ಇರುವೆಡೆ) ಸೂರ್ಯನೂ ಚಂದ್ರನೂ ನಕ್ಷತ್ರ ಗಳೂ ಹೊಳೆಯುವುದೂ ಇಲ್ಲ. ಈ ಮಿಂಚುಗಳೂ ಅಲ್ಲಿ ಮೆರೆಯು ವುದಿಲ್ಲ. ಇನ್ನು ಅಗ್ನಿಯ ಮಾತೇನು? ಆತನು ಹೊಳೆಯುವನು: ಆಗ ಎಲ್ಲವೂ ಜೊತೆಯಲ್ಲಿ ಹೊಳೆಯುವುವು. ಆತನ ಕಾಂತಿಯಿಂದ ಈ ಎಲ್ಲವೂ ಹೊಳೆಯುವುದು.

೧೫. ಈ ಭುವನದ ನಡುವೆ ಒಬ್ಬನೇ ಒಬ್ಬ ಹಂಸನು: ಆತನೇ ನೀರಿನಲ್ಲಿದ್ದು ಅಗ್ನಿ ಎನ್ನಿಸಿಕೊಳ್ಳುವನು. ಆತನನ್ನು ತಿಳಿದರೇನೇ ಮೃತ್ಯುವನ್ನು ದಾಟುವುದು. ಅಯನ (ಹೋಗುವುದು— ಎಂದರೆ ಮೃತ್ಯುವಿನ ಆಚೆಗೆ ಹೋಗುವುದು)ಕ್ಕೆ ಬೇರೆ ದಾರಿಯೇ ಇಲ್ಲ.

೧೬. ಆತನು ಎಲ್ಲವನ್ನೂ ಮಾಡುವನು: ಎಲ್ಲವನ್ನೂ ಬಲ್ಲನು: ತನ್ನಿಂದ ತಾನೇ ಹುಟ್ಟುವನು: ಜ್ಞಾನ ಸ್ವರೂಪನು. ಮೃತ್ಯುವಿಗೂ

ಮೃತ್ಯುವು. ತ್ರಿಗುಣಗಳನ್ನೂ ಉಳ್ಳವನು. ಎಲ್ಲಾ ವಿದ್ಯೆಗಳಿಗೂ ಗುರಿಯಾದವನು: ಪ್ರಕೃತಿಗೂ ಕ್ಷೇತ್ರಜ್ಞನಿಗೂ ಪತಿಯು: ಗುಣಗಳಿಗೆಲ್ಲ ಒಡೆಯನು. ಸಂಸಾರ, ಸ್ಥಿತಿ, ಬಂಧ, ಮೋಕ್ಷಗಳಿಗೆಲ್ಲ ಕಾರಣನು.

೧೭. ಆತನು ವಿಶ್ವವನ್ನೆಲ್ಲ ವ್ಯಾಪಿಸಿರುವನು: ಆತನೇ ಅಮೃತನು. ಎಲ್ಲದರ ಒಡೆತನವೂ ಆತನಲ್ಲಿರುವುದು. ಈ ಜಗತ್ತನ್ನು ನಿತ್ಯವೂ ಆಳುವವನು ಆತನು. ಈತನನ್ನು ಆಳುವ ಮತ್ತೊಂದು ಯಾವುದೂ ಇಲ್ಲ.

೧೮. ಯಾರು ಚತುರ್ಮುಖನನ್ನು ಮೊದಲು ಸೃಷ್ಟಿಸಿದನೋ, ಯಾರು ಆತನಿಗೆ ವೇದಗಳನ್ನು ಕೊಟ್ಟನೋ, ಬುದ್ಧಿಯು ಆತ್ಮನನ್ನು ಕುರಿತು ಚಿಂತಿಸುವಂತೆ ಮಾಡುವವನು ಯಾರೋ, ಆ ಪರಮನನ್ನು ಮೋಕ್ಷವು ಬೇಕೆಂದು ಆಶ್ರಯಿಸುವೆನು.

೧೯. ಆತನು ನಿಷ್ಕಲನು: (ಭಾಗಗಳಿಲ್ಲದ ಪೂರ್ಣನು): ನಿಷ್ಕ್ರಿಯನು (ಯಾವ ಕ್ರಿಯೆಯನ್ನೂ ಮಾಡದವನು): ಶಾಂತನು. ನಿರವದ್ಯನು (ಯಾವುದೂ ತಪ್ಪಿಲ್ಲದವನು): ನಿರಂಜನನು (ಯಾವುದಕ್ಕೂ ಅಂಟದವನು): ಅಮೃತಕ್ಕೆ ಕರೆದೊಯ್ಯುವ ಉತ್ಕೃಷ್ಟ ಸೇತು (ವೆಯು). ಇದ್ದ ಕಟ್ಟಿಗೆಯನ್ನೆಲ್ಲ ಸುಟ್ಟು ಮುಗಿಸಿದ ಬೆಂಕಿಯಂತಿರುವನು.

೨೦. ಮನುಷ್ಯರು ಆಕಾಶವನ್ನು ಚಾಪೆಯಂತೆ ಸುತ್ತಬಲ್ಲರಾದರೆ, ಆಗಲೂ ಆ ಪರಮನನ್ನು ತಿಳಿಯದೆಯೇ ದುಃಖದ ಕೊನೆಯನ್ನು ಕಾಣಲಾರರು.

೨೧. ತಪಃ ಪ್ರಭಾವದಿಂದಲೂ ಗುರು ದೇವ ಪ್ರಸಾದದಿಂದಲೂ ಶ್ವೇತಾಶ್ವತರನು ಆ ಬ್ರಹ್ಮವನ್ನು ಅರಿತನು. ಅತ್ಯಾಶ್ರಮಿ (ಸನ್ಯಾಸಿ)ಗಳಿಗೆಂದು, ಪರಮ ಪವಿತ್ರವಾದ, ಋಷಿ ಸಂಘಗಳಿಗೆಲ್ಲ ಬಹಳ ಬೇಕಾದ (ಈ ಬ್ರಹ್ಮವಿದ್ಯೆಯನ್ನು) ಹೇಳಿದನು.

---

1. ಪುತ್ರನೆಂದರೆ ತನ್ನ ಸರ್ವಸ್ವವನ್ನೂ ಪಡೆಯಲು ಅರ್ಹನಾದವನು.

೨೨. ಇದು ವೇದಾಂತದಲ್ಲಿ ಪರಮ ರಹಸ್ಯವಾದುದು. ಹಿಂದಿನ ಕಲ್ಪಗಳಿಂದ ಬಂದುದು. (ಇದನ್ನು) ಪ್ರಶಾಂತನಲ್ಲದವನಿಗೆ, ಪುತ್ರನಲ್ಲದವನಿಗೆ, ಶಿಷ್ಯನಲ್ಲದವನಿಗೆ, ಕೊಡಬಾರದು.

೨೩. ಯಾವನು ದೈವದಲ್ಲಿ ಪರಮವಾದ ಭಕ್ತಿಯನ್ನಿಟ್ಟಿರುವನೋ, ದೈವದಲ್ಲಿ ಹೇಗೋ ಹಾಗೆಯೇ ಗುರುವಿನಲ್ಲಿಯೂ ಯಾವನು ಪರಮ ಭಕ್ತಿಯನ್ನಿಟ್ಟಿರುವನೋ ಅವನಿಗೆ, ಅಂತಹ ಮಹಾತ್ಮನಿಗೆ ಈಗ ಹೇಳಿರುವುದೆಲ್ಲ ಸ್ಪಷ್ಟವಾಗಿ ತಿಳಿಯುವುದು.

ಇಂತಿದು ಆರನೆಯ ಅಧ್ಯಾಯವು.

ಓಂ ಪೂರ್ಣಮಿದಂ, ಭದ್ರಂಕರ್ಣೇಭಿಃ, ಸಹನಾವವತು, ಎಂಬ ಮೂರು ಶಾಂತಿ ಮಂತ್ರಗಳು.[1]

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ.

ಇಂತಿದು ಶ್ವೇತಾಶ್ವತರವು

1. ಮೊದಲಲ್ಲಿ ಎರಡೇ ಶಾಂತಿಮಂತ್ರಗಳನ್ನು ಕೊಟ್ಟಿದೆ. ಪುಟ ೭೨ ನೋಡಿ.

೩. ಪ್ರಶ್ನೋಪನಿಷತ್ತು

ಅಥರ್ವಣದಲ್ಲಿ "ಬ್ರಹ್ಮಾದೇವಾನಾಂ" ಇತ್ಯಾದಿ ಮಂತ್ರಗಳು ಇವೆ.* ಅವುಗಳಲ್ಲಿ ಹೇಳಿರುವುದು ಬ್ರಹ್ಮ ವಿದ್ಯೆಯನ್ನು. ಅದೇ ವಿದ್ಯೆಯನ್ನು ಮತ್ತೆ ಋಷಿಗಳ ಪ್ರಶ್ನೆ, ಅದಕ್ಕೆ ಉತ್ತರ, ಹೀಗೆ ಕಥಾರೂಪವಾಗಿ ಹೇಳಿರುವುದು ಪ್ರಶ್ನೋಪನಿಷತ್ತು.

ಇದರಲ್ಲಿ ಆರು ಪ್ರಶ್ನಗಳು. ಆರು ಜನ ಶಿಷ್ಯರು ಭಗವಂತನಾದ ಪಿಪ್ಪಲಾದನನ್ನು ಒಬ್ಬೊಬ್ಬರು ಒಂದೊಂದು ಪ್ರಶ್ನೆಯನ್ನು ಕೇಳುತ್ತಾರೆ: ಆಚಾರ್ಯನು ಉತ್ತರವನ್ನು ಹೇಳುತ್ತಾನೆ. ಆ ಆರು ಪ್ರಶ್ನಗಳೂ ಆರು ಉತ್ತರಗಳೂ ಸೇರಿ ಈ ಉಪನಿಷತ್ತಾಗಿದೆ. ಇದರಲ್ಲಿ ಅರವತ್ತೇಳು ಮಂತ್ರಗಳಿವೆ.

ಈ ಪ್ರಜೆಗಳೆಲ್ಲರೂ ಎಲ್ಲಿಂದ ಬಂದರು? ಎಂಬುದು ಮೊದಲನೆಯ ಪ್ರಶ್ನೆ. ಈ ಪ್ರಜೆಗಳನ್ನು ಯಾವ ಯಾವ ದೇವತೆಗಳು ಧರಿಸುವರು? ಯಾರು ಪ್ರಕಾಶವಾಗಿರುವರು? ಯಾರು ಇವರಲ್ಲಿ ಹೆಚ್ಚು? ಎಂಬುದು ಎರಡನೆಯ ಪ್ರಶ್ನೆ. ಪ್ರಾಣವೆಲ್ಲಿಂದ ಹುಟ್ಟುವುದು? ಈ ಶರೀರಕ್ಕೆ ಎಂತು ಬರುವುದು? ತಾನು ಬೇರೆ ಬೇರೆಯಾಗಿ ಈ ದೇಹದಲ್ಲಿ ಇರುವುದೆಂತು? ಅದು ದೇಹದಿಂದ ಹೊರಗೆ ಹೋಗುವುದು ಹೇಗೆ? ಅದು ದೇಹದಿಂದ ಹೊರಗೆ ಹೇಗಿರುವುದು? ದೇಹದೊಳಗೆ ಹೇಗೆ ಇರುವುದು? ಎಂದು ಮೂರನೆಯ ಪ್ರಶ್ನೆ.

ಈ ಪುರುಷನಲ್ಲಿ ನಿದ್ದೆ ಮಾಡುವುವು ಯಾವುವು? ಎಚ್ಚರವಾಗಿರುವುವು ಯಾವುವು? ಇವರಲ್ಲ ಯಾವ ದೇವನು ಕನಸು ಕಾಣುವನು? ಇವರಲ್ಲಿ ಸುಖವಾಗುವುದು ಯಾರಿಗೆ? ಯಾರು

---

*ಮುಂಡಕೋಪನಿಷತ್ತು ನೋಡಿ. ಪುಟ ೧೫೭.

ಇರಲು ಮಿಕ್ಕವರೆಲ್ಲ ಇರುವರು ? ಎಂಬುದು ನಾಲ್ಕನೆಯ ಪ್ರಶ್ನೆ. ಮನುಷ್ಯರಲ್ಲಿ ಯಾವನಾದರೂ ಮರಣದವರೆಗೂ ಓಂಕಾರವನ್ನು ಅಭಿಧ್ಯಾನ ಮಾಡಿದರೆ ಆತನು ಯಾವ ಲೋಕವನ್ನು ಪಡೆಯುವನು ? ಎಂಬುದು ಐದನೆಯ ಪ್ರಶ್ನೆ. "ಷೋಡಶಕಲನಾದ ಪುರುಷನು ಯಾರು" ? ಎಂಬುದು ಆರನೆಯ ಪ್ರಶ್ನೆ.

ಈ ಆರರ ಉತ್ತರವೇ ಈ ಉಪನಿಷತ್ತು.

ಪ್ರಶ್ನೋಪನಿಷತ್ತಿಗೆ ಶಾಂತಿ ಮಂತ್ರವು ಇದು :—

ಓಂ ಭದ್ರಂ ಕರ್ಣೇಭಿಃ ಶೃಣುಯಾಮದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ । ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ । ವ್ಯಶೇಮ ದೇವಹಿತಂ ಯದಾಯುಃ ।

ಓಂ. ಎಲೈ ದೇವತೆಗಳಿರಾ, ಕಿವಿಯಿಂದ ಶುಭವಾದುದನ್ನು ಕೇಳೋಣ: ಕಣ್ಣುಗಳಿಂದ ಶುಭವಾದುದನ್ನು ನೋಡೋಣ. ಯಜ್ಞದಲ್ಲಿರೋಣ: ಸ್ಥಿರವಾದ ಅಂಗಗಳುಳ್ಳ ದೇಹಗಳುಳ್ಳವರಾಗಿ ಹೊಗಳೋಣ: ಆಯುಸ್ಸಿರುವವರೆಗೂ ದೇವಹಿತವನ್ನು ಆಚರಿಸೋಣ.

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

ಉಪನಿಷತ್ತು

೧. ಓಂ. ಭಾರದ್ವಾಜ ಸುಕೇಶ, ಶೈಬ್ಯ ಸತ್ಯಕಾಮ, ಗಾರ್ಗ್ಯ ಸೌರ್ಯಾಯಣಿ, ಆಶ್ವಲಾಯನ ಕೌಸಲ್ಯ, ವಿದರ್ಭದೇಶದ ಭಾರ್ಗವ, ಕಾತ್ಯಾಯನ ಕಬಂಧಿ . ಇವರೆಲ್ಲರೂ ಬ್ರಹ್ಮಪರರು : ಬ್ರಹ್ಮನಿಷ್ಠರು : (ಎಲ್ಲದಕ್ಕಿಂತಲೂ ಹೆಚ್ಚೆಂದು) ಬ್ರಹ್ಮವನ್ನು ಕುರಿತು ವಿಚಾರ ಮಾಡುವವರು. ಇವರೆಲ್ಲರೂ "ಈತನಾದರೆ ಎಲ್ಲವನ್ನೂ ಹೇಳುವನು" ಎಂದು ಭಗವಂತನಾದ ಪಿಪ್ಪಲಾದನ ಬಳಿಗೆ ಹೋದರು.

೨. ಅವರನ್ನು ಕುರಿತು ಆ ಋಷಿಯು ಹೇಳಿದನು: "ಮತ್ತೆ ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆಗಳಿಂದ ಒಂದು ಸಂವತ್ಸರ ಕಾಲ ನಮ್ಮಲ್ಲಿರಿ. ನಿಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿ. ನಮಗೆ ಗೊತ್ತಿದ್ದರೆ ಎಲ್ಲವನ್ನೂ ಹೇಳುವೆವು."

೩. (ಹಾಗೆ ಒಂದು ವರ್ಷವಾದ ಮೇಲೆ) ಕಾತ್ಯಾಯನ ಕಬಂಧಿಯು ಬಂದು ಕೇಳಿದನು: "ಭಗವನ್, ಈ ಪ್ರಜೆಗಳು ಎಲ್ಲಿಂದ ಹುಟ್ಟುವರು ?"

೪. ಆತನು ಹೇಳಿದನು: "ಪ್ರಜಾಪತಿಯು ಪ್ರಜೆಗಳನ್ನು ಬಯಸಿದನು: ಆತನು ತಪಸ್ಸು ಮಾಡಿದನು: ತಪಸ್ಸು ಮಾಡಿ ಮಿಥುನ (ಗಂಡು ಹೆಣ್ಣು) ವನ್ನು ಉತ್ಪಾದನ ಮಾಡಿದನು. ಆ ಮಿಥುನವೇ ರಯಿ, ಪ್ರಾಣಗಳು. ಇವು ನನಗೆ ಬಹು ವಿಧವಾದ ಪ್ರಜೆಗಳನ್ನು ಮಾಡುವುವು (ಎಂದುಕೊಂಡನು.)"

೫. "ಆದಿತ್ಯನೇ ಪ್ರಾಣವು. ರಯಿಯೇ ಚಂದ್ರನು. ಮೂರ್ತ (ಇಂದ್ರಿಯ ಗೋಚರವಾದುದು), ಅಮೂರ್ತ (ಇಂದ್ರಿಯ ಗೋಚರವಲ್ಲದ್ದು) ಎಂಬ ಎಲ್ಲವೂ ರಯಿಯು. ಅದರಿಂದ ರಯಿಯು ಮೂರ್ತಿಯು."

೬. ಆದಿತ್ಯನು ಮೂಡಿ ಮೂಡಲು ದಿಕ್ಕನ್ನು ಪ್ರವೇಶಿಸುವನು: ಅದರಿಂದ ಮೂಡಲಿನಲ್ಲಿರುವ ಪ್ರಾಣಗಳನ್ನೆಲ್ಲ ತನ್ನ ಕಿರಣಗಳಲ್ಲಿ ಧರಿಸುವನು: ಹೀಗೆ ತೆಂಕಲು, ಪಡವಲು, ಬಡಗಲು, ಕೆಳಗೆ, ಮೇಲೆ, ನಡುವೆ, ದಿಕ್ಕುಗಳನ್ನು ಪ್ರಕಾಶಗೊಳಿಸುವನು: ಅದರಿಂದ (ಅಲ್ಲಿರುವ) ಪ್ರಾಣಗಳನ್ನೆಲ್ಲಾ ಧರಿಸುವನು.

೭. (ಆಗ) ವಿಶ್ವರೂಪನಾದ ವೈಶ್ವಾನರನಾದ ಪ್ರಾಣನು ಅಗ್ನಿಯಾಗಿ ಹುಟ್ಟುವನು. ಇದನ್ನು ಋಕ್ಕು ಹೇಳುತ್ತದೆ.

೮. (ಎಲ್ಲವೂ ತಾನೇ ಆದ) ವಿಶ್ವರೂಪನೂ, (ಎಲ್ಲವನ್ನೂ ಧರಿಸುವ) ಕಿರಣಗಳುಳ್ಳವನೂ, (ಹುಟ್ಟುತ್ತಲೇ ಎಲ್ಲವನ್ನೂ ಬಲ್ಲ) ಜಾತವೇದನೂ, (ಎಲ್ಲಕ್ಕೂ ಆಶ್ರಯನಾದ) ಪರಾಯಣನೂ, ಎಲ್ಲವನ್ನೂ

ಸುಡಬಲ್ಲವನೂ, (ಎಲ್ಲವನ್ನೂ ಬೆಳಗುವ) ಒಂದೇ ಒಂದು ಜ್ಯೋತಿ (ಯಾದವನನ್ನು ಬ್ರಹ್ಮಜ್ಞರು ಬಲ್ಲರು.) ಆತನು ಸಹಸ್ರ (ಲೆಕ್ಕವಿಲ್ಲದಷ್ಟು) ಕಿರಣಗಳುಳ್ಳವನು. ಶತಧಾ (ನಾನಾ ಬಗೆಯಾಗಿ) ವರ್ತಮಾನ (ಇರಬಲ್ಲ) ನು. ಪ್ರಜೆಗಳೆಲ್ಲರ ಪ್ರಾಣನು. ಇಂತಹ ಸೂರ್ಯನು ಉದಯಿಸುವನು.

೯. ಸಂವತ್ಸರನೇ ಪ್ರಜಾಪತಿಯು. ಆತನ ಮಾರ್ಗಗಳು ಉತ್ತರ, ದಕ್ಷಿಣ ಎಂದು ಎರಡು. ಇಷ್ಟಾ ಪೂರ್ತಗಳೆಂಬ ಕರ್ಮಗಳನ್ನು ಉಪಾಸನ ಮಾಡುವವರು ಚಂದ್ರನ ಲೋಕಗಳಿಗೆ ಹೋಗುವರು: ಅವರು ಮತ್ತೆ ಹಿಂತಿರುಗಿಬರುವರು. ಅದರಿಂದ ಪ್ರಜಾಕಾಮರಾದ ಋಷಿಗಳು (ಈ) ದಕ್ಷಿಣಮಾರ್ಗವನ್ನು ಹಿಡಿಯುವರು. ಇದೇ ರಯಿಯು: ಇದೇ ಪಿತೃಯಾಣವು.

೧೦. ತಪಸ್ಸು, ಬ್ರಹ್ಮಚರ್ಯ, ಶ್ರದ್ಧಾ, ವಿದ್ಯಾ, ಇವುಗಳಿಂದ ಕೂಡಿದವರು ಆದಿತ್ಯನ ಲೋಕವನ್ನು ಉತ್ತರಮಾರ್ಗದಿಂದ ಸೇರುವರು. ಅದೇ ಪ್ರಾಣಗಳ ಮನೆಯು. ಇದು ಅಮೃತವು: ಅಭಯವು: ಇದೇ ಎಲ್ಲಕ್ಕೂ ಗತಿಯು. ಇಲ್ಲಿಗೆ ಹೋದವರು ಹಿಂತಿರುಗಿ ಬರುವುದಿಲ್ಲ. (ಇಲ್ಲಿಗೆ ಅವಿದ್ವಾಂಸರು) ಬರುವಂತಿಲ್ಲ. ಈ ಅರ್ಥದಲ್ಲಿ ಶ್ಲೋಕವು ಉಂಟು.

೧೧. ಐದು ಕಾಲುಗಳುಳ್ಳ[1] ಎಲ್ಲರ ತಂದೆಯು. ಆತನಿಗೆ ಹನ್ನೆರಡು ಅವಯವಗಳು.[2] ಆತನು ದ್ಯುಲೋಕದ ಮೇಲಿನ ಅರ್ಧದಲ್ಲಿ ಪುರೀಷಿ (ಉದಕವಂತ) ಆಗಿ, ಇರುವನು. ಆತನನ್ನು ಬಲ್ಲ ಇತರರು "ಆತನು ಸರ್ವಜ್ಞನು. ಏಳು ಕುದುರೆಗಳ ರಥದಲ್ಲಿ ಹೋಗುವನು. ಆತನ ರಥದ ಚಕ್ರಕ್ಕೆ ಆರು ಅರೇ-ಕಾಲುಗಳು" ಎನ್ನುವರು.

---

1. ಐದು ಕಾಲುಗಳು—ಐದು ಋತುಗಳು. ಇಲ್ಲಿ ತಂದೆಯೆನ್ನುವುದು ಸಂವತ್ಸರವನ್ನು.

2. ಹನ್ನೆರಡು ಅವಯವಗಳು—ಹನ್ನೆರಡು ಮಾಸಗಳು.

೧೨. ಮಾಸವೇ ಪ್ರಜಾಪತಿಯು. ಆ ಮಾಸಕ್ಕೆ ಕೃಷ್ಣಪಕ್ಷವೇ ರಯಿಯು. ಶುಕ್ಲಪಕ್ಷವೇ ಪ್ರಾಣವು. ಅದರಿಂದಲೇ ಬಲ್ಲ ಋಷಿಗಳು ಶುಕ್ಲಪಕ್ಷದಲ್ಲಿ ಯಾಗಗಳನ್ನು ಮಾಡುವರು. ಕಾಣದವರು ಕೃಷ್ಣಪಕ್ಷದಲ್ಲಿ ಮಾಡುವರು.

೧೩. ಅಹೋರಾತ್ರಗಳೇ ಪ್ರಜಾಪತಿಯು. ಅಹಸ್ಸೇ ಪ್ರಾಣವು. ರಾತ್ರಿಯೇ ರಯಿಯು. ಹಗಲಿನಲ್ಲಿ ರತಿಯನ್ನು ಮಾಡುವವರು ಪ್ರಾಣವನ್ನು ಕತ್ತರಿಸುವರು. ರಾತ್ರಿಯಲ್ಲಿ ರತಿಯನ್ನು ಆಚರಿಸುವವರು ಬ್ರಹ್ಮಚರ್ಯವನ್ನೇ ಆಚರಿಸಿದಂತಾಗುವುದು.

೧೪. ಅನ್ನವೇ ಪ್ರಜಾಪತಿಯು. ಅದರಿಂದಲೇ ರೇತಸ್ಸು. ಆ ರೇತಸ್ಸಿನಿಂದ ಈ ಪ್ರಜೆಗಳೆಲ್ಲರೂ ಹುಟ್ಟುವರು.

೧೫. ಈ ರೀತಿಯಾಗಿ ಪ್ರಜಾಪತಿವ್ರತವನ್ನು ಆಚರಿಸುವವರೂ ಮಿಥುನವನ್ನು ಪಡೆಯುವರು: ಯಾರಿಗೆ ತಪಸ್ಸು ಬ್ರಹ್ಮಚರ್ಯಗಳೋ, ಯಾರಲ್ಲಿ ಸತ್ಯವು ಪ್ರತಿಷ್ಠಿತವಾಗಿರುವುದೋ, ಅವರಿಗೆ ಬ್ರಹ್ಮಲೋಕವು.[1]

೧೬. ಯಾರಲ್ಲಿ ವಕ್ರವಾದ ಅನೃತವಿಲ್ಲವೋ, ಮಾಯೆ (ಮೋಸ) ಇಲ್ಲವೋ ಅವರಿಗೆ ಪಾಪರಹಿತವಾದ ಬ್ರಹ್ಮಲೋಕವು.

ಇಂತಿದು ಮೊದಲನೆಯ ಪ್ರಶ್ನವು.

ಎರಡನೆಯ ಪ್ರಶ್ನ

೧. ಅನಂತರ ವೈದರ್ಭಿ ಭಾರ್ಗವನು ಭಗವಂತನನ್ನು ಕೇಳಿದನು :— ಭಗವಂತನೆ, ಎಷ್ಟು ಜನ ದೇವತೆಗಳು ಪ್ರಜೆ (ಶರೀರ) ಯನ್ನು ಧರಿಸುತ್ತಾರೆ ? ಇವರಲ್ಲಿ ಯಾರು ಯಾರು ಶರೀರದ

---

1. ತಪಸ್ಸು–ಸ್ನಾತಕ ವ್ರತಾದಿಗಳು. ವಿದ್ಯಾರ್ಜನವು ಮುಗಿಯಿತೆಂದು ಮಾಡುವ ವ್ರತ ಸ್ನಾತಕವ್ರತ. ಬ್ರಹ್ಮಚರ್ಯ : ಋತು ಕಾಲದಲ್ಲಿಯೇ ಮೈಥುನವೆಂಬ ನಿಯಮ. ಸತ್ಯ–ಸುಳ್ಳನ್ನು ಬಿಡುವುದು.

(ಅಂತಃಕರಣ, ಇಂದ್ರಿಯಗಳನ್ನು) ಚೇತನಗೊಳಿಸುವವರು ? ಇವರಲ್ಲಿ ಯಾರು ಹೆಚ್ಚು ?

೨. ಆತನಿಗೆ ಭಗವಂತನು ಹೇಳಿದನು :—" ಆಕಾಶ, ವಾಯು, ಅಗ್ನಿ, ಜಲ, ಪೃಥ್ವೀ, ವಾಕ್, ಮನಸ್ಸು, ಚಕ್ಷುಸ್ಸು, ಶ್ರೋತ್ರ ಎಂಬೀ ದೇವತೆಗಳು (ಶರೀರವನ್ನು ಧರಿಸಿರುವರು.) ಅದರಲ್ಲಿ ತಮ್ಮ ಮಹಿಮೆಯನ್ನು ಮೆರೆಯಿಸಿ, ನಾವು ಈ 'ಬಾಣ'ವನ್ನು ಹೊತ್ತು ಕೊಂಡಿರುವೆವು ಎಂದರು ".

೩. ಆಗ ಅವರಲ್ಲೆಲ್ಲಾ ಹೆಚ್ಚಾದ ಪ್ರಾಣನು ಹೇಳಿದನು : " ನೀವು ಮೋಹಗೊಳ್ಳಬೇಡಿ. ನಾನು ನನ್ನನ್ನು ಐದು ಪಾಲು ಮಾಡಿ ಕೊಂಡು ಈ ಬಾಣವನ್ನು ಹೊತ್ತುಕೊಂಡಿರುವೆನು." ಅವರು ಅದನ್ನು ನಂಬಲಿಲ್ಲ.

೪. (ಆಗ) ಆ ಪ್ರಾಣನು ಅಭಿಮಾನದಿಂದ ಮೇಲಕ್ಕೆ ಎದ್ದಂತೆ ಎದ್ದನು. ಆತನು ಏಳುತ್ತಿದ್ದ ಹಾಗೆಯೇ ಎಲ್ಲರೂ ಮೇಲಕ್ಕೆ ಎದ್ದೇ ಬಿಟ್ಟರು. ಆತನು ಕುಳಿತಾಗ ಎಲ್ಲರೂ ಕುಳಿತರು. ಅದು ಹೇಗೆಂದರೆ, ಜೇನುನೊಣಗಳು ರಾಜನು ಎದ್ದಾಗ ಎಲ್ಲವೂ ಏಳುತ್ತವೆ : ಅವನು ಕುಳಿತಾಗ ಎಲ್ಲವೂ ಕೂರುತ್ತವೆ. ಅದರಂತೆ. (ಆಗ) ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ, ಇವರು ಒಪ್ಪಿ ಪ್ರಾಣನನ್ನು ಸ್ತುತಿಸಿದರು.

೫. " ಈ ಪ್ರಾಣನೇ ಅಗ್ನಿಯಾಗಿ ಉರಿಯುವನು. ಈತನೇ ಸೂರ್ಯನು : ಈತನೇ ಪರ್ಜನ್ಯನು. ಈತನೇ ಇಂದ್ರನು. ಈತನೇ ವಾಯುವು. ಈತನೇ ಪೃಥ್ವಿಯು. ಈತನೇ ದೇವನಾದ ರಯಿಯು. ಸತ್, ಅಸತ್, ಅಮೃತ, ಇದೂ ಈತನೇ !"

೬. " ಚಕ್ರದ ಗುಂಬದಲ್ಲಿ ಆರೇಕಾಲುಗಳು ಇರುವಂತೆ, ಈ ಪ್ರಾಣನಲ್ಲಿ ಋಕ್ಕುಗಳು, ಯಜುಸ್ಸುಗಳು, ಸಾಮಗಳು, ಯಜ್ಞ, ಕ್ಷತ್ರ, ಬ್ರಹ್ಮ ಈ ಎಲ್ಲವೂ ಪ್ರತಿಷ್ಠಿತವಾಗಿರುವುವು."

೭. " ಎಲೈ ಪ್ರಾಣನೆ, ನೀನೇ ಪ್ರಜಾಪತಿಯಾಗಿ ಗರ್ಭದಲ್ಲಿ ಚರಿಸುವೆ : ನೀನೇ (ಪ್ರಜೆಯಾಗಿ) ಹುಟ್ಟುವೆ. ಪ್ರಾಣಗಳಿಂದ ಕೂಡಿ

ನೆಲೆಯಾಗಿರುವವನೂ ನೀನೇ. ನಿನಗೆ ಈ ಪ್ರಜೆಗಳೆಲ್ಲರೂ ಕಾಣಿಕೆಯನ್ನು ಒಪ್ಪಿಸುವರು.[1]

೮. ದೇವತೆಗಳಿಗೆಲ್ಲ ಹವಿಸ್ಸನ್ನು ಕೊಡುವವನು ನೀನು. ಪಿತೃಗಳಿಗೆ ಕೊಡುವ ಮೊದಲನೆಯ ಸ್ವಧೆಯು ನೀನು. ಅಥರ್ವಾಂಗಿರಸ್ಸು ಋಷಿಗಳು ಆಚರಿಸುವ ಸತ್ಯವು ನೀನು.[2]

೯. "ಪ್ರಾಣನೇ, ನೀನು ಇಂದ್ರನು: ತೇಜಸ್ಸಿನಿಂದ ರುದ್ರನು. ನೀನೇ ಕಾಪಾಡುವವನು. ನೀನು ಅಂತರಿಕ್ಷದಲ್ಲಿ ಚರಿಸುವೆ. ನೀನು ಜ್ಯೋತಿಗಳಿಗೆಲ್ಲ ಪತಿಯಾದ ಸೂರ್ಯನು."

೧೦. "ನೀನು ಮಳೆ ಕರೆದಾಗ ಈ ಪ್ರಜೆಗಳೆಲ್ಲರೂ ಪ್ರಾಣಿಸುವರು: 'ಬೇಕಾದಷ್ಟು ಅನ್ನವು ಆಗುವುದು.' ಎಂದು ಸಂತೋಷದಿಂದ ಇರುವರು."

೧೧. "ಪ್ರಾಣ, ನೀನು ವ್ರಾತ್ಯನು. ನೀನೊಬ್ಬನೇ ಋಷಿಯು. ಎಲ್ಲವನ್ನೂ ತಿನ್ನುವವನು ನೀನು. ಇರುವುದಕ್ಕೆಲ್ಲಾ ನಾಥನು ನೀನು. ನಾವು ಮೊದಲನೆಯ ಹವಿಸ್ಸನ್ನು (ನಿನಗೆ) ಅರ್ಪಿಸುವವರು. ನಮಗೆ ಎಲೈ ಮಾತರಿಶ್ವನೆ, ನೀನೇ ತಂದೆಯು."[4]

---

1. ಪಿಪ್ಪಲಾದನು ಪ್ರಾಣದ ವಿಚಾರವಾಗಿ ಮಾತನಾಡುತ್ತಾನೆ. ಆತನಿಗೆ ಕೂಡಲೇ ಪ್ರಾಣದರ್ಶನವಾಗುತ್ತದೆ. ಹೊರಗಿನದೆಲ್ಲವನ್ನೂ ಬಿಟ್ಟು ಆ ಪ್ರಾಣದೇವನನ್ನು ಸ್ತುತಿಸುತ್ತಾನೆ.

2. ದಿನದಿನವೂ ದೇವ, ಋಷಿ, ಪಿತೃಗಳಿಗೆ ಯಜ್ಞ ಮಾಡಬೇಕು. ಯಜ್ಞವೆಂದರೆ ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಹೋಮ ಮಾಡುವುದು: ಅದು ದೇವತೆಗಳಿಗೆ ಆದರೆ ಸ್ವಾಹಾ ಎಂದು ಕೊಡುವರು: ಪಿತೃಗಳಿಗೆ ಆದರೆ ಸ್ವಧಾ ಎನ್ನುವರು.

3. ವ್ರಾತ್ಯ—ಪ್ರಾಣನು ಹುಟ್ಟಿದ ಮೇಲೆ ಇತರರೆಲ್ಲರೂ ಹುಟ್ಟಿದರು. ಅದರಿಂದ ಆತನಿಗೆ ವ್ರತ ಮೊದಲಾದುವನ್ನು ಯಾರೂ ಮಾಡಿಸಲಿಲ್ಲ. ಆದಕ್ಕೆ ಆತನನ್ನು ವ್ರಾತ್ಯ-ವ್ರತಗಳಿಲ್ಲದವನು ಎನ್ನುವರು.

ಅಥರ್ವಣದಲ್ಲಿ ವ್ರಾತ್ಯಕಾಂಡ ಎಂಬುದೊಂದು ಭಾಗವಿದೆ.

4. ಮಾತರಿಶ್ವಾ—ಲೋಕದಲ್ಲಿ ಎಲ್ಲಾ ಕಾರ್ಯಗಳನ್ನೂ ಮಾಡುವವನು ಮಾತರಿಶ್ವನೆಂಬ ವಾಯು. ಈಶೋಪನಿಷತ್ತು ಪುಟ ೧೫೨ ಮುಂ.೪-೫ ನೋಡಿ.

೧೨. "ನಿನ್ನ ಯಾವ ದೇಹವು ನಮ್ಮ ವಾಕ್ಕಿನಲ್ಲಿದೆಯೋ, ಕಿವಿಯಲ್ಲಿ, ಕಣ್ಣಿನಲ್ಲಿ, ಯಾವ ದೇಹವುಂಟೋ, ಯಾವುದು ಮನಸ್ಸಿನಲ್ಲಿ ಸಂತತವಾಗಿ ಇದ್ದೇ ಇರುವುದೋ, ಅದನ್ನು ಮಂಗಳವನ್ನು ಮಾಡು. ಎದ್ದು ಹೋಗಬೇಡ."

೧೩. "ಮೂರು ಲೋಕಗಳಲ್ಲಿ ಯಾವುದ ಯಾವುದು ಇದೆಯೋ ಅದೆಲ್ಲವೂ ಪ್ರಾಣದ ವಶದಲ್ಲಿರುವುದು. (ಅದರಿಂದ ಎಲೈ ಪ್ರಾಣನೇ,) ತಾಯಿಯು ಮಕ್ಕಳನ್ನು ಕಾಪಾಡುವಂತೆ ನಮ್ಮನ್ನು ಕಾಪಾಡು. ಶ್ರೀಯನ್ನೂ ಪ್ರಜ್ಞೆಯನ್ನೂ ನಮಗೆ ಉಂಟುಮಾಡು"— ಎಂದು (ಪ್ರಾರ್ಥಿಸಿದನು).

ಇಂತಿದು ಎರಡನೆಯ ಪ್ರಶ್ನವು.

ಮೂರನೆಯ ಪ್ರಶ್ನ

೧. ಅತನನ್ನು ಆಶ್ವಲಾಯನ ಕೌಸಲ್ಯನು ಕೇಳಿದನು :—

"ಭಗವನ್, ಈ ಪ್ರಾಣವು ಎಲ್ಲಿಂದ ಹುಟ್ಟುವುದು ? ಹೇಗೆ ಈ ಶರೀರಕ್ಕೆ ಬರುವುದು ? ತನ್ನನ್ನು ವಿಭಾಗಿಸಿಕೊಂಡು ಇರುವುದು ಹೇಗೆ ? ಯಾವ ಕಾರಣದಿಂದ ಬಿಟ್ಟುಹೋಗುವುದು ? ಅದು ಹೊರಗೆ ಹೇಗೆ ಇರುವುದು ? ದೇಹದ ಒಳಗೆ ಹೇಗೆ ಇರುವುದು !"

೨. ಆತನು ಆತನಿಗೆ ಹೇಳಿದನು : "ನೀನು ಕೇಳಬಾರದ ಪ್ರಶ್ನಗಳನ್ನು ಕೇಳುತ್ತಿರುವೆ. (ಆದರೂ) ನೀನು ಬ್ರಹ್ಮಿಷ್ಠನೆಂದು ನಿನಗೆ ಹೇಳುವೆನು."

೩. ಆತ್ಮನಿಂದ ಈ ಪ್ರಾಣವು ಹುಟ್ಟುವುದು : ಪುರುಷನಲ್ಲಿ ಛಾಯೆಯು ಹೇಗೋ ಹಾಗೆ ಆತ್ಮನಲ್ಲಿ ಪ್ರಾಣವು. ಈ ಪ್ರಾಣವು ಮನಸ್ಸು ಕಾರಣವಾಗಿ ಶರೀರದೊಳಕ್ಕೆ ಬರುವುದು.

೪. ಸಮ್ರಾಜನು ಅಧಿಕಾರ ಕೊಟ್ಟು ಗ್ರಾಮಗ್ರಾಮಕ್ಕೂ ಜನಗಳನ್ನು ಕಳುಹಿಸಿ, ಇಲ್ಲಿ ಅಧಿಕಾರ ಮಾಡಿಕೊಂಡಿರಿ ಎನ್ನುವಂತೆ, ಈ ಪ್ರಾಣನು (ತನ್ನನ್ನೇ ವಿಭಾಗಿಸಿಕೊಂಡು) ಬೇರೆ ಬೇರೆ ಮಾಡಿ

ಕೊಂಡು ಇತರ ಪ್ರಾಣಗಳನ್ನು ಬೇರೆ ಬೇರೆ ಸ್ಥಾನಗಳಲ್ಲಿ ಇಡುವನು.

೫. ಪಾಯು, ಉಪಸ್ಥಗಳಲ್ಲಿ ಅಪಾನನು (ಇರುವನು). ಚಕ್ಷುಸ್ಸು ಶ್ರೋತ್ರಗಳಲ್ಲಿ ಮುಖ ನಾಸಿಕಗಳಲ್ಲಿ ಪ್ರಾಣನು ತಾನೇ ಇರುವನು. ಮಧ್ಯದಲ್ಲಿ ಸಮಾನನು. ಈತನು ತಿಂದ ಅನ್ನವನ್ನು ಸಮಮಾಡುವನು. ಅದರಿಂದ, ಹೀಗೆ ಇವು ಸಪ್ತಾರ್ಚಿಗಳು (ಏಳು ಜ್ವಾಲೆಗಳು) ಆಗುವುವು.

೬. ಹೃದಯದಲ್ಲಿ ಆತ್ಮನು ಇರುವನು. ಇಲ್ಲಿ ನೂರೊಂದು ನಾಡಿಗಳು ಉಂಟು. ಅವು ಒಂದೊಂದೂ ನೂರು ನೂರು ಶಾಖೆಗಳು ಆಗಿರುವುವು. ಅವು ಒಂದೊಂದೂ ಮತ್ತೆ ಎಪ್ಪತ್ತೆರಡು ಎಪ್ಪತ್ತೆರಡು ಭಾಗಗಳಾಗಿ ಒಡೆದಿರುವುವು. ಇವುಗಳಲ್ಲಿ ವ್ಯಾನವು ಚರಿಸುವುದು.[1]

೭. ಒಂದು ಮಾತ್ರ ಮೇಲಕ್ಕೆ ಹೋಗಿರುವುದು. ಅದನ್ನು ಹಿಡಿದು ಉದಾನವು (ಮೃತನನ್ನು) ಪುಣ್ಯವಿದ್ದರೆ ಪುಣ್ಯಲೋಕವನ್ನೂ ಪಾಪವಿದ್ದರೆ ಪಾಪಲೋಕವನ್ನೂ ಎರಡೂ ಸಮವಾಗಿದ್ದರೆ ಮನುಷ್ಯ ಲೋಕವನ್ನೂ ಹೊಂದಿಸುವುದು.

೮. ಆದಿತ್ಯನೇ ಬಾಹ್ಯ ಪ್ರಾಣನು. ಈತನು ಉದಯಿಸಿ ಚಕ್ಷುಸ್ಸಿನಲ್ಲಿರುವ ಪ್ರಾಣವನ್ನು ಅನುಗ್ರಹಿಸುವನು. ಪೃಥಿವಿಯಲ್ಲಿರುವ ದೇವತೆಯು ಪುರುಷನ ಅಪಾನವನ್ನು (ಅನುಗ್ರಹಿಸುವುದು.) ಆಕಾಶವು ಸಮಾನವು. ವಾಯುವೇ ವ್ಯಾನವು.

೯. ತೇಜಸ್ಸೇ ಉದಾನವು. ಅದರಿಂದ ಉಪಶಾಂತ ತೇಜರಾದವರು (ಮೃತರಾಗುವರು.) ಆಗ ಇಂದ್ರಿಯಗಳೆಲ್ಲವೂ ಮನಸ್ಸಿನಲ್ಲಿ ಸೇರಿ (ಉದಾನದ ಜೊತೆಯಲ್ಲಿ ಹೋಗಿ) ಮತ್ತೆ ಜನ್ಮ (ವನ್ನು ಪಡೆಯುವುವು)[2].

---

1. ಈ ಹೃದಯದ ಸುತ್ತಲೂ ನಾಡಿಗಳೂ ಇವೆ ಎಂಬುದಕ್ಕೆ ಕಠ. ವಲ್ಲಿ ೬—ಶ್ಲೋಕ ೨೪ ಪುಟ ೨೦೭ ನೋಡಿ. ಬೃಹದಾರಣ್ಯಕ ೪-೨-೩.

2. ಭಗವದ್ಗೀತೆ ಅ. ೧೫. ಶ್ಲೋ ೭. ನೋಡಿ.

೧೦. (ಮರಣ ಕಾಲದಲ್ಲಿ) ಯಾವುದರಲ್ಲಿ ಚಿತ್ತವನ್ನು ಇಟ್ಟು ಕೊಂಡಿರುವನೋ ಅದರೊಡನೆ ಪ್ರಾಣವು ಸೇರುವುದು. ಪ್ರಾಣವು ತೇಜಸ್ಸಿನಿಂದ ಕೂಡುವುದು. ಅದು ಹಿಂದೆಯೇ ಗೊತ್ತಾಗಿದ್ದ ಲೋಕಕ್ಕೆ ಕರೆದೊಯ್ಯುವುದು.[1]

೧೧. ಹೀಗೆ ಯಾವ ವಿದ್ವಾಂಸನು ಪ್ರಾಣವನ್ನು ಅರಿಯು ವನೋ ಆತನಿಗೆ ಪ್ರಜೆಗಳು ನಷ್ಟವಾಗುವುದಿಲ್ಲ; ಆತನು ಅಮೃತ ನಾಗುವನು. ಈ ಅರ್ಥದಲ್ಲಿ ಶ್ಲೋಕ (ಮಂತ್ರ)ವು ಉಂಟು.

೧೨. ಉತ್ಪತ್ತಿ, ಆಯತಿ (ಆಗಮನ), ಸ್ಥಾನ, ಐದು ವಿಧವಾದ ವಿಭುತ್ವ (ವ್ಯಾಪಿಸಿರುವಿಕೆ), (ಇದು ದೇಹದಲ್ಲಿರುವುದು ಹೇಗೆ ಎಂಬ) ಅಧ್ಯಾತ್ಮ, ಎಂಬ ಪ್ರಾಣದ ಐದು ವ್ಯಾಪಾರಗಳನ್ನು ಬಲ್ಲವನು ಅಮೃತವನ್ನು ಹೊಂದುವನು: ಅಮೃತವನ್ನು ಹೊಂದುವನು-ಎಂದು[2].

ಇಂತಿದು ಮೂರನೆಯ ಪ್ರಶ್ನವು.

ನಾಲ್ಕನೆಯ ಪ್ರಶ್ನ

(ಹಿಂದಿನ ಮೂರು ಪ್ರಶ್ನಗಳು ಅಪರಾ ಎಂಬ ವಿದ್ಯೆಗೆ ಗೋಚರ ವಾದ ಈ ಪ್ರಪಂಚ ವಿಷಯವನ್ನು ಕುರಿತು ಕೇಳಿದವು. ಇನ್ನು ಮುಂದಿನ ಮೂರು ಪ್ರಶ್ನಗಳು, ಪರಾ ಎಂಬ ವಿದ್ಯೆಗೆ ಲಕ್ಷ್ಯವಾದ ಪುರುಷನನ್ನು ಕುರಿತು ಕೇಳುವವು. ಆ ಪುರುಷನು ಶಾಂತನು. ಪ್ರಾಣ ಮನಸ್ಸು ಇಂದ್ರಿಯಗಳಿಗೆ ಆಚೆನವನು. ಆತನು ಶರೀರ ದಲ್ಲಿಯೂ ಇರುವನು: ಜಗತ್ತಿನಲ್ಲಿಯೂ ಇರುವನು: ಅಲ್ಲಿಂದ ಆಚೆಗೂ ಇರುವನು. ಆತನನ್ನು ಕುರಿತು ಕೇಳಿದ ಪ್ರಶ್ನವಿದು)[3]

೧. ಆತನನ್ನು ಗಾರ್ಗ್ಯ ಸೌರ್ಯಾಯಣಿಯು ಕೇಳಿದನು:— "ಭಗವನ್, ಈ (ಶರೀರದಲ್ಲಿರುವ) ಪುರುಷನಲ್ಲಿ ಯಾವ ಯಾವ (ಅಂಗ)

---

1. ಭಗವದ್ಗೀತೆ–೮. ೮. ಶ್ಲೋ ೬.
2. ಪ್ರಾಣಸೂಕ್ತ, ಅಥರ್ವಣ– XI-೪.
3. ಗೀತೆಯ ಹದಿಮೂರನೆಯ ಅಧ್ಯಾಯವನ್ನು ನೋಡಿ–ಅದರ ಹೆಸರೇ ಕ್ಷೇತ್ರ-ಕ್ಷೇತ್ರಜ್ಞ.
ಮುಂಡಕ ೨ರಲ್ಲಿ ಈ ಅಂಶವನ್ನು ವಿಸ್ತಾರವಾಗಿ ಹೇಳಿದೆ.

ಗಳು ನಿದ್ದೆಯನ್ನು ಮಾಡುವುವು (ತಮ್ಮ ವ್ಯಾಪಾರಗಳನ್ನು ಬಿಟ್ಟಿರ ಬಲ್ಲವು) ? ಯಾವವು (ಯಾವಾಗಲೂ) ಜಾಗ್ರತವಾಗಿರುವುವು (ಕೆಲಸ ಮಾಡುತ್ತಲೇ ಇರುವುವು) ? ಇವರಲ್ಲಿ ಕನಸು ಕಾಣುವ ದೇವನು ಯಾರು ? (ನಿದ್ರಾ) ಸುಖವು ಯಾರಿಗೆ ? (ನಿದ್ರಾ ಕಾಲದಲ್ಲಿ) ಯಾವ ನಲ್ಲಿ ಎಲ್ಲರೂ ಸುಪ್ರತಿಷ್ಠಿತರಾಗಿರುವರು ?

೨. ಆತನಿಗೆ ಭಗವಂತನು ಹೀಗೆ ಹೇಳಿದನು : " ಗಾರ್ಗ್ಯ, ಸೂರ್ಯನ ಕಿರಣಗಳು ಆತನು ಅಸ್ತವಾಗಲು ಆತನ ತೇಜೋ ಮಂಡಲ ದಲ್ಲಿ ಹೇಗೆ ಒಂದಾಗುವುವೋ, ಅವೇ ಕಿರಣಗಳು ಮತ್ತೆ (ಮತ್ತೆ) ಆತನು ಉದಯವಾದಾಗ ಹೇಗೆ ಹರಡುವುವೋ ಹಾಗೆಯೇ ಈ (ಕರಣಗಳು) ಎಲ್ಲವೂ ಪರದೇವನಾದ ಮನಸ್ಸಿನಲ್ಲಿ ಐಕ್ಯವಾಗುವುವು. ಅದರಿಂದಲೇ (ಆ ಕಾಲದಲ್ಲಿ) ಪುರುಷನು ಕೇಳುವುದಿಲ್ಲ: ನೋಡುವುದಿಲ್ಲ: ವಾಸನೆ ನೋಡುವುದಿಲ್ಲ : ರುಚಿನೋಡುವುದಿಲ್ಲ : ಮುಟ್ಟುವುದಿಲ್ಲ : ಮಾತಾಡು ವುದಿಲ್ಲ : ಹಿಡಿಯುವುದಿಲ್ಲ : ಆನಂದಿಸುವುದಿಲ್ಲ: ಬಿಡುವುದಿಲ್ಲ : ಓಡಾಡು ವುದಿಲ್ಲ. ಆಗ ಆತನನ್ನು ಸ್ವಪಿತಿ ಎನ್ನುವರು.

೩. (ಆಗಲೂ) ಪ್ರಾಣಾಗ್ನಿಗಳು ಈ ದೇಹದಲ್ಲಿ ಎಚ್ಚರವಾಗಿ ರುವುವು. ಅಪಾನವು ಗಾರ್ಹ್ಯಪತ್ಯವು: ವ್ಯಾನವು ಅನ್ವಾಹಾರ್ಯ ಪಚನ (ವೆನ್ನಿಸಿಕೊಳ್ಳುವ ದಕ್ಷಿಣಾಗ್ನಿಯು). ಗಾರ್ಹ್ಯಪತ್ಯದಿಂದ ಬೇರೆ ತೆಗೆದಿಡಿಸಿಕೊಳ್ಳುವುದೆಂದು ಪ್ರಾಣವು ಆಹವನೀಯವು.*

---

*ಯಜ್ಞಕಾಲದಲ್ಲಿ ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ ಎಂದು ಅಗ್ನಿಯನ್ನು ಮೂರು ಪಾಲು ಮಾಡುವರು.

ನಿದ್ದೆ ಮಾಡುವಾಗ ದೇಹದಲ್ಲಿ ಅಪಾನವು ಬಲವಾಗಿರುವುದು. ಅದರ ಬಲದಿಂದಲೇ ಆಗ ಪ್ರಾಣವು ಮುಖನಾಸಿಕಗಳಲ್ಲಿ ಸಂಚಾರ ಮಾಡುವುದು. ಅದರಿಂದ ಪ್ರಾಣವು ಅಪಾನದಿಂದ ತೆಗೆದಿಟ್ಟ ಆಹವನೀಯವಾಗುವುದು. ವ್ಯಾನವು ಹೃದಯದ ದಕ್ಷಿಣ ಭಾಗದಲ್ಲಿರುವ ನಾಡಿಯಲ್ಲಿ ಸಂಚಾರ ಮಾಡು ವುದು ಎಂದು ದಕ್ಷಿಣಾಗ್ನಿಯು. (ಶಂಕರರು.)

೪. ಉಚ್ಛ್ವಾಸ ನಿಶ್ವಾಸಗಳೆಂಬುವೇ ಆಹುತಿಗಳು : ಅವುಗಳನ್ನು (ಶರೀರ ಸ್ಥಿತಿಗಾಗಿ) ಸಮಪಡಿಸುವುದು ಯಾವುದೋ ಅದೇ ಸಮಾನವು. ಮನಸ್ಸೇ (ಈ ಯಜ್ಞಕ್ಕೆ) ಯಜಮಾನನು. ಈ ಯಜ್ಞದ ಫಲವನ್ನು ಯಜಮಾನನಿಗೆ ಕೊಟ್ಟು, ದಿನದಿನವೂ ಆತನನ್ನು ಬ್ರಹ್ಮದ ಬಳಿಗೆ ಉದಾನವು ಕರೆದೊಯ್ಯುವುದು.[1]

೫. (ಶ್ರೋತ್ರಾದಿ ಕರಣಗಳೆಲ್ಲವೂ ಸುಮ್ಮನಾಗಿರಲು, ದೇಹ ರಕ್ಷಣಕ್ಕಾಗಿ ಪ್ರಾಣಾದಿವಾಯುಗಳು ಎಚ್ಚರವಾಗಿರುವುವು) ಆ ಕಾಲದಲ್ಲಿ ಈ (ಮನೋ) ದೇವನು ಸ್ವಪ್ನದಲ್ಲಿ ತನ್ನ ಮಹಿಮೆ[2] (ವಿಭೂತಿ) ಯನ್ನು ಅನುಭವಿಸುವನು. ಕಂಡು ಕಂಡದ್ದನ್ನೆಲ್ಲ ಮತ್ತೆ ಕಾಣುವನು, ಕೇಳಿ ಕೇಳಿದ್ದುದನ್ನೇ ಮತ್ತೆ ಕೇಳುವನು. ದೇಶ—ದಿಗಂತರಗಳಲ್ಲಿ ಅನುಭವಿಸಿದ್ದುದನ್ನೇ ಮತ್ತೆ ಮತ್ತೆ ಅನುಭವಿಸುವನು. ಕಂಡುದು. ಕಾಣದ್ದು[3], ಕೇಳಿದ್ದು ಕೇಳದ್ದು, ಅನುಭವಿಸಿದ್ದು, ಅನುಭವಿಸದಿದ್ದುದು, ಸತ್ (ಇದ್ದುದು), ಅಸತ್ (ಇಲ್ಲದ್ದು) ಎಲ್ಲವನ್ನೂ ನೋಡುವನು : ಎಲ್ಲವೂ ತಾನೇ ಆಗಿ ನೋಡುವನು[4].

---

1. ಹೀಗೆ, ವಿದ್ವಾಂಸನಿಗೆ ಮಲಗಿದಾಗಿನಿಂದ ಮತ್ತೆ ಏಳುವವರೆಗೆ ಸರ್ವಯಾಗ ಫಲವೂ ದೊರೆಯುವುದು. ಜಾಗ್ರತ್ ಸ್ವಪ್ನ ಸುಷುಪ್ತಿಗಳು ಎಲ್ಲರಿಗೂ ಸಮವಾಗಿದ್ದರೂ ಯಾಗವಾಗುವುದು ವಿದ್ವಾಂಸನಿಗೇ ಹೊರತು ಅವಿದ್ವಾಂಸನಿಗಲ್ಲ ಎಂದು ವಿದ್ವತ್ತೆಯನ್ನು ಹೊಗಳುವುದು ಇದು (ಶಂಕರರು). ಪುಟ ೧೬೪ ನೋಡಿ.

2. ಮಹಿಮಾ-ಎಂದರೆ ವಿಭೂತಿ–ಕೆಲಸಮಾಡುವ ಕರ್ತೃವೂ ಕೆಲಸವಾದ ಕರ್ಮವೂ ಎರಡೂ ಆಗಿ ಹರಡುವುದಕ್ಕೆ ವಿಭೂತಿ ಎಂದು ಹೆಸರು.

3. ದೃಷ್ಟ ತಾನೇ ಆಗಿ ನೋಡಿದ್ದು : ಅದೃಷ್ಟ : ತಾನಾಗಲ್ಲ, ಇನ್ನೊಬ್ಬರಾಗಿ ನೋಡಿದ್ದು–ಹೀಗೇ ಶ್ರುತಾಶ್ರುತಾದಿಗಳು.

4. ಸರ್ವಂ ಪಶ್ಯತಿ ; ಸರ್ವಃ ಪಶ್ಯತಿ ; ಎಂಬಲ್ಲಿ ಈ ಅಂಶವನ್ನು ಗಮನಿಸಬೇಕು. ಮನಸ್ಸನ್ನು ಇಲ್ಲಿ ದೇವ ಎಂದು ಕರೆದಿದೆ. ಆದರೂ ಅದು ಸ್ವಯಂ ಜ್ಯೋತಿಯಾದ ಆತ್ಮನ ಉಪಾಧಿ. ಈ ಉಪಾಧಿಸಹಿತನಾದ ಆತ್ಮನು ಸ್ವಪ್ನ ಕಾಲದಲ್ಲಿ ಹೃದಯಾಕಾಶದಲ್ಲಿರುವ ಪುರೀತತಿ ಎಂಬ ನಾಡಿಯ ಸಂಬಂಧವನ್ನು ಹೊಂದಿದಾಗ ಆತನು ತೈತ್ತಿರೀಯದಲ್ಲಿ ಹೇಳಿರುವಂತೆ ಮನಸಸ್ಪತಿಯಾಗುವನು. ಎಂದರೆ ಯಾವಯಾವ ಕ್ಷೇತ್ರಗಳಲ್ಲಿಯೋ ಇರುವ ಮನಸ್ಸುಗಳನ್ನೆಲ್ಲಾ

೬. ಯಾವಾಗ ಆತನು ತೇಜಸ್ಸಿನಲ್ಲಿ ಮುಳುಗಿಹೋಗುವನೋ ಆಗ ಸ್ವಪ್ನಗಳನ್ನು ನೋಡುವುದಿಲ್ಲ. ಆಗ ಈ ಶರೀರವಲ್ಲಿ ಅದೇ ಸುಖವೆನ್ನುವುದು.[1]

೭. ಅದು (ಹೇಗೆಂದರೆ) ಎಲೈ ಸೌಮ್ಯನೆ, ಪಕ್ಷಿಗಳ ಗುಂಪು ತಮ್ಮ ಗೂಡುಗಳಿರುವ ಮರವನ್ನು ಸೇರಿಕೊಳ್ಳುವುದಿಲ್ಲವೆ ? ಹಾಗೆ, ಸರ್ವವೂ ಪರವಾದ ಆತ್ಮನಲ್ಲಿ ಸೇರಿಹೋಗುವುವು.

(ಸರ್ವವೂ ಎಂದರೆ ಏನೇನು ಎಂಬುದನ್ನು ವಿವರಿಸುತ್ತಾರೆ.)

ಬಲ್ಲವನಾಗುವನು. ಆಗ ಶ್ರುತವೆಂದರೆ ಈ ದೇಹದಲ್ಲಿದ್ದು ಕೇಳಿದ್ದು–ಅಶ್ರುತವೆಂದರೆ ಕೇಳದ್ದು ಎಂದರೆ ಇನ್ನು ಯಾವುದೋ ದೇಹದಲ್ಲಿದ್ದು ಕೇಳಿದ್ದು ಎಂಬ ಸರ್ವವನ್ನೂ ನೋಡುವನು : ಆಗ ಆತನಿಗೆ ನೋಡಿದುದಲ್ಲವೂ ತಾನೇ ಆಗಿ ಎಂದರೆ ಸರ್ವಃ ಆಗಿ ನೋಡುವ ಶಕ್ತಿಯು ಇರುವುದು.

ತೈತ್ತರೀಯ ೧–೩–೭ (ಪುಟ ೪೩) ನೋಡಿ : "ತಥಾ ದೃಷ್ಟಂಚ–ಅಸ್ಮಿನ್ ಜನ್ಮನಿ, ಅದೃಷ್ಟಂಚ ಜನ್ಮಾಂತರದೃಷ್ಟಂ ಸರ್ವಃ ಪಶ್ಯತಿ—ಸರ್ವವಾಸನೋಪಾಧಿಃ ಸನ್ನೇವಂ ಸರ್ವಕರಣಾತ್ಮಾ ಮನೋದೇವಃ ಸ್ವಪ್ನಾನ್ ಪಶ್ಯತಿ"
—(ಶಂಕರರು).

1. ಪುರೀತತಿಯೆಂಬ ನಾಡಿಯಲ್ಲಿದ್ದ ಜೀವನನ್ನು ಸೂರ್ಯ ಸಂಬಂಧವಾದ ಪಿತ್ತವೆಂಬ ತೇಜಸ್ಸು ಎಲ್ಲ ಕಡೆಯೂ ಮುಚ್ಚಿಕೊಳ್ಳುವುದು. ಆಗ ಆತನಿಗೆ ತನ್ನ ವಾಸನೆಗಳನ್ನು ಹರಡಲು ಅವಕಾಶವಿಲ್ಲದಹೋಗಲು ಕನಸುಗಳು ನಿಂತು ಹೋಗುವುವು. ಮನೋದೇವನ ಕಿರಣಗಳ ಹರಡುವಿಕೆಯೇ ಕನಸು. ಅದಿಲ್ಲದಿರಲು ಆ ಮನವು ಕಾಷ್ಠದಲ್ಲಿರುವ ಬೆಂಕಿಯಂತೆ ಅದೃಶ್ಯವಾಗಿ ದೇಹವನ್ನೆಲ್ಲಾ ವ್ಯಾಪಿಸುವುದು. ಆಗ ಸುಷುಪ್ತಿ (ನಿದ್ದೆ)ಯು: ಅದೇ ಸುಖವು.

ಸುಷುಪ್ತಿಕಾಲದಲ್ಲಿ ಬೇರೆ ಯಾವ ಉಪಾಧಿಗಳೂ ಇಲ್ಲದೆ ಆತ್ಮವು ತಾನೇ ತಾನಾಗುವುದು. ಅದೇ ಸುಖವು (ಶಂಕರರು).

(ವಿವೇಕಚೂಡಾಮಣಿಯಲ್ಲಿ ಆಚಾರ್ಯರು ಹೇಳಿರುವುದನ್ನು ಗಮನಿಸಿ. ಅದರ ಸಾರಾಂಶವಿಷ್ಟು.—ಈ ದೇಹದಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಗಳೆಂಬ ಪಂಚ ಕೋಶಗಳಿವೆ. ನಿದ್ದೆಯಲ್ಲಿ ಪ್ರಾಣಮಯವನ್ನು ಬಿಟ್ಟು ಅನ್ನಮಯ, ಮನೋಮಯ, ವಿಜ್ಞಾನಮಯಗಳು ಕ್ರಿಯೆಯಿಲ್ಲದೆ ಸುಮ್ಮನಾಗುವುವು—ಆಗ ಆನಂದಮಯವು ತನ್ನಲ್ಲಿರುವ ರಸವನ್ನು ಬಿಡುವುದು. ಆ ರಸವು ಬಂದು ಹೃದಯದ ಸುತ್ತಲೂ ಇರುವ ನಾಡಿಗಳಲ್ಲಿ ತುಂಬಿಕೊಳ್ಳುವುದು. ಹಾಗೆ ರಸಪೂರ್ಣವಾಗುವುದೇ ಸುಖವು. ಆ ರಸವನ್ನು ಜಾಗ್ರತ್ಸ್ವಪ್ನಗಳಲ್ಲಿ ವೆಚ್ಚಮಾಡಿ, ಜೀವನು ಸುಖಪಡುವನು : ಅದು ಬರಿದಾದಾಗ ಆಯಾಸಪಡುವನು.)

೮. ಪೃಥಿವಿಯೂ ಅದರ ಕಾರಣವಾದ ಪೃಥ್ವೀಮಾತ್ರೆ[1]ಯೂ, ಜಲವೂ ಜಲಮಾತ್ರೆಯೂ, ತೇಜವೂ ತೇಜೋಮಾತ್ರೆಯೂ, ವಾಯುವೂ ವಾಯುಮಾತ್ರೆಯೂ, ಆಕಾಶವೂ ಆಕಾಶಮಾತ್ರೆಯೂ, ಚಕ್ಷುವೂ(ಅದರವಿಷಯವಾದ) ದ್ರಷ್ಟವ್ಯವೂ, ಶ್ರೋತ್ರವೂ ಶ್ರೋತ್ರವ್ಯವೂ, ಘ್ರಾಣವೂ ಘ್ರಾತವ್ಯವೂ, ರಸವೂ ರಸಯಿತವ್ಯವೂ, ಚರ್ಮವೂ ಸ್ಪರ್ಶಯಿತವ್ಯವೂ, ವಾಕ್ಕೂ ವಕ್ತವ್ಯವೂ, ಹಸ್ತಗಳೂ ಆದಾತವ್ಯವೂ, ಉಪಸ್ಥವೂ ಆನಂದಯಿತವ್ಯವೂ, ಪಾಯುವೂ ವಿಸರ್ಜಯಿತವ್ಯವೂ, ಪಾದಗಳೂ ಗಂತವ್ಯವೂ ಮನಸ್ಸೂ ಮಂತವ್ಯವೂ, ಬುದ್ಧಿಯೂ ಬೋದ್ಧವ್ಯವೂ, ಅಹಂಕಾರವೂ ಅಹಂಕರ್ತವ್ಯವೂ, ಚಿತ್ತವೂ ಚೇತಯಿತವ್ಯವೂ, ತೇಜವೂ ವಿದ್ಯೋತಿತವ್ಯವೂ, ಪ್ರಾಣವೂ ವಿದಾರಯಿತವ್ಯವೂ (ಇವಿಷ್ಟೂ ಪರನಾದ ಆತ್ಮನಲ್ಲಿ ಸಂಪ್ರತಿಷ್ಠಿತವಾಗುವುವು).

(ಆ ಆತ್ಮನು ಹೇಗಿರುವನು ಎಂಬುದನ್ನು ವಿವರಿಸುತ್ತಾರೆ.)

---

1. ಮಾತ್ರೆ ಎನ್ನುವುದು ಸೂಕ್ಷ್ಮರೂಪ : ಭೂತ ಎನ್ನುವುದು ಸ್ಥೂಲರೂಪ. ಸೂಕ್ಷ್ಮದಿಂದ ಸ್ಥೂಲ ಎಂದು ಸಿದ್ಧಾಂತ. ಸ್ಥೂಲವಾಗುವುದು ಸೃಷ್ಟಿ : ಮತ್ತೆ ಸೂಕ್ಷ್ಮವಾಗುವುದು ಲಯ. ಚಕ್ಷು—ನೋಡುವ ಕಣ್ಣು–ದ್ರಷ್ಟವ್ಯ–ನೋಡಿಸಿಕೊಳ್ಳುವ ವಿಷಯ—ಹೀಗೆಯೇ ಮುಂದಕ್ಕೂ.

(ಹಿಂದೆ 'ಪ್ರಾಣದಲ್ಲಿ ಎಲ್ಲವೂ ಪ್ರತಿಷ್ಠಿತವಾಗುವುವು: ಮನಸ್ಸಿನಲ್ಲಿ ಎಲ್ಲವೂ ಪ್ರತಿಷ್ಠಿತವಾಗುವುದು' ಎಂದು ಹೇಳಿ, 'ಆ ಮನಸ್ಸು ತೇಜಸ್ಸಿನಲ್ಲಿ ಸೇರಿ ಹೋಗಲು, ಎಲ್ಲವೂ ಜೀವಾತ್ಮನಲ್ಲಿ ಪ್ರತಿಷ್ಠಿತವಾಗುವುದು' ಎಂದು ಹೇಳಿರುವುದನ್ನು ಗಮನಿಸಿ).

(ಇಂದ್ರಿಯಮನೋಬುದ್ಧಿಗಳಲ್ಲಿದ್ದು ಅವುಗಳ ಕರ್ಮ ಮಾಡುವವನೂ, ಅವುಗಳಿಂದ ಬಂದ ಅನುಭವವೂ ಆಗಿರುವವನು ಪುರುಷನು. ಆತನು ಇವೆಲ್ಲಕ್ಕಿಂತಲೂ ಪರನು. ಆತನು ಇನ್ನೊಬ್ಬ ಪರಮಾತ್ಮನಲ್ಲಿ ಇರುವವನು ಎಂದು ತಾತ್ಪರ್ಯವು. ಗೀತೆಯಲ್ಲಿ ಹೇಳಿರುವ ಪ್ರಕೃತಿ, ಜೀವ, ಈಶ್ವರ, ಅಥವಾ ಕ್ಷರ ಪುರುಷ, ಅಕ್ಷರ ಪುರುಷ, ಪುರುಷೋತ್ತಮ, ಇವರನ್ನು ಧ್ಯಾನಿಸಿ.)

(ಪುರುಷ : ಎಂದರೆ ಕಾರ್ಯ, ಕರಣಸಂಘಾತ, ಎಂಬ ಉಪಾಧಿಯನ್ನು ಪೂರಣಗೊಳಿಸುವವನು—ಶಂಕರರು)

೯. ಈ ಆತ್ಮನೇ ದ್ರಷ್ಟಾ (ನೋಡುವವನು), ಸ್ಪ್ರಷ್ಟಾ (ಮುಟ್ಟು ವವನು), ಶ್ರೋತಾ (ಕೇಳುವವನು), ಘ್ರಾತಾ (ಮೂಸುವವನು), ರಸಯಿತಾ (ರುಚಿನೋಡುವವನು), ಮಂತಾ (ಚಿಂತಿಸುವವನು) ಬೋದ್ಧಾ (ಅರಿಯುವವನು), ಕರ್ತಾ (ಮಾಡುವವನು), ವಿಜ್ಞಾನಾತ್ಮಾ (ಅನುಭವರೂಪನು), ಆದ ಪುರುಷನು. ಈ ಪುರುಷನು ಆತ್ಮನಲ್ಲಿ ಪ್ರತಿಷ್ಠಿತನು.

೧೦. ಯಾವನು, ಎಲೈ ಸೌಮ್ಯನೆ, ಆ ಅಚ್ಛಾಯನು, ಅಶರೀರನು, ವರ್ಣರಹಿತನು, ಶುಭ್ರನು, ಅಕ್ಷರನು, ಆದ ಆತ್ಮನನ್ನು ಅರಿಯುವನೋ ಅವನು ಪರ (ಶ್ರೇಷ್ಠ) ವಾದ ಅಕ್ಷರವನ್ನೇ ಹೊಂದುವನು : ಅವನು ಸರ್ವಜ್ಞನು: ಸರ್ವವೂ ಆಗುವನು. ಆ ಅರ್ಥದಲ್ಲಿ ಈ ಶ್ಲೋಕವು.

೧೧. ದೇವತೆಗಳೆಲ್ಲರೊಡನೆ ಪ್ರಾಣಗಳೂ ಭೂತಗಳೂ ಎಲ್ಲಿ ಪ್ರತಿಷ್ಠಿತರಾಗಿರುವರೋ ಆತನು ವಿಜ್ಞಾನಾತ್ಮನು. ಯಾವನು ಆ ಅಕ್ಷರಸ್ವರೂಪವನ್ನು ಬಲ್ಲನೋ ಅವನು, ಸೌಮ್ಯ, ಸರ್ವಜ್ಞನು ಸರ್ವವನ್ನೂ ಹೊಕ್ಕವನಾಗುವನು.

ಇಂತಿದು ನಾಲ್ಕನೆಯ ಪ್ರಶ್ನವು.

ಐದನೆಯ ಪ್ರಶ್ನ

(ಹಿಂದೆ ನಾಲ್ಕನೆಯ ಪ್ರಶ್ನದಲ್ಲಿ ಹೇಳಿದ ಪರಬ್ರಹ್ಮವನ್ನು ಪಡೆಯಲು ಸಾಧನವಾದ ಪ್ರಣವ (ಓಂ) ದ ಉಪಾಸನವನ್ನು ಕುರಿತು ಈ ಪ್ರಶ್ನವು.)

೧. ಅನಂತರ ಆತನನ್ನು ಶೈಬ್ಯ ಸತ್ಯಕಾಮನು ಕೇಳಿದನು :— ಎಲೈ ಭಗವಂತನೆ, ಮನುಷ್ಯರಲ್ಲಿ ಮರಣಾಂತವಾಗಿ ಓಂಕಾರವನ್ನು

ಅಭಿಧ್ಯಾನ[1] (ಉಪಾಸನ) ಮಾಡಿದವನು ಯಾವ ಲೋಕವನ್ನು ಜಯಿಸುವನು ?"

೨. ಅತನಿಗೆ ಆ ಭಗವಂತನು ಹೇಳಿದನು :—ಓಂಕಾರವೆಂಬುದು ಯಾವುದೋ ಅದೇ ಪರ-ಅಪರ ಎಂಬ ಬ್ರಹ್ಮವು[2]. ಸತ್ಯಕಾಮ, ಆದರಿಂದ, ಈ ಒಂದೇ ಒಂದು ಸಾಧನದಿಂದ ಆ ಎರಡರಲ್ಲಿ ಒಂದನ್ನು ಹೊಂದುವನು.

೩. ಯಾವನು ಏಕಮಾತ್ರವನ್ನು ಅನುಸಂಧಾನಮಾಡುವನೋ ಅವನು ಅದರಿಂದಲೇ ಜ್ಞಾನವನ್ನು ಶೀಘ್ರವಾಗಿ ಪಡೆದು ಈ ಲೋಕದಲ್ಲಿ ಉತ್ತಮ ಮನುಷ್ಯನಾಗುವನು, ಅವನನ್ನು ಋಕ್ಕುಗಳು ಮನುಷ್ಯಲೋಕಕ್ಕೆ ತರುವುವು. ಅಲ್ಲಿ ಅವನು ತಪಸ್ಸು, ಬ್ರಹ್ಮಚರ್ಯ, ಶ್ರದ್ಧಾ, ಇವುಗಳಿಂದ ಕೂಡಿ, ತನ್ನ ವಿಭೂತಿಯನ್ನು ಅನುಭವಿಸುವನು.

೪. ಯಾವನು ಮನಸ್ಸಿನಲ್ಲಿ ಎರಡು ಮಾತ್ರೆಗಳನ್ನು ಸಿದ್ಧಿಮಾಡಿಕೊಳ್ಳುವನೋ ಅವನನ್ನು ಯಜುಸ್ಸುಗಳು ಅಂತರಿಕ್ಷದಲ್ಲಿರುವ ಸೋಮಲೋಕಕ್ಕೆ ಕರೆದೊಯ್ಯುವುವು. ಅವನು ಸೋಮಲೋಕದಲ್ಲಿ ವಿಭೂತಿಯನ್ನು ಅನುಭವಿಸಿ ಮತ್ತೆ ಹಿಂತಿರುಗುವನು.

೫. ಯಾವನು ಈ ಓಂಕಾರವನ್ನು ಮೂರು ಮಾತ್ರೆಗಳಿಂದ ಸಿದ್ಧಿಮಾಡಿಕೊಳ್ಳುವನೋ ಅವನು ಪರಬ್ರಹ್ಮವನ್ನು ಅನುಸಂಧಾನ ಮಾಡುವನು. ಅವನು ತೇಜೋಮಯನಾದ ಸೂರ್ಯನಲ್ಲಿ ಸೇರುವನು. ಹಾವು ಪರೆಯನ್ನು ಉಗಿಯುವಂತೆ, ಅವನು ಪಾಪವನ್ನು ಕಳೆದುಕೊಳ್ಳುವನು. ಅವನನ್ನು ಸಾಮಗಳು ಬ್ರಹ್ಮಲೋಕಕ್ಕೆ ಒಯ್ಯುವುವು.

---

1. ಅಭಿಧ್ಯಾನವೆಂದರೆ ಬಾಹ್ಯ ವಿಷಯಗಳನ್ನು ಉಪಸಂಹಾರಮಾಡಿ, ಸಮಾಹಿತಚಿತ್ತನಾಗಿ, ಆತ್ಮವಲ್ಲದ ಇನ್ನೇನನ್ನೂ ಲಕ್ಷಿಸದೆ, ಗಾಳಿಯಿಲ್ಲದ ಕಡೆಯಲ್ಲಿರುವ ದೀಪದಂತೆ, ಆತ್ಮವನ್ನು ಮಾತ್ರ ಗಮನಿಸುತ್ತಾ, ಓಂಕಾರವೇ ಬ್ರಹ್ಮವೆಂದು ಧ್ಯಾನದಲ್ಲಿ ಮಗ್ನನಾಗುವುದು.

2. ಪರಬ್ರಹ್ಮವೆನ್ನುವುದು ಸತ್ಯವೂ ಅಕ್ಷರವೂ ಆಗಿ ಯಾವ ಗುರುತೂ ಇಲ್ಲದ ಅತೀಂದ್ರಿಯವು. ಅಪರ ಬ್ರಹ್ಮವೆನ್ನುವುದು ಪ್ರಾಣವೆಂಬ ಮೊದಲನೆಯ ಪ್ರಜೆಯು.

ಅಲ್ಲಿ ಅವನು ಜೀವಘನ[1]ನಾದ ಹಿರಣ್ಯಗರ್ಭನೆಂಬ ಪರಮಪುರುಷನಿಗಿಂತಲೂ ಶ್ರೇಷ್ಠನಾದ (ಎಲ್ಲರ ಶರೀರವನ್ನು ಹೊಕ್ಕು ಸರ್ವಾಧಾರನಾಗಿರುವ) ಪರಮಾತ್ಮನೆಂಬ ಪುರುಷನನ್ನು ಕಾಣುವನು. ಆ ಅರ್ಥದಲ್ಲಿ ಇವೆರಡು ಶ್ಲೋಕಗಳುಂಟು.

೬. (ಓಂಕಾರದ) ಮೂರು ಮಾತ್ರೆಗಳು ಮೃತ್ಯುವಿನಿಂದ ಕೂಡಿದವು : ಅವುಗಳನ್ನು ಧ್ಯಾನಮಾಡುವಾಗ, ಒಂದರಲ್ಲೊಂದು ಸೇರಿಕೊಂಡಂತೆ, ಒಂದನ್ನೊಂದು ಬಿಡದಂತೆ (ನೋಡಿಕೊಳ್ಳಬೇಕು). ಇದನ್ನು ಬಲ್ಲವನು ಬಾಹ್ಯ (ಜಾಗ್ರತ್ತು), ಆಭ್ಯಂತರ (ನಿದ್ರೆ), ಮಧ್ಯಮ (ಕನಸು) (ಎಂಬ ಮೂರು ಅವಸ್ಥೆಗಳಲ್ಲಿರುವ ಪುರುಷತ್ರಯವನ್ನು) ಧ್ಯಾನಮಾಡುವಾಗ ಸರಿಯಾಗಿ ಪ್ರಯೋಗಿಸಿದುದೇ ಆದರೆ, ಅವನು ಅಲ್ಲಾಡುವುದಿಲ್ಲ.[2]

೭. (ಮೊದಲನೆಯ ಮಾತ್ರೆಯಾದ) ಋಕ್ಕುಗಳಿಂದ ಈ ಲೋಕವನ್ನೂ, (ಎರಡನೆಯ ಮಾತ್ರೆಯಾದ) ಯಜುಸ್ಸುಗಳಿಂದ ಅಂತರಿಕ್ಷವನ್ನೂ, (ಮೂರನೆಯ ಮಾತ್ರೆಯಾದ) ಸಾಮಗಳಿಂದ ವಿದ್ವಾಂಸರಿಗೆ ಮಾತ್ರ ತಿಳಿದಿರುವ ಬ್ರಹ್ಮಲೋಕವನ್ನೂ ಪಡೆಯುವರು. (ಈ ಮೂರು ಮಾತ್ರೆಗಳ, ಇದನ್ನು ಪೂರ್ಣವಾಗಿ ಬಲ್ಲ) ವಿದ್ವಾಂಸನು ಇದೊಂದೇ ಓಂಕಾರದಿಂದ ಶಾಂತವೂ ಅಜರವೂ ಅಮೃತವೂ ಅಭಯವೂ ಪರಮ ಶ್ರೇಷ್ಠವೂ ಆದ ಅದನ್ನು (ಬ್ರಹ್ಮವನ್ನು) ಹೊಂದುವನು.

ಇಂತಿದು ಐದನೆಯ ಪ್ರಶ್ನವು.

---

1. ಜೀವಘನ.—ಎಲ್ಲರ ಆತ್ಮನು : ಎಲ್ಲಾ ಜೀವಗಳೂ ಕೂಡಿರುವ ಪ್ರಪಂಚಜೀವನು. ಹಿರಣ್ಯಗರ್ಭನು. ಈತನು ಬೆಳ್ಳುಳ್ಳಿಗಡ್ಡೆಯಂತೆ, ಅಥವಾ ಹೂವಿನ ಗೊಂಚಲಾಗುವ ಮೊಗ್ಗೆಗಳ ಗುಂಪಿನಂತೆ, ಮುಂದೆ ಸೃಷ್ಟಿಗೆ ಬರುವ ಜಡಚೇತನವೆಲ್ಲವನ್ನೂ ಧರಿಸಿರುವನು.

2. ಜೀವನು ಜಾಗ್ರತ್ಸ್ವಪ್ನ ಸುಷುಪ್ತಿಗಳಲ್ಲಿ ವಿಶ್ವ ತೈಜಸ ಪ್ರಾಜ್ಞ ಎಂಬ ಮೂರು ಹೆಸರು ಪಡೆಯುವನು. ಆ ಮೂವರು ಪುರುಷರನ್ನೂ ಏಕಕಾಲದಲ್ಲಿ ಧ್ಯಾನಮಾಡುವುದೇ ಪ್ರಣವೋಪಾಸನೆಯು. ಆತನಿಗೆ ಮಾಂಡೂಕ್ಯೋಪನಿಷತ್ತು ಹೇಳುವ "ಎಲ್ಲವೂ ಓಂಕಾರದ ವಿಸ್ತಾರವು" ಎಂಬುದು ಅರ್ಥವಾಗುವುದು. ಅಂಥವನನ್ನು ಕುರಿತು ಇಲ್ಲಿ ಹೇಳಿರುವುದು.

ಆರನೆಯ ಪ್ರಶ್ನೆ

(ದಿನದಿನದಲ್ಲಿ ಸುಷುಪ್ತಕಾಲದಲ್ಲಿಯೂ ಕೊನೆಗೆ ಪ್ರಲಯಕಾಲದಲ್ಲಿಯೂ ಎಲ್ಲವನ್ನೂ ಒಳಗೊಳ್ಳುವ ಪರಮನ ವಿಚಾರವನ್ನು ಹಿಂದಿನ ಪ್ರಶ್ನದಲ್ಲಿ ಹೇಳಿಯಾಯಿತು. ಆ ಪರಮನನ್ನು ಕುರಿತು ಈ ಆರನೆಯ ಪ್ರಶ್ನವು.)

೧. ಅನಂತರ ಆತನನ್ನು ಸುಕೇಶ ಭಾರದ್ವಾಜನು ಕೇಳಿದನು :—" ಭಗವನ್, ಹಿರಣ್ಯನಾಭನೆಂಬ ಕೋಸಲದೇಶದ ರಾಜಪುತ್ರನು ನನ್ನ ಬಳಿಗೆ ಬಂದು " ಭಾರದ್ವಾಜ, ಹದಿನಾರು ಕಳೆಗಳ ಪುರುಷನನ್ನು ಬಲ್ಲೆಯಾ ? " ಎಂದು ಕೇಳಿದನು. ನಾನು ಆ ಕುಮಾರನಿಗೆ " ನಾನು ಆತನನ್ನು ಅರಿಯೆನು. ನನಗೆ ಗೊತ್ತಿದ್ದರೆ, ನಿನಗೆ ಹೇಳುತ್ತಿರಲಿಲ್ಲವೆ ? ಯಾವನು ಸುಳ್ಳು ಹೇಳುವನೋ ಅವನು ಸಮೂಲವಾಗಿ ನಾಶವಾಗುವನು. ಅದರಿಂದ, ನಾವು ಸುಳ್ಳನ್ನು ಹೇಳಬಾರದು ", ಎಂದೆನು. ಆತನು ಮರುಮಾತಾಡದೆ ರಥವನ್ನು ಹತ್ತಿ ಹೊರಟುಹೋದನು. ಆ ಪುರುಷನನ್ನು ಕುರಿತು ನಾನು ನಿನ್ನನ್ನು ಕೇಳುವೆನು. ಆ ಪುರುಷನೆಲ್ಲಿರುವನು ? "

೨. ಆತನು ಅವನಿಗೆ ಹೇಳಿದನು :—ಸೋಮ್ಯ, ಯಾವನಲ್ಲಿ ಹದಿನಾರು ಕಳೆ (ಅವಯವ) ಗಳು ಉಂಟಾಗುವುವೋ ಆ ಪುರುಷನು ಇಲ್ಲಿಯೇ ಶರೀರದಲ್ಲಿಯೇ ಇರುವನು.

೩. ಆತನು " ಯಾರು ಎದ್ದುಹೋದರೆ ನಾನೂ ಎದ್ದುಹೋಗುವೆನು ? ಯಾರು ಇದ್ದರೆ ನಾನೂ ಇರುವೆನು ? " ಎಂದು ಚಿಂತಿಸಿ ನೋಡಿದನು.

೪. ಆತನು ಪ್ರಾಣವನ್ನು ಸೃಜಿಸಿದನು. ಪ್ರಾಣದಿಂದ ಶ್ರದ್ಧಾ, ಆಕಾಶ, ವಾಯು, ತೇಜಸ್ಸು, ಜಲ, ಪೃಥಿವೀ, ಇಂದ್ರಿಯ, ಮನಸ್ಸು,

ಅನ್ನಗಳನ್ನೂ, ಅನ್ನದಿಂದ ವೀರ್ಯ, ತಪಸ್ಸು, ಮಂತ್ರ, ಕರ್ಮ, ಲೋಕಗಳನ್ನೂ, ಲೋಕಗಳಲ್ಲಿ ನಾಮವನ್ನೂ (ಸೃಜಿಸಿದನು).[1]

೫. ಅದು ಹೇಗೆಂದರೆ, ನದಿಗಳು ಸಮುದ್ರವನ್ನು ಹೊಂದಬೇಕೆಂದು ಹರಿಯುತ್ತ ಸಮುದ್ರವನ್ನು ಸೇರಿ ಅಲ್ಲಿ ಮುಗಿದುಹೋಗುತ್ತವೆ: ತಮ್ಮ ತಮ್ಮ ನಾಮರೂಪಗಳನ್ನು ಕಳೆದುಕೊಳ್ಳುತ್ತವೆ. ಸಮುದ್ರವೇ ಆಗಿಹೋದುವು ಎಂದು ಹೇಳುತ್ತಾರೆ. ಹೀಗೆಯೇ, (ಎಲ್ಲವನ್ನು ನೋಡುವ) ಪರಿದ್ರಷ್ಟುವಿಗೆ ಈ ಹದಿನಾರು ಅಂಗಗಳು ಪುರುಷನಲ್ಲಿ ಲಯವಾಗುವುವು: ಪುರುಷನಲ್ಲಿ ಸೇರಿಹೋಗುವುವು:

---

1. ಪ್ರಾಣ=ಹಿರಣ್ಯಗರ್ಭ: ಎಲ್ಲರಿಗೂ ಆಧಾರವಾಗಿ ಎಲ್ಲರಲ್ಲಿಯೂ ಅಂತರಾತ್ಮನಾಗಿರುವವನು.

ಶ್ರದ್ಧಾ: ಶುಭಕರ್ಮವಾಡಬೇಕೆಂಬ ಆಸೆಗೆ ಕಾರಣವಾದುದು.

ಪಂಚಮಹಾಭೂತಗಳು: ತಮ್ಮ ತಮ್ಮ ಗುಣಗಳೊಡನೆ ಕೂಡಿದವು. ಆಕಾಶಕ್ಕೆ ಶಬ್ದವೆಂಬ ಒಂದು ಗುಣ: ವಾಯುವಿಗೆ ಶಬ್ದ ಸ್ಪರ್ಶ ಎಂಬ ಎರಡು: ತೇಜಸ್ಸಿಗೆ ಶಬ್ದ ಸ್ಪರ್ಶ ರೂಪವೆಂಬ ಮೂರು: ಜಲಕ್ಕೆ ಶಬ್ದ ಸ್ಪರ್ಶ ರೂಪ ರಸ ಎಂಬ ನಾಲ್ಕು: ಪೃಥಿವಿಗೆ ಶಬ್ದ ಸ್ಪರ್ಶ ರೂಪ ರಸ ಗಂಧ ಎಂಬ ಐದು.

ಇಂದ್ರಿಯ: ಇವು ಪಂಚಮಹಾಭೂತಗಳಿಂದ ಆದ ಕರಣ (ಕೆಲಸ ಮಾಡಲು ಸಹಾಯವಾದ ಸಾಧನ) ಗಳು.

ಇವು ಬುದ್ಧೀಂದ್ರಿಯ, ಕರ್ಮೇಂದ್ರಿಯ, ಎಂದು ಎರಡು ಬಗೆ. ಇವುಗಳೆರಡಕ್ಕೂ ಒಡೆಯನಾಗಿ ಸಂಕಲ್ಪವಿಕಲ್ಪಾತ್ಮಕವಾದುದು ಮನಸ್ಸು.

ಅನ್ನ: ಸೃಷ್ಟಿಯಾದ ಭೂತಗಳ ಸ್ಥಿತಿಗೆ ಕಾರಣವಾದುದು.

ವೀರ್ಯ: ಎಲ್ಲ ಕರ್ಮಗಳನ್ನೂ ಮಾಡಬಲ್ಲ ಬಲ.

ತಪಸ್ಸು: ಬೆರೆಸಿಕೊಂಡು ಹೋಗುತ್ತಿರುವ ಪ್ರಾಣಿಗಳು ಶುದ್ಧರಾಗಬೇಕೆಂದಾಗ ಮಾಡಬೇಕಾದ ಕಾರ್ಯ.

ಮಂತ್ರ: ತಪಸ್ಸಿನಿಂದ ವಿಶುದ್ಧವಾದ ಇಂದ್ರಿಯಗಳು ಮಾಡಬೇಕಾದ ಕರ್ಮಗಳನ್ನು ಹೇಳುವ, ಅದನ್ನು ಮಾಡುವುದಕ್ಕೆ ಬೇಕಾದ ಸಾಧನಗಳು.

ಕರ್ಮ: ಅಗ್ನಿಹೋತ್ರಾದಿ ಕರ್ಮಗಳು.

ಲೋಕ: ಕರ್ಮಫಲವನ್ನು ಕೊಡುವ ಸ್ಥಳವಿಶೇಷ.

ನಾಮ: ಪ್ರಾಣಿಗಳನ್ನು ಪ್ರತ್ಯೇಕವಾಗಿ ತಿಳಿದುಕೊಳ್ಳುವ ಸಾಧನ.

ಅವುಗಳ ನಾಮರೂಪಗಳು ಕಳೆದುಹೋಗುವುವು: (ಆಗ ಅವು) ಪುರುಷನೇ ಆಗಿಹೋಗುತ್ತವೆ: ಎಂದು ಹೇಳುತ್ತಾರೆ. ಆತನೇ ಪುರುಷನು. ಆತನು ಅ-ಕಲನು (ವಿಭಾಗಗಳು ಇಲ್ಲದವನು.) ಅಮೃತನು: (ಮರಣಾದಿಗಳಿಲ್ಲದವನು.) ಈ ಅರ್ಥದಲ್ಲಿ ಶ್ಲೋಕವು.

೬. ಗುಂಬದಲ್ಲಿ ಆರೇಕಾಲುಗಳು ಹೇಗೋಹಾಗೇ ಕಳೆಗಳು ಯಾರಲ್ಲಿ ಇರುವುವೋ ಆ ಪುರುಷನು ವೇದ್ಯನು. ಅವನನ್ನು ತಿಳಿಯಿರಿ: ನಿಮ್ಮನ್ನು ಮೃತ್ಯುವು ವ್ಯಥೆಗೊಳಿಸದಿರಲಿ.

೭. ಆತನು ಹೇಳಿದನು: ನಾನು ಎನ್ನುವುದು ಇಷ್ಟು: ಇದು ಪರಮವಾದ ಬ್ರಹ್ಮವೆಂದು ತಿಳಿ: ಇದಕ್ಕಿಂತ ಪರವಿನ್ನಿಲ್ಲ.

ಅವರು (ಆರು ಜನವೂ) ಆತ (ಪಿಪ್ಪಲಾದ) ನನ್ನು ಅರ್ಚಿಸಿದರು: "ನೀನೇ ನಮ್ಮ ತಂದೆ: ನೀನು ನಮ್ಮನ್ನು ಅವಿದ್ಯೆಯ ಆಚೆಯ ದಡವನ್ನು ಸೇರಿಸಿದೆ:" (ಎಂದು ಹೊಗಳಿದರು.)

ಪರಮ ಋಷಿಗಳಿಗೆ ನಮಸ್ಕಾರವು: ಪರಮ ಋಷಿಗಳಿಗೆ ನಮಸ್ಕಾರವು.

ಇಂತಿದು ಆರನೆಯ ಪ್ರಶ್ನವು.

ಭದ್ರಂ ಕರ್ಣೇಭಿಃ ಎಂಬುದು ಶಾಂತಿ ಮಂತ್ರವು.

ಓಂ ಶಾಂತಿ ಶ್ಯಾಂತಿ ಶ್ಯಾಂತಿಃ

ಇಂತಿದು ಪ್ರಶ್ನವು

೪. ಐತರೇಯೋಪನಿಷತ್

ಋಗ್ವೇದದ ಐತರೇಯದ ಎರಡನೆಯ ಆರಣ್ಯಕದಲ್ಲಿ ಇರುವ ಆರು ಅಧ್ಯಾಯಗಳಲ್ಲಿ ಮೂರು ಅಧ್ಯಾಯಗಳು ಉಪನಿಷತ್ತು ಎನ್ನುತ್ತಾರೆ. ಅದೇ ಇದು. ಇದರಲ್ಲಿ ಮೂರು ಅಧ್ಯಾಯ, ಐದು ಖಂಡ, ಮೂವತ್ತು ಮೂರು ಮಂತ್ರಗಳು.

"ಜ್ಞಾನ ಕರ್ಮ ಎರಡನ್ನೂ ಸೇರಿಸಿಕೊಂಡು ಸಿದ್ಧಿಯನ್ನು ಸಾಧಿಸಬೇಕು: ಅದರಿಂದ ಆಗುವ ಸಿದ್ಧಿಗಳಲ್ಲಿ ದೇವಾಪ್ಯಯವೇ ದೊಡ್ಡದು (ದೇವಾಪ್ಯಯ ಎಂದರೆ ದೇವತೆಯಲ್ಲಿ ಸೇರಿಹೋಗುವುದು. ನಿದ್ದೆಯಲ್ಲಿ ತನ್ನನ್ನು ತಾನು ಮರೆಯುವಂತೆ, ದೇವತಾಭಾವದಲ್ಲಿ ತಾನು ಲೀನವಾಗುವನು. ಅದು ದೇವಾಪ್ಯಯ.)" ಎಂಬುದೊಂದು ಪ್ರಾಚೀನಕಾಲದಿಂದಲೂ ಬಂದಿರುವ ವಾದ. ಅದನ್ನು ನಿರಾಕರಿಸಿ, ಆತ್ಮಜ್ಞಾನವೊಂದೇ ಮೋಕ್ಷಸಾಧನ, ಎಂಬುದನ್ನು ಹೇಳಲು ಈ ಉಪನಿಷತ್ತು ಹೊರಟಿದೆ.

ಇದರ ಶಾಂತಿ ಮಂತ್ರವಿದು :—

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಂ। ಆವಿರಾವೀರ್ಮ ಏಧಿ। ವೇದಸ್ಯ ಮ ಆಣೀಸ್ಥಃ। ಶ್ರುತಂ ಮೇ ಮಾ ಪ್ರಹಾಸೀಃ । ಅನೇನ ಅಧೀತೇನ ಅಹೋರಾತ್ರಾನ್ ಸಂದಧಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರ ಮವತು । ಮಾಮವತು । ವಕ್ತಾರಮವತು ವಕ್ತಾರಂ ।

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ ॥

ಓಂ. ನನ್ನ ವಾಕ್ಕು ಮನಸ್ಸಿನಲ್ಲಿ ಪ್ರತಿಷ್ಠಿತವಾಗಿದೆ : ನನ್ನ ಮನಸ್ಸು ವಾಕ್ಕಿನಲ್ಲಿ ಪ್ರತಿಷ್ಠಿತವಾಗಿದೆ. ಸ್ವಯಂ ಗೋಚರವಾಗುವ

ಬ್ರಹ್ಮವೇ ! ನನಗೆ ಗೋಚರವಾಗು. ವೇದದ ಕೀಲಿನಲ್ಲಿರುವೆನು ನಾನು. ನನ್ನಿಂದ ಶ್ರುತವಾದುದು ನನ್ನನ್ನು ಬಿಡದಿರಲಿ. ಹೀಗೆ ಅಧ್ಯಯನ ಮಾಡಿ ಅಹೋರಾತ್ರಗಳನ್ನು ಸೇರಿಸಿಕೊಂಡಿರುವೆನು. ಋತವನ್ನು ಹೇಳುವೆನು : ಸತ್ಯವನ್ನು ಹೇಳುವೆನು. ಅದು ನನ್ನನ್ನು ಕಾಪಾಡಲಿ. ಅದು ಹೇಳಿಕೊಡುವವನನ್ನು ಕಾಪಾಡಲಿ. ನನ್ನನ್ನು ಕಾಪಾಡಲಿ. ಹೇಳಿಕೊಡುವವನನ್ನು ಕಾಪಾಡಲಿ. ಓಂ ಶ್ಯಾಂತಿ ಶ್ಯಾಂತಿ ಶ್ಯಾಂತಿಃ.

ಅಧ್ಯಾಯ ಒಂದು—ಖಂಡ ಒಂದು

೧. (ನಾಮ ರೂಪ ಕರ್ಮಗಳಿಂದ ಬೇರೆ ಬೇರೆಯಾಗಿರುವಂತೆ ತೋರುತ್ತಿರುವ) ಈ ಜಗತ್ತೆಲ್ಲವೂ ಆತ್ಮವೇ ! ಮೊದಲಲ್ಲಿ ಆತನು ಒಬ್ಬನೇ ಇದ್ದುದು. ಇನ್ನು ಏನೂ ಇರಲಿಲ್ಲ. ಆತನು ಲೋಕಗಳನ್ನು ಸೃಜಿಸುವೆನು ಎಂದುಕೊಂಡನು.[1]

---

1. ಮಹಿದಾಸ ಐತರೇಯ ಎಂಬ ಋಷಿಯು ಐತರೇಯ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳ ಕರ್ತನೆಂದು ಪ್ರತೀತಿ. ಈತನು ಭೂದೇವಿಯ ಅನುಗ್ರಹಧಿಂದ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳನ್ನು ಪಡೆದನು. ಛಾಂದೋಗ್ಯ ಅಧ್ಯಾಯ ೩, ಕಾಂಡ ೧೬, ಮಂತ್ರ ಏಳರಲ್ಲಿ "ಇದನ್ನು ಬಲ್ಲವನಾದ ಮಹಿದಾಸ ಐತರೇಯನು ಹೇಳಿದನು : ಆತನು (ರೋಗವನ್ನು ಕುರಿತು) 'ನೀನೇಕೆ ನನ್ನನ್ನು ಕಾಡುವೆ ? ಇದರಿಂದ ನಾನು ಸಾಯುವುದಿಲ್ಲ.' ಎಂದು ಹೇಳಿ ೧೬೦೦ ವರ್ಷಗಳು ಬದುಕಿದ್ದನು" ಎಂದು ಹೇಳಿದೆ.

(ಮೂಲದಲ್ಲಿ ಷೋಡಶಂ ವರ್ಷಶತಂ ಎಂದಿದೆ. ಇದನ್ನು ಕೆಲವರು ೧೧೬ ಎಂದು ಭಾಷಾಂತರ ಮಾಡಿದ್ದಾರೆ.)

ಋಗ್ವೇದ ದಶಮ ಮಂಡಲ, ಸೂಕ್ತ ೧೨೯—ಸೃಷ್ಟಿಸೂಕ್ತ ನೋಡಿ. ಆಗ ಅಸತ್ ಇರಲಿಲ್ಲ: ಸತ್ ಇರಲಿಲ್ಲ. ವಾಯುವಿರಲಿಲ್ಲ: ಆಕಾಶವಿರಲಿಲ್ಲ. ಮುಚ್ಚಿದ್ದು ಇರಲಿಲ್ಲ : ಮರೆ ಇರಲಿಲ್ಲ ... ಇತ್ಯಾದಿ.

ಬೃಹದಾ ೧-೪-೧.

ಆತ್ಮಾ. ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ॥ ಯಚ್ಚಾಸ್ಯ ಸಂತತೋಭಾವಃ ತಸ್ಮಾದಾತ್ಮೇತಿ ಗೀಯತೇ ॥ ಎಲ್ಲವನ್ನೂ ಪಡೆಯುವುದು ಯಾವುದೋ, ಎಲ್ಲವನ್ನೂ ಗ್ರಹಿಸುವುದು ಯಾವುದೋ, ಯಾವುದು ಯಾವಾಗಲೂ ಇರುವುದೋ, ಅದು ಆತ್ಮ. ವಿಷ್ಣು ಪುರಾಣ ೫-೧೮-೫೫ರಲ್ಲಿ ಆತ್ಮನು "ಭೂತಾತ್ಮಾ, ಇಂದ್ರಿಯಾತ್ಮಾ, ಪ್ರಧಾನಾತ್ಮಾ, ಜೀವಾತ್ಮಾ, ಪರಮಾತ್ಮಾ" ಎಂದು ಐದು ವಿಧ ಎಂದಿದೆ.

೨. ಆತನು ಈ ಲೋಕಗಳನ್ನು ಸೃಜಿಸಿದನು : (ಅವು ಯಾವವು ಎಂದರೆ) ಅಂಭಸ್ಸು, ಮರೀಚಿ, ಮರ, ಆಪಸ್ಸು. ದ್ಯುಲೋಕದ ಮೇಲೆ ಅಂಭಸ್ಸು; (ಅದರ ಕೆಳಗೆ ಆ ಅಂಭಸ್ಸನ್ನು ಹೊತ್ತುಕೊಂಡಿರುವ) ದ್ಯುಲೋಕವು : (ಅದರ ಕೆಳಗೆ) ಮಧ್ಯಮ ಲೋಕವಾದ ಅಂತರಿಕ್ಷದ ಮರೀಚಿ ಲೋಕವು. (ಅದರ ಕೆಳಗೆ) ಮರಣವುಳ್ಳ ಪ್ರಾಣಿಗಳು ಇರುವ ಪೃಥಿವಿಯು : ಅದರ ಕೆಳಗೆ ನೀರು. ಅದೇ ಆಪಸ್ಸು.[1]

೩. "ಇವು ಲೋಕಗಳು. ಇನ್ನು ಲೋಕಪಾಲರನ್ನು ಸೃಜಿಸುವೆನು" ಎಂದುಕೊಂಡನು. ಆತನು "ಅಪ್ಪುಗಳಿಂದಲೇ ಪುರುಷ[2]ನೊಬ್ಬನನ್ನು ಮೇಲಕ್ಕೆ ತೆಗೆದು ಇಟ್ಟನು."[3]

೪. ಆತನನ್ನು ಕುರಿತು ಅಭಿತಪನ[4] ಮಾಡಿದನು. ಹಾಗೆ ಆದ ಮೇಲೆ ಮೊಟ್ಟೆ (ಯು ಒಡೆಯುವುದಕ್ಕೆ ಮುಂಚೆ ತೂತಿಡುವಂತೆ) ಅದಕ್ಕೆ ಒಂದು ಮುಖವಾಯಿತು. ಮುಖದಿಂದ ವಾಕ್, ವಾಕ್ಕಿನಿಂದ ಅಗ್ನಿ ಆ(ದರು), ಮೂಗು ಆಯಿತು. ಮೂಗಿನಿಂದ ಪ್ರಾಣ, ಪ್ರಾಣದಿಂದ ವಾಯು, (ಆದರು.).[5]

---

1. ಅಂಭಸ್ಸು : ಎಲ್ಲವನ್ನೂ ಭರಣ ಮಾಡುವುದರಿಂದ ಈ ಹೆಸರು.
ಆತ್ಮನು ಲೋಕಗಳನ್ನು ಸೃಜಿಸಿದುದು ಹೇಗೆ ? ಎಂಬಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತಗಳಿಗೆ ಮತಭೇದವು. ಆತ್ಮನು ಸೃಷ್ಟಿಸಿದುದು ಎಂದರೆ, ನೀರಿನಲ್ಲಿ ನೊರೆ, ಗುಳ್ಳೆ ಮೊದಲಾದವು ಕಂಡಂತೆ ಎಂಬುದು ಅದ್ವೈತಸಿದ್ಧಾಂತ.

2. ಪುರುಷ –(1) ಪೂರ್ಣಮನೇನ ಪುರುಷೇಣ ಸರ್ವಗತತ್ವಾತ್ ಜಗದಿತಿ ಪುರುಷಃ (2) ಪೂಶ್ಶರೀರಂ ಬುದ್ಧಿರ್ವಾ ತತ್ರಾಸೌ ವಿಷಯೋಪಲಂಭನಾರ್ಥಂ ಸೀದತೀತಿ ಪುರುಷಃ—(1) ಎಲ್ಲೆಲ್ಲಿಯೂ ಇರುವನಾದ್ದರಿಂದ ಜಗತ್ತೆಲ್ಲ ಇವನಿಂದ ಪೂರ್ಣವಾಗಿದೆಯೆಂದು ಪುರುಷನು. (2) ಪೂ : ಎಂದರೆ ಶರೀರ ಅಥವಾ ಬುದ್ಧಿ. ಅಲ್ಲಿ ವಿಷಯಗ್ರಹಣ ಮಾಡಲು ಇರುವನೆಂದು ಪುರುಷನು.
ಈ ಆದಿಪುರುಷನೇ ವಿರಾಟ್ ಅಥವಾ ಹಿರಣ್ಯಗರ್ಭ.

3. "ಒಂದು ಪುರುಷಾಕೃತಿಯನ್ನು ನೀರಿನಿಂದ ಎತ್ತಿ, ಅದಕ್ಕೆ ತನ್ನ ಅಂಗಾಂಗಗಳನ್ನು ಕೊಟ್ಟನು."—ಶಂಕರರು.

4. ಅಭಿತಪನ = ಅಭಿಧ್ಯಾನ—ಸಂಕಲ್ಪ—(ಶಂಕರರು).

5. ಮುಖ, ವಾಕ್, ಅಗ್ನಿ ಎಂಬಲ್ಲಿ ಮೊದಲನೆಯದು ದೇಹದಲ್ಲಿರುವ ಕರಣ (ಇಂದ್ರಿಯ), ಅದರ ವ್ಯಾಪಾರ ವಾಕ್, ಅದರ ಅಭಿಮಾನಿಯಾದ ಅಗ್ನಿ, ಇವರು ಆದರು, ಎಂದರೆ ವ್ಯಕ್ತವಾದರು.

ಅಕ್ಷಿಗಳು ಆದುವು. ಅಕ್ಷಿಯಿಂದ ಚಕ್ಷು, ಚಕ್ಷುವಿನಿಂದ ಆದಿತ್ಯ, ಆದರು.

ಕರ್ಣಗಳು ಆದುವು. ಕರ್ಣದಿಂದ ಶ್ರೋತ, ಶ್ರೋತದಿಂದ ದಿಕ್ಕು, ಆದುವು.

ತ್ವಕ್ಕು ಆಯಿತು. ತ್ವಕ್ಕಿನಿಂದ ಲೋಮಗಳು, ಲೋಮಗಳಿಂದ ಓಷಧಿ ವನಸ್ಪತಿಗಳು, ಆದುವು.

ಹೃದಯವು ಆಯಿತು. ಹೃದಯದಿಂದ ಮನಸ್ಸು, ಮನಸ್ಸಿನಿಂದ ಚಂದ್ರಮನು, ಆದರು.

ನಾಭಿಯು ಆಯಿತು. ನಾಭಿಯಿಂದ ಅಪಾನ, ಅಪಾನದಿಂದ ಮೃತ್ಯು, ಆದರು.

ಶಿಶ್ನವು ಆಯಿತು. ಶಿಶ್ನದಿಂದ ರೇತಸ್ಸು, ರೇತಸ್ಸಿನಿಂದ ಅಪ್ಪು ಆದುವು[1].

(ಇಲ್ಲಿ ಶಂಕರ ಭಾಷ್ಯದಲ್ಲಿ "ಮುಖ ದ್ವಾಕ್ಕರಣಮಿಂದ್ರಿಯಂ ನಿರವರ್ತತ, ತದಧಿಷ್ಠಾತಾಗ್ನಿಸ್ತತೋ ವಾಚೋಲೋಕಪಾಲಃ ॥ ತಥಾ...ನಾಸಿಕಾಭ್ಯಾಂ ಪ್ರಾಣಃ, ಪ್ರಾಣಾದ್ವಾಯುಃ, ಇತಿ, ಸರ್ವತ್ರಾಧಿಷ್ಠಾನಂ ಕರಣಂ ದೇವತಾ ಚ ತ್ರಯಂ ಕ್ರಮೇಣ ನಿರ್ಭಿಣ್ಣಮಿತಿ ॥" ಎಂದು ಹೇಳಿರುವುದನ್ನು ಗಮನಿಸಿ.)

1. ಹಿಂದಿನ ಮಂತ್ರದಲ್ಲಿ "ಅಪ್ಪಿನಿಂದ ಪುರುಷನನ್ನು ಎತ್ತಿ" ಎಂದು ಹೇಳಲಾಯಿತು. ಇಲ್ಲಿ ರೇತಸ್ಸಿನಿಂದ ಅಪ್ಪು ಎಂದು ಹೇಳಿದೆ. ಶರೀರವು ಅಪ್ಪಿನಿಂದ ಹುಟ್ಟಿತು. ಮತ್ತೆ ಅಪ್ಪನ್ನು ಮಾಡಲು ಶಕ್ತವಾಯಿತು. ಅಲ್ಲಿಗೆ ಒಂದು ಸುತ್ತು ಪೂರ್ಣವಾಯಿತು. ಬೀಜದಿಂದ ಹುಟ್ಟಿದ ಮರವು ಬೀಜವನ್ನು ಪಡೆದಂತಾಯಿತು.

"ಅಪ್ಪು ಎನ್ನುವುದು ಮೂಲರಕ್ತ : ಅದು ನೆತ್ತಿಯಲ್ಲಿದೆ. ಅದು ನೊರೆನೊರೆಯಾಗಿರುತ್ತದೆ. ಅದೇ ದೇಹಧಾರಣಕ್ಕೆ ಕಾರಣವಾದುದು. ಅದೇ ರೇತಸ್ಸಾಗಿ ಸ್ತ್ರೀ ಗರ್ಭವನ್ನು ಪ್ರವೇಶಿಸಿ ಮತ್ತೊಂದು ಜನ್ಮಕ್ಕೆ ಕಾರಣವಾಗುವುದು." ಎಂದು ಶ್ರೀ ಬ್ರಹ್ಮರ್ಷಿ ಸುಬ್ಬರಾಯ ಶಾಸ್ತ್ರಿಗಳು ಹೇಳುತ್ತಿದ್ದರು.

ಅಪಏವ ಸ ಸರ್ಜಾದೌ ಎಂದು ಮನು. ಆಪೋವಾ ಇದಮಾಸನ್—ತೈ. ಆರಣ್ಯಕ 1–23–1. ಹಾಗೇ ಛಾಂ. ೭–೧೦–೧-೨ ನೋಡಿ.

ಇಂತಿದು ಮೊದಲನೆಯ ಖಂಡವು.

ಖಂಡ ಎರಡು

೧. ಆ ಸೃಷ್ಟಿಯಿಂದ ಎಲ್ಲಾ ದೇವತೆಗಳೂ (ಲೋಕಪಾಲಕರು ಸಂಸಾರವೆಂಬ) ಮಹಾರ್ಣವ[1] ದೊಡ್ಡ ಸಮುದ್ರದಲ್ಲಿ ಬಿದ್ದು ಹೋದರು. (ಇವರೆಲ್ಲರನ್ನೂ ಒಳಗೊಂಡಿದ್ದ) ಆ ಪುರುಷನಿಗೆ ಹಸಿವು ಬಾಯಾರಿಕೆಗಳು ಸೇರಿದುವು.[2] ಆ ದೇವತೆಗಳು ಆ ಪುರುಷನನ್ನು ಕುರಿತು "ನಮಗೆ ಒಂದು ಆಯತನ (ಇರುವ ಎಡೆ) ವನ್ನು ತೋರಿಸು. ಅಲ್ಲಿ ಇದ್ದುಕೊಂಡು ಅನ್ನವನ್ನು ತಿನ್ನುವೆವು" ಎಂದರು.

೨. (ಆ ವಿರಾಟ್ಪುರುಷನು) ಅವರಿಗೆ ಒಂದು ಹಸುವನ್ನು ತಂದನು. (ತಂದು ಕೊಟ್ಟನು): ಇದು ನಮಗೆ ಸಾಲದು ಎಂದರು. ಆಗ ಕುದುರೆಯನ್ನು ತಂದುಕೊಟ್ಟನು: ಇದೂ ನಮಗೆ ಸಾಲದು ಎಂದರು.

೩. ಆಗ ಅವರಿಗೆ ಪುರುಷನನ್ನು ತಂದುಕೊಟ್ಟನು: ಅವರು ಸುಕೃತ[3] (ಚೆನ್ನಾಯಿತು) ಎಂದರು. ಅದರಿಂದ ಮನುಷ್ಯನನ್ನು ಸುಕೃತ ಎನ್ನುವರು. (ಆತನು) ಅವರನ್ನು, ಈ ಆಯತನವನ್ನು ಪ್ರವೇಶಿಸಿರಿ ಎಂದನು.

೪. (ಆಗ) ಅಗ್ನಿಯು ವಾಕ್ಕಾಗಿ ಮುಖವನ್ನು ಪ್ರವೇಶಿಸಿದನು: ವಾಯುವು ಪ್ರಾಣವಾಗಿ ಮೂಗನ್ನು ಹೊಕ್ಕನು: ಆದಿತ್ಯನು

---

1. ಮಹಾರ್ಣವ:—ಸಂಸಾರವನ್ನು ಸಾಗರಕ್ಕೆ ಹೋಲಿಸಿದೆ.

2. ಆ ಪುರುಷನನ್ನು ಹಸಿವು ಬಾಯಾರಿಕೆಗಳು ಸೇರಿದುದರಿಂದ, ಅವನಲ್ಲಿದ್ದವರಿಗೆಲ್ಲಾ ಹಸಿವು ಬಾಯಾರಿಕೆಗಳು ಬಂದುವು.

3. ಸುಕೃತ:—ಸರ್ವ ಪುಣ್ಯಕರ್ಮಹೇತುವೆಂದು ಸುಕೃತ ಮತ್ತು ಆತ್ಮನು ಸ್ವಯಂ ತನ್ನ ಮಾಯೆಯಿಂದ ಸೃಷ್ಟಿಸಿದವನು ಎಂದು ಸುಕೃತ.

"Man is created in the image of God," "Son of man" ಮೊದಲಾದ ಸಿದ್ಧಾಂತಗಳನ್ನು ಈ ಸಂದರ್ಭದಲ್ಲಿ ಚಿಂತಿಸಿ.

ಚಕ್ಷುವಾಗಿ ಕಣ್ಣುಗಳನ್ನು ಹೊಕ್ಕನು ; ದಿಕ್ಕುಗಳು ಶ್ರೋತ್ರವಾಗಿ ಕಿವಿಯನ್ನು ಹೊಕ್ಕರು : ಓಷಧಿ ವನಸ್ಪತಿಗಳು ರೋಮಗಳಾಗಿ ಚರ್ಮವನ್ನು ಹೊಕ್ಕರು. ಚಂದ್ರನು ಮನಸ್ಸಾಗಿ ಹೃದಯವನ್ನು ಹೊಕ್ಕನು. ಮೃತ್ಯುವು ಅಪಾನವಾಗಿ ನಾಭಿಯನ್ನು ಸೇರಿದನು. ಆಪವು ರೇತಸ್ಸಾಗಿ ಶಿಶ್ನವನ್ನು ಸೇರಿತು.[1]

೫. (ಆಗ) ಆ (ವಿರಾಟನನ್ನು ಕುರಿತು) ಅಶನಾ (ಹಸಿವು) ಪಿಪಾಸಾ (ಬಾಯಾರಿಕೆ) ಗಳು ಕೇಳಿದುವು : ನಮಗೆ (ಎಡೆಯನ್ನು) ಗೊತ್ತು ಮಾಡು ಎಂದು. ಆತನು ಹೇಳಿದನು : “ ಈ ದೇವತೆಗಳ ಭಾಗವನ್ನಾಗಿ ಮಾಡುವೆನು. ಅವರೂ ನೀವೂ ಭಾಗಿಗಳಾಗಿ ” ಎಂದು : ಅದರಿಂದ ಯಾವ ದೇವತೆಗೆ ಹವಿಸ್ಸು ಕೊಟ್ಟರೂ ಅದರಲ್ಲಿ ಅಶನಾ ಪಿಪಾಸೆಗಳಿಗೆ ಭಾಗವುಂಟು.

ಇಂತಿದು ಎರಡನೆಯ ಖಂಡವು.

ಖಂಡ ಮೂರು

ಆತನು ಯೋಚಿಸಿದನು : ಈ ಲೋಕಗಳು, ಈ ಲೋಕಪಾಲರು, (ಅಶನಾ ಪಿಪಾಸೆಗಳಿಂದ ಒದ್ದಾಡುವರು. ಅದರಿಂದ) ಇವರಿಗೆ ಅನ್ನವನ್ನು ಸೃಜಿಸುವೆನು ಎಂದು.

೨. ಆತನು (ಹಿಂದೆ ಹೇಳಿದ) ನೀರುಗಳನ್ನು ಕುರಿತು (ಧ್ಯಾನಿಸಿದನು) ತಪಸ್ಸುಮಾಡಿದನು. ಆ ನೀರುಗಳಿಂದ ಒಂದು ಮೂರ್ತಿಯು ಹುಟ್ಟಿತು. ಹಾಗೆ ಹುಟ್ಟಿದ ಮೂರ್ತಿಯೇ ಅನ್ನವು.

೩. ಹಾಗೆ ಸೃಷ್ಟಿಯಾದ ಅನ್ನವು ಹಿಂದಕ್ಕೆ ಓಡಿಹೋಗಬೇಕು ಎಂದು ಕೊಂಡಿತು. ಅದನ್ನು ವಾಕ್ಕಿನಿಂದ ಹಿಡಿದುಕೊಳ್ಳಲು ಆತನು

---

1. ಹಿಂದೆ ಮೊದಲನೆಯ ಖಂಡದಲ್ಲಿ ವಾಕ್ಕು, ವಾಕ್ಕಿನಿಂದ ಅಗ್ನಿ ಎಂದು ಮೊದಲಾಗಿ ಹೇಳಿದೆ : ಇಲ್ಲಿ ಅಗ್ನಿಯು ವಾಕ್ಕಾಗಿ ಎಂದು ಮುಂತಾಗಿ ಹೇಳಿದೆ. ಮೊದಲನೆಯದು ಬ್ರಹ್ಮಾಂಡಸೃಷ್ಟಿ : ಎರಡನೆಯದು ಪಿಂಡಾಂಡ ಸೃಷ್ಟಿ.

ತೈ. ೨-೨. ೩-೨. ೩-೭. ೩-೮. ೩-೯. ಛಾಂ. ೭-೯ ನೋಡಿ

ಯತ್ನಿಸಿದನು : ಅದನ್ನು ಹಿಡಿಯಲು ವಾಕ್ಕಿನಿಂದ ಆಗಲಿಲ್ಲ. ಹಾಗೆ ಆತನಿಗೆ ಮಾತಿನಿಂದ ಅನ್ನವನ್ನು ಹಿಡಿಯಲು ಸಾಧ್ಯವಾಗಿದ್ದರೆ, ಎಲ್ಲರೂ ಅನ್ನದ ಹೆಸರು ಹೇಳಿದಮಾತ್ರದಿಂದಲೇ ತೃಪ್ತರಾಗುತ್ತಿದ್ದರು.

೪. ಆ ಅನ್ನವನ್ನು ಪ್ರಾಣದಿಂದ ಹಿಡಿಯಲು ಯತ್ನಿಸಿದನು. ಪ್ರಾಣದಿಂದ ಹಿಡಿಯಲಾಗಲಿಲ್ಲ. ಹಾಗೇನಾದರೂ ಪ್ರಾಣದಿಂದ ಹಿಡಿದಿದ್ದರೆ, ಎಲ್ಲರೂ ಅನ್ನವನ್ನು ಆಘ್ರಾಣಿಸಿ ತೃಪ್ತರಾಗುತ್ತಿದ್ದರು.

೫. ಆ ಅನ್ನವನ್ನು ಚಕ್ಷುಸ್ಸಿನಿಂದ ಹಿಡಿಯಲು ಯತ್ನಿಸಿದನು. ಚಕ್ಷುಸ್ಸಿನಿಂದ ಹಿಡಿಯಲಾಗಲಿಲ್ಲ. ಹಾಗೇನಾದರೂ ಚಕ್ಷುಸ್ಸಿನಿಂದ ಅದನ್ನು ಹಿಡಿದಿದ್ದರೆ, ಎಲ್ಲರೂ ಅನ್ನವನ್ನು ನೋಡಿದ ಮಾತ್ರದಿಂದಲೇ ತೃಪ್ತರಾಗುತ್ತಿದ್ದರು.

೬. ಅದನ್ನು ಶ್ರೋತ್ರದಿಂದ ಹಿಡಿಯಲು ಹೋದನು. ಶ್ರೋತ್ರದಿಂದ ಅದನ್ನು ಹಿಡಿಯಲಾಗಲಿಲ್ಲ. ಹಾಗೆ ಹಿಡಿದಿದ್ದರೆ, ಎಲ್ಲರೂ (ಅನ್ನ ಎಂದು) ಕೇಳುವುದರಿಂದಲೇ ತೃಪ್ತರಾಗುತ್ತಿದ್ದರು.

೭. ಅದನ್ನು ತ್ವಕ್ಕಿನಿಂದ ಹಿಡಿಯಲು ಹೋದನು. ತ್ವಕ್ಕಿನಿಂದ ಹಿಡಿಯಲಾಗಲಿಲ್ಲ. ಹಾಗೇನಾದರೂ ತ್ವಕ್ಕಿನಿಂದ ಹಿಡಿದಿದ್ದರೆ, ಎಲ್ಲರೂ ಅನ್ನವನ್ನು ಮುಟ್ಟಿದ ಮಾತ್ರದಿಂದಲೇ ತೃಪ್ತರಾಗುತ್ತಿದ್ದರು. ಅದನ್ನು ಮನಸ್ಸಿನಿಂದ ಹಿಡಿಯಲು ಹೋದನು. ಮನಸ್ಸಿನಿಂದ ಅದನ್ನು ಹಿಡಿಯಲಾಗಲಿಲ್ಲ. ಮನಸ್ಸಿನಿಂದ ಹಾಗೆ ಹಿಡಿದಿದ್ದರೆ ಎಲ್ಲರೂ ಅನ್ನವೆಂದು ಧ್ಯಾನಮಾಡುವುದರಿಂದಲೇ ತೃಪ್ತರಾಗುತ್ತಿದ್ದರು.

೮. ಅದನ್ನು ಶಿಶ್ನದಿಂದ ಹಿಡಿಯಲು ಹೋದನು. ಶಿಶ್ನದಿಂದ ಅದನ್ನು ಹಿಡಿಯಲು ಆಗಲಿಲ್ಲ. ಹಾಗೆ ಆಗಿದ್ದರೆ, ಎಲ್ಲರೂ ಅನ್ನವನ್ನು ವಿಸರ್ಜನಮಾಡಿ ತೃಪ್ತರಾಗುತ್ತಿದ್ದರು.

೯. ಅದನ್ನು ಅಪಾನದಿಂದ ಹಿಡಿಯಲು ಹೋದನು. ಅದನ್ನು ಹಿಡಿದನು. ಅದೇ ಅನ್ನವನ್ನು ಹಿಡಿಯುವುದು. ಅದರಿಂದಲೇ ವಾಯುವೇ ಅನ್ನವನ್ನು ತಿನ್ನುವುದು.

೧೦. ಆತನು ಮತ್ತೆ ಯೋಚಿಸಿದನು : 'ನಾನಿಲ್ಲದೆ ಇದು (ಈ ಮನುಷ್ಯ ಶರೀರವು) ಹೇಗೆ ಇರಬಲ್ಲುದು ?' ಎಂದು. 'ನಾನು ಯಾವ ಮಾರ್ಗದಿಂದ ಇದನ್ನು ಹೊಗಲಿ ?' ಎಂದು ಯೋಚಿಸಿದನು. "ವಾಕ್ಕು ನುಡಿದರೆ, ಪ್ರಾಣವು ಮೂಸಿದರೆ, ಕಣ್ಣು ನೋಡಿದರೆ, ಮನಸ್ಸು ಚಿಂತಿಸಿದರೆ, ಅಪಾನವು ಜೀರ್ಣಿಸಿದರೆ, ಶಿಶ್ನವು ವಿಸರ್ಜಿಸಿದರೆ, ನಾನು ಆಗ ಯಾರು ?"[1]

೧೧. (ತಲೆಯ ಚಿಪ್ಪುಗಳು ಸೇರುವೆಡೆಯಲ್ಲಿ ಇರುವ) ಹೊಲಿಗೆಯನ್ನು ಭೇದಿಸಿಕೊಂಡು, ಆ ಬಾಗಿಲಿಂದ ಒಳಕ್ಕೆ ಹೋದನು. ಅದೇ ವಿದೃತಿಯೆಂಬ ದ್ವಾರವು. ಇದೇ ನಾಂದನವು. (ಸುಖದ ಸ್ಥಾನವು)

೧೨. (ಹಾಗೆ ಒಳಗೆ ಹೋದ) ಆತನಿಗೆ ಮೂರು ಸ್ಥಾನಗಳು : ಮೂರು ಸ್ವಪ್ನಗಳು. ಇದು ಒಂದು ಸ್ಥಾನವು (ಭ್ರೂಮಧ್ಯದಲ್ಲಿ ವಿಶ್ವದ ಸ್ಥಾನವು) ಇದು ಒಂದು ಸ್ಥಾನವು ಕಂಠದಲ್ಲಿ ತೈಜಸನ ಸ್ಥಾನವು) ಇದು ಒಂದು ಸ್ಥಾನವು (ಹೃದಯದಲ್ಲಿ ಪ್ರಾಜ್ಞನ ಸ್ಥಾನವು).

೧೩. ಹೀಗೆ ಹುಟ್ಟಿದ ಆತನು ಪ್ರಾಣಿಗಳನ್ನು ಕಂಡುಕೊಂಡು ಅವುಗಳಿಗೆ ಹೆಸರಿಟ್ಟನು. ಇಲ್ಲಿ ಇನ್ನು ಯಾವುದಕ್ಕೆ ಹೆಸರು ಇಡಬೇಕು. ಎಂದು ಸುತ್ತಲೂ ನೋಡಿದನು. ಆಗ ಅವನು ತನ್ನ ಸುತ್ತಲೂ ತುಂಬಿರುವ ಪುರುಷನಾದ ಬ್ರಹ್ಮವನ್ನು ನೋಡಿದನು. ಇದನ್ನು (ಈ ಬ್ರಹ್ಮವನ್ನು) ಕಂಡೆನು ಎಂದು ಕೂಗಿದನು.[2]

೧೪. ಅದರಿಂದ, ಇದಂದ್ರಃ ಎಂಬ ಹೆಸರು. ಇದಂದ್ರ (ಇದನ್ನು ಕಂಡೆನು) ಎಂಬುದೇ ಹೆಸರು. ಹೀಗೆ ಇದಂದ್ರನನ್ನು ಇಂದ್ರ ಎನ್ನು

---

1. ಐತರೇಯಾರಣ್ಯಕದ ಎರಡನೆಯ ಭಾಗದಲ್ಲಿ ಬ್ರಹ್ಮವು (ಇಲ್ಲಿ ಪ್ರಾಣ) ಪ್ರಪದಗಳಿಂದ (ಬೆರಳುಗಳಿಂದ) ಶರೀರವನ್ನು ಹೊಕ್ಕಿತು ಎಂದು ಹೇಳಿದೆ. ಮುಂದಿನ ಮಂತ್ರದಲ್ಲಿ ಬೈತಲೆಯ ಮೊದಲಿಂದ ಎಂದಿದೆ. ಅದರಿಂದ ಈ ಎರಡು ಮಾರ್ಗಗಳಲ್ಲಿ ಯಾವುದರಿಂದ ದೇಹವನ್ನು ಸೇರಲಿ ಎಂದು ಯೋಚಿಸಿದನು.

2. ಈ ಬ್ರಹ್ಮ ಎಂದರೆ ನನ್ನ ಆತ್ಮನ ಸ್ವರೂಪವನ್ನು ಕಂಡೆನು—(ಶಂಕರರು).

ವರು ಪರೋಕ್ಷವಾಗಿ. ದೇವತೆಗಳು ಪರೋಕ್ಷಪ್ರಿಯರು ತಾನೇ! ದೇವತೆಗಳು ಪರೋಕ್ಷಪ್ರಿಯರು ತಾನೇ!

ಇಂತಿದು ಮೂರನೆಯ ಖಂಡವು ಮೊದಲನೆಯ ಅಧ್ಯಾಯ.

ಅಧ್ಯಾಯ ಎರಡು

[ಇದುವರೆಗೆ ವಿರಾಟ್ಪುರುಷನ ಜನ್ಮವನ್ನು ಹೇಳಿದ ಉಪನಿಷತ್ತು ಈಗ ವ್ಯಕ್ತಿಯು ಹೇಗೆ ಹುಟ್ಟುವನು ಎಂಬುದನ್ನು ಹೇಳುತ್ತದೆ.]

೧. ಈ ಜೀವನು ಮೊದಲು ಪುರುಷನಲ್ಲಿ ಗರ್ಭವಾಗುವನು.[1] ರೇತಸ್ಸು ಎನ್ನುವುದು ಯಾವುದುಂಟೋ ಅದು ಎಲ್ಲಾ ಅಂಗಗಳಿಂದ ಶೇಖರಿಸಿದ ತೇಜಸ್ಸು[2]. ಅದು ತನ್ನಲ್ಲಿ ಈ ಗರ್ಭವನ್ನು ಧರಿಸಿತು. ಅದು ಸ್ತ್ರೀ ಯೋನಿಯನ್ನು ಸೇರಿದಾಗ, ಅಲ್ಲಿ ಗರ್ಭವನ್ನು ಮಾಡುವುದು. ಅದು ಆ ಜೀವನ ಪ್ರಥಮ ಜನ್ಮವು.[3]

೨. ಆ ಸ್ತ್ರೀಯನ್ನು ಸೇರಿದ ರೇತಸ್ಸು ಆಕೆಯಲ್ಲಿ ಆತ್ಮಭೂತವಾಗುವುದು. ಆಕೆಗೆ ತನ್ನ ಅಂಗಗಳು ಎಂಬ ಅಭಿಮಾನವಿರುವಂತೆ ಅದರ ಮೇಲೂ ಅಭಿಮಾನವು ಬರುವುದು. ಅದರಿಂದ ಆ ಗರ್ಭವು ಅವಳನ್ನು ಕೊಲ್ಲುವುದಿಲ್ಲ. ಆಕೆಯೂ ಅದನ್ನು ತನ್ನದು ಎಂದು ಭಾವಿಸುವಳು.

---

1. ಜೀವನು ಈ ಲೋಕದಿಂದ ಹೋಗಿ ಚಂದ್ರನನ್ನು ಸೇರುವನು. ಅಲ್ಲಿ ತಾನು ಮಾಡಿದ್ದ ಪುಣ್ಯಕರ್ಮಗಳು ಕ್ಷೀಣವಾಗಲು ಮಳೆಯಲ್ಲಿ ಸೇರಿ ಈ ಲೋಕಕ್ಕೆ ಬರುವನು. ಅಲ್ಲಿ ಧಾನ್ಯವಾಗಿ ಪುರುಷನ ಅನ್ನವಾಗಿ ಅಲ್ಲಿ ರೇತಸ್ಸನ್ನು ಸೇರುವನು. ಅಲ್ಲಿಂದ ಸ್ತ್ರೀ ಗರ್ಭವನ್ನು ಸೇರಿ, ಅಲ್ಲಿ ಸಲಿಲ, ಕಲಲ, ಪಿಂಡರೂಪವಾಗಿ ಬೆಳೆದು ಮಗುವಾಗಿ ಈಚೆಗೆ ಬರುವನು. ಈ ವಿಷಯವನ್ನು ಕೌಷೀತಕಿ, ಗರ್ಭ, ಉಪನಿಷತ್ತುಗಳಲ್ಲಿ ವಿಸ್ತಾರವಾಗಿ ಹೇಳಿದೆ.

2. ರೇತಸ್ಸು ಎಲ್ಲಾ ಅಂಗಗಳ ಸಾರ ಎಂದು ಈಚಿನ ಪಂಡಿತರು ಒಪ್ಪುವುದಿಲ್ಲ.

3. ಶ್ರೀ ಶ್ರೀ ಪರಮಹಂಸ ಆನಂದಗಿರಿ ಸ್ವಾಮಿಗಳು ಗರ್ಭೋಪನಿಷತ್ತು ಅರ್ಥವಾದವರು ಸೂಲಗಿತ್ತಿಯ ಕೆಲಸವನ್ನು ಸುಲಭವಾಗಿ ನಿರ್ವಹಿಸಬಹುದು ಎಂದು ಹೇಳಿದ್ದರು.

೩. ಆ ಗರ್ಭವನ್ನು ಅವಳು ತನ್ನದೆಂದು ಭಾವಿಸಿ ಪೋಷಿಸುವಳು. ಅದರಿಂದ ಆಕೆಯನ್ನು ಪೋಷಿಸಬೇಕು. ಸ್ತ್ರೀಯು ಗರ್ಭದಲ್ಲಿ ಮಗುವನ್ನು ಧರಿಸಿ ಬೆಳೆಸುವಳು. ತಂದೆಯಾದವನು ಮಗುವು ಹುಟ್ಟುವುದಕ್ಕೆ ಮುಂಚೆ, ಹುಟ್ಟಿದಾಗ, ಹುಟ್ಟಿದಮೇಲೆ, (ವಿಶ್ವಾಸದಿಂದ) ಕಾಪಾಡುವನು. ತಂದೆಯು ಮಗನು ಹುಟ್ಟಿದಮೇಲೆ ಕಾಪಾಡುವುದು ಯಾವುದುಂಟೋ ಅದು ತನ್ನನ್ನು ತಾನೇ ಕಾಪಾಡಿಕೊಂಡಂತೆ[1]. (ಆ ಮಗನನ್ನು ಪಡೆಯುವುದು ಎಂದರೆ) ಈ ಲೋಕಗಳು ಮುಂದಕ್ಕೆ ಬೆಳೆಯಗೊಟ್ಟಂತೆ. ಸಂತತಿಯಿಂದ ಲೋಕಗಳು ಸಂತತವಾಗುತ್ತವೆ. ಹೀಗೆ ಮಗನಾಗಿ ಹುಟ್ಟುವುದು ಜೀವನ ಎರಡನೆಯ ಜನ್ಮ.

೪. ಮಗನು ತಂದೆಯ ಆತ್ಮವೇ[2] ಆದ್ದರಿಂದ ಆ ತಂದೆಯು ತನ್ನ ಪುಣ್ಯಕರ್ಮಗಳನ್ನು ಮಾಡು ಎಂದು ಮಗನನ್ನು ತನ್ನ ಪ್ರತಿನಿಧಿಯನ್ನು ಮಾಡುತ್ತಾನೆ. ತಂದೆಯ ಎರಡನೆಯ ಆತ್ಮನಾದ ಮಗನು (ತಂದೆಯು ಹೇಳಿದ) ಕರ್ಮಗಳನ್ನೆಲ್ಲಾ ಮಾಡಿ ವಯಸ್ಸು ಕಳೆದ ಮೇಲೆ ಮರಣವನ್ನು ಹೊಂದುತ್ತಾನೆ. ಇಲ್ಲಿಂದ ಹೊರಟು ಮತ್ತೆ ಹುಟ್ಟುತ್ತಾನೆ. ಇದು ಅವನ ಮೂರನೆಯ ಜನ್ಮವು.

---

1. ತಂದೆಯ ಆತ್ಮವೇ ಪುತ್ರನಾಗಿ ಹುಟ್ಟುತ್ತದೆ. ಇದನ್ನೇ ಶ್ರುತಿಯೂ ಹೇಳುತ್ತದೆ. "ಪತಿರ್ಜಾಯಾಂ ಪ್ರವಿಶತಿ" ಇತ್ಯಾದಿ—ಶಂಕರರು.

2. ತಂದೆಯ ಪ್ರತಿನಿಧಿಯು ಮಗನು ಎಂಬುದನ್ನು ವಾಜಸನೇಯ ಸಂಹಿತೆಯಲ್ಲಿ ಸಂಪ್ರತ್ತಿ ವಿದ್ಯಾ ಎಂದು ಹೇಳಿದೆ—ಶಂಕರರು.

ಕೌಷೀತಕ್ಯುಪನಿಷತ್ತಿನಲ್ಲಿಯೂ ಈ ವಿದ್ಯೆಯ ಪ್ರಸ್ತಾಪವಿದೆ.

"ಮಗುವು ಹುಟ್ಟುತ್ತಲೂ, ಗರ್ಭನಾಳಚ್ಛೇದಕ್ಕಿಂತ ಮುಂಚೆ, ತಂದೆಯು ಸೂತಿಕಾಗೃಹಕ್ಕೆ ಹೋಗಿ ಆ ಮಗುವನ್ನು ಮುಟ್ಟಿ ಮಂತ್ರಪೂರ್ವಕವಾಗಿ ಮೇಧಾ ಜನನವನ್ನು ಮಾಡಬೇಕು. ಹಾಗೆ ಮಾಡಿದರೆ, ತಂದೆಯಲ್ಲಿರುವ ವೀರ್ಯ ತೇಜಸ್ಸುಗಳು ಆ ಮಗುವಿಗೆ ಬಂದು ಬೆಳೆಯುವುವು" ಎಂದು ಸಾಂಪ್ರದಾಯಿಕ ಸಿದ್ಧಾಂತ.

ತೈತ್ತಿರೀಯ ಸಂಹಿತಾ VI—3–10.

೫. ಋಷಿಯೂ ಹೀಗೆ ಹೇಳಿದ್ದಾನೆ :—"ಗರ್ಭದಲ್ಲಿದ್ದಾಗಲೇ ಎಲ್ಲಾ ದೇವತೆಗಳ ಜನ್ಮ (ರಹಸ್ಯ)ಗಳನ್ನು ಅರಿತೆನು. ಉಕ್ಕಿನಂತೆ ಗಟ್ಟಿಯಾದ ನೂರಾರು ದೇಹಗಳು ನನ್ನನ್ನು ತಡೆದಿದ್ದುವು. (ಆದರೂ) ಗಿಡಗನಂತೆ ವೇಗವಾಗಿ ಅವುಗಳನ್ನೆಲ್ಲಾ ದಾಟಿಕೊಂಡು ಹೋದೆನು." ಎಂದು ಗರ್ಭದಲ್ಲಿದ್ದ ವಾಮದೇವನು ಹೇಳಿದನು.[1]

೬. ಇದನ್ನು ಹೀಗೆ ತಿಳಿದವನು, ಈ ಶರೀರವು ಕೊನೆಯಾದ ಮೇಲೆ ಊರ್ಧ್ವನಾಗಿ ಮೇಲಕ್ಕೆ ಹೋಗಿ ಯಥೋಕ್ತವಾದ ಲೋಕಗಳಲ್ಲಿ ಸರ್ವ ಕಾಮಗಳನ್ನು ಪಡೆದು ಅಮೃತನಾಗುವನು.[2]

ಇಂತಿದು ಎರಡನೆಯ ಅಧ್ಯಾಯವು.

ಅಧ್ಯಾಯ ಮೂರು

೧. ನಾವು ಯಾರನ್ನು ಆತ್ಮ ಎಂದು ಉಪಾಸನ ಮಾಡೋಣ? (ಅ) ಇಬ್ಬರಲ್ಲಿ ಯಾರು ಆತ್ಮಾ? ಯಾರಿಂದ ರೂಪವನ್ನು ನೋಡುತ್ತೇವೆಯೋ, ಯಾರಿಂದ ಕೇಳುತ್ತೇವೆಯೋ, ಯಾರಿಂದ ಗಂಧವನ್ನು

---

1. ಗರ್ಭದಲ್ಲಿರುವಾಗ ಶಿಶುವು ಭೂತ ಭವಿಷ್ಯತ್ತುಗಳನ್ನು ಅರಿಯಬಲ್ಲ ಶಕ್ತಿಯನ್ನು ಹೊಂದಿರುವುದು. ಗರ್ಭವನ್ನು ಬಿಟ್ಟು ಭೂಮಿಯನ್ನು ಮುಟ್ಟುತ್ತಲೂ ವೈಷ್ಣವೀ ವಾಯುವು ಮಗುವನ್ನು ತಟ್ಟುವುದು. ಆಗ ಅದಕ್ಕೆ ಅಜ್ಞಾನವು ಬಂದು ಎಲ್ಲವೂ ಮರೆತುಹೋಗುವುದು.

ಋಗ್ವೇದ ಮಂಡಲ ೪, ಸೂಕ್ತ ೨೭ ನೋಡಿ.

(ಈ ಖಂಡವನ್ನು ಗರ್ಭಿಣಿಯರ ಎದುರಿಗೆ ಓದಬಾರದೆಂದು ಕೆಲವರು ಹೇಳುತ್ತಾರೆ.)

2. ಊರ್ಧ್ವ=ಪರಮಾತ್ಮ ಭೂತನು ಎಂದು ಶಂಕರರು. ಆದರೆ ಇಲ್ಲಿ ಹೇಳಿರುವುದು ಕ್ರಮಮುಕ್ತಿ. ಕ್ರಮಮುಕ್ತಿ, ಸದ್ಯೋಮುಕ್ತಿ ಎಂದು ಎರಡು ವಿಧ. ಸದ್ಯೋಮುಕ್ತಿಯೆಂದರೆ ಬ್ರಹ್ಮಜ್ಞನಾಗುತ್ತಲೂ ಮುಕ್ತಿಯನ್ನು ಪಡೆಯುವನು ಎಂದು. ಕ್ರಮಮುಕ್ತಿ ಎಂದರೆ ಯಾವ ದೇವತೆಯನ್ನು ಕುರಿತು ಉಪಾಸನಮಾಡುವನೋ ಆ ದೇವತೆಯಲ್ಲಿ ಅಪ್ಯಯವನ್ನು ಪಡೆದು ಪ್ರಲಯದವರೆಗೂ ಹಾಗೇ ಇದ್ದು ಆಗ ಬ್ರಹ್ಮವನ್ನು ಸೇರುವನು ಎಂದು. ಶಂಕರರು ಸದ್ಯೋಮುಕ್ತವಾದಿಗಳು.

ಆಜಿಘ್ರಿಸುತ್ತೇವೆಯೋ, ಯಾರಿಂದ ವಾಕ್ಕನ್ನು ಉಚ್ಚರಿಸುತ್ತೇವೆಯೋ, ಯಾವುದರಿಂದ ಸ್ವಾದು (ಸೀ) ಅಸ್ವಾದುಗಳನ್ನು ತಿಳಿಯುತ್ತೇವೆಯೋ ಅವನು ಆತ್ಮ[1].

೨. ಯಾವುದು ಹೃದಯವೋ ಅದೇ ಮನಸ್ಸು. ಸಂಜ್ಞಾನ, ಆಜ್ಞಾನ, ವಿಜ್ಞಾನ. ಪ್ರಜ್ಞಾನ, ಮೇಧಾ, ದೃಷ್ಟಿ, ಧೃತಿ, ಮತಿ, ಮನೀಷಾ, ಜೂತಿ, ಸ್ಮೃತಿ, ಸಂಕಲ್ಪ, ಕ್ರತು, ಅಸು, ಕಾಮ, ವಶ, ಎಂಬ ಈ ಎಲ್ಲವೂ ಪ್ರಜ್ಞಾನದ ನಾಮಧೇಯಗಳು.[2]

---

1. ಇಲ್ಲಿ ರೂಪಂ ಪಶ್ಯತಿ ಮುಂತಾಗಿ ಕ್ರಿಯಾ ಪದವು ಪ್ರಥಮ ಪುರುಷ ವಚನದಲ್ಲಿದೆ. ಸುಲಭವಾಗಿ ಅರ್ಥವಾಗಲೆಂದು ವಯಮುಪಾಸ್ಮಹೇ ಎಂಬುದಕ್ಕೆ ಸಂವಾದಿಯಾಗಿ ಕ್ರಿಯಾಪದಗಳನ್ನೆಲ್ಲ ಉತ್ತಮಪುರುಷ ಬಹುವಚನವಾಗಿ ಭಾಷಾಂತರಿಸಲಾಗಿದೆ.

ಬ್ರಹ್ಮವಿತ್ತುಗಳು ಪರಿಷತ್ತಿನಲ್ಲಿ ಕುಳಿತು ಒಬ್ಬರನ್ನೊಬ್ಬರು ಪ್ರಶ್ನೆ ಕೇಳುತ್ತಿರುವಾಗ ಹೀಗೆ ನಡೆಯಿತು ಎಂದುಕೊಳ್ಳಬೇಕು. ಇಲ್ಲಿ ಹಿಂದೆ ಹೇಳಿದಂತೆ ಪಾದಗಳ ಕಡೆಯಿಂದ ದೇಹವನ್ನು ಪ್ರವೇಶಿಸಿದ ಆತ್ಮನೊಬ್ಬನು: ತಲೆಯ ಕಡೆಯಿಂದ ಪ್ರವೇಶಿಸಿದವನೊಬ್ಬನು. ಈ ಇಬ್ಬರಲ್ಲಿ ಯಾರು ಆತ್ಮಾ? ಎಂದು ಪ್ರಶ್ನವು. ಪಾದದ ಕಡೆಯಿಂದ ಪ್ರವೇಶಿಸಿದುದು ಪ್ರಾಣ: ಅಥವಾ ಹಿರಣ್ಯಗರ್ಭ. ಅದು ಕಣ್ಣಾಗಿ ನೋಡುವುದು: ಕಿವಿಯಾಗಿ ಕೇಳುವುದು. ಈ ದೇಹ ವ್ಯಾಪಾರಗಳೆಲ್ಲಾ ಅದರದೇ! ತಲೆಯ ಕಡೆಯಿಂದ ಪ್ರವೇಶಿಸಿದುದು ಏನೂ ಕಾರ್ಯವನ್ನು ಮಾಡದೆ ಸಾಕ್ಷಿಯಾಗಿರುವುದು. ಆ ಸಾಕ್ಷಿಯಾದ ವಸ್ತುವೇ ಆತ್ಮ. ಅದನ್ನೇ ಉಪಾಸನ ಮಾಡಬೇಕು ಎಂದು ಉಪದೇಶವು.

2. ಸಂಜ್ಞಾನ—ಅರಿಯುವಿಕೆ.
ಆಜ್ಞಾನ—ವಿನಿಯೋಗಮಾಡುವಿಕೆ.
ವಿಜ್ಞಾನ—ಕಲಾದಿ ವಿಶೇಷ ಪರಿಜ್ಞಾನ.
ಪ್ರಜ್ಞಾನ—ವಿಶೇಷವಾಗಿ ತಿಳಿದಿರುವಿಕೆ.
ಮೇಧಾ—ಗ್ರಂಥಧಾರಣ ಸಾಮರ್ಥ್ಯ.
ದೃಷ್ಟಿ—ಇಂದ್ರಿಯಗಳಿಂದ ವಿಷಯಗಳನ್ನು ತಿಳಿಯಬಲ್ಲ ಸಾಮರ್ಥ್ಯ.
ಧೃತಿ—ಸೋತ ಶರೀರೇಂದ್ರಿಯಾದಿಗಳನ್ನು ಉತ್ತೇಜಿಸಬಲ್ಲ ಸಾಮರ್ಥ್ಯ.
ಮತಿ—ಆಲೋಚಿಸುವುದು.
ಮನೀಷಾ—ಸ್ವತಂತ್ರವಾಗಿ ಆಲೋಚನಮಾಡಬಲ್ಲ ಸಾಮರ್ಥ್ಯ.
ಜೂತಿ—ಮನಸ್ಸು ರೋಗಾದಿಗಳಿಂದ ನೊಂದಿರುವ ಸ್ಥಿತಿ.
ಸ್ಮೃತಿ—ಸ್ಮರಣ.
ಸಂಕಲ್ಪ—ರೂಪಾದಿಗಳನ್ನು ಧ್ಯಾನಿಸುವಿಕೆ.

೩. (ಹೀಗೇ ಸೋಪಾಧಿಕವಾದ ಬ್ರಹ್ಮವು ಯಾವುದುಂಟೋ) ಅದೇ ಬ್ರಹ್ಮನು: ಅದೇ ಇಂದ್ರನು: ಅದೇ ಪ್ರಜಾಪತಿಯು. ಈ ದೇವತೆಗಳೆಲ್ಲ ಅದೇ! ಪೃಥಿವೀ, ವಾಯು, ಆಕಾಶ, ಜಲ, ಜ್ಯೋತಿ, ಎಂಬ ಈ ಪಂಚ ಮಹಾ ಭೂತಗಳೂ ಅದೇ! ಕ್ಷುದ್ರಗಳೂ ಮಿಶ್ರಗಳೂ ಆದ ಬೀಜಗಳು, ಬೇರೆಬೇರೆಯಾದ ಅಂಡಜಗಳು, ಜರಾಯುಜಗಳು, ಸ್ವೇದಜಗಳು, ಉದ್ಭಿಜಗಳು. ಅಶ್ವಗಳು, ಗೋಗಳು, ಪುರುಷರು, ಆನೆಗಳು, (ಇವೂ ಅದೇ!) (ಹಾಗೆಯೇ) ಜಂಗಮಗಳಾದ ಪ್ರಾಣಿಗಳು, ಪಕ್ಷಿಗಳು, ಸ್ಥಾವರವಾದವುಗಳು (ಇವೆಲ್ಲವೂ ಅದೇ). ಇವೆಲ್ಲವೂ ಪ್ರಜ್ಞಾನೇತ್ರಗಳು[1]. ಇವು ಪ್ರಜ್ಞಾನದಲ್ಲಿಯೇ ಪ್ರತಿಷ್ಠಿತಗಳಾಗಿರುವುವು. ಲೋಕವೇ ಪ್ರಜ್ಞಾನೇತ್ರವು: ಪ್ರಜ್ಞೆಯೇ ಪ್ರತಿಷ್ಠೆಯು[2]. ಪ್ರಜ್ಞಾನವೇ ಬ್ರಹ್ಮವು[3].

ಕ್ರತು—ಮಾಡಬೇಕೆಂಬ ಪ್ರಯತ್ನ.
ಅಸು—ಉತ್ಸಾಹಶಕ್ತಿ.
ಕಾಮ—ಬೇಕೆಂಬ ಆಶೆ.
ವಶ—ರಾಗ.

ಇವೆಲ್ಲವೂ ಅಂತಃಕರಣ ವೃತ್ತಿಗಳು, ಶುದ್ಧಪ್ರಜ್ಞಾನ ರೂಪವಾದ ಆ ಬ್ರಹ್ಮದ ಉಪಾಧಿಯಿಂದ ಹುಟ್ಟಿದ ಗುಣ ನಾಮಧೇಯಗಳು ಇವು. ಅದರಿಂದ ಇವೆಲ್ಲ ಉಪಾಸ್ಯಗಳಲ್ಲ. ಇವೆಲ್ಲವೂ ಯಾವುದರಿಂದರೋ ಆ ಪ್ರಜ್ಞಾನರೂಪವಾದ ಸಾಕ್ಷಿಯೇ ಉಪಾಸ್ಯವು.

1. ಪ್ರಜ್ಞಾನೇತ್ರ: ಕರೆದುಕೊಂಡು ಹೋಗುವುದು: ನಡೆಸುವುದು ಎಂದು ನೇತ್ರವು. ಪ್ರಜ್ಞೆಯ ಬಲದಿಂದ ನಡೆಯುವವರು ಎಂದು ಪ್ರಜ್ಞಾನೇತ್ರರು.

2. ಪ್ರಜ್ಞಾಪ್ರತಿಷ್ಠಾ-ಎಲ್ಲವೂ ಉತ್ಪತ್ತಿಸ್ಥಿತಿಲಯ ಕಾಲಗಳಲ್ಲಿಯೂ ಪ್ರಜ್ಞೆಯನ್ನೇ ಆಶ್ರಯಿಸಿರುವುದೆಂದು ಪ್ರಜ್ಞಾಪ್ರತಿಷ್ಠವು—(ಶಂಕರರು).

3. ವಿಶುದ್ಧಪ್ರಜ್ಞೆಯು ಉಪಾಧಿಸಂಬಂಧದಿಂದ ಸರ್ವಜ್ಞ ಈಶ್ವರನಾಗಿ ನಿಯಂತೃವಾಗಿ ಅಂತರ್ಯಾಮಿಯಾಗುವುದು. ಅದೇ ಹಿರಣ್ಯಗರ್ಭನಾಗುವುದು. ಅದೇ ಬ್ರಹ್ಮಾಂಡದಲ್ಲಿ ಪ್ರಥಮ ಶರೀರೋಪಾಧಿಯನ್ನು ಪಡೆದು, ವಿರಾಟ್ ಪ್ರಜಾಪತಿ, ಎಂದೆನಿಸಿಕೊಳ್ಳುವುದು. ಅದೇ ಅಗ್ನ್ಯಾದಿ ಉಪಾಧಿಯಿಂದ ಕೂಡಿ ದೇವತೆ ಎನ್ನಿಸಿಕೊಳ್ಳುವುದು. ಹೀಗೆ ಒಂದೊಂದು ಶರೀರೋಪಾಧಿಯಿಂದ ಒಂದೊಂದು ನಾಮರೂಪವನ್ನು ಪಡೆದರೂ ಎಲ್ಲವೂ ಬ್ರಹ್ಮವೇ! ಇದಕ್ಕೆ ಸ್ಮೃತಿಯು: "ಏಕಮೇಕೇ ವದಂತ್ಯಗ್ನಿಂ ಮನುಮನ್ಯೇ ಪ್ರಜಾಪತಿಂ॥ ಇಂದ್ರಮೇಕೇಽಪರೇ ಪ್ರಾಣಮಪರೇ ಬ್ರಹ್ಮ ಶಾಶ್ವತಂ॥

೪. ಈ ಪ್ರಜ್ಞನೆಂಬ ಆತ್ಮನಿಂದಲೇ (ಇವನನ್ನು ತಿಳಿದುದರಿಂದಲೇ) ಆತ್ಮನು (ವಾಮದೇವನು ಅಥವಾ ವಾಮದೇವನಂಥವನು) ಈ ಲೋಕದಿಂದ ಹೋಗಿ ಯಥಾವತ್ತಾಗಿ ಸ್ವರ್ಗಲೋಕದಲ್ಲಿ ಸರ್ವಕಾಮಗಳನ್ನೂ ಪಡೆದು ಅಮೃತನಾದನು: ಅಮೃತನಾದನು.

ಇಂತಿದು ಮೂರನೆಯ ಅಧ್ಯಾಯವು

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ ಎಂಬ ಶಾಂತಿಮಂತ್ರ.

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

ಇಂತಿದು ಐತರೇಯವು

೫. ಕೇನೋಪನಿಷತ್

ಸಾಮವೇದದ ತಲವಕಾರೋಪನಿಷತ್ತಿನಲ್ಲಿ ಒಂಭತ್ತನೆಯ ಅಧ್ಯಾಯದಿಂದ ಈ ಉಪನಿಷತ್ತು ಪ್ರಾರಂಭವಾಗುವುದು. ಹಿಂದಿನ ಅಧ್ಯಾಯಗಳಲ್ಲಿ ಕರ್ಮಗಳನ್ನೂ ಕರ್ಮಾಂಗವಾದ ಸಾಮಗಳನ್ನೂ ಕರ್ಮಗಳಿಗೆಲ್ಲ ಆಶ್ರಯವಾದ ಪ್ರಾಣದ ಉಪಾಸನಗಳನ್ನೂ ಹೇಳಿದೆ. ಅನಂತರದಲ್ಲಿ ಗಾಯತ್ರಸಾಮದ ವಿಷಯವಾದ ದರ್ಶನವನ್ನು ಹೇಳಲಾಗಿದೆ. ಈ ಕರ್ಮಗಳೆಲ್ಲವೂ ದರ್ಶನವೂ ಚೆನ್ನಾಗಿ ಅನುಷ್ಠಾನ ಮಾಡಿ ನಿಷ್ಕಾಮನಾದ ಮುಮುಕ್ಷುವಿಗೆ ಸತ್ತ್ವಶುದ್ಧಿಯನ್ನು ಉಂಟು ಮಾಡುವುವು. ಸಕಾಮನಿಗೆ ದಕ್ಷಿಣ ಮಾರ್ಗದಿಂದ ಲೋಕಾಂತರಗಳನ್ನು ಕೊಡುವುವು: ಆದರೆ ಬ್ರಹ್ಮಜ್ಞಾನವನ್ನು ಕೊಡಲಾರವು.

ನಿಷ್ಕಾಮನಾಗಿ ಶುದ್ಧಾಂತರಂಗನಾದವನಿಗೆ ಸಂಸ್ಕಾರ ವಿಶೇಷದಿಂದ ವೈರಾಗ್ಯವು ದೃಢವಾಗಿ ಪ್ರತ್ಯಗಾತ್ಮ (ಜೀವ) ವಿಷಯವಾದ ಜಿಜ್ಞಾಸೆಯು—ಆತ್ಮನನ್ನು ತಿಳಿದುಕೊಳ್ಳಬೇಕೆಂಬ ಆಸೆಯು—ಹುಟ್ಟುವುದು. ಆ ಜಿಜ್ಞಾಸೆಯನ್ನು ಪ್ರಶ್ನೆ-ಉತ್ತರ ರೂಪವಾಗಿ ಈ ಉಪನಿಷತ್ತಿನಲ್ಲಿ ಹೇಳಿದೆ. ಬ್ರಹ್ಮಜ್ಞಾನವು 'ಪುರುಷತಂತ್ರ' ವಲ್ಲ ಎಂದರೆ ಪುರುಷನು ತಾನಾಗಿ ಸಂಪಾದಿಸಿಕೊಳ್ಳತಕ್ಕ ವಿಷಯವಲ್ಲ. ನೈಷಾ ತರ್ಕೇಣ ಮತಿರಾಪನೇಯಾ—ಈ ಬ್ರಹ್ಮವಿದ್ಯೆಯು ತರ್ಕದಿಂದ ಸಿಕ್ಕುವುದಲ್ಲ. ಹಾಗಾದರೆ ತಿಳಿಯುವುದೆಂತು ಎಂದರೆ ಆಚಾರ್ಯವಾನ್ ಪುರುಷೋ ವೇದ-ಆಚಾರ್ಯನನ್ನು ಸೇರಿದವನು ತಿಳಿಯುವನು.

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್—ಅದನ್ನು ತಿಳಿಯಲು ಅವನು ಗುರುವನ್ನೇ ಆಶ್ರಯಿಸಬೇಕ.—ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ಯಮೇವೈಷ ವೃಣುತೇ ಸ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ

ತನೂಂ ಸ್ವಾಂ—"ಈ ಆತ್ಮನು ಪ್ರವಚನದಿಂದಲಾಗಲಿ, ಮೇಧಾಶಕ್ತಿಯಿಂದಾಗಲಿ, ಬಹುಶ್ರುತನಾದರಾಗಲಿ ಲಭಿಸುವುದಿಲ್ಲ. ಈ ಆತ್ಮನು ಯಾರಿಗೆ ಒಲಿಯುವನೋ ಅವನಿಗೆ ತನ್ನ ರೂಪವನ್ನು ತೋರಿಸಿ ಕೊಡುವನು." ಅದರಿಂದ ಶ್ರೀ ಕೃಷ್ಣನು ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ। ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ॥ ಅದರಿಂದ ನಮಸ್ಕಾರಮಾಡಿ, ವಿನಯದಿಂದ ಕೇಳಿ, ಸೇವಿಸಿ, ತಿಳಿದುಕೊ, ಬಲ್ಲವರು ಹೇಳಿಕೊಡುವರು ಎಂದು ಹೇಳಿದುದು.

ಅದರಿಂದ, ದೃಷ್ಟಾದೃಷ್ಟ ಬಾಹ್ಯಸಾಧನಗಳನ್ನು ಬಿಟ್ಟು, ಆತ್ಮಜ್ಞಾನವನ್ನು ಪಡೆಯಬೇಕೆಂದವನಿಗೆ, ಈ ವಿಷಯವು ಸೂಕ್ಷ್ಮವಾದ್ದರಿಂದ ಪ್ರಶ್ನ-ಉತ್ತರ ರೂಪವಾಗಿ ಬಂದರೆ ಸುಖವಾಗಿ ತಿಳಿಯುವುದು ಎಂದು, ಆಚಾರ್ಯಾದ್ಧ್ಯೈವ ವಿದ್ಯಾವಿದಿತಾ ಸಾಧಿಷ್ಠಂ ಪ್ರಾಪದಿತಿ "ಆಚಾರ್ಯನಿಂದ ಮಾತ್ರ ಕಲಿತ ವಿದ್ಯೆಯು ಗುರಿಯನ್ನು ಸೇರಿಸುವುದು" ಎಂದು ಶ್ರುತಿಯು ಹೇಳಿದೆಯಾಗಿ, ಈ ಉಪನಿಷತ್ತು ಹೀಗೆ ಹೊರಟಿದೆ.

(ಇದೇ ಉಪನಿಷತ್ತಿನ ಖಂಡ ೪–ಮಂತ್ರ ಏಳರಲ್ಲಿ ಇದನ್ನು ಬ್ರಾಹ್ಮೀ ಉಪನಿಷತ್ ಎಂದಿರುವುದನ್ನು ನೋಡಿ.)

ಶಾಂತಿ ಮಂತ್ರ.

ಓಂ ಸಹನಾವವತು । ಸಹನೌ ಭುನಕ್ತು । ಸಹವೀರ್ಯಂ
ಕರವಾವಹೈ॥ ತೇಜಸ್ವಿನಾವಧೀತಮಸ್ತು। ಮಾವಿದ್ವಿಷಾವಹೈ।
ಓಂ ಶಾಂತಿ ಶ್ಶಾಂತಿ ಶ್ಶಾಂತಿಃ॥[1]
ಓಂ ಅಪ್ಯಾಯಂತು ಮಮಾಂಗಾನಿ। ವಾಕ್ಪ್ರಾಣಶ್ಚಕ್ಷುಃ
ಶ್ರೋತ್ರಮಥೋ ಬಲಮಿಂದ್ರಿಯಾಣಿಚ ಸರ್ವಾಣಿ। ಸರ್ವಂ
ಬ್ರಹ್ಮೋಪನಿಷದಂ । ಮಾಹಂ ಬ್ರಹ್ಮ ನಿರಾಕುರ್ಯಾಂ ಮಾಮಾ
ಬ್ರಹ್ಮನಿರಾಕರೋತ್ । ಅನಿರಾಕರಣಮಸ್ತು । ಅನಿರಾಕರಣಂ
ಮೇಽಸ್ತು । ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ
ಮಯಿ ಸಂತು ತೇ ಮಯಿ ಸಂತು ।
ಓಂ ಶಾಂತಿ ಶ್ಶಾಂತಿ ಶ್ಶಾಂತಿಃ ॥

1. ಅರ್ಥವನ್ನು ಪುಟ ೪೯ ರಲ್ಲಿ ಕೊಟ್ಟಿದೆ.

ವಾಕ್ಕು, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಬಲ, ಇಂದ್ರಿಯಗಳು ಮತ್ತು ನನ್ನ ಎಲ್ಲಾ ಅಂಗಗಳೂ ಸಂತೋಷಪಡಲಿ.[1] ಎಲ್ಲವೂ ಬ್ರಹ್ಮದ ಉಪನಿಷತ್ತು. ನಾನು ಬ್ರಹ್ಮವನ್ನು ನಿರಾಕರಿಸದಂತಾಗಲಿ. ನನ್ನನ್ನು ಬ್ರಹ್ಮವು ನಿರಾಕರಿಸದಿರಲಿ. ನನಗೆ ಅನಿರಾಕರಣವೆಂಬುದಾಗಲಿ. ನಾನು ಆತ್ಮನಲ್ಲಿ ನಿರತನಾಗಿ ಉಪನಿಷತ್ತುಗಳಲ್ಲಿ (ಆತ್ಮನಿರತನಲ್ಲಿ) ಯಾವ ಯಾವ ಧರ್ಮಗಳು ಇರಬೇಕು (ಎಂದು ಹೇಳಿದೆಯೋ) ಆಯಾ ಧರ್ಮಗಳೆಲ್ಲ ನನ್ನಲ್ಲಿ ಬರಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಉಪನಿಷತ್ತು

೧. ಓಂ. ಮನಸ್ಸು ತಾನು ಕೋರಿದುದನ್ನು ಕುರಿತು ಓಡುವುದಲ್ಲ: ಅದನ್ನು ಹಾಗೆ ಹೋಗು ಎಂದವರು ಯಾರು ?[2]

---

1. ಬ್ರಹ್ಮವಿದ್ಯೆಯು ಅಮೃತವು. ಅದು ಬಂದರೆ ಜಡವಾದ ಅಂಗಗಳೂ ತೃಪ್ತವಾಗುವುವು.

2. ಈ ವಾಕ್ಯದಲ್ಲಿ ಕೇಳಿರುವವನು "ದೇಹವು ಪಂಚಭೂತಗಳಿಂದ ಆಗಿದೆ ಅದು ಅನಿತ್ಯವು" ಎಂದು ತಿಳಿದು ವಿರಕ್ತನಾದವನು: ಆದ್ದರಿಂದ ಕೂಟಸ್ಥನೂ ನಿತ್ಯನೂ ಆದವನನ್ನು ತಿಳಿದುಕೊಳ್ಳಬೇಕು ಎಂದು ಈ ಪ್ರಶ್ನವನ್ನು ಕೇಳಿರುವನು.

ಮನಸ್ಸು ವಿಷಯವನ್ನು ಕುರಿತು ಹೋಗುವುದರಲ್ಲಿ ಸ್ವತಂತ್ರವಲ್ಲವೆ ? ಅಲ್ಲಿ ಕೇಳುವುದೇನು ? ಎಂದರೆ. ಮನಸ್ಸು ಪ್ರವೃತ್ತಿ ನಿವೃತ್ತಿ ವಿಷಯದಲ್ಲಿ ಸ್ವತಂತ್ರವಾಗಿದ್ದರೆ, ಯಾರಿಗೂ ಅನಿಷ್ಟಚಿಂತನವೂ ಆಗುತ್ತಿರಲಿಲ್ಲ. ಆದರೆ ಅತ್ಯುಗ್ರದುಃಖವನ್ನು ಕೊಡುವ ಕೆಲಸದಲ್ಲಿ ಬೇಡವಾಗಿದ್ದರೂ ಮನಸ್ಸು ಪ್ರವರ್ತಿಸುವುದಿಲ್ಲವೆ ? ಅದರಿಂದ ಆ ಮನಸ್ಸನ್ನು ಪ್ರೇರಿಸುವವರು ಒಬ್ಬರು ಇರಲೇಬೇಕು: ಅವರು ಯಾರು ? ಎಂದು ಪ್ರಶ್ನವು.

ಪ್ರಾಣವು (ಎಲ್ಲರಿಗಿಂತ) ಮೊದಲು ಕಾರ್ಯವನ್ನು ಮಾಡಲು ಹೊರಡುವುದಲ್ಲ ? ಅದನ್ನು ಹಾಗೆ ಹೋಗು ಎಂದವರು ಯಾರು ? [1]

(ಜನರು) ಮಾತನ್ನು ಆಡುವರಲ್ಲ ? ಆ ಮಾತನ್ನು ಪ್ರೇರಿಸಿದವರು ಯಾರು ? ಚಕ್ಷಸ್ಸು, ಶ್ರೋತ್ರ, ಇವನ್ನು ಪ್ರೇರಿಸುವ ಆ ದೇವನು ಯಾರು ?

(ಗುರುವು ಶಿಷ್ಯನಿಗೆ ಉತ್ತರವನ್ನು ಹೇಳುತ್ತಾನೆ.)

೨. ಕಿವಿಯ ಕಿವಿ ಅದು : ಮನಸ್ಸಿನ ಮನಸ್ಸು (ಅದು). ಮಾತಿನ ಮಾತು (ಅದು.) ಪ್ರಾಣದ ಪ್ರಾಣವು (ಅದು) ; ಕಣ್ಣಿನ ಕಣ್ಣು (ಅದು). (ಆಶೆಗಳನ್ನು) ಸಂಪೂರ್ಣವಾಗಿ ಬಿಟ್ಟು ಧೀರರಾದವರು, ಈ ದೇಹವನ್ನು ಬಿಟ್ಟು, ಈ ಲೋಕದಿಂದ ಹೋದಮೇಲೆ ಅಮೃತರಾಗುವರು.[2]

೩. ಅಲ್ಲಿಗೆ ಕಣ್ಣು ಹೋಗಲಾರದು : ವಾಕ್ಕು ಹೋಗುವುದಿಲ್ಲ : ಮನಸ್ಸೂ ಹೋಗುವುದಿಲ್ಲ. ಅದನ್ನು ನಾವು ಅರಿಯೆವು : ನಾವು ಇದನ್ನ ಇತರರಿಗೆ ಹೇಗೆ ಹೇಳುವುದು ಎಂಬುದನ್ನೂ ಅರಿಯೆವು.[3]

---

1. ಮೊದಲು ಎಂದು ಹೇಳಿರುವುದು ಸರ್ವೇಂದ್ರಿಯಗಳೂ ಕೆಲಸಮಾಡಲು ಕಾರಣವು ಅದು ಎಂದು.

2. ಕಿವಿಯ ಕಿವಿ ಎಂದರೆ ಕಿವಿಯು ಯಾವುದರ ಬಲದಿಂದ ಕೇಳುವುದೊ ಅದು. ಹೀಗೆಯೇ ಮನಸ್ಸಿನ ಮನಸ್ಸು ಮೊದಲಾದವಕ್ಕೂ ಅರ್ಥಮಾಡಬೇಕು.

ಹೀಗೆ ಎಲ್ಲದಕ್ಕೂ ಕಾರಣವಾದುದು ಬ್ರಹ್ಮ. ಅದನ್ನು ಪಡೆಯಲು ಇವುಗಳನ್ನೆಲ್ಲಾ ಬಿಡಬೇಕು. ಇವುಗಳಲ್ಲಿ ಸಿಕ್ಕಿಕೊಂಡಿರುವವರೆಗೂ ಮರಣವು ತಪ್ಪುವುದಿಲ್ಲ. ಅದರಿಂದ ಮರಣವು ಬೇಡ ಎನ್ನುವವನು ಇವನ್ನೆಲ್ಲಾ ಬಿಡಬೇಕು. ಇವನ್ನೆಲ್ಲ ಬಿಟ್ಟವನು ಬ್ರಹ್ಮವನ್ನು ಪಡೆಯುವನು. ಅದು ಮರಣಕ್ಕೆ ಅತೀತವಾದುದು. ಅದರಿಂದ ಅಮೃತವು. ಇವುಗಳನ್ನೆಲ್ಲಾ ಏಕೆ ಬಿಡಬೇಕು ! ಎಂದರೆ, ಅದಕ್ಕೆ ಕಾರಣವಿದು—ಇವೆಲ್ಲ ಒಂದೊಂದು ಕಾಸಿನಷ್ಟು ಆದರೆ, ಅದು ಒಂದು ನೂರು ರೂಪಾಯಿನಷ್ಟು. ಆದ್ದರಿಂದ.

3. ಕಣ್ಣು ಹೋಗಲಾರದು ಎಂದರೆ ಕಣ್ಣು ಅದನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಕಣ್ಣು ಅದರ ಬಲದಿಂದ ನೋಡುವುದು. ವಾಕ್ಕು ಅದನ್ನು

೪. "ತಿಳಿದುದಕ್ಕಿಂತಲೂ ಬೇರೆ ಅದು : ತಿಳಿಯದುದುದಕ್ಕಿಂತಲೂ ಬೇರೆ" ಎಂದು ನಮಗೆ ಹೇಳಿದ ಹಿರಿಯರು ಹೇಳಿದ್ದರು.[1]

೫. ವಾಕ್ಕು ಯಾವುದನ್ನು ಹೇಳಲಾರದೊ, ಯಾವುದು ವಾಕ್ಕನ್ನು ಹೇಳುತ್ತದೋ (ವಾಕ್ಕಿಗೆ ಹೇಳುವ ಶಕ್ತಿಯಿರುವುದು ಅದರ ಅನುಗ್ರಹದಿಂದ,) ಅದನ್ನು ಬ್ರಹ್ಮ ಎಂದುಕೋ. ಇತರರು ಉಪಾಸನ ಮಾಡುವ ಉಪಾಧಿ[2] ಸಹಿತವಾದುದು ಯಾವುದೂ ಬ್ರಹ್ಮವಲ್ಲ.

ಅರಿತರಲ್ಲವೆ ಅದು ಹೇಳುವುದು ? ವಾಕ್ಕಿಗೆ ವಾಕ್ಕು ಅದು, ಅದನ್ನು ಕುರಿತು ವಾಕ್ಕು ಎಂತು ಹೇಳುವುದು ?

ನಾವು ತಿಳಿಯುವುದು ಎನ್ನುವುದು ಇಂದ್ರಿಯ ಮನಸ್ಸುಗಳಿಗೆ ಗೊತ್ತಾದುದನ್ನು. ಆ ಬ್ರಹ್ಮವು ಇವೆರಡಕ್ಕೂ ಆಚಿನದು : ಅದರಿಂದ ನಾವೂ ಅದನ್ನು ತಿಳಿಯೆವು: ಇತರರಿಗೆ ಹೇಳಲೂ ಅರೆವು.

ಹೀಗೆ ಹೇಳುವುದು ಆ ಬ್ರಹ್ಮವು ಸಾಮಾನ್ಯ ಪ್ರಯತ್ನದಿಂದ ಸಿಕ್ಕುವುದಲ್ಲ: ಹೆಚ್ಚು ಪ್ರಯತ್ನ ಮಾಡಬೇಕು ಎಂದು ಹೇಳುವುದಕ್ಕೆ. (ಶಂ).

1. ತಿಳಿಯಿತು ಎಂದರೆ, "ನಮ್ಮ ಅರಿವಿಗೆ ಎಟಕಿತು: ನಮ್ಮ ಅರಿವು ಅದನ್ನು ಹಿಡಿಯಿತು" ಎಂದು. ಅದು ಸಾಧ್ಯವಿಲ್ಲ. ಹಾಗೆಯೇ ನಮಗೆ ತಿಳಿಯದು ಎಂದರೆ, ಅದು ಅರಿವಿಗೆ ಸಿಕ್ಕುವುದಲ್ಲ ಎಂದರೆ, ಅದರ ಅರಿವಾಗುವುದಾದರೂ ಹೇಗೆ ? ಅದರಿಂದ ಅದು ಎರಡಕ್ಕೂ ವಿಲಕ್ಷಣವಾದುದು.

"ಅದನ್ನು ನ್ಯಾಯಶಾಸ್ತ್ರವು ಹೇಳುವ ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯುವುದು ಸಾಧ್ಯವಿಲ್ಲ: ಆಗಮ (ವೇದ) ಪ್ರಮಾಣವೊಂದರಿಂದಲೇ ಅದನ್ನು ತಿಳಿಯಬೇಕು: ಎಂದು "ಅನ್ಯದೇವ ತದ್ವಿದಿತಾತ್" ಎಂದು ಆಗಮದಿಂದ ಉಪದೇಶವನ್ನು ಮಾಡಲು ಆರಂಭಿಸಿದೆ" (ಶಂ).

ಆ ಪ್ರಮಾಣಗಳು ನಾಲ್ಕು. ಪ್ರತ್ಯಕ್ಷ=ಇಂದ್ರಿಯಗೋಚರವಾಗುವುದು : ಅನುಮಾನ=ತಿಳಿದುದನ್ನು ಹಿಡಿದು ತಿಳಿಯದುದನ್ನು ಕಂಡುಕೊಳ್ಳುವುದು. ಉಪಮಾನ=ಇದರಂತೆ ಅದು ಎಂದುಕೊಳ್ಳುವುದು. ಆಗಮ=ತನಗೆ ಅರಿಯಲು ಆಗದುದನ್ನು ಶಾಸ್ತ್ರದಿಂದ, ವೇದದಿಂದ, ತಿಳಿದುಕೊಳ್ಳುವುದು.

2. ಉಪಾಧಿ: ದೊಡ್ಡದನ್ನು ಚಿಕ್ಕದು ಮಾಡುವುದು ಉಪಾಧಿ. ಕೆರೆಯಲ್ಲಿ ನೀರನ್ನು ನಿಲ್ಲಿಸಿರುವುದು ಕಟ್ಟೆ. ನೀರು ಕೆರೆಯಷ್ಟೇ ಆಗಿರುವುದು ಕಟ್ಟೆಯಿಂದ. ಅದರಿಂದ ಅದು ಉಪಾಧಿ.

೬. ಯಾವುದನ್ನು ಮನಸ್ಸಿನಿಂದ ತಿಳಿಯುವುದಕ್ಕೆ ಆಗುವುದಿಲ್ಲವೊ, ಯಾವುದು ಮನಸ್ಸನ್ನೂ ತಿಳಿಯು ವುದು ಎನ್ನುವರೋ, ಅದನ್ನು ಬ್ರಹ್ಮವೆಂದು ತಿಳಿ. ಇತರರು ಉಪಾಸನ ಮಾಡುವ ಉಪಾಧಿಸಹಿತವಾದುದು ಯಾವುದೂ ಬ್ರಹ್ಮವಲ್ಲ.[1]

೭. ಯಾವುದಕ್ಕೆ ನೋಡುವುದಕ್ಕೆ ಕಣ್ಣು ಬೇಕಾಗಿಲ್ಲವೋ, ಯಾವುದು (ನೋಡುವ)ಕಣ್ಣನ್ನೂ ನೋಡುವುದೋ. ಅದೇ ಬ್ರಹ್ಮವೆಂದು ತಿಳಿ. ಇತರರು ಉಪಾಸನ ಮಾಡುವ (ಉಪಾಧಿಸಹಿತವಾದುದು ಯಾವುದೂ) ಬ್ರಹ್ಮವಲ್ಲ.

೮. ಯಾವುದಕ್ಕೆ ಕೇಳುವುದಕ್ಕೆ ಕಿವಿಯು ಬೇಕಾಗಿಲ್ಲವೋ, ಯಾವುದು (ಕೇಳುವ) ಕಿವಿಯನ್ನು ಕೇಳುವುದೋ, ಅದು ಬ್ರಹ್ಮವೆಂದು ತಿಳಿ. ಇತರರು ಉಪಾಸನಮಾಡುವ ಉಪಾಧಿಸಹಿತವಾದುದು ಯಾವುದೂ ಬ್ರಹ್ಮವಲ್ಲ.

೯. ಯಾವುದಕ್ಕೆ ಓಡಾಡಲು ಪ್ರಾಣವು ಬೇಕಾಗಿಲ್ಲವೋ, ಯಾವುದು ಪ್ರಾಣವನ್ನು[2] ಓಡಾಡಿಸುವುದೋ ಅದು ಬ್ರಹ್ಮವೆಂದು ತಿಳಿ. ಇತರರು ಉಪಾಸನ ಮಾಡುವ ಉಪಾಧಿಸಹಿತವಾದುದು ಯಾವುದೂ ಬ್ರಹ್ಮವಲ್ಲ.

ಇಂತಿದು ಮೊದಲನೆಯ ಖಂಡವು

---

1. ಎಲ್ಲರೂ 'ತಿಳಿದೆ' ಎನ್ನುವುದು ಮನೋಬುದ್ಧಿಗಳಿಂದ. ತಿಳಿದೆ ಎಂದರೆ ಮನಸ್ಸಿಗೆ ಹಿಡಿಯಿತು ಎಂದು ಅರ್ಥ: ಆಗ ಮನಸ್ಸು ದೊಡ್ಡದಾಯಿತು: ತಿಳಿದುದು ಚಿಕ್ಕದಾಯಿತು. ಬ್ರಹ್ಮವು ಹಾಗೆ ಮನಸ್ಸು ಹಿಡಿಯುವಷ್ಟು ಸಣ್ಣದಲ್ಲ: ಮನಸ್ಸು ಅದರ ಬಲದಿಂದ ತಿಳಿಯುವುದು ಎಂದಮೇಲೆ ಮನಸ್ಸು ತನ್ನನ್ನು ತಿಳಿಯ ಬಲ್ಲುದನ್ನು ತಿಳಿಯುವುದಾದರೂ ಎಂತು !

2. ಪ್ರಾಣವೆಂದರೆ ಇಲ್ಲಿ ಘ್ರಾಣ—(ಶಂಕರರು). ಈ ಉಪನಿಷತ್ತಿನ ಮೊದಲನೆಯ ಮಂತ್ರದಲ್ಲಿ ಮನಸ್ಸು, ಪ್ರಾಣ, ವಾಕ್ಕು, ಚಕ್ಷುಸ್ಸು, ಶ್ರೋತ್ರಗಳನ್ನು ಪ್ರೇರಿಸುವವನು ಯಾರು ಎಂದು ಕೇಳಿದೆ. ಎರಡನೆಯ ಮಂತ್ರದಲ್ಲಿಯೂ ಆ ಐದನ್ನೇ ಹೇಳಿರುವುದು. ಮತ್ತೆ ಐದರಿಂದ ಒಂಭತ್ತನೆಯ ಮಂತ್ರದವರೆಗೂ ಅದನ್ನೇ ಹೇಳಿದೆ.

ಎರಡನೆಯ ಖಂಡ

(ಇಂದ್ರಿಯ, ಮನಸ್ಸು, ಪ್ರಾಣಗಳು ಆತ್ಮದಲ್ಲಿ ಎಂದು ಹೇಳಿ ಇನ್ನು ಮೂರನೆಯ ಮಂತ್ರದಲ್ಲಿ ಹೇಳಿದ್ದ, "ಅದು (ಆ ಆತ್ಮವು) ವಿದಿತ, ಅವಿದಿತ, ಎರಡೂ ಅಲ್ಲ. ಅದನ್ನು ಬಲ್ಲೆ ಎಂದವರಿಗೆ ತಿಳಿಯದು: ಕಾಣೆ ಎಂದವರಿಗೆ ಗೊತ್ತು" ಎಂದು ಒಗಟುಮಾತಿನಿಂದ ಹೇಳಿದ ಆತ್ಮವನ್ನು ಕುರಿತು ಹೇಳಲು ಈ ಎರಡನೆಯ ಖಂಡವು ಹೊರಟಿದೆ.)

೧. ನೀನು (ಈ ಬ್ರಹ್ಮವನ್ನು) ಚೆನ್ನಾಗಿ ಬಲ್ಲೆನೆಂದರೆ, ನೀನು ಈ ಬ್ರಹ್ಮದ ರೂಪವನ್ನು ಬಹು ಸ್ವಲ್ಪ ಮಾತ್ರ ಬಲ್ಲವನಾದೆ. ದೇವತೆಗಳನ್ನೂ ಬಲ್ಲೆ ಎಂದವನು (ಆ ಬ್ರಹ್ಮದ ಅಧಿದೈವತಸ್ವರೂಪವನ್ನು ಬಲ್ಲವನು ಅಷ್ಟೆ.) (ಅದರಿಂದ ನೀನು ಬಲ್ಲೆಎನ್ನುವ) ಬ್ರಹ್ಮವು ಇನ್ನೂ ಮೀಮಾಂಸ (ವಿಚಾರ) ಮಾಡಬೇಕಾದುದಾಗಿಯೇ ಉಳಿದಿದೆ.[1]

(ಹೀಗ ಆಚಾರ್ಯನು ಹೇಳಿದಮೇಲೆ ಶಿಷ್ಯನು ಏಕಾಂತದಲ್ಲಿ ಕುಳಿತುಕೊಂಡು ಬುದ್ಧಿ ಮನಸ್ಸು ಇಂದ್ರಿಯಗಳನ್ನೂ ಅಧೀನಕ್ಕೆ ತಂದು

---

1 "ತಿಳಿಯಬೇಕು ಎನ್ನುವವನು ತನ್ನ ಆತ್ಮವೇ ಬ್ರಹ್ಮ ಎಂಬುದನ್ನು ತಿಳಿದುಕೊಳ್ಳಬೇಕು" ಎಂಬುದೇ ಸರ್ವೋಪನಿಷತ್ತುಗಳ ಗುರಿಯು. ವಿದಿತ, ಅವಿದಿತ, ಎರಡಕ್ಕೂ ಅನ್ಯವಾದುದು ಬ್ರಹ್ಮ ಎಂಬುದೇ ಬ್ರಹ್ಮವಿತ್ತುಗಳ ಸಂಪ್ರದಾಯವು ಅಂಗೀಕರಿಸಿರುವ ಸಿದ್ಧಾಂತವು...... ಅದರಿಂದ ಗುರುವು ಶಿಷ್ಯನು ಒಂದು ಸಲ ಕೇಳಿದ ಕೂಡಲೇ "ತನಗೆ ತಿಳಿಯಿತು: ಚೆನ್ನಾಗಿ ತಿಳಿಯಿತು" ಎಂದುಕೊಂಡಾನು ಎಂದು; ಅದನ್ನು ನಿವಾರಿಸಲು ಹೀಗೆ ಹೇಳುವನು......

(ಇಲ್ಲಿ ಛಾಂದೋಗ್ಯದ ಕಥೆಯನ್ನು ಚಿಂತಿಸಿ) ಪ್ರಜಾಪತಿಯೇ ಉಪದೇಶ ಮಾಡಿದರೂ ಪಂಡಿತನಾದ ಅಸುರ ಚಕ್ರವರ್ತಿ ವಿರೋಚನನು ಸ್ವಭಾವದೋಷ ಬಲದಿಂದ ವಿಪರೀತವಾದ ಅರ್ಥವನ್ನು ಹಿಡಿದು ಶರೀರವೇ ಆತ್ಮ ಎಂದುಕೊಂಡನು. ದೇವರಾಜನಾದ ಇಂದ್ರನು ಒಂದು, ಎರಡು, ಮೂರುಸಲ ಹೇಳಿದರೂ ತಿಳಿದುಕೊಳ್ಳಲಾರದೇ, ಸ್ವಭಾವದೋಷಕ್ಷಯಕ್ಕಾಗಿ ತಪಸ್ಸು ಮಾಡಿ ಅನಂತರ ನಾಲ್ಕನೆಯ ಸಲ ಹೇಳಿದಾಗ ತಿಳಿದುಕೊಂಡನು. ಅದರಿಂದ, ಲೋಕದಲ್ಲಿ ಒಂದುಸಲ ಕೇಳಿದ ಮಾತ್ರದಿಂದಲೇ, ಒಬ್ಬನು ಯಥಾವತ್ತಾಗಿ ಇನ್ನೊಬ್ಬನು ಅಯಥಾವತ್ತಾಗಿ, ಮತ್ತೊಬ್ಬನು ವಿಪರೀತವಾಗಿ ತಿಳಿದುಕೊಳ್ಳುವುದುಂಟು: ಇನ್ನೊಬ್ಬನಿಗೆ ತಿಳಿಯುವುದೇ ಇಲ್ಲ. (ಲೋಕದಲ್ಲಿ

ಕೊಂಡವನಾಗಿ ಆಚಾರ್ಯನು ಹೇಳಿದಂತೆ, ಆತನು ಹೇಳಿದ ಮಂತ್ರವನ್ನು ಅರ್ಥವತ್ತಾಗಿ ವಿಚಾರಮಾಡಿ, (ಹಾಗೋ ಹೀಗೋ ಎಂದು) ತರ್ಕಮಾಡಿ, ತನ್ನ ಅನುಭವಕ್ಕೆ ತಂದುಕೊಂಡು, ಮತ್ತೆ ಆಚಾರ್ಯನ ಬಳಿಗೆ ಹೋಗಿ—ತಾನು ತಿಳಿದುದನ್ನು ಹೇಳುವನು).

೨. ನಾನು ತಿಳಿದುಕೊಂಡೆ ಎಂಬುದನ್ನೂ ಅರಿಯೆ : ತಿಳಿಯಲಿಲ್ಲ ಎಂಬುದೂ ನನಗೆ ಗೊತ್ತು. (ಈ ನನ್ನ ವಚನದ ರಹಸ್ಯವನ್ನು) ನಮ್ಮಲ್ಲಿ

ಇಂದ್ರಿಯ ಗೋಚರವಾದ ವಿಚಾರದಲ್ಲಿಯೇ) ಹೀಗಿರಲು, ಅತೀಂದ್ರಿಯವಾದ ಆತ್ಮತತ್ವವಿಚಾರದಲ್ಲಿ ಹೇಳುವುದೇನು ?

ಅದರಿಂದ ಚೆನ್ನಾಗಿ ತಿಳಿದೆನೆಂದುಕೊಂಡರೂ, ಅದನ್ನು ತಿಳಿಯುವುದು ಸುಲಭವಲ್ಲವಾದ್ದರಿಂದ, ಹೀಗೆ ಸ್ವಲ್ಪವನ್ನು ಮಾತ್ರ ಬಲ್ಲೆ ಎಂದು ಹೇಳಿದುದು. ಹಾಗಾದರೆ, "ಬ್ರಹ್ಮಕ್ಕೆ ಅನೇಕ ರೂಪಗಳಿವೆ : ಅದರಲ್ಲಿ ಕೆಲವು ದೊಡ್ಡವು: ಇನ್ನು ಕೆಲವು ಚಿಕ್ಕವು" ಎಂದೋ (ನಿಮ್ಮ ಅಭಿಪ್ರಾಯ?) ಎಂದರೆ, ಹೌದು. ಬ್ರಹ್ಮಕ್ಕೆ ಸ್ವತಃ ರೂಪವಿಲ್ಲದಿದ್ದರೂ, ನಾಮರೂಪಗಳೆಂಬ ಉಪಾಧಿಗಳಿಂದ ಅದಕ್ಕೆ ರೂಪಗಳು ಬೇಕಾದಷ್ಟು ಉಂಟು. ಆಗ (ಹಾಗೆ ಉಪಾಧಿಗಳಿಂದ ಕೂಡಿರುವಾಗ) ದೇಹಾದಿಗಳ ವೃದ್ಧಿಸಂಕೋಚ ಮೊದಲಾದುವುಗಳಿಂದ ಅದು ದೊಡ್ಡದೂ ಚಿಕ್ಕುದೂ ಆದಂತೆ ಕಾಣುವುದು. ಆದಗೆ ಅವು ಅದರ ಸ್ವರೂಪವಲ್ಲ.

ಹೀಗೆ ಅಂತಃಕರಣ, ದೇಹ, ಇಂದ್ರಿಯ ಉಪಾಧಿಗಳಿಂದ ಕೂಡಿರುವುದು ಅಧ್ಯಾತ್ಮವೆಂಬ ರೂಪವು. ಹಾಗೆಯೇ ದೇವತಾದಿಗಳ ರೂಪವಾಗಿರುವುದು ಅಧಿದೈವತವೆಂಬ ರೂಪವು. ಇವೆರಡೂ ಅಲ್ಪವೆ!

ಅದರಿಂದ, ಸರ್ವೋಪಾಧಿಮುಕ್ತವಾಗಿ, ಶಾಂತ, ಅನಂತ, ಏಕ, ಅದ್ವೈತವಾದ ಭೂಮಾ ಎಂಬ ನಿತ್ಯಬ್ರಹ್ಮವನ್ನು, ತಿಳಿಯಲಾಗಲಿಲ್ಲವಾಗಿ, ಅದನ್ನು ಕುರಿತು ವಿಚಾರಮಾಡಬೇಕಾದುದು ಇನ್ನೂ ಇದ್ದೇ ಇದೆ ಎಂದು ಮೀಮಾಂಸ್ಯಂ ಎಂದು ಹೇಳಿದೆ.—(ಶಂಕರರು)

"ಬ್ರಹ್ಮವನ್ನು ತಿಳಿದ ಬ್ರಹ್ಮವಿತ್ತೂ, ಬ್ರಹ್ಮವೇ ಆಗುವನು" ಎಂದು ಶ್ರುತಿಯು ಹೇಳುತ್ತದೆ. ಈಗ ಇಲ್ಲಿ ಹೇಳಿರುವ ಸ್ಥಿತಿ ಬ್ರಹ್ಮವಿತ್ತಾದರೂ ಇನ್ನು ಉಪಾಧಿಯುಳ್ಳರುವವನ ಮಾತು. ಆಚಾರ್ಯೋಪದೇಶದಿಂದ, ಶಾಸ್ತ್ರವಾಕ್ಕಿನಿಂದ, ಸ್ವಂತವಾದ ಅನುಭವದಿಂದ ದೇಹದಲ್ಲಿರುವ ಆತ್ಮವು ಉಪಾಧಿರಹಿತವಾದಾಗ ಆತ್ಮನೇ ಆಗುವುದು ಎಂದು ತಿಳಿದುದು ಉಂಟು : ಆದರೆ, ಉಪಾಧಿಯುಳ್ಳರುವವನು ಉಪಾಧಿರಹಿತವಾದ ಆತ್ಮನನ್ನು ತಿಳಿಯುವುದೆಂತು ? ಅದರಿಂದ ತಿಳಿಯಲಿಲ್ಲ.

ಹೀಗೆ ಬ್ರಹ್ಮವನ್ನು ಉಪಾಧಿಯಿಂದ ಕೂಡಿದಾಗ ತಿಳಿಯಲು ಆಗುವುದಿಲ್ಲ ಎಂದು ತಿಳಿಯುವುದೇ ಬ್ರಹ್ಮಜ್ಞಾನ. ಈ ಬ್ರಹ್ಮಜ್ಞಾನವು ದೃಢವಾಗುತ್ತ

ಯಾವನು ಅರಿಯುವನೋ ಅವನು ಬ್ರಹ್ಮವನ್ನು ಬಲ್ಲವನು. ನಮಗೆ ತಿಳಿಯದು ಎಂಬುದನ್ನು ಅವನು ಬಲ್ಲ.

(ಮತ್ತೆ ಅದನ್ನೇ ಹೇಳಲಾಗಿದೆ)

೩. ಯಾವನು ತಿಳಿಯಲಿಲ್ಲ ಎಂದನೋ ಅವನು ತಿಳಿದ. ತಿಳಿಯಿತು ಎಂದವನು ತಿಳಿಯನು. ಬಲ್ಲೆವು ಎಂದು ಕೊಂಡವರಿಗೆ ತಿಳಿಯದು. ಅರಿಯೆವು ಎಂದು ಕೊಂಡವರಿಗೆ (ಆ ಬ್ರಹ್ಮವು) ತಿಳಿಯುವುದು.[1]

(ಹಿಂದೆ ಹೇಳಿದಂತೆ ಆತ್ಮವು ಅತ್ಯಂತ-ಅವಿಜ್ಞಾತವಾದರೆ ಲೌಕಿಕರಿಗೂ ಬ್ರಹ್ಮವೇತ್ತೃಗಳಿಗೂ ವ್ಯತ್ಯಾಸವೇನು ? ಇಬ್ಬರೂ ಒಂದೇ ಎಂದಾಗುವುದು. ಅದರಿಂದ ಆ ಬ್ರಹ್ಮವನ್ನು ತಿಳಿಯುವ ಬಗೆಯನ್ನು ಹೇಳಬೇಕು, ಎಂದು ಮುಂದಿನ ಮಂತ್ರವನ್ನು ಹೇಳಿದೆ).

ಬಂದಹಾಗೆಲ್ಲ, ಬಲತ ದಾಳಿಂಬದ ಹಣ್ಣು ಬರಿಯುವಂತೆ, ಉಪಾಧಿಯು ಶಿಥಿಲವಾಗುತ್ತಾ ಬಂದು, ಕೊನೆಯಲ್ಲಿ ಹಾವಿನ ಪೊರೆಯು ಕಳಚಿ ಬೀಳುವಂತೆ ಕುಸಿದು ಬೀಳುವುದು.

ಆಗ, ಮನೆಯ ಗೋಡೆಗಳೆಲ್ಲ ಕುಸಿದು ಬಿದ್ದುಹೋದರೆ, ಮನೆಯು ಹೋಗಿ ಬಟ್ಟಬಯಲೇ ಆಗುವಂತೆ, ಉಪಾಧಿ ನಾಶವಾಗಿ ಬ್ರಹ್ಮವು ತಾನೇ ತಾನಾಗುವುದು.

ವಿದ್ಯಾರಣ್ಯರು ಪಂಚದಶಿಯಲ್ಲಿ ಈ ಸ್ಥಿತಿಯನ್ನು ಹೀಗೆ ವರ್ಣಿಸಿರುವರು: ಅಂತಃಪೂರ್ಣಃ ಬಹಿಃಪೂರ್ಣಃ ಪೂರ್ಣಕುಂಭ ಇವಾಂಬುಧೌ—ನೀರು ತುಂಬಿದ ಮಡಕೆಯು ಸಾಗರದಲ್ಲಿರುವಂತೆ ಎಂದು. ಅಲ್ಲಿ ಉಪಾಧಿಯಿರುವುದರಿಂದ ಬೇರೆ ಎನ್ನಿಸಿಕೊಂಡಿದ್ದರೂ, ಒಳಗೂ ಹೊರಗೂ ನೀರೇ ಇರುವುದರಿಂದ, ನೀರಿನ ದೃಷ್ಟಿಯಿಂದ ಒಂದೇ ಆಗಿರುವಂತೆ ಎಂದರ್ಥ.

"ವಿದಿತಕ್ಕಿಂತಲೂ ಅವಿದಿತಕ್ಕಿಂತಲೂ ಬೇರೆಯಾದ, ಎಂದು ಹೇಳಿದ ಅರ್ಥವನ್ನೇ ಅನುಮಾನ-ಅನುಭವಗಳಿಂದ ಹಿಡಿದು, ಆಚಾರ್ಯನು ಹೇಳಿದುದನ್ನು ಬೇರೆ ಮಾತಿನಿಂದ ಇಲ್ಲಿ ಹೇಳಿದೆ" (ಶಂಕರರು).

1. ಬಲ್ಲೆವು ಎಂದರೆ ಬ್ರಹ್ಮವು ಬುದ್ಧಿಯಲ್ಲಿ ಅಡಗಿತು ಎಂದಾಗುವುದು. ಬುದ್ಧಿ ಚಿಕ್ಕದು : ಬ್ರಹ್ಮ ಲೆಕ್ಕವಿಲ್ಲದಷ್ಟು ದೊಡ್ಡದು. ಅದನ್ನು ಬಲ್ಲೆ ಎಂದರೆ ಕುಡಿಕೆಯಲ್ಲಿ ಸಮುದ್ರವನ್ನು ತಂದೆ ಎಂದಂತಾಗುವುದು. ಅದರಿಂದ ಬಲ್ಲೆ ಎಂದವನು ಬ್ರಹ್ಮವನ್ನು ಕಾಣನು. ಬ್ರಹ್ಮವನ್ನು ಬಲ್ಲವನು ನಾನು ಅದನ್ನು ತಿಳಿಯಲಾಗಲಿಲ್ಲ ಎಂದು ಅದನ್ನು ತಿಳಿಯುವನು.

ಮೇಲಿನ ಶಿಷ್ಯಾಚಾರ್ಯ ಸಂವಾದವನ್ನು ಮುಗಿಸಲು ಶ್ರುತಿಯು ತಾನೇ ಮುಂದೆ ಬಂದು ಈ ಮಂತ್ರವನ್ನು ಹೇಳಿತು. (ಶಂಕರರು).

೪. ಆ ಬ್ರಹ್ಮವು ಬೋಧ ಬೋಧದಲ್ಲಿಯೂ (ತಿಳಿದೆ ಎಂದಾಗ ಲೆಲ್ಲ)[1] ಗೋಚರವಾಗುತ್ತಿರುವುದು. ಅದನ್ನು ತಿಳಿದುಕೊಂಡರೆ, ಅಮೃತತ್ವವನ್ನು ಪಡೆಯುವನು. ಪ್ರಯತ್ನ ಬಲದಿಂದ[2] ವೀರ್ಯವನ್ನು (ಧನ ಸಹಾಯ, ಮಂತ್ರ, ಓಷಧಿ, ತಪಸ್ಸು, ಯೋಗಸಿದ್ಧಿ ಇವುಗಳನ್ನು) ಪಡೆಯಬಹುದು. (ಆದರೆ, ಮರಣವನ್ನು ದಾಟುವುದಕ್ಕಾಗುವುದಿಲ್ಲ. ಮರಣವನ್ನು ದಾಟಲು ವಿದ್ಯೆಯು ಬೇಕು.) (ಆತ್ಮ) ವಿದ್ಯೆಯಿಂದ (ಆ ಮೃತ್ಯುವನ್ನು ದಾಟುವನು.) ಅಮೃತವನ್ನು ಪಡೆಯುವನು.

೫. ಇಲ್ಲಿ (ಈ ಜನ್ಮದಲ್ಲಿ) ಇರುವಾಗಲೇ (ಆತ್ಮನನ್ನು) ತಿಳಿದು ಕೊಂಡರೆ, ಸತ್ಯ (ಸಾರ್ಥಕ)ವಾಗುವುದು : ತಿಳಿಯದಿದ್ದರೆ, ದೊಡ್ಡ ನಷ್ಟವಾಗುವುದು. (ಅದನ್ನು ತಿಳಿಯುವುದು ಹೇಗೆ ಎಂದರೆ ಕಂಡ ಕಂಡ) ಸ್ಥಾವರ, ಜಂಗಮಗಳನ್ನ (ನೋಡಿದಾಗಲೆಲ್ಲ, ಇವುಗಳ ಉತ್ಪತ್ತಿ, ವೃದ್ಧಿ, ಸ್ಥಿತಿ, ಸಂಕೋಚ, ಲಯಗಳು ಹೇಗೆ ಆದುವು ? ಹೇಗೆ ಆಗುವುವು ? ಎಂಬುದನ್ನು ವಿಚಾರಮಾಡಿ) ತಿಳಿದುಕೊಂಡರೆ, (ಆತ್ಮ ಜ್ಞಾನವು ಲಭಿಸುವುದು.) (ಅಂಥವರು) ಧೀರರು. (ಅವರು) ಈ ದೇಹವನ್ನು ಬಿಟ್ಟು, ಈ ಲೋಕದಿಂದ ಹೋಗಿ ಅಮೃತರಾಗುವರು.

ಇಂತಿದು ಎರಡನೆಯ ಖಂಡವು.

---

1. ಪ್ರತಿಬೋಧವಿದಿತಂ ಎಂಬಲ್ಲಿ ಬೌದ್ಧ, ಕಾಣಾದ, ಮೊದಲಾದ ಪಕ್ಷಗಳನ್ನು ಶಂಕರರು ನಿರಾಕರಿಸುತ್ತಾರೆ. ಬೇಕಾದವರು ಭಾಷ್ಯವನ್ನು ನೋಡುವುದು.

2. ಪ್ರಯತ್ನಬಲದಿಂದ ಎಂಬಲ್ಲಿ ಆತ್ಮನು ವೀರ್ಯವನ್ನು ಎಲ್ಲಿಂದ ಪಡೆಯುವನು ? ಎಂದರೆ ಆತ್ಮದಿಂದಲೇ ಪಡಯುವನು. ಹೀಗೆ ಜಗತ್ತೆಲ್ಲವೂ ಆತ್ಮವೇ ಎಂಬುದನ್ನು ತಿಳಿದರೆ ಅದೇ ಆತ್ಮ ವಿದ್ಯೆಯು. ಈ ಆತ್ಮ ವಿದ್ಯಾಬಲದಿಂದ ಮರಣವನ್ನು ದಾಟಲು ಸಾಧ್ಯ.

(ಐತರೇಯದಲ್ಲಿ ಪೃಥಿವಿಯನ್ನು ಮರ ಎಂದು ಕರೆದಿರುವುದನ್ನು ನೋಡಿ : ಪುಟ ೧೨೩ ಅದರಿಂದ ಇಲ್ಲಿರುವ ಜಂತುಗಳು ಮರಣವನ್ನು ಹೊಂದಿದ ಮೇಲೆ, ಈ ಲೋಕವನ್ನು ಬಿಟ್ಟರೆ. ಅಮೃತರಾಗುವರು. ಮತ್ತೆ ಈ ಲೋಕ ದಲ್ಲಿಯೇ ಇದ್ದರೆ ಮರಣವು ತಪ್ಪುವುದಿಲ್ಲ ಎಂದರ್ಥ.)

ಇದೇ ಉಪನಿಷತ್ತಿನ ೧-೨ ಹೋಲಿಸಿ : ಪುಟ ೧೩೮.

ಮೂರನೆಯ ಖಂಡ.

(ಹಿಂದೆ, 'ಬಲ್ಲೆನೆನ್ನುವರಿಗೆ ಎಟಕದು' ಎಂದು ಹೇಳಿದ ಆ ಬ್ರಹ್ಮವು ಪ್ರಮಾಣಾದಿಗಳಿಗೆ ಗೋಚರವಾಗುವುದಿಲ್ಲ ಎಂದಾದಮೇಲೆ, ಮೊಲದ ಕೊಂಬಿನಂತೆ ಅತ್ಯಂತವಾಗಿ ಇಲ್ಲದ್ದಾಗುವುದು ಅಲ್ಲವೆ? ಎಂದು ಮೋಹಪಡುವ ಮಂದ ಬುದ್ಧಿಗಳ ವ್ಯಾಮೋಹವನ್ನು ಕಳೆಯು ಲೋಸುಗ ಈ ಆಖ್ಯಾಯಿಕೆಯನ್ನು ಹೇಳಲಾಗಿದೆ, ಇದನ್ನು "ಬ್ರಹ್ಮ ವಿದ್ಯೆ ಎಂದರೆ ಎಷ್ಟು ದೊಡ್ಡದು! ಆ ಬ್ರಹ್ಮ ವಿದ್ಯಾಬಲದಿಂದ ಅಗ್ನಿ ವಾಯುಗಳು ದೇವತೆಗಳಿಗೆಲ್ಲ ದೊಡ್ಡವರಾದರು: ಅವರಿಗಿಂತ ಇಂದ್ರನು ದೊಡ್ಡವನಾದನು." ಎಂದು ತೋರಿಸಲು ಹೇಳಬಹುದು. ಹಾಗೆಯೇ "ಬ್ರಹ್ಮವು ಯಾರಿಗೂ ತಿಳಿಯುವುದಿಲ್ಲ: ಅಗ್ನಿ ವಾಯುಗಳಿಗೇ ತಿಳಿಯಲಲ್ಲವೆಂದ ಮೇಲೆ, ಮಿಕ್ಕವರ ಮಾತೇನು? ಎಂದು ಹೇಳು ವುದಕ್ಕೆ ಈ ಆಖ್ಯಾಯಿಕೆ" ಎಂದರೂ ಎನ್ನಬಹುದು. "ಪ್ರಾಣಿಗಳಿಗೆ ಸ್ವತಂತ್ರವಾದ ಕರ್ತೃತ್ವ ಭೋಕ್ತೃತ್ವವಿಲ್ಲ ಎಂದು ತೋರಿಸಲು ಈ ಆಖ್ಯಾಯಿಕೆ" ಎನ್ನಲೂಬಹುದು.–(ಶಂಕರರು)

೧. ಬ್ರಹ್ಮವು ದೇವತೆಗಳಿಗೆ ಜಯವನ್ನು ಕೊಟ್ಟಿತು. ಆ ಬ್ರಹ್ಮ ವಿಜಯದಲ್ಲಿ ದೇವತೆಗಳು ದೊಡ್ಡವರಾದರು. ಆಗ ಅವರು "ಈ ವಿಜಯವು ನಮ್ಮದು (ನಾವು ಪಡೆದುದು) ಅದರಿಂದ ಬಂದಿರುವ ಈ ದೊಡ್ಡತನವೂ ನಮ್ಮದು" ಎಂದುಕೊಂಡರು.

೨. ಇವರ (ಈ ಯೋಚನೆಯನ್ನು) ಬ್ರಹ್ಮವು ತಿಳಿಯಿತು. ಅವರ ಎದುರಿಗೆ ಬ್ರಹ್ಮವು ನಿಂತಿತು. (ಇಂದ್ರಿಯ ಗೋಚರವಾಗದ ಬ್ರಹ್ಮವು ಅವರಿಗೆ ಬುದ್ಧಿಯನ್ನು ಕಲಿಸಲು ಇಂದ್ರಿಯ ಗೋಚರವಾಯಿತು.) ಅವರಿಗೆ "ಇದೇನು ಈ ಯಕ್ಷ (ಅದ್ಭುತ)!" ಎನ್ನಿಸಿತು. ಅರ್ಥವಾಗಲಿಲ್ಲ.

೩–೬. ಆಗ ದೇವತೆಗಳು ಅಗ್ನಿಯನ್ನು ಕರೆದು "ಈ ಅದ್ಭುತ ವೇನು ತಿಳಿದು ಬಾ" ಎಂದರು. ಆಗಲೆಂದು ಅಗ್ನಿಯು ಅದರ ಬಳಿ ಸಾರಿದನು: (ಹಾಗೆ ಓಡಿಬಂದ) ಅವನನ್ನು ಅದು "ನೀನು ಯಾರು?"

ಎಂದು ಕೇಳಿತು. "ನಾನು ಅಗ್ನಿ, ನಾನು ಜಾತವೇದನು" ಎಂದು ಅಗ್ನಿಯು ಹೇಳಿದನು. "ನಿನ್ನಲ್ಲಿ ಏನು ವೀರ್ಯವುಂಟು? (ನೀನು ಏನೇನು ಮಾಡಬಲ್ಲೆ?)"ಎಂದು ಅದುಕೇಳಿತು. "ಈ ಪೃಥಿವಿಯಲ್ಲಿರುವ ಏನನ್ನು ಬೇಕಾದರೂ ಸ ಡಬಲ್ಲೆ" ಎಂದನು ಅಗ್ನಿ. ಅದು ಅವನಿಗೆ ಒಂದು ಹುಲ್ಲು ಕಡ್ಡಿಯನ್ನು ಕೊಟ್ಟು "ಇದನ್ನು ಸುಡು" ಎಂದಿತು. ಅಗ್ನಿಯು ಎಷ್ಟು ಪ್ರಯತ್ನ ಪಟ್ಟರೂ ಅದನ್ನು ಸುಡಲು ಆಗಲಿಲ್ಲ. ಆಗ ಅವನು ಈ ಅದ್ಭುತವನ್ನು ತಿಳಿಯಲಾರೆ ಎಂದು ಹಿಂತಿರುಗಿದನು.

೭-೧೦. ಅನಂತರ, "ವಾಯು, ನೀನು ಹೋಗಿ ಈ ಯಕ್ಷವನ್ನು ತಿಳಿದು ಬಾ" ಎಂದರು. ವಾಯುವು ಹೋದನು. ಹಾಗೆ ಬಂದವನನ್ನು ಆ ಯಕ್ಷವು ಕೇಳಿತು: "ನೀನು ಯಾರು?" ಎಂದು. "ನಾನು ವಾಯುವು. ನಾನು ಮಾತರಿಶ್ವನು. (ಎಲ್ಲಾ ಕಾರ್ಯವನ್ನೂ ಮಾಡಬಲ್ಲವನು)" ಎಂದನು. "ನೀನು ಏನು ಮಾಡಬಲ್ಲೆ?" ಎಂದು ಯಕ್ಷವು ಕೇಳಿತು. "ನಾನು ಪೃಥಿವಿಯಲ್ಲಿರುವ ಏನನ್ನಾದರೂ ಹಿಡಿಯಬಲ್ಲೆನು." ಎಂದನು. ಯಕ್ಷವು ಅವನಿಗೆ ಒಂದು ತೃಣವನ್ನು ಕೊಟ್ಟಿತು: "ಇದನ್ನು ಹಿಡಿ" ಎಂದಿತು. ವಾಯುವು ಸರ್ವಸಾಹಸ ಮಾಡಿದನು. ಆಗಲಿಲ್ಲ. ನಾನು ಇದನ್ನು ತಿಳಿಯಲಾರೆ ಎಂದು ಹಿಂತಿರುಗಿದನು.

೧೧-೧೨. ಆಗ ದೇವತೆಗಳು ಇಂದ್ರನನ್ನು ಕರೆದು "ಮಘವನ್, ಇದೇನು ಈ ಯಕ್ಷ? ತಿಳಿದು ಬಾ" ಎಂದರು. ಆತನು ಆಗಲೆಂದು ಹೋದನು. (ಆ ಬ್ರಹ್ಮವು) ಮರೆಯಾಯಿತು. ಆ ಇಂದ್ರನು (ಯಕ್ಷವಿದ್ದ) ಆಕಾಶದಲ್ಲಿಯೇ ಬಹು ಶೋಭಮಾನೆಯಾಗಿರುವ ಹೈಮವತೀ ಉಮೆಯನ್ನು ಕಂಡನು. ಆಕೆಯ ಬಳಿಸಾರಿ, ಈ ಯಕ್ಷವೇನು ಎಂದು ಕೇಳಿದನು.

ಇಂತಿದು ಮೂರನೆಯ ಖಂಡವು.[1]

---

1. ಶ್ರೀ ತ್ರಿಪುರಾ ರಹಸ್ಯ, ಅಧ್ಯಾಯ ೮ ನೋಡಿ.

ನಾಲ್ಕನೆಯ ಖಂಡ

೧. ಆಕೆಯು " (ಅದು) ಬ್ರಹ್ಮ. (ಈಗ ನಿಮಗೆ ಲಭಿಸಿರುವ) ವಿಜಯವು ಬ್ರಹ್ಮದ್ದು. ಈ ವಿಜಯದಲ್ಲಿ ಹಿರಿಯರಾಗಿ " ಎಂದಳು. ಆ ವಾಕ್ಯದಿಂದ ಇಂದ್ರನು ಅದು ಬ್ರಹ್ಮವೆಂದು ತಿಳಿದನು.

೨. ಅದರಿಂದಲೇ, ಬ್ರಹ್ಮವನ್ನು ಬಹು ಸಮೀಪದಲ್ಲಿ ನೋಡಿದರೆಂದೇ, ಇವರೇ ಅದು ಬ್ರಹ್ಮವೆಂದು ತಿಳಿದರೆಂದು ಅಗ್ನಿ, ವಾಯು, ಇಂದ್ರರು ಇತರ ದೇವತೆಗಳಿಗಿಂತ ದೊಡ್ಡವರಾದರು.

೩. ಅದರಿಂದ, " ಇಂದ್ರನು ಬಹು ಸಮೀಪದಲ್ಲಿ ಬ್ರಹ್ಮವನ್ನು ಕಂಡನು ; ಎಲ್ಲರಿಗಿಂತ ಮೊದಲು ಬ್ರಹ್ಮವನ್ನು ಅರಿತುಕೊಂಡನು " ಎಂದು, ಮಿಕ್ಕೆಲ್ಲ ದೇವತೆಗಳಿಗಿಂತ ಶ್ರೇಷ್ಠನಾದನು.

೪. ಅದಕ್ಕೆ ಇದು ಉಪಮಾನವು. ಮಿಂಚು ಎನ್ನುವುದು ಮಿಂಚಿ ಮತ್ತೆ ಮರೆಯಾಗುವುದಲ್ಲವೆ ? (ಹಾಗೆ ಇದೆಲ್ಲಾ ಆಯಿತು.) ಇದು ಹೀಗೆ ಅಧಿದೈವತವು.[1]

೫. ಇನ್ನು ಅಧ್ಯಾತ್ಮ[2]ವು : (ಅಧ್ಯಾತ್ಮದಲ್ಲಿ ಎಂದರೆ ಜೀವ ವಿಷಯದಲ್ಲಿ ಉಪಮಾನವು.) ಮನಸ್ಸು ಬ್ರಹ್ಮದತ್ತ ಹೊರಳುವುದು ಉಂಟಲ್ಲ ಅದರಿಂದ, ಬ್ರಹ್ಮವನ್ನು ಸಮೀಪದಲ್ಲಿಯೇ, ಎದುರಿಗೆ(?) ಸ್ಮರಿಸಿ (ನೋಡಿ) ಕೊಂಡಂತಾಗುವುದು. ಅದೇ (ಮನಸ್ಸಿನ) ಸಂಕಲ್ಪವು.

---

1. ಅಧಿದೈವತ ವೆಂದರೆ ದೇವತೆಗಳನ್ನು ಕುರಿತದ್ದು. ಇದರಿಂದ ದೇವತೆಗಳು ಮಿಂಚಿನಂತೆ ಮಿಂಚಿ ಮರೆಯಾಗುವರು ಎಂದು ಸಂಕೇತವು.

2. ಮನಸ್ಸು ಉಪಾಧಿಯಾದ್ದರಿಂದ ಮನಸ್ಸಿನ ಸಂಕಲ್ಪ ಸ್ಮೃತಿ ಮೊದಲಾದ ಪ್ರತ್ಯಯಗಳಿಂದ ಬ್ರಹ್ಮವು ವ್ಯಕ್ತವಾಗುವುದು. ಅದೇ ಅಧ್ಯಾತ್ಮ ದರ್ಶನವು. (ಶಂ) ಸಂಕಲ್ಪ ಸ್ಮೃತಿ ಮೊದಲಾದುವು ಮನಸ್ಸಿನಲ್ಲಿ ಕಂಡಾಗ ಇವು ಯಾರ ಪ್ರೇರಣೆಯಿಂದ ಬಂದುವು ಎಂದುಕೊಂಡರೆ, ಆಗ ಬ್ರಹ್ಮ ದರ್ಶನವಾಗುವುದು.

೬. ಅದರಿಂದ ಅದನ್ನು (ಬ್ರಹ್ಮವನ್ನು) ತದ್ವನಂ, ತದ್ವನಂ[1] ಎಂದು ಉಪಾಸನ ಮಾಡಬೇಕು. ಯಾವನು ಇದನ್ನು ಹೀಗೆ ತಿಳಿದನೋ, ಅವನನ್ನು ಎಲ್ಲ ಭೂತ (ಪ್ರಾಣಿ) ಗಳೂ ಸೇವಿಸುವುವು.

೭. ನೀನು ಉಪನಿಷತ್ತನ್ನು ಹೇಳಿ ಎಂದು ಕೇಳಿದೆ. ನಿನಗೆ ಬ್ರಾಹ್ಮೀ ಉಪನಿಷತ್ತು ಹೇಳಿಯಾಯಿತು. ಉಪನಿಷತ್ತನ್ನು ಹೇಳಿದೆವು.

೮. ಈ ಉಪನಿಷತ್ತು ಲಭಿಸಲಿ ಎಂದೇ ತಪಸ್ಸು[2], ದಮ, ಕರ್ಮ, ಎಂಬಿವು ಪ್ರತಿಷ್ಠೆಯು. (ಎಂದರೆ ಇದು ಇದ್ದರೆ ಬ್ರಹ್ಮವಿದ್ಯೆ. ಇಲ್ಲದಿದ್ದರೆ ಇಲ್ಲ ಎಂದು). ಇದೇ ವೇದಗಳಿಗೂ, ಅದರ ಎಲ್ಲಾ ಅಂಗಗಳಿಗೂ ಪ್ರತಿಷ್ಠೆಯು. ಇವೇ ಸತ್ಯದ ಆಯತನವು.

---

1. ತದ್ವನಂ ಎಂದರೆ, ಪ್ರಾಣಿಗಳ ಜೀವನಾದ್ದರಿಂದ ಪೂಜಾಯೋಗ್ಯ—ಎಂದು.

ಗೀತೆಯ ಅ. ೧೫. ಶ್ಲೋ. ೧೫. ನೋಡಿ. ಎಲ್ಲರ ಹೃದಯದಲ್ಲೂ ಇರುವೆನು:

ಸ್ಮೃತಿ, ಜ್ಞಾನ, ವಿಸ್ಮೃತಿ ಎಲ್ಲವೂ ನನ್ನಿಂದ—ಇತ್ಯಾದಿ—

ಗಾಯತ್ರೀ ಮಂತ್ರದ ಅರ್ಥವನ್ನು ನೋಡಿ :

ತತ್ ಸವಿತುರ್ವರೇಣಿಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ
ಯೋ ನಃ ಪ್ರಚೋದಯಾತ್ ॥

ಆ ಸವಿತೃ ದೇವನ ಪವಿತ್ರವಾದ ತೇಜಸ್ಸನ್ನು ಧ್ಯಾನಿಸೋಣ :
ಆತನು ನಮ್ಮ ಬುದ್ಧಿಗಳನ್ನು ಪ್ರೇರಿಸುವವನು.

2. ತಪಸ್ಸು—ದೇಹ, ಇಂದ್ರಿಯ, ಮನಸ್ಸುಗಳ ಸಮಾಧಾನ. ಹೋಲಿಸಿ:

ಯಸ್ಯದೇವೇ ಪರಾಭಕ್ತಿಃ ಯಥಾದೇವೇ ತಥಾಗುರೌ ।
ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಶ್ವೇತಾ. ಪುಟ ೧೦೦.

ತಪಸ್ಸು ಮೊದಲಾದವುಗಳನ್ನು ಹೇಳಿರುವುದು ಪಾಪನಾಶಕ್ಕಾಗಿ: ಪಾಪ ನಾಶವಾದರೆ ಜ್ಞಾನೋದಯವಾಗುವುದು.

೯. ಯಾರು ಇದನ್ನು ಇಲ್ಲಿ ಹೇಳಿರುವಂತೆ ತಿಳಿಯುವನೋ ಅವನು ಪಾಪವನ್ನು ಗೆದ್ದು, ಅನಂತವಾದ, ಶ್ರೇಷ್ಠವಾದ ಸ್ವರ್ಗ ಲೋಕದಲ್ಲಿ (ಬ್ರಹ್ಮದಲ್ಲಿ) ಸ್ಥಿರವಾಗಿ ನಿಲ್ಲುವನು : ಸ್ಥಿರವಾಗಿ ನಿಲ್ಲುವನು.[1]

ಇಂತಿದು ನಾಲ್ಕನೆಯ ಖಂಡವು.

ಓಂ ಅಪ್ಯಾಯಂತು ಮಮಾಂಗಾನಿ ಎಂಬುದು ಶಾಂತಿ ಮಂತ್ರವು

ಓಂ ಶಾಂತಿ ಶ್ಯಾಂತಿ ಶ್ಯಾಂತಿಃ

ಇಂತಿದು ಕೇನವು.

1. ಈ ಉಪನಿಷತ್ತಿಗೆ, ಶಂಕರರೇ ಬರೆದಿರುವ ಎರಡು ಭಾಷ್ಯಗಳಿವೆ.

೬. ಈಶಾವಾಸ್ಯೋಪನಿಷತ್

ಈ ಉಪನಿಷತ್ತು ಶುಕ್ಲಯಜುರ್ವೇದದ ವಾಜಸನೇಯ ಸಂಹಿತೆಯ ಕೊನೆಯಲ್ಲಿ ಇರುವುದರಿಂದ ಇದನ್ನು ವಾಜಸನೇಯ ಸಂಹಿತೋಪನಿಷತ್ ಎಂದೂ ಕರೆಯುವರು.

ಇದರಲ್ಲಿ ಈಶಾವಾಸ್ಯಂ ಎಂದು ಮೊದಲಾದ ಹದಿನೆಂಟು ಮಂತ್ರಗಳಿರುವುವು. ಅವು ಯಾವ ಕರ್ಮದಲ್ಲೂ ವಿನಿಯೋಗವನ್ನು ಹೊಂದಿಲ್ಲ: ಎಂದರೆ ಅವುಗಳನ್ನು ಯಾವ ಕರ್ಮದಲ್ಲಿಯೂ ಉಪಯೋಗಿಸುವುದಿಲ್ಲ. ಅವು ನಿತ್ಯವೂ ಅಶರೀರವೂ ಸರ್ವಗತವೂ ಆದ ಬ್ರಹ್ಮವನ್ನು ಕುರಿತು ಹೇಳಿ ರಹಸ್ಯವಾದ ಅರ್ಥವನ್ನು ಜ್ಞಾಪಕಕ್ಕೆ ತರುವುವು ಎಂದು ಆ ಮಂತ್ರರಾಶಿಯನ್ನು ಉಪನಿಷತ್ತು ಎನ್ನುವರು.

ಶಾಂತಿ ಮಂತ್ರವು

ಓಂ ಪೂರ್ಣಮದಃ ಪೂರ್ಣಮಿದಂ। ಪೂರ್ಣಾತ್ಪೂರ್ಣಮುದಚ್ಯತೇ॥
ಪೂರ್ಣಸ್ಯ ಪೂರ್ಣಮಾದಾಯ । ಪೂರ್ಣಮೇವಾವಶಿಷ್ಯತೇ ॥

ಅದು (ಬ್ರಹ್ಮವು) ಪೂರ್ಣವು. ಇದು (ಜಗತ್ತು) ಪೂರ್ಣವು. (ಕಾರ್ಯಾತ್ಮಕವಾಗಿರುವ) ಈ ಪೂರ್ಣವು (ಕಾರಣಾತ್ಮಕವಾಗಿರುವ) ಪೂರ್ಣದಿಂದ ಬರುವುದು. ಪೂರ್ಣದಿಂದ (ಕಾರ್ಯಾತ್ಮಕ ಬ್ರಹ್ಮದಿಂದ) ಪೂರ್ಣವನ್ನು (ಕಾರಣಾತ್ಮಕವಾದ ಬ್ರಹ್ಮವನ್ನು) ತೆಗೆದುಕೊಂಡರೂ ಅದು ಇನ್ನೂ ಪೂರ್ಣವಾಗಿಯೇ ಉಳಿದಿರುವುದು.[1]

---

[1] "ಬ್ರಹ್ಮವು ಇತ್ತು: ಅದು ತನ್ನನ್ನು ನೋಡಿಕೊಂಡಿತು. ಅದರಿಂದ ಎಲ್ಲವೂ ಆಯಿತು", ಎಂಬ ಮಂತ್ರದ ಅರ್ಥವಿದು. ಕಾರಣವೆಂದರೆ ಬ್ರಹ್ಮ, ಕಾರ್ಯವೆಂದರೆ ಜಗತ್ತು. ಬ್ರಹ್ಮವು ಕಾರ್ಯವಾದರೂ ತನ್ನ ಪೂರ್ಣತ್ವವನ್ನು ಬಿಡದೆಯೇ ಇರುವುದು. (ಶಂ.)

ಉಪನಿಷತ್ತು

೧. "ಈ ಜಗತ್ತಿನಲ್ಲಿರುವ ಸರ್ವದರಲ್ಲಿಯೂ ಈಶ್ವರನು ಇದ್ದಾನೆ. ಅವನನ್ನು ಬಿಟ್ಟು ಯಾರೂ ಬದುಕಲಾರರು. ಅದರಿಂದ ಏನುಬೇಕಾದರೂ ಅವನನ್ನೇ ಕೇಳು. ಮತ್ತೊಬ್ಬರಿಂದ ಅದನ್ನು ಪಡೆಯಬೇಕು ಎಂದುಕೊಳ್ಳಬೇಡ".[1]

೨. "(ಒಂದು ವೇಳೆ ಹಾಗೆ ಸರ್ವಭಾವದಿಂದಲೂ ಈಶ್ವರನಿಗೆ ಶರಣಾಗುವುದು ಸಾಧ್ಯವಿಲ್ಲದಿದ್ದರೆ,) ನೂರು ವರ್ಷವಾಗಲಿ, ಕರ್ಮ ಮಾಡುತ್ತಲೇ ಬಾಳುವೆನೆನ್ನು. ಅದೇ ಸರಿಯಾದ ಮಾರ್ಗ. ಆ ಕರ್ಮವು ನಿನಗೆ ಅಂಟಬಾರದು–ಅಷ್ಟೆ".[2]

೩. "ಈ ಎರಡು ದಾರಿಯಲ್ಲದೆ ಬದುಕುವುದಕ್ಕೆ ಬೇರೆ ಮಾರ್ಗವಿಲ್ಲ. ಈ ಎರಡರಲ್ಲಿ ಒಂದನ್ನೂ ಹಿಡಿಯದವರು ಆತ್ಮಘಾತಿಗಳು. ಕುರುಡುಮಾಡುವಷ್ಟು ಕತ್ತಲಿನ ಅಸುರ್ಯ ಎಂಬ ಲೋಕಗಳನ್ನು ಹೊಂದುವರು."

(ಮುಂದಿನ ಐದು ಮಂತ್ರಗಳದು ಒಂದು ಗುಂಪು (೪–೮) ಅವು ಮೊದಲನೆಯ ಮಂತ್ರದ ಈಶ್ವರನನ್ನು ಕುರಿತು ಹೇಳುವುವು:).

---

1. ಮೊದಲನೆಯ ಮಂತ್ರವು ಈಶ್ವರ ಶರಣತ್ವವನ್ನು ಹೇಳುವುದು.

2. ಗೀತೆಯಲ್ಲಿ ಮೂರು ನಾಲ್ಕನೆಯ ಅಧ್ಯಾಯಗಳನ್ನು ನೋಡಿ: "ಜಂತುಜಂತುವೂ ಯಾವಾಗಲೂ ಕೆಲಸಮಾಡುತ್ತಲೇ ಇರುವುದು. ಬಲ್ಲವರು ಕರ್ಮವು ಯಾವುದು? ಅಕರ್ಮವು ಯಾವುದು? ವಿಕರ್ಮವು ಯಾವುದು? ಎಂದು ವಿಚಾರಿಸುವರು. (4—16, 17). ಕರ್ಮವು ವೇದಶಾಸ್ತ್ರಗಳಿಂದ ಗೊತ್ತಾದುದು (3—15). ಅಕರ್ಮವು ಅವನವನ ರಾಗದ್ವೇಷಾದಿಗಳಿಂದ ಹುಟ್ಟಿದುದು. ವಿಕರ್ಮವು ಸಹಜವಾಗಿ ನಡೆಯುವ ಶ್ವಾಸಾದಿ ಶರೀರ ವ್ಯಾಪಾರವು. ಇದರಲ್ಲಿ ಅಕರ್ಮವನ್ನು ಬಿಡಬೇಕು. ವಿಕರ್ಮವನ್ನು ಯೋಗವಾಗುವಂತೆ ಮಾಡಿಕೊಳ್ಳಬೇಕು. (ಶ್ವಾಸವು ವಶವಾದರೆ ಸೋ-ಹಂ ಜಪವಾಗುವುದು. ಅದು ಯೋಗ.) ಶಾಸ್ತ್ರವಿಹಿತವಾದ ಕರ್ಮವು ಯಜ್ಞವಾಗಬೇಕು: (4—29 ನೋಡಿ). ಅದನ್ನು ಮಾಡುವವನು ಈ ಯಜ್ಞವು ಈಶ್ವರಾರ್ಪಣವಾಗಲಿ ಎನ್ನಬೇಕು. ಆಗ ಅದು ಪೂರ್ಣವಾಗಿ ಜ್ಞಾನವಾಗಿ ಪರಿಣಮಿಸುವುದು. (4—33) ಆಗ ಅದು ಬಂಧಕವಾಗುವುದಿಲ್ಲ."

ಹಾಗೇ ಹದಿನೆಂಟನೆಯ ಅಧ್ಯಾಯದಲ್ಲಿ ಹೇಳುವ ತ್ಯಾಗ ಸಂನ್ಯಾಸ ಲಕ್ಷಣಗಳನ್ನೂ ನೋಡಿ.

೪–೫. "ಅವನು ಮನಸ್ಸಿಗಿಂತಲೂ ವೇಗಶಾಲಿಯು. ಅವನನ್ನು ಇಂದ್ರಿಯ ದೇವತೆಗಳೂ ಕಾಣರು. ಅವನಲ್ಲಿಯೇ ಎಲ್ಲವನ್ನು ಮಾಡಿಸುವ ಮಾತರಿಶ್ವನಿರುವುದು. ಅವನು ತಾನು ಅಚಲನಾದರೂ ಎಲ್ಲವನ್ನೂ ಚಲಿಸುವನು. ದೂರ, ಹತ್ತಿರ, ಒಳಗೆ, ಹೊರಗೆ ಎಲ್ಲೆಲ್ಲೂ ಇರುವನು."

೬. "ಎಲ್ಲಾ ಪ್ರಾಣಿಗಳನ್ನು ತನ್ನಲ್ಲಿಯೂ ತನ್ನನ್ನು ಎಲ್ಲಾ ಪ್ರಾಣಿಗಳಲ್ಲಿಯೂ ಕಂಡವನು ಇವನನ್ನು ಅರಿಯುವನು."[1]

೭. "ಎಲ್ಲವೂ ತಾನೇ ಆಗುವುದು ವಿಜ್ಞಾನಿಯಾದಾಗ. ಆಗ, ಒಂದೇ ಒಂದು ಕಾಣುತ್ತಿರುವಾಗ, ಶೋಕವೆಲ್ಲಿ? ಮೋಹವೆಲ್ಲಿ?"[2]

೮. "ಆಗ ಆ ಆತ್ಮವು ಸರ್ವ ವ್ಯಾಪಿಯಾದರೂ ಪೂರ್ಣವೂ ಶುದ್ಧವೂ ಶರೀರವಿಲ್ಲದ್ದೂ ಆಗಿ ಗೋಚರವಾಗುವುದು. 'ಅದು ಪರಿಭೂಃ ಎಲ್ಲದಕ್ಕಿಂತ ಆಚಿನದು. ಅದು ಸ್ವಯಂಭೂಃ ಎಲ್ಲವೂ ತಾನೇ ಆಗಿರುವುದು. ಅದೇ ಧರ್ಮ-ಅಧರ್ಮಗಳನ್ನೆಲ್ಲ ವಿಧಾಯಕ ಮಾಡಿರುವುದು.' ಎಂಬುದು ತಿಳಿಯುವುದು."

---

1. ಭಗವದ್ಗೀತೆ—ಅ. ೪. ಶ್ಲೋ. ೩೫: "ಜ್ಞಾನವನ್ನು ತಿಳಿದರೆ ಮತ್ತೆ ಹೀಗೆ ನೀನು ಮೋಹವನ್ನು ಹೊಂದುವುದಿಲ್ಲ, ನಿನ್ನಲ್ಲಿಯೂ ನನ್ನಲ್ಲಿಯೂ ಎಲ್ಲಾ ಭೂತಗಳನ್ನು ಕಾಣುವೆ." ಅ. ೬. ಶ್ಲೋ. ೨೯: "ಎಲ್ಲ ಭೂತಗಳಲ್ಲಿಯೂ ಇರುವ ಆತ್ಮನನ್ನೂ, ಆತ್ಮನಲ್ಲಿ ಎಲ್ಲಾ ಭೂತಗಳನ್ನೂ ಯೋಗಯುಕ್ತಾತ್ಮನು, ಸರ್ವತ್ರ ಸಮದರ್ಶನನು ನೋಡುವನು."

2. ಬ್ರಹ್ಮದರ್ಶನವೆಂದರೆ, 'ಇಂದ್ರಿಯ ಗೋಚರವಾಗುವುದು: ಪೂರ್ತಿಯಾಗಿ ಕಾಣಿಸುವುದು' ಎಂಬ ಭ್ರಾಂತಿಯು ಬರುತ್ತದೆ. ಅದು ಶರೀರವಿಲ್ಲದ್ದು: ಆದರಿಂದ ಮನಸ್ಸು ತಾನು ಚಿಕ್ಕದು ಎಂಬ ಭ್ರಾಂತಿಯನ್ನು ಬಿಟ್ಟು ಎಲ್ಲವೂ ತಾನೇ ಎಂಬಂತೆ ಆಗಿ, ನೀರಿನಲ್ಲಿ ಬಿದ್ದ ಉಪ್ಪಿನಂತಾದಾಗ ಉಪ್ಪು ಉಪ್ಪಾಗಿ ಕಾಣಿಸದಿದ್ದರೂ ಆ ನೀರಿನಲ್ಲೆಲ್ಲಾ ರುಚಿಯಾಗಿ ಇರುವಂತೆ, ಎಲ್ಲದರಲ್ಲಿಯೂ ಇದ್ದು ಎಲ್ಲವೂ ಆಗಿದ್ದರೂ ಎಲ್ಲಕ್ಕಿಂತ ದೊಡ್ಡದಾದ ಬ್ರಹ್ಮವೆಂಬುದು ಎನ್ನುವುದು. ಆ ಮೇಲೆ ಅದರಲ್ಲಿ ತಾನು ಸೇರಿಹೋಗುವುದು.

ಭಗವದ್ಗೀತೆ: ಅ ೧೩, ಶ್ಲೋಕ ೧೨–೧೭. "ಜ್ಞೇಯವನ್ನು ಕುರಿತು ಹೇಳುವೆನು: ಅದನ್ನು ತಿಳಿದವನು ಅಮೃತವನ್ನು ಹೊಂದುವನು. ಅನಾದಿಯೂ ಪರಮವೂ ಆದುದ ಬ್ರಹ್ಮ: ಅದು ಸತ್ ಅಲ್ಲ: ಅಸತ್ ಅಲ್ಲ."

(ಇಲ್ಲಿಂದ ಮುಂದೆ ಮೂರು ಮೂರು ಮಂತ್ರಗಳ ಎರಡು ಗುಂಪುಗಳು. ಒಂದು ವಿದ್ಯೆ-ಅವಿದ್ಯೆಗಳನ್ನು ಹೇಳುವುದು: ಇನ್ನೊಂದು ಸಂಭೂತಿ-ವಿನಾಶಗಳನ್ನು ಹೇಳುವುದು).

೯-೧೦-೧೧. "ವಿದ್ಯೆ-ಅವಿದ್ಯೆ, ಇವೆರಡೂ ಬೇರೆ ಬೇರೆಯೆಂದು ಹೊರಟವರು ಅಂಧ ತಮಸ್ಸನ್ನು ಸೇರುವರು: ತಮಸ್ಸಿನಿಂದ ತಮಸ್ಸಿಗೆ ಹೋಗುವರು. ನಮಗೆ ಉಪದೇಶಮಾಡಿದ ಧೀರರು ಬ್ರಹ್ಮವು ವಿದ್ಯೆಗಿಂತ ಬೇರೆ: ಅವಿದ್ಯೆಗಿಂತ ಬೇರೆ ಎಂದು ಹೇಳಿರುವುದನ್ನು ಕೇಳಿರುವೆವು. ವಿದ್ಯಾವಿದ್ಯೆಗಳೆರಡನ್ನೂ ತಿಳಿಯಬೇಕು: ಒಂದರಿಂದ ಮೃತ ವನ್ನು ದಾಟಿ ಇನ್ನೊಂದರಿಂದ ಅಮೃತವನ್ನು ಪಡೆಯುವನು."

"(ಉಪಾಸಕರು ಸಂಭೂತಿ-ಅಸಂಭೂತಿ ಎಂಬೆರಡನ್ನು ಹಿಡಿಯುವರು. ಸಂಭೂತಿಯು ಎಲ್ಲದಕ್ಕೂ ಕಾರಣನಾದ, ವ್ಯಕ್ತನಾದ ಹಿರಣ್ಯಗರ್ಭನು. ಅಸಂಭೂತಿಯು ಆತನಿಗಿಂತ ಹಿಂದಿನ ಪ್ರಕೃತಿಯು.)

೧೨-೧೩-೧೪. ಸಂಭೂತಿ, ಅಸಂಭೂತಿ, ಎರಡರ ಉಪಾಸನೆಯೂ ತಮಸ್ಸಿಗಿಂತ ಆಚೆಗೆ ಒಯ್ಯಲಾರದು. ಆ ಬ್ರಹ್ಮವು, ಸಂಭೂತಿಗಿಂತ ಬೇರೆ, ಅಸಂಭೂತಿಗಿಂತ ಬೇರೆ, ಎಂದು ನಮಗೆ ಉಪದೇಶ

"ಅದಕ್ಕೆ ಎತ್ತೆತ್ತಲೂ ಕೈಕಾಲುಗಳು ಕಣ್ಣು ತಲೆ ಮೊಕಗಳು, ಕಿವಿಗಳು ಉಂಟು. ಅದು ಲೋಕವೆಲ್ಲವನ್ನೂ ಆವರಿಸಿರುವುದು"

"ಅದು ಸರ್ವೇಂದ್ರಿಯ ಗುಣಗಳನ್ನು ಬೆಳಗುವುದು: ಆದರೂ ಯಾವ ಇಂದ್ರಿಯವೂ ಇಲ್ಲದ್ದು: ಯಾವುದರಲ್ಲೂ ಬೆರೆಯದೆ ಎಲ್ಲವನ್ನೂ ಹಿಡಿದಿರುವುದು: ತಾನು ನಿರ್ಗುಣವಾಗಿದ್ದರೂ ಗುಣಗಳನ್ನು ಭೋಗಿಸುವುದು"

"ಸರ್ವ ಪ್ರಾಣಿಗಳ ಹೊರಗೆ ಒಳಗೆ ಇರುವುದು, ಅಚರವಾಗಿದ್ದೂ ಚರವಾಗಿರುವುದು. ಸೂಕ್ಷ್ಮವಾದುದರಿಂದ, ತಿಳಿಯುವುದು ಕಷ್ಟವು: ಅದು ದೂರದಲ್ಲಿದ್ದರೂ ಹತ್ತಿರವೂ ಇರುವುದು."

"ತಾನು ಒಂದೇ ಆಗಿದ್ದರೂ ಪ್ರಾಣಿಪ್ರಾಣಿಗಳಲ್ಲಿಯೂ ಬೇರೆಬೇರೆಯಾಗಿರುವಂತೆ ಇರುವುದು. ಅದು ಪ್ರಾಣಿಗಳಿಗೆಲ್ಲ ಈಶ್ವರನು: ಎಲ್ಲರನ್ನೂ ಹಿಡಿಯುವುದು: ಎಲ್ಲವೂ ಆಗುವುದು."

"ಜ್ಯೋತಿಗಳಿಗೆಲ್ಲ ಜ್ಯೋತಿಯಾದ ಅದು ತಮಸ್ಸಿನ ಆಚೆ ಇರುವುದು. ಜ್ಞಾನವೂ ಜ್ಞೇಯವೂ ಜ್ಞಾನಗಮ್ಯವೂ ಆಗಿ ಎಲ್ಲರ ಹೃದಯದಲ್ಲಿ ಕುಳಿತಿರುವುದು."

ಮಾಡಿದ ಧೀರರು ಹೇಳಿರುವುದನ್ನು ಕೇಳಿರುವೆವು. ಸಂಭೂತಿ, ವಿನಾಶ (ಅಸಂಭೂತಿ) ಎರಡನ್ನೂ ತಿಳಿಯಬೇಕು. ಸಂಭೂತಿಯಿಂದ ಮೃತ್ಯುವನ್ನು ದಾಟಿ, ಅಸಂಭೂತಿಯಿಂದ ಅಮೃತವನ್ನು ಹೊಂದುವರು."*

(ಇನ್ನು ಮುಂದಿನ ಎರಡು ಮಂತ್ರಗಳು ಸತ್ಯವು ಏಕೆ ಎಲ್ಲರಿಗೂ ಸಿಕ್ಕುವುದಿಲ್ಲ ? ಅದು ಸಿಕ್ಕುವುದು ಹೇಗೆ ? ಎನ್ನುವುದನ್ನು ಹೇಳುವುವು.)

೧೫. "ಬೆಳಗುವ ಮುಚ್ಚಳವೊಂದು ಸತ್ಯದ ಮುಖವನ್ನು ಮುಚ್ಚಿರುವುದು. ಎಲೈ ಪೂಷನೆ, ಅದನ್ನು ನೀನು ಓಸರಿಸು. ಸತ್ಯ ಧರ್ಮಗಳು ನನಗೆ ಕಾಣಲಿ"

೧೬. "ಎಲೈ ಪೂಷನೆ, ನೀನೊಬ್ಬನೇ ಇದನ್ನು ಬಲ್ಲ ಋಷಿಯು. (ಎಲ್ಲವನ್ನೂ ನಿಯಾಮಕಮಾಡುವ ನೀನು) ಯಮನು. (ಪ್ರಾಣಗಳನ್ನೂ ರಸಗಳನ್ನೂ ತೆಗೆದುಕೊಳ್ಳುವವನೂ ಬಿಡುವವನೂ ನೀನೇ ಆದ್ದರಿಂದ ನೀನೇ) ಸೂರ್ಯನು. ಪ್ರಜಾಪತಿಯ ಮಗನು ನೀನು. ನೀನು ಕಿರಣಗಳನ್ನು ಬಿಡಿಸು. ಕಲ್ಯಾಣತಮವಾದ ನಿನ್ನ ತೇಜೋರೂಪವನ್ನು ನೋಡಿ ನಿನ್ನ ಪ್ರಸಾದವನ್ನು ಪಡೆಯುವೆನು. ಕಣ್ಣು ಕಂಡೆಡೆಯೆಲ್ಲಾ ಇರುವವನು ನೀನೇ ಎನ್ನುವುದೂ, ನೀನೇ ನಾನೂ ಎನ್ನುವುದೂ ತಿಳಿಯಲಿ."

(ಮುಂದಿನ ಮಂತ್ರವು ದೇಹದಲ್ಲಿರುವ ಆತ್ಮನು ಎಲ್ಲದರ ಆತ್ಮನೊಡನೆ ಸೇರುವ ರಹಸ್ಯವನ್ನು ಬೋಧಿಸುವುದು.)

೧೭. "(ದೇಹಾತ್ಮನಾಗಿದ್ದ) ವಾಯುವು (ಎಲ್ಲದರ ಆತ್ಮನಾಗಿ ಸೂತ್ರಾತ್ಮನಾದ) ಅನಿಲನನ್ನು ಪಡೆದು ಅಮೃತವಾಗಲಿ. (ಇದುವರೆಗೆ ನನ್ನನ್ನು ಧರಿಸಿದ್ದ) ಈ ಶರೀರವು ಭಸ್ಮವಾಗಲಿ. (ಬ್ರಹ್ಮರೂಪವಾದ ಅಗ್ನಿಯು ಪಂಚಭೂತ ಸಂಘಾತವಾದ ಈ ಶರೀರವನ್ನು ಸುಟ್ಟು ಪಂಚಭೂತಗಳಿಗೆ ಹಂಚಲಿ.)"

---

*ಇಲ್ಲಿ ೧೪ನೆಯ ಮಂತ್ರವನ್ನು ೧೧ನೆಯ ಮಂತ್ರಕ್ಕೆ ಸಂವಾದಿಯಾಗಿ ಅರ್ಥಮಾಡಲಾಗಿದೆ. "ಏವಂ ದ್ವಿಪ್ರಕಾರಃ ಪ್ರವೃತ್ತಿ ನಿವೃತ್ತಿ ಲಕ್ಷಣೋ ವೇದಾರ್ಥೋಽತ್ರಪ್ರಕಾಶಿತಃ" ಎಂಬ ಶಂಕರ ವಚನವನ್ನು ನೋಡಿ.

೧೮. "ಎಲೈ ಕ್ರತುವೆ, (ಸಂಕಲ್ಪಾತ್ಮಕವಾದ ಅಂತಃಕರಣವೆ, ವ್ಯಕ್ತವು ಅವ್ಯಕ್ತವಾಗುವ ಕಾಲ ಬಂದಿದೆಯೆಂಬುದನ್ನು) ಸ್ಮರಿಸು, ಏನೇನು ಮಾಡಿದ್ದೀಯೋ ಅದೆಲ್ಲವನ್ನೂ ಸ್ಮರಿಸು. ಕ್ರತುವೆ, ಸ್ಮರಿಸಿಕೋ, ಕೃತವನ್ನು ಸ್ಮರಿಸಿಕೋ, (ಮತ್ತೆ ನಿನ್ನನ್ನು ಬಂಧನದಲ್ಲಿ ಅದು ಹಿಡಿಯದಿರಲಿ.)"

(ಕೊನೆಯ ಮಂತ್ರವು ಪ್ರಾರ್ಥನೆ. ಬ್ರಹ್ಮಸ್ವರೂಪನಾದ ಅಗ್ನಿಯು ವ್ಯಕ್ತಿಯಾಗಿದ್ದವನು ತನ್ನ ಬಂಧನಗಳನ್ನುಳಿದು ಅವ್ಯಕ್ತಕ್ಕೆ ಹಿಂತಿರುಗಲು ಅನುಕೂಲನಾಗಬೇಕೆಂದು ಆ ಪ್ರಾರ್ಥನೆ).

"ಎಲೈ ಅಗ್ನಿಯೇ, ಉತ್ತಮವಾದ ಮಾರ್ಗದಿಂದ ಅಮೃತಕ್ಕೆ ನಮ್ಮನ್ನು ಕರೆದುಕೊಂಡುಹೋಗು. ದೇವ, ನೀನು ಎಲ್ಲಾ ಮಾರ್ಗಗಳನ್ನೂ ಬಲ್ಲವನು. ನಮ್ಮನ್ನು ತಪ್ಪುಹಾದಿ ಹಿಡಿಸುವ ಅಪೂರ್ಣತೆಯೆಂಬ ಪಾಪವನ್ನು ಧ್ವಂಸಮಾಡು. ನಿನಗೆ ಬೇಕಾದಷ್ಟು ನಮಸ್ಕಾರಗಳನ್ನು ಮಾಡುವೆವು."

ಪೂರ್ಣಮದಃ ಎಂಬ ಶಾಂತಿ ಮಂತ್ರವು.

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

ಇಂತಿದು ಈಶಾವಾಸ್ಯವು.

೭. ಮುಂಡಕೋಪನಿಷತ್

ಅಥರ್ವವೇದದ ಈ ಉಪನಿಷತ್ತು ಆತ್ಮತತ್ತ್ವವನ್ನು ನಿರ್ಣಯಿಸಲು ಬಲವಾದ ಸಾಧನವು. ಇದರಲ್ಲಿ ಮೂರು ಅಧ್ಯಾಯಗಳು, ಆರು ಖಂಡಗಳು, ಅರವತ್ತೈದು ಮಂತ್ರಗಳು, ಇವೆ.

ಇದನ್ನು ಬ್ರಹ್ಮನು ತನ್ನ ಮೊದಲನೆಯ ಮಗನಾದ ಅಥರ್ವನಿಗೆ ಹೇಳಿದನು. "ಯಾವುದೊಂದನ್ನು ತಿಳಿದರೆ ಎಲ್ಲವೂ ತಿಳಿದಂತಾಗುವುದು ?" ಎಂಬ ಶಿಷ್ಯನ ಪ್ರಶ್ನಕ್ಕೆ ಉತ್ತರವಾಗಿ ಹೊರಟುದು ಈ ಉಪನಿಷತ್ತು. ಇದರಲ್ಲಿ ಹೃದಯಗ್ರಂಥಿ ಭೇದನವನ್ನು ಹೇಳಿದೆ. "ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುವನು" ಮೊದಲಾದ ವಾಕ್ಯಗಳಿವೆ.

ಇದಕ್ಕೆ ಭದ್ರಂ ಕರ್ಣೇಭಿಶ್ಶೃಣುಯಾಮ ದೇವಾಃ ಎಂಬುದು ಶಾಂತಿ ಮಂತ್ರವು.

ಉಪನಿಷತ್ತು

೧. ಓಂ. ಬ್ರಹ್ಮನು ದೇವತೆಗಳಿಗೆಲ್ಲ ಮೊದಲನೆಯವನಾಗಿ ಆದನು. ಆತನೇ ಎಲ್ಲವನ್ನೂ ಸೃಷ್ಟಿಸಿದವನು: ಇದ್ದುದನ್ನು ಕಾಪಾಡುವನು. ಆತನು ಎಲ್ಲಾ ವಿದ್ಯೆಗಳಿಗೂ ಪ್ರತಿಷ್ಠಾ (ಆಶ್ರಯ) ಆದ ಬ್ರಹ್ಮ[1]ವಿದ್ಯೆಯನ್ನು ತನ್ನ ದೊಡ್ಡ ಮಗನಾದ ಅಥರ್ವನಿಗೆ ಹೇಳಿದನು.

---

1. ಸರ್ವ ವಿದ್ಯೆಗಳನ್ನು ಓದಿ ಕಲಯಬೇಕಾದುದನ್ನು ಇದರಿಂದ ಕಲಯಬಹುದು ಎಂದು ಇದು ಸರ್ವವಿದ್ಯಾಪ್ರತಿಷ್ಠೆಯು.

೨. ಬ್ರಹ್ಮನು ಅಥರ್ವನಿಗೆ ಹೇಳಿದ ಆ ಬ್ರಹ್ಮ ವಿದ್ಯೆಯನ್ನು ಅಥರ್ವನು ಅಂಗಿರನಿಗೆ ಹೇಳಿದನು. ಆತನು ಸತ್ಯವಹ ಭಾರದ್ವಾಜನಿಗೆ, ಆ ಭಾರದ್ವಾಜನು ಅಂಗಿರಸ್ಸಿಗೆ ಆ ಪರಾವರಾ[1]ವನ್ನು ಹೇಳಿದರು.

೩. ಮಹಾಶಾಲ[2]ನಾದ ಶೌನಕನು ವಿಧಿವತ್ತಾಗಿ (ಶಾಸ್ತ್ರದಲ್ಲಿ ಹೇಳಿರುವಂತೆ) ಅಂಗಿರಸನ ಬಳಿಗೆ ಹೋಗಿ ಕೇಳಿದನು: "ಭಗವಂತನೆ, ಯಾವುದನ್ನು ತಿಳಿದರೆ ಎಲ್ಲವೂ ತಿಳಿದಂತಾಗುವುದು ?" ಎಂದು.

೪. ಆತನು ಆ ಶೌನಕನಿಗೆ ಹೇಳಿದನು :—"ಕಲಿಯಬೇಕಾದುದು ಎರಡು ವಿದ್ಯೆಗಳು ಎಂದು ಬ್ರಹ್ಮವನ್ನು ಬಲ್ಲವರು ಹೇಳುವರು. ಪರಾ, ಅಪರಾ[3], ಎಂಬುದು ಆ ವಿದ್ಯೆಗಳ ಹೆಸರು".

೫. ಆ ಅಪರಾ ಎನ್ನುವುದು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ,-ವ್ಯಾಕರಣ ನಿರುಕ್ತ, ಛಂದಸ್ಸು, ಜ್ಯೋತಿಷ್ಯ ಎಂಬಿವು. ಯಾವುದನ್ನು ಕಲಿತರೆ ಅಕ್ಷರವಾದ ಬ್ರಹ್ಮವು ದೊರೆಯುವುದೋ ಅದು ಪರಾ.

---

1. ಪರಾ+ಅವರಾ: ಪರಾ ಎನ್ನುವುದು ಕಾರಣ : ಅವರಾ ಎನ್ನುವುದು ಕಾರ್ಯ. ಕಾರಣವು ಬ್ರಹ್ಮ : ಕಾರ್ಯವು ಜಗತ್ತು. ಪರಾವರಾ=ಪರಸ್ಮಾತ್ ಪರಸ್ಮಾತ್ ಅವರೇಣ ಪ್ರಾಪ್ತೇತಿ ಪರಾವರಾ : ದೊಡ್ಡವರಿಂದ ಚಿಕ್ಕವರಿಗೆ ಬಂದುದು ಎಂದು ಪರಾವರಾ (ಶಂಕರರು).

2. ಮಹಾಶಾಲ ಎಂದರೆ ದೊಡ್ಡ ಮನೆಯುವನು.

"ಒಂದಿದೆ : ಅದನ್ನು ತಿಳಿದರೆ ಎಲ್ಲವೂ ತಿಳಿಯುವುದು" ಎಂದು ಲೋಕದಲ್ಲಿ ಪ್ರಸಿದ್ಧಿಯಿತ್ತು. ಅದಕ್ಕೆ ಅನುಗುಣವಾಗಿ, ಅದನ್ನು ತಿಳಿಯಬೇಕೆಂದು, ಶೌನಕನು ಅಂಗಿರಸ್ಸನ್ನು ಕೇಳಿದನು.

3. ಪರಾ ಎನ್ನುವುದು ಪರಮಾತ್ಮ ವಿದ್ಯೆಯು : ಅಪರಾ ಎನ್ನುವುದು, ಧರ್ಮ, ಅಧರ್ಮ, (ಅವುಗಳ) ಸಾಧನ, ಅದರ ಫಲ ಇವುಗಳನ್ನು ಕುರಿತುದು.

ವೇದಗಳೆಲ್ಲವೂ ಶಬ್ದರಾಶಿಗಳು ; ಹಾಗೆಯೇ ಉಪನಿಷತ್ತುಗಳೂ ಶಬ್ದರಾಶಿಗಳು. ಈ ಶಬ್ದರಾಶಿಯನ್ನು ಕಲಿಯುವುದು ಅಪರಾ ವಿದ್ಯೆ. ಈ ಶಬ್ದರಾಶಿಯಿಂದ ಆ ಅಕ್ಷರವನ್ನು ಪಡೆಯುವುದು ಪರಾವಿದ್ಯೆ. ಶಬ್ದರಾಶಿಯನ್ನು ಪಡೆದರೂ ಗುರುಸೇವೆ, ವೈರಾಗ್ಯ ಮೊದಲಾದ ಬೇರೆ ಬೇರೆ ಪ್ರಯತ್ನಗಳಿಲ್ಲದೆ ಅಕ್ಷರವು ದೊರೆಯುವುದಿಲ್ಲವೆಂದು ಅದನ್ನು ಬೇರೆ ಮಾಡಿ, ಪರಾ ಎಂದು ಕರೆದಿದೆ —ಶಂಕರರು.

೬. ಯಾವ ಆ ಬ್ರಹ್ಮವುಂಟೋ ಅದು, ಅದೃಶ್ಯವು (ಕಣ್ಣಿಗೆ ಕಾಣುವುದಲ್ಲ): ಅಗ್ರಾಹ್ಯವು (ಹಿಡಿತಕ್ಕೆ ಸಿಕ್ಕುವುದಲ್ಲ): ಅಗೋತ್ರವು (ಕುಲಗೋತ್ರವಿಲ್ಲದ್ದು): ಅವರ್ಣವು (ವರ್ಣಿಸುವುದಕ್ಕೆ ಆಗದುದು:) ಕಣ್ಣು ಕಿವಿಗಳು, ಕೈ ಕಾಲುಗಳು, ಇಲ್ಲದ್ದು: (ಆದರೂ) ನಿತ್ಯವಾದುದು: ವಿಭು (ಎಲ್ಲ ಕಡೆಯಲ್ಲಿಯೂ ಇರುವುದು): ಸರ್ವಗತವು (ಪ್ರಾಣಿ ಪ್ರಾಣಿಯಲ್ಲಿಯೂ ಇರುವುದು): (ಆದರೂ ಇಂದ್ರಿಯ ಗೋಚರವಾಗದಷ್ಟು) ಸೂಕ್ಷ್ಮವಾದುದು. ಯಾವುದೊಂದು ವ್ಯಯ (ಬದಲಾವಣೆ)ಯೂ ಇಲ್ಲದ್ದು. ಹೀಗಿರುವ ಭೂತಯೋನಿ (ಎಲ್ಲದಕ್ಕೂ ಕಾರಣವಾದುದು) ಯನ್ನು ಧೀರರಾದವರು ಚೆನ್ನಾಗಿ ನೋಡುವರು[1].

೭. ಜೇಡರ ಹುಳುವು (ದಾರವನ್ನು) ಸೃಷ್ಟಿಸುವುದೂ ನುಂಗುವುದೂ ಹೇಗೋ, ಪೃಥಿವಿಯಲ್ಲಿ ಗಿಡಗಳು ಹುಟ್ಟುವುದು ಹೇಗೋ, ಬದುಕಿರುವ ಪುರುಷನಿಗೆ ಕೇಶ ಲೋಮಗಳು ಹುಟ್ಟುವುದು ಹೇಗೋ, ಹಾಗೆ ಅಕ್ಷರದಿಂದ ಈ ವಿಶ್ವವು ಸಂಭವಿಸುವುದು[2].

(ಬ್ರಹ್ಮದಿಂದ ವಿಶ್ವವು ಉತ್ಪತ್ತಿಯಾಗುವ ಕ್ರಮವು ಹೀಗೆ)

೮. ಬ್ರಹ್ಮವು ತಪಸ್ಸಿನಿಂದ ಉಬ್ಬುವುದು. ಅದರಿಂದ (ಎಲ್ಲಕ್ಕೂ ಕಾರಣವಾದ ಅವ್ಯಕ್ತವೆಂಬ) ಅನ್ನವು ಹುಟ್ಟುವುದು. ಆ ಅನ್ನದಿಂದ

---

1. ಇಂತಹ ಭೂತಯೋನಿಯನ್ನು ಸಂಪಾದಿಸಿಕೊಡುವುದು ಪರಾ ವಿದ್ಯೆಯು. (ಶಂಕರರು).

2. ಜೇಡರ ಹುಳುವು ಇತರ ಸಹಾಯವಿಲ್ಲದೆ ತಾನೇ ತನ್ನ ಬಾಯಿ ಅಂಟಿನಿಂದ ದಾರಗಳನ್ನು ಎಳೆದು ಮತ್ತೆ ಅದನ್ನು ನುಂಗಿಕೊಳ್ಳುವುದು. ಪೃಥಿವಿಯಲ್ಲಿ ಹುಟ್ಟುವ ಗಿಡಗಳೆಲ್ಲ ಆಯಾ ಬೀಜಗಳಿಂದ ಹುಟ್ಟುವುದು ಎಂಬುದು ಈಗಿನವರ ಮತ. ನಮ್ಮವರು "ಪೃಥಿವಿಯಲ್ಲಿ ಬೇರೆ ಬೇರೆ ಶಕ್ತಿಗಳಿಂದ ಕಾಲಧರ್ಮಾನುಗುಣವಾಗಿ ಎಲ್ಲವೂ ಸಂಭವಿಸುವುವು" ಎನ್ನುವರು. ಇಲ್ಲಿ ಬೀಜವಿರಬೇಕು ಎಂದು ಒಪ್ಪಿಕೊಂಡರೂ, ಪುರುಷನಲ್ಲಿ ಕೇಶಲೋಮಾದಿಗಳು ಹುಟ್ಟುವುದು ಹೇಗೋ ಹಾಗೆ, ಎಂಬಲ್ಲಿ, ಪುರುಷನ ದೇಹವೆಲ್ಲ ಅಖಂಡವಾಗಿರುವುದರಿಂದ, ಅಲ್ಲಿ ಕೇಶರೋಮಗಳಿಗೆ ಪ್ರತ್ಯೇಕವಾದ ಬೀಜವಿಲ್ಲವೆಂಬುದು ಸ್ಪಷ್ಟವು. ಹಾಗೆ ಅಕ್ಷರದಿಂದ ಎಲ್ಲವೂ ಬೀಜಾಂತರವಿಲ್ಲದೆ ತಾನೇ ಹುಟ್ಟುವುದು ಎಂಬುದು ವೇದಾಂತ ಸಿದ್ಧಾಂತವು.

(ಹಿರಣ್ಯಗರ್ಭನೆಂಬ) ಪ್ರಾಣವು, (ಅದರಿಂದ) ಮನಸ್ಸು, (ಅದರಿಂದ) (ಪಂಚಭೂತಗಳೆಂಬ) ಸತ್ಯವು, (ಆ ಪಂಚಭೂತಗಳಿಂದ) ಲೋಕಗಳು, (ಅಲ್ಲಿ ಜಂತುಗಳು ಮಾಡಬೇಕಾದ) ಕರ್ಮಗಳು, (ಆ ಕರ್ಮಗಳ ಫಲ ವಾದ) ಅಮೃತವು, ಹುಟ್ಟುವುವು.

೯. ಯಾವನು ಸರ್ವಜ್ಞನೂ ಸರ್ವವಿತ್ತೂ ಆಗಿವನೋ, ಯಾವನ ತಪಸ್ಸು ಜ್ಞಾನಮಯವೋ, ಅದೇ ಈ ಬ್ರಹ್ಮವು. ಅದರಿಂದ, ನಾಮ ಗಳೂ, ರೂಪಗಳೂ, (ಅವಕ್ಕೆ ಕಾರಣವಾದ) ಅನ್ನವೂ ಹುಟ್ಟುವುವು.

ಇಂತಿದು ಮೊದಲನೆಯ ಖಂಡವು.

ಖಂಡ ಎರಡು

(ಹಿಂದೆ ಪರಾ, ಅಪರಾ, ಎಂಬ ಎರಡು ವಿದ್ಯೆಗಳನ್ನು ಹೇಳಿಯಾ ಯಿತು: ಈಗ ಅವು ಏನು ಹೇಳುತ್ತವೆ ಎಂಬುದನ್ನು ಹೇಳಲು ಉಪ ನಿಷತ್ತು ಹೊರಟಿದೆ.)

೧. ಇದು ಸತ್ಯ : ಕವಿಗಳು ಮಂತ್ರಗಳಲ್ಲಿ ಯಾವ ಯಾವ ಕರ್ಮಗಳನ್ನು ಕಂಡರೋ, ಅವುಗಳೆಲ್ಲಾ ತ್ರೇತಾ[1]ಯುಗದಲ್ಲಿ ಬಹುವಾಗಿ ಹರಡಿದುವು : ಎಲೈ ಸತ್ಯಕಾಮರೆ, ಅವುಗಳನ್ನು ನೀವು ತಪ್ಪದೆ ಆಚರಿ ಸಿರಿ. ಲೋಕದಲ್ಲಿ ನೀವು ಪುಣ್ಯವನ್ನು ಪಡೆಯಲು ಇದೇ ದಾರಿಯು.

೨. ಹವ್ಯವಾಹನ[2] (ನಾದ ಅಗ್ನಿ) ಯನ್ನು ಚೆನ್ನಾಗಿ ಪುಟಗೊಳಿ ಸಲು ಜ್ವಾಲೆಗಳು ಎದ್ದು ಕುಣಿಯುವುವು. ಆಗ ಕೊಡುವ ಆಜ್ಯ ಭಾಗ[3]ಗಳ ನಡುವೆ ಆಹುತಿಗಳನ್ನು ಕೊಡಬೇಕು.

---

1. ತ್ರೇತಾ=ಋಗ್ವೇದ, ಯಜುರ್ವೇದ, ಸಾಮವೇದಗಳು ಮೂರು ಸೇರಿ ದುದು ಎಂದು ಒಂದು ಅರ್ಥ; ಯುಗ ಎಂದು ಇನ್ನೊಂದು ಅರ್ಥ. ಇಲ್ಲಿ ಯುಗ ಎಂಬರ್ಥವನ್ನು ತೆಗೆದುಕೊಂಡಿದೆ.

2. ಹವ್ಯವಾಹನ : ದೇವತೆಗಳಿಗೆ ಕೊಡುವ ಆಹುತಿಗೆ ಹವ್ಯ ಎಂದೂ, ಪಿತೃಗಳಿಗೆ ಕೊಡುವ ಆಹುತಿಗಳಿಗೆ ಕವ್ಯ ಎಂದೂ ಹೆಸರು. ಹವ್ಯವನ್ನು ತೆಗೆದು ಕೊಂಡು ಹೋಗಿ ದೇವತೆಗಳಿಗೆ ಕೊಡುವವನು ಹವ್ಯವಾಹನ.

3. ಆಜ್ಯಭಾಗ=ತುಪ್ಪದ ಹೋಮ.

೩. ಅಗ್ನಿಹೋತ್ರವನ್ನು ಇಟ್ಟುಕೊಂಡಿರುವವನು ದರ್ಶ ಪೌರ್ಣಮಾಸ, ಚಾತುರ್ಮಾಸ್ಯ, ಅಗ್ರಯಣ, ಅತಿಥಿಪೂಜನ, ಹೋಮ, ವೈಶ್ವದೇವಗಳನ್ನು ಮಾಡಬೇಕು: ಅವುಗಳನ್ನು ವಿಧಿವತ್ತಾಗಿ ಮಾಡಬೇಕು. ಹಾಗಿಲ್ಲದೆ ವಿಧಿಯಿಲ್ಲದೆ (ತೋರಿಕೆಗಂತೆ) ಮಾಡಿದರೆ, (ಅದು) ಅವನಿಗೆ ಏಳು ಜನ್ಮಗಳ ಪುಣ್ಯವನ್ನು ತೊಡೆದುಬಿಡುವುದು.

೪. ಕಾಲೀ, ಕರಾಲೀ, ಮನೋಜವಾ, ಸುಲೋಹಿತಾ, ಸುಧೂಮ್ರವರ್ಣಾ, ಸ್ಫುಲಿಂಗಿನೀ, ವಿಶ್ವರುಚೀ, ಎಂಬಿವು (ಹವ್ಯವಾಹನನ) ಏಳು ನಾಲಗೆಗಳು.

೫. ಉರಿಯುತ್ತಿರುವ ಈ ಅಗ್ನಿ ಜ್ವಾಲೆಗಳಲ್ಲಿ ಯಾವನು ಕಾಲಕಾಲಕ್ಕೆ ಸರಿಯಾಗಿ ಆಹುತಿಗಳನ್ನು ಕೊಡುತ್ತಾ (ಅಗ್ನಿಹೋತ್ರಾದಿ ಕರ್ಮಗಳನ್ನು) ಆಚರಿಸುವನೋ, ಅವನನ್ನು ಸೂರ್ಯಕಿರಣಗಳು ದೇವಪತಿಯಾದ (ಇಂದ್ರನು) ಎಲ್ಲಿರುವನೋ ಅಲ್ಲಿಗೆ ಕರೆದೊಯ್ಯುವುವು.

೬. ಬಾ ಬಾ ಎಂದು ಅವನನ್ನು ಪ್ರಕಾಶಮಾನವಾದ ಆಹುತಿಗಳು ಸೂರ್ಯಕಿರಣಗಳೊಡನೆ ಕರೆದುಕೊಂಡು ಹೋಗುವುವು. ಇದು ಬ್ರಹ್ಮಲೋಕ: ಇದು ನಿಮ್ಮ ಪುಣ್ಯದಿಂದ ಲಭಿಸಿದುದು (ಎಂದು) ಅವು ಪ್ರಿಯವಾಕ್ಕುಗಳನ್ನು ಆಡುತ್ತಾ ಗೌರವಿಸುವುವು.

೭. (ಆದರೆ) ಈ ಯಜ್ಞರೂಪವಾದ ಕರ್ಮಗಳು ದೃಢವಲ್ಲದ ಹರಿಗೋಲುಗಳು. ಇವುಗಳಲ್ಲಿ ಹದಿನೆಂಟರ[2] ಅವರ[3] ಕರ್ಮಗಳು ಹೇಳಿವೆ. ಇವೇ ಶ್ರೇಯಸ್ಸು ಎಂದು ನಂಬುವವರು ಮೂಢರು. ಅವರು ಮತ್ತೆ ಮತ್ತೆ ಜರಾ ಮರಣಗಳಿಗೆ ಬರುವರು.

---

1. ದರ್ಶ=ಅಮಾವಾಸ್ಯೆ, ಪೌರ್ಣಮಾಸ=ಹುಣ್ಣಿಮೆ, ಚಾತರ್ಮಾಸ್ಯ=ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ, ಎಂಬ ನಾಲ್ಕುಮಾಸಗಳು, ಅಗ್ರಯಣ=ಮಾರ್ಗಶಿರ, ಈಯೀ ಕಾಲಗಳಲ್ಲಿ ಮಾಡುವ ಹೋಮಗಳು. ವೈಶ್ವದೇವ—ವಿಶ್ವೇದೇವತೆಗಳಿಗಾಗಿ ಮಾಡುವ ಬಲಿದಾನ.

2. ಅಷ್ಟಾದಶ—ಹದಿನಾರುಜನ ಋತ್ವಿಜರು, ಪತ್ನೀ, ಯಜಮಾನ.

3. ಅವರ—ಜ್ಞಾನವರ್ಜಿತ.

೮. (ಅಂಥವರು) ಅವಿದ್ಯೆಯಲ್ಲಿ ಸಿಕ್ಕಿಕೊಂಡಿರುವವರು: ತಾವೇ ಧೀರರು ಪಂಡಿತರು ಎಂದುಕೊಂಡವರು: (ಅಡಿಗಡಿಗೆ ಜರಾ ರೋಗ ಮೊದಲಾದ ಅನರ್ಥಗಳಿಂದ) ಏಟು ತಿನ್ನುತ್ತಿರುವವರು: ಮೂಢರು; ಕುರುಡನ ಹಿಂದೆ ಹೋಗುವ ಕುರುಡರಂತೆ, (ವ್ಯರ್ಥವಾಗಿ) ಅಲೆದಾಡುವರು.

೯. ನಾನಾ ತೆರವಾಗಿ ಅವಿದ್ಯೆಯಲ್ಲಿ ಸಿಕ್ಕಿಕೊಂಡಿರುವ ಈ ಹುಡುಗ (ಬುದ್ಧಿಯುವ)ರು ನಾವು ಕೃತಾರ್ಥರು ಎಂದು ತಿಳಿದುಕೊಳ್ಳುವರು. ಈ ಕರ್ಮಿಗಳು (ಕರ್ಮಫಲದಲ್ಲಿ) ಆಶೆಯುಳ್ಳವರಾಗಿ (ಆತ್ಮತತ್ತ್ವವನ್ನು) ತಿಳಿಯಲಾರರು. ಅದರಿಂದ, (ದುಃಖವನ್ನು ದಾಟಲಾರದೆ) ಆತುರರಾಗಿ ಪುಣ್ಯವು ಕ್ಷಯವಾಗಲು, ಸ್ವರ್ಗದಿಂದ ಉರುಳುವರು.

೧೦. (ಶ್ರುತಿಯಲ್ಲಿ ಹೇಳಿರುವ) ಇಷ್ಟ, (ಸ್ಮೃತಿಯಲ್ಲಿ ಹೇಳಿರುವ) ಪೂರ್ತ, ಇವುಗಳೇ ಶ್ರೇಯಸ್ಸಿನ ಪರಮಸಾಧನ ಎಂದುಕೊಂಡು, ಇದಕ್ಕಿಂತ ಉತ್ತಮವಾದುದು ಇನ್ನು ಇಲ್ಲವೇ ಇಲ್ಲ ಎಂದುಕೊಂಡವರು ಈ ಮೂಢರು. ಮೇಲಿನ ಸ್ವರ್ಗಲೋಕಗಳಲ್ಲಿ ತಮ್ಮ ತಮ್ಮ ಪುಣ್ಯಗಳನ್ನು ಅನುಭವಿಸಿ, ಕೆಳಗಿನ ಈ ಲೋಕಕ್ಕೆ ಬರುವರು.

೧೧. (ಇದಕ್ಕೆ ಪ್ರತಿಯಾಗಿ) ಅರಣ್ಯಗಳಲ್ಲಿ ಇದ್ದುಕೊಂಡು ತಪಸ್ಸು ಶ್ರದ್ಧೆ[1]ಗಳಿಂದ ಕೂಡಿ, ಶಾಂತರಾಗಿ, ವಿದ್ವಾಂಸರಾಗಿ, ಭಿಕ್ಷೆಯಿಂದ ಜೀವಿಸುವವರು, ಪಾಪಗಳನ್ನು ನೀಗಿಕೊಂಡು, ಅಮೃತನೂ ಅವ್ಯಯಾತ್ಮನೂ ಆದ ಪುರುಷನಿರುವ ಸ್ಥಾನವನ್ನು ಸೂರ್ಯನ ಮೂಲಕ ಸೇರುವರು.[2]

೧೨. ಹೀಗೆ ಕರ್ಮ (ಫಲವಾದ ಪುಣ್ಯ)ಗಳಿಂದ ಲಭಿಸುವ, ಲೋಕಲೋಕಗಳನ್ನೆಲ್ಲಾ ಅನುಭವಿಸಿ, (ಪ್ರತ್ಯಕ್ಷ, ಅನುಮಾನ, ಉಪಮಾನ, ಆಗಮಗಳೆಂಬ ಪ್ರಮಾಣಗಳಿಂದ) ಪರೀಕ್ಷಿಸಿ ನೋಡಿ, ನೋಡಿ,

---

1. ಶ್ರದ್ಧೆ : ಹಿರಣ್ಯಗರ್ಭಾದಿ ವಿಷಯವಾದ ವಿದ್ಯೆ.

2. ಇಲ್ಲಿ ಹೇಳಿರುವುದು ಲೋಕವನ್ನೆಲ್ಲಾ ಸೃಷ್ಟಿಸಿರುವ ಚತುರ್ಮುಖ ಬ್ರಹ್ಮಲೋಕವನ್ನು. ಇದೂ ಮುಕ್ತಿಯಲ್ಲ.

ಬ್ರಾಹ್ಮಣನು (ಬ್ರಹ್ಮಜ್ಞಾನ ಬೇಕು ಎನ್ನುವವನು) ವೈರಾಗ್ಯವನ್ನು ಪಡೆಯಬೇಕು : (ಈ ಲೋಕಗಳನ್ನು ಪಡೆದುದರಿಂದ ಏನೂ ಪ್ರಯೋಜನವಿಲ್ಲ ಎಂದು ಮನಗಾಣಬೇಕು.) ಕರ್ಮಗಳಿಂದ ನಿತ್ಯವಸ್ತುವು ಸಿಕ್ಕುವುದಿಲ್ಲ (ಎಂದು ದೃಢಪಡಿಸಿಕೊಳ್ಳಬೇಕು.) ಅದರಿಂದ, ಆ ನಿತ್ಯವಸ್ತುವನ್ನು ಅರಿಯಲು ಸಮಿತ್ಪಾಣಿಯಾಗಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿ ಸಾರಬೇಕು.

೧೩. ಆ (ಬ್ರಹ್ಮನಿಷ್ಠನಾದ) ವಿದ್ವಾಂಸನು, ಹಾಗೆ ತನ್ನ ಬಳಿಗೆ ಬಂದವನು ಒಳ್ಳೆಯ ಪ್ರಶಾಂತಚಿತ್ತನೇ ? ಶಮದಿಂದ ಕೂಡಿದವನೇ ? ಎಂಬುದನ್ನು ನೋಡಿಕೊಂಡು, ಯಾವುದರಿಂದ ಸತ್ಯನಾದ ಅಕ್ಷರ ಪುರುಷನನ್ನು ತಿಳಿಯಬಹುದೋ ಆ ಬ್ರಹ್ಮವಿದ್ಯೆಯನ್ನು ಯಥಾವತ್ತಾಗಿ ಆತನಿಗೆ ಹೇಳುವನು.

ಇಂತಿದು ಎರಡನೆಯ ಖಂಡವು—ಮೊದಲನೆಯ ಅಧ್ಯಾಯವು

ಅಧ್ಯಾಯ ಎರಡು—ಖಂಡ ಒಂದು

(ಹಿಂದಿನ ಖಂಡದಲ್ಲಿ ಅಪರವಿದ್ಯೆಯ ಫಲವನ್ನು ಹೇಳಿ, ಅದು ಬೇಡವೆಂದವನು ಏನುಮಾಡಬೇಕು ಎಂಬುದನ್ನು ಹೇಳಿಯಾಯಿತು. ಈಗ ಪರವಿದ್ಯೆಯ ಫಲವನ್ನು ಹೇಳಲಾಗುತ್ತದೆ.)

೧. ಇದು ಸತ್ಯ : ಚೆನ್ನಾಗಿ ಪುಟಗೊಂಡಿರುವ ಬೆಂಕಿಯಿಂದ ಬೆಂಕಿಯೇ ಆದ ಕಿಡಿಗಳು ಸಾವಿರಾರು ಹುಟ್ಟುವಂತೆ, ಅಕ್ಷರದಿಂದ, ಎಲೈ ಸೋಮ್ಯನೆ, ವಿಧವಿಧವಾದ ಭಾವಗಳು ಹುಟ್ಟುವುವು : ಅಲ್ಲಿಯೇ (ಆ ಅಕ್ಷರದಲ್ಲಿಯೇ) ಲಯವನ್ನು ಹೊಂದುವುವು.

೨. ಆ (ಅಕ್ಷರನಾದ) ಪುರುಷನು ದಿವ್ಯನು : ಅಮೂರ್ತನು : ಬಾಹ್ಯ (ಹೊರಗೆ) ಅಭ್ಯಂತರ (ಒಳಗೆ) ಗಳನ್ನು ತುಂಬಿರುವನು : ಆತನು ಅಜನು (ಜನ್ಮರಹಿತನು) : ಆತನು ಪ್ರಾಣವಲ್ಲ : ಮನಸ್ಸಲ್ಲ : ಆತನು ಶುಭ್ರನು : ಅಕ್ಷರದಿಂದಲೂ ಆಚೆ ಇರುವ ಪರನು ಆತನು.[1]

---

1. ಅಪ್ರಾಣ, ಅಮನಃ, ಎಂಬುದನ್ನು ಪ್ರಾಣವಲ್ಲ, ಮನಸ್ಸಲ್ಲ ಎಂದು ಭಾಷಾಂತರಿಸಲಾಗಿದೆ.

೩. ಈತನಿಂದ ಪ್ರಾಣ, ಮನಸ್ಸು, ಸರ್ವೇಂದ್ರಿಯಗಳೂ ಆಕಾಶ, ವಾಯು, ಅಗ್ನಿ, ಆಪ, ಎಲ್ಲವನ್ನೂ ಧರಿಸಿರುವ ಪೃಥ್ವೀ, ಇವೂ ಹುಟ್ಟುವುವು.

[ಹಿಂದೆ ಹೇಳಿದ ಪ್ರಾಣ (ಹಿರಣ್ಯಗರ್ಭ) ನಿಂದ ಎಲ್ಲವೂ ಹುಟ್ಟು ವುದು ಎಂಬುದನ್ನು ಇಲ್ಲಿ ವಿಸ್ತರಿಸಲಾಗಿದೆ.]

೪. ಅಗ್ನಿಯು (ದ್ಯುಲೋಕ) ಶಿರವು : ಚಂದ್ರಸೂರ್ಯರು ಕಣ್ಣು ಗಳು : ದಿಕ್ಕುಗಳು ಶ್ರೋತ್ರವು : ವಾಕ್ಕು ಹೊರಕ್ಕೆ ನುಗ್ಗಿಬಂದ ವೇದಗಳು : ವಾಯುವೇ ಪ್ರಾಣವು : ವಿಶ್ವವು ಹೃದಯವು. ಪೃಥಿವಿಯು ಕಾಲು. ಈತನೇ ಸರ್ವ ಭೂತಗಳನ್ನೂ ತನ್ನಲ್ಲಿ ಇಟ್ಟುಕೊಂಡಿರು ವವನು.[1]

೫. ಆ ಪುರುಷನಿಂದ ಅಗ್ನಿಯು ಹುಟ್ಟಿದನು (ಅಗ್ನಿ ಎಂದರೆ ಇಲ್ಲಿ ಲೋಕ.) ಅದನ್ನು ಬೆಳಗುವ ಸೂರ್ಯನೂ, (ಆ ಲೋಕದಲ್ಲಿ ಹುಟ್ಟಿದ) ಸೋಮನಿಂದ ಪರ್ಜನ್ಯನೂ, (ಅವನಿಂದ) ಪೃಥಿವಿಯಲ್ಲಿ ಓಷಧಿ ಗಳೂ, (ಅದರಿಂದ ಅನ್ನವೂ, ಆ ಅನ್ನದಿಂದ) ಹೆಂಗುಸಿಗೆ ರೇತಸ್ಸನ್ನು ಕೊಡುವ ಗಂಡುಸೂ, (ಹಾಗೆಯೇ) ಅನೇಕ ಪ್ರಜೆಗಳೂ ಹುಟ್ಟಿದರು.[2]

೬. ಆತನಿಂದ, ಋಕ್ಕು, ಸಾಮ, ಯಜುಸ್ಸು, (ಉಪನಯ ನಾದಿ) ದೀಕ್ಷೆಗಳು, ಯಜ್ಞಗಳು, ಸಮಸ್ತವಾದ ಕ್ರತುಗಳು (ಅವುಗಳು ಸಾಂಗವಾಗಲೆಂದು ಗೊತ್ತಾಗಿರುವ) ದಕ್ಷಿಣೆಗಳು, (ಆ ಯಜ್ಞಕ್ರಮ

---

1. ಹಿಂದೆ ದಿವ್ಯನು, ಅಮೂರ್ತನು ಎಂದು ಬ್ರಹ್ಮದ ಸ್ವರೂಪವನ್ನು ಹೇಳಿ (ಇದೇ ಖಂಡ, ೨ನೆಯ ಮಂತ್ರ), ಈಗ ಇನ್ನೂ ಅದನ್ನು ವಿಸ್ತರಿಸಿ ಹೇಳಲಾಗು ವುದು. ಸಂಕ್ಷೇಪವಾಗಿ ವಿಸ್ತರವಾಗಿ ಹೇಳಿದರೆ ಪದಾರ್ಥವು ಮನಸ್ಸಿಗೆ, ಸೂತ್ರ, ಅದರ ಮೇಲಿನ ಭಾಷ್ಯಗಳಂತೆ ಚೆನ್ನಾಗಿ ಹಿಡಿಯುವುದು.—ಶಂ.

(ಈ ೪, ೫, ೬ ಮಂತ್ರಗಳನ್ನು ಪುರುಷಸೂಕ್ತದೊಡನೆ ಹೋಲಿಸಿ.)

2. ಈ ಲೋಕವೆಲ್ಲ ಅಗ್ನಿ, ಸೋಮರಿಂದ ಆದುದು. ಅದನ್ನೇ ಇಲ್ಲಿಯೂ ಹೇಳಿದೆ. ಸೋಮವೆಂದರೆ ಅನ್ನ. ಅದನ್ನು ತಿನ್ನುವ ಅನ್ನಾದ ಅಗ್ನಿ. ಲೋಕ ದಲ್ಲಿ ಅಗ್ನಿಯಿಂದ ಬೀಜ, ರೇತಸ್ಸು. ಸೋಮದಿಂದ ಕ್ಷೇತ್ರ : ಶೋಣಿತ. ಇವೆರಡರಿಂದ ಲೋಕದಲ್ಲಿ ಎಲ್ಲವೂ ಆಗುವುದು.

ಗಳಿಗೆ ಗೊತ್ತಾದ ಕಾಲಸ್ವರೂಪವಾದ) ಸಂವತ್ಸರ, (ಆ ಯಜ್ಞ ಕ್ರಮಗಳನ್ನು ಮಾಡುವ) ಯಜಮಾನ, (ಆ ಕರ್ಮಗಳ ಫಲವಾದ) ಲೋಕಗಳು, (ಇವು ಹುಟ್ಟಿದುವು.) (ಆ ಲೋಕಗಳನ್ನು) ಸೋಮನು ಪರಿಶುದ್ಧಮಾಡುವನು, ಸೂರ್ಯನು ಬೆಳಗುವನು.

೭. ಆ ಪುರುಷನಿಂದ, ದೇವತೆಗಳು ಗುಂಪುಗುಂಪಾಗಿ ಹುಟ್ಟಿದರು. ಸಾಧ್ಯರು, ಮನುಷ್ಯರು, ಪಶುಗಳು, ಹಕ್ಕಿಗಳು, ಪ್ರಾಣ–ಅಪಾನಗಳು, ವ್ರೀಹಿ ಯವಗಳು, ತಪಸ್ಸು[1], ಶ್ರದ್ಧಾ[2], ಸತ್ಯ, ಬ್ರಹ್ಮಚರ್ಯ, ವಿಧಿ, ಇವುಗಳೆಲ್ಲಾ ಹುಟ್ಟಿದುವು.

೮. ಆ ಪುರುಷನಿಂದ ಏಳು ಪ್ರಾಣಗಳು[3] ಹುಟ್ಟುವುವು. ಏಳು ಅಗ್ನಿಗಳು, ಏಳು ಸಮಿತ್ತುಗಳು, ಏಳು ಹೋಮಗಳು, ಈ ಏಳು ಲೋಕಗಳು, ಇವುಗಳಲ್ಲಿ ಚಲಿಸುವ, (ನಿದ್ರೆಬಂದಾಗ ಹೃದಯದಲ್ಲಿ ಇರುವ) ಗುಹಾಶಯಗಳಾದ, ದೇಹದಲ್ಲಿ ಯಾವಾಗಲೂ ಇರುವ ನಿಹಿತಗಳಾದ ಏಳು ಪ್ರಾಣಗಳು,[4] ಇವೂ ಹುಟ್ಟಿದುವು.

---

1. ತಪಸ್ಸು—ಪುರುಷನಿಗೆ ಸಂಸ್ಕಾರವನ್ನು ಮಾಡುವ ಕರ್ಮವು.

2. ಶ್ರದ್ಧಾ—ಸರ್ವ ಪುರುಷಾರ್ಥಗಳಿಗೂ ಸಾಧನವಾದ ಚಿತ್ತಪ್ರಸಾದವೆಂಬ ಆಸ್ತಿಕ್ಯ ಬುದ್ಧಿಯು.

3. ಪ್ರಾಣಗಳು—ಕಿವಿಗಳು ಎರಡು, ಕಣ್ಣುಗಳೆರಡು, ಮೂಗಿನ ಹೊಳ್ಳೆಗಳು ಎರಡು, ಬಾಯಿ ಒಂದು, ಈ ಏಳೂ ತಲೆಯಲ್ಲಿರುವ ಪ್ರಾಣಸ್ಥಾನಗಳು. ಅಗ್ನಿಗಳು ಎಂದರೆ ಇಲ್ಲಿ ಕುಳಿತು ವಿಷಯಗಳನ್ನು ಭೋಗಿಸುವ ಶಕ್ತಿ. ಸಮಿತ್ತುಗಳು ಎಂದರೆ ಈ ಇಂದ್ರಿಯಗಳ ವಿಷಯಗಳು. ಹೋಮಗಳು ಎಂದರೆ, ವಿಷಯೇಂದ್ರಿಯ ಭೋಗಗಳು. ಲೋಕಗಳು ಎಂದರೆ, ಪ್ರಾಣಗಳು ಸಂಚರಿಸುವ ಇಂದ್ರಿಯ ಸ್ಥಾನಗಳು.

4. ಚರಿಸುವ ಪ್ರಾಣವೆಂದರೆ, ಜಾಗ್ರತ್ತಿನಲ್ಲಿ ಈ ಇಂದ್ರಿಯಗಳಲ್ಲಿ ನಿಂತು ಭೋಗಗಳನ್ನು ಅನುಭವಿಸುವವು. ಗುಹಾಶಯಗಳೆಂದರೆ ನಿದ್ದೆಯಲ್ಲಿ ಹೃದಯದಲ್ಲಿರುವವು. ನಿಹಿತವೆಂದರೆ, ದೇಹದೇಹದಲ್ಲಿಯೂ ಪ್ರತ್ಯೇಕವಾಗಿರುವವು. ಆತ್ಮಜ್ಞಾನವಿರುವವನಿಗೆ ಈ ಇಂದ್ರಿಯ ವಿಷಯ ಸಂಯೋಗವು ಯಜ್ಞವು, ಅದಿಲ್ಲದವನಿಗೆ ಭೋಗವು. ಯಜ್ಞವು ಮುಂದಕ್ಕೆ ಕರೆದೊಯ್ಯುವ ಸಾಧನವು. ಭೋಗವು ಇಂದ್ರಿಯಶಕ್ತಿಯನ್ನು ಕಳೆಯುವ ಸಾಧನವು.

೯. ಈತನಿಂದಲೇ ಸಮುದ್ರಗಳೂ ಪರ್ವತಗಳೂ ಎಲ್ಲವೂ (ಆದುವು): ಸಮಸ್ತ ನದಿಗಳೂ ಈತನಿಂದಲೇ ಹರಿದು ಬರುವುವು: ಸಮಸ್ತವಾದ ಔಷಧಿಗಳು ರಸಗಳು ಈತನಿಂದಲೇ: ಆ ರಸದಿಂದ ಈತನು ಪಂಚಭೂತಗಳಾಗಿ ಲಿಂಗಶರೀರವನ್ನು ಕಟ್ಟಿಕೊಂಡು ಇರುವನು.[1]

೧೦. (ಹೀಗೆ ಎಲ್ಲವೂ ಆ ಪುರುಷನಿಂದಲೇ ಹುಟ್ಟಿತಾಗಿ) ಈ ವಿಶ್ವವೆಲ್ಲವೂ ಪುರುಷನೇ! ಕರ್ಮ, ತಪಸ್ಸು' ಇವೂ ಬ್ರಹ್ಮವೇ! (ಅದು) ಪರಮವಾದ ಅಮೃತವು. (ಈ ಅಮೃತವು) ಗುಹೆ (ಬುದ್ಧಿ)ಯಲ್ಲಿ ಇರುವುದು. ಯಾವನು ಇದನ್ನು ಅರಿಯುವನೋ ಅವನು, ಎಲೆ ಸೋಮ್ಯ, ಅವಿದ್ಯಾಗ್ರಂಥಿಯನ್ನು ಬಿಚ್ಚುವನು.[೨]

ಮೊದಲನೆಯ ಖಂಡವು.

ಖಂಡ ಎರಡು.

(ಹಿಂದಿನ ಖಂಡದಲ್ಲಿ ಹೇಳಿದ ಆ ಅಕ್ಷರವನ್ನು ತಿಳಿಯುವುದು ಹೇಗೆ ಎಂಬುದನ್ನು ಈ ಖಂಡದಲ್ಲಿ ಹೇಳಲಾಗುವುದು)

೧. ಆ (ಬ್ರಹ್ಮ) ಜ್ಯೋತಿಯು, ಮಗ್ಗುಲಲ್ಲಿಯೇ ಇರುವುದು. (ಇಂದ್ರಿಯ ವ್ಯಾಪಾರಗಳು ನಡೆಯುವಾಗ ಅದು ಗೋಚರವಾಗು

---

1. ಈ ಶರೀರವು ಪಂಚಭೂತಗಳಿಂದ ಆದುದು. ಈ ಭೂತಗಳಿಂದ ಆದ ಶರೀರವನ್ನು ಆಳುವವನು ಅಂತರಾತ್ಮನು. ಜ್ಞಾನೇಂದ್ರಿಯಗಳು, ಭೂತಗಳ ಸೂಕ್ಷ್ಮ ರೂಪಗಳು, ಮೊದಲಾದವೆಲ್ಲ ಆತನ ಅಂಗಗಳು. ಈ ಅಂಗಗಳಿಂದ ಕೂಡಿದ ಅಂತರಾತ್ಮನನ್ನು ಲಿಂಗಶರೀರಿ ಎನ್ನುವರು. ಈ ದೇಹವನ್ನು ಬಿಟ್ಟು ಇನ್ನೊಂದು ದೇಹಕ್ಕೆ ಹೋಗುವುದು ಈ ಲಿಂಗಶರೀರ.

2. ಹಿಂದೆ "ಯಾವುದನ್ನು ತಿಳಿದರೆ ಎಲ್ಲವೂ ತಿಳಿಯುವುದು!" ಎಂದು ಕೇಳಿದ್ದ ಪ್ರಶ್ನಕ್ಕೆ ಉತ್ತರವಿದು. ಗುಹೆಯೆನ್ನುವುದು ಸರ್ವ ಪ್ರಾಣಿಗಳ ಹೃದಯ ಅಥವಾ ಬುದ್ಧಿ. ಬುದ್ಧಿಯು ಯಾವುದನ್ನೇ ಆಗಲಿ, ಜ್ಞಾತೃ, ಜ್ಞೇಯ, ಜ್ಞಾನ ಎಂಬ ತ್ರಿಪುಟಿಯಾಗಿ ನೋಡುವುದು. ತ್ರಿಪುಟಿಯನ್ನು ಒಡೆದಲ್ಲದೆ ಅಮೃತವಾದ ಬ್ರಹ್ಮದ ಜ್ಞಾನವಾಗದು. ಅದರಿಂದಲೇ ಗೀತೆ ಅ. ೩ ಕೊನೆಯ ಶ್ಲೋಕದಲ್ಲಿ ಬುದ್ಧಿಯಿಂದ ಅದರ ಆಚೆ ಇರುವುದನ್ನು ತಿಳಿ ಎಂದುದು.

ವುದು.) ಅದು ಗುಹಾಚರವು. (ಎಲ್ಲರ ಹೃದಯದಲ್ಲಿಯೂ ಇರುವುದು) ಅದು ಮಹತ್ಪದವು (ಅದಕ್ಕಿಂತ ದೊಡ್ಡದು ಇನ್ನಿಲ್ಲ). ಅದರಲ್ಲಿ ಈ ಸರ್ವವೂ ಸಮರ್ಪಿತವಾಗಿರುವುದು. ಚಲನಮಾಡುವಾಗ, ಉಸಿರಾಡುವಾಗ, ರೆಪ್ಪೆಹೊಡೆಯುವಾಗ, ಅದೇ ಎಲ್ಲವನ್ನೂ ಮಾಡುವುದು. ಅದನ್ನು ತಿಳಿಯಿರಿ. ಅದು ಸತ್, ಅಸತ್, ಎರಡಕ್ಕೂ ಮೇಲಿನದು. ಹುಟ್ಟಿಬಂದಿರುವ ಎಲ್ಲಕ್ಕೂ ಅದು ದೊಡ್ಡದು. ಅದನ್ನು ತಿಳಿದರೆ, ಅದು ಎಲ್ಲದಕ್ಕೂ ಹೆಚ್ಚಿನದು (ಎಂದು ತಿಳಿಯುವುದು.).

೨. ಅದು ಪ್ರಕಾಶವು: ಅಣುಗಳಿಗಿಂತ ಅಣುವಾಗಿದ್ದರೂ, ಅದರಲ್ಲಿ ಲೋಕಗಳೂ ಲೋಕನಿವಾಸಿಗಳೂ ಇರುವರು. ಅದೇ ಅಕ್ಷರವಾದ ಬ್ರಹ್ಮವು. ಅದೇ ಪ್ರಾಣವು. ಅದೇ ವಾಕ್ಕೂ ಮನಸ್ಸೂ (ಆಗಿರುವುದು): ಅದು ಸತ್ಯವು. ಅದು ಅಮೃತವು. ಅದನ್ನು (ಮನಸ್ಸಿನಿಂದ) ಸಾಧಿಸಬೇಕು. (ಅದರಿಂದ) ಸೋಮ್ಯ, ಆ ಅಕ್ಷರದಲ್ಲಿ ಮನಸ್ಸಿಡು.

೩. ಧನುಸ್ಸನ್ನು ತೆಗೆದುಕೊ, ಉಪನಿಷತ್ತುಗಳಲ್ಲಿ ಹೇಳಿರುವ ಉಪಾಸನೆಗಳಿಂದ ನಿಶಿತವಾಗಿರುವ ಬಾಣವೆಂಬ ಮಹಾಸ್ತ್ರವನ್ನು ಅದರಲ್ಲಿ ತೊಡು. ಅದನ್ನು ಎಳೆ. ಬ್ರಹ್ಮಭಾವದಲ್ಲಿಟ್ಟಿರುವ ಮನಸ್ಸಿನಿಂದ, ಬ್ರಹ್ಮವನ್ನು ಗುರಿಮಾಡಿ, ಸೋಮ್ಯ, ಸಾಧಿಸು.

೪. ಪ್ರಣವ ಎಂಬುದೇ ಧನುಸ್ಸು: (ದೇಹದಲ್ಲಿರುವ) ಆತ್ಮ (ಜೀವ)ವೇ ಶರವು. ಬ್ರಹ್ಮವೇ ಅದರ ಲಕ್ಷ್ಯವು. ಎಚ್ಚರವಾಗಿದ್ದು ಅದನ್ನು ಭೇದಿಸಬೇಕು. ಬಾಣದಂತೆ ಅದರಲ್ಲಿ ಸೇರಿಹೋಗಬೇಕು.

೫. ಆ ಪುರುಷನಲ್ಲಿ ಅಂತರಿಕ್ಷ, ಭೂಮಿ, ಮನಸ್ಸು, ಪ್ರಾಣಗಳು ಎಲ್ಲವೂ ಸೇರಿಹೋಗಿರುವುವು. ಆತನನ್ನು ಆತ್ಮಾ ಎಂದು ತಿಳಿದುಕೊಳ್ಳಿ. ಮಿಕ್ಕ ಮಾತುಗಳನ್ನೆಲ್ಲಾ ಬಿಡಿ. ಆ ಆತ್ಮನೇ ಅಮೃತ (ಮೋಕ್ಷ)ಕ್ಕೆ ದಾರಿಯು.

೬. ಆರೇಕಾಲುಗಳು ಗುಂಬದಲ್ಲಿ ಸೇರಿಕೊಂಡಿರುವಂತೆ, ನಾಡಿಗಳೆಲ್ಲಾ ಸೇರಿಕೊಂಡಿರುವ ಒಂದು ಸ್ಥಲವುಂಟು (ಈ ಶರೀರದಲ್ಲಿ. ಅಲ್ಲಿ ನೋಡಿ.) ಅಲ್ಲಿ ಈ ಆತ್ಮನು ನಾನಾ ರೂಪಗಳಿಂದ ಉಪಾಧಿ

ಸಮೇತನಾಗಿ ಸಂಚರಿಸುತ್ತಿರುವನು. ಆ ಆತ್ಮನನ್ನು ಓಂ ಎಂದು ಧ್ಯಾನಿಸಿರಿ. (ಅಗ) ಎಲ್ಲದಕ್ಕಿಂತಲೂ ಆಚಿನ ತಮಸ್ಸು (ಅಜ್ಞಾನ) ದಾಟುವಿರಿ. ನಿಮಗೆ ಮಂಗಳವಾಗಲಿ.[1]

೭. ಆತನು ಸರ್ವವನ್ನೂ ಸಾಮಾನ್ಯವಾಗಿಯೂ ಬಲ್ಲವನು : ಸಂಪೂರ್ಣವಾಗಿಯೂ ಬಲ್ಲವನು. (ಈ ಲೋಕದಲ್ಲಿರುವ ಸರ್ವವೂ ಆತನ ಅಂಕೆಗೆ ಒಳಗಾಗಿರುವುದು ಎಂಬುದು) ಆತನ ಮಹಿಮೆಯು. ಬ್ರಹ್ಮಪುರವೆಂಬ ದಿವ್ಯ ಆಕಾಶದಲ್ಲಿ ಈ ಆತ್ಮನು ಪ್ರತಿಷ್ಠಿತನಾಗಿರುವನು.

೮. ಆ ಆತ್ಮನು ಮನೋಮಯನು (ಮನಸ್ಸಿನಲ್ಲಿ ಯಾವ ವೃತ್ತಿಯು ಹುಟ್ಟಿದರೂ ಅದರ ಹಿಂದೆ ಇರುವನು.) ಪ್ರಾಣ, ಶರೀರ, ಇವುಗಳನ್ನು ನಡೆಸುವವನು[2] ಆವನು. ಅನ್ನ (ಮಯಕೋಶ) ದಲ್ಲಿ ರುವ ಹೃದಯದ (ಛಿದ್ರವನ್ನು)[3] ಹಿಡಿದು ಕುಳಿತಿರುವನು. ಬಹು ಸೂಕ್ಷ್ಮವಾದ ಜ್ಞಾನ (ದ ಬಲ)ದಿಂದ ಆತನನ್ನು ಧೀರರು ಚೆನ್ನಾಗಿ ನೋಡುವರು. ಆತ್ಮನು ಆನಂದರೂಪವಾಗಿ ಅಮೃತವಾಗಿ ದರ್ಶನ ಕೊಡುವನು.

---

1. ಹೃದಯವು ಕಮಲದಂತಿರುವುದು. ಅಲ್ಲಿ ಯಾವಾಗಲೂ ಜೀವಜ್ಯೋತಿಯು ಇದ್ದೇ ಇರುವುದು. ಆ ಜೀವಜ್ಯೋತಿಯನ್ನೇ ಚಿದಾಕಾಶವೆನ್ನುವರು. ಅಲ್ಲಿಯೂ ಬ್ರಹ್ಮದರ್ಶನವಾಗುವುದು. ಬ್ರಹ್ಮದರ್ಶನವೆಂದರೆ ಇಂದ್ರಿಯ ಗೋಚರವಾಗುವುದು ಎಂದಲ್ಲ. ಬ್ರಹ್ಮಚಿಂತನವಾಡುವುದೇ ಬ್ರಹ್ಮದರ್ಶನ. ಬ್ರಹ್ಮಚಿಂತನದಿಂದ ಸುಖದುಃಖಗಳಿಗೆ ವಶವಾಗಿ ಹಾರಾಡುವುದು ತಪ್ಪುವುದು. ಸಮತ್ವವು ಲಭಿಸುವುದು.

2. ಪ್ರಾಣ—ಶರೀರ. ಶರೀರವು ಜಾಗ್ರತ್ತಿನಲ್ಲಿ ಮಾತ್ರ ವ್ಯಾಪಾರವಾಡುವುದು. ಅಲ್ಲಿಯೂ ಅದಕ್ಕೆ ಪ್ರಾಣದ ಸಹಾಯವು ಬೇಕು. ಪ್ರಾಣವು ಮನಸ್ಸಿನೊಡನೆ ಬೆರೆದು ಕನಸುಕಾಣುವುದು. ಸುಷುಪ್ತಿಯಲ್ಲಿ ಪ್ರಾಣವೊಂದೇ ವ್ಯಾಪಾರ ವಾಡುವುದು. ಮನೋಮಯಃ ಪ್ರಾಣಶರೀರ ನೇತಾ ಎಂಬುದರಿಂದ, ಅವಸ್ಥಾತ್ರಯ ಕಾರಣನು ಆತನು. ಪ್ರಾಣದ ಪ್ರಾಣನು, ಮನಸ್ಸಿನ ಮನಸ್ಸು, ಇಂದ್ರಿಯಗಳ ಇಂದ್ರಿಯವು ಆತನು ಎಂದು ಮತ್ತೆ ಹೇಳಿದಂತಾಯಿತು.

3. ಹೃದಯದಲ್ಲಿ ಒಂದು ಸುಷಿರ (ಟೊಳ್ಳು) ಇದೆ. ಅಲ್ಲಿ ಪರಮಾತ್ಮನು ಇರುವನು ಎಂದು ಮಹಾನಾರಾಯಣದಲ್ಲಿ ಹೇಳಿದೆ.

(ಆ ಬ್ರಹ್ಮದರ್ಶನದಿಂದ ಏನಾಗುವುದು ಎಂಬುದನ್ನು ಹೇಳಲಾಗುತ್ತದೆ.)

೯. ಆ ಪರ-ಅವರವನ್ನು (ಎಂದರೆ ಕಾರಣವೂ ತಾನೇ ಕಾರ್ಯವೂ ತಾನೇ ಆಗಿರುವ) ಬ್ರಹ್ಮವನ್ನು ದರ್ಶನಮಾಡಿದರೆ, ಹೃದಯ ಗ್ರಂಥಿಯೂ (ಈ ದೇಹವು ನಾನು ಎಂದುಕೊಂಡು ಲೋಕದ ಪ್ರತಿಷ್ಠೆಗಾಗಿ ಅಳುವ ಬುದ್ಧಿಯೂ) ಬಿಚ್ಚಿಹೋಗುವುದು: ಸರ್ವಸಂಶಯಗಳೂ ನಾಶವಾಗುವುವು: (ಅವನನ್ನು ಈ ಲೋಕಕ್ಕೆ ಕಟ್ಟಿರುವ) ಕರ್ಮಗಳೆಲ್ಲವೂ ಕ್ಷಯವಾಗುವುವು.

೧೦. ಚಿನ್ನದಂತೆ ಬೆಳಗುವ (ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯಗಳೆಂಬ ನಾಲ್ಕು ಕೋಶಗಳಿಗಿಂತ ಆಚಿನ) ಉತ್ತಮವಾದ (ಆನಂದಮಯ) ಕೋಶದಲ್ಲಿ, ನಿಷ್ಕಲ (ಭಾಗಗಳಿಲ್ಲದೆ ಪೂರ್ಣವಾಗಿರುವ) ವಿರಜ (ರಜವೆಂದರೆ ಪಾಪ-ಅಪೂರ್ಣತೆ, ಅದಿಲ್ಲದೆ ಪೂರ್ಣ) ವಾದ ಬ್ರಹ್ಮವು ಲಭಿಸುವುದು. ಆ ಶುಭ್ರವೂ, ಜ್ಯೋತಿಗಳಿಗೆಲ್ಲ ಜ್ಯೋತಿಯೂ ಆದ ಅದನ್ನು (ಬ್ರಹ್ಮವನ್ನು) ಆತ್ಮಜ್ಞಾನಿಗಳು ತಿಳಿಯುವರು.[1]

೧೧. ಆ ಬ್ರಹ್ಮವನ್ನು ಸೂರ್ಯನೂ (ತನ್ನ ಕಿರಣಗಳಿಂದ) ಮುಟ್ಟಲಾರನು. ಚಂದ್ರ, ನಕ್ಷತ್ರ, ಈ ವಿದ್ಯುತ್ತುಗಳು ಇವೂ ಮುಟ್ಟಲಾರವು. ಇನ್ನು ಅಗ್ನಿಯೆಂತು ಅದನ್ನು ಮುಟ್ಟುವನು? ಆತನು ಬೆಳಗಿದರೆ ಎಲ್ಲವೂ ಆತನ ಬೆಳಕನ್ನು ಹಿಡಿದು ಬೆಳಗುವುವು. ಆತನ ಬೆಳಕಿನಿಂದಲೇ ಇದು, ಈ ಎಲ್ಲವೂ, ಬೆಳಗುವುದು

೧೨. ಈ ಎದುರು ಇರುವುದು ಆ ಅಮೃತವಾದ ಬ್ರಹ್ಮವೇ! ಹಿಂದೆ (ಇರುವುದೂ) ಬ್ರಹ್ಮವೇ! ದಕ್ಷಿಣಕ್ಕೂ ಉತ್ತರಕ್ಕೂ (ಬಲಕ್ಕೂ ಎಡಕ್ಕೂ) ಇರುವುದೂ ಬ್ರಹ್ಮವೇ! ಮೇಲೂ ಕೆಳಗೂ ಹರಡಿರುವುದೂ

---

1. ಪಂಚಾತ್ಮ ಸಂಕ್ರಮಣ ವಿದ್ಯೆಯನ್ನು ನೋಡಿ: ಪುಟ ೬೧

ಬ್ರಹ್ಮವೇ ! ಈ ಪ್ರತಿಯೊಂದೂ ಬ್ರಹ್ಮವೇ ! ಉತ್ತವೋತ್ತಮವಾದುದೂ (ಬಲು ಕೀಳಾದುದೂ ಸಹ) ಬ್ರಹ್ಮವೇ ![1]

ಎರಡನೆಯ ಖಂಡವು—ಎರಡನೆಯ ಅಧ್ಯಾಯವು.

ಅಧ್ಯಾಯ ಮೂರು—ಖಂಡ ಒಂದು

(ಹಿಂದಿನ ಅಧ್ಯಾಯದಲ್ಲಿ ಹೇಳಿದ ಬ್ರಹ್ಮ ಸಾಕ್ಷಾತ್ಕಾರವನ್ನು ಪ್ರಕಾರಾಂತರವಾಗಿ ವರ್ಣಿಸುತ್ತಾರೆ.)

೧. ಎರಡು ಹಕ್ಕಿಗಳು. ಮುದ್ದಾದ ಗರಿಯುಳ್ಳವು. ಎರಡೂ ಯಾವಾಗಲೂ ಒಟ್ಟಿಗೇ ಇರುವವು. ಎರಡೂ ಒಂದೇ ಹೆಸರಿನವು. ಅವು ಒಂದೇ ಮರದಲ್ಲಿಯೇ ಇವೆ. ಅವುಗಳಲ್ಲಿ ಒಂದು ರುಚಿಯಾದ ಹಣ್ಣುಗಳನ್ನು ತಿನ್ನುತ್ತಿದೆ ಇನ್ನೊಂದು ಏನನ್ನೂ ತಿನ್ನದೆ ನೋಡಿಕೊಂಡು ಕುಳಿತಿದೆ.[2]

೨. (ಎರಡು ಹಕ್ಕಿಗಳೂ ಒಂದೇ ಮರದಲ್ಲಿದ್ದರೂ,) ಯಾವ ಪುರುಷನು (ಹಕ್ಕಿಯು) (ಆ ಹಣ್ಣು ತಿನ್ನುವ ಕಾರ್ಯದಲ್ಲಿ) ಮಗ್ನನಾಗುವನೋ ಅವನು ಪರವಶನಾಗುವನು : ಮೋಹಗೊಳ್ಳುವನು : ಶೋಕಿಸುವನು : (ಹಾಗೆಯೇ ಅದೇ ಮರದಲ್ಲಿರುವ, ಮಗ್ನನಾಗದಿರುವುದರಿಂದ ಎಲ್ಲರಿಂದಲೂ) ಸೇವೆಯನ್ನು ಕೈಗೊಳ್ಳುವ, ಪರವಶನಾಗದೆ ಈಶನಾಗಿರುವ, ಇನ್ನೊಬ್ಬನನ್ನು ನೋಡಿ. (ಈ ಮರ, ಹಣ್ಣು, ಇದನ್ನು ತಿನ್ನುವುದು)

---

1. ಗೀತೆ ಅಧ್ಯಾಯ ೫. ಶ್ಲೋಕ ೨೬ ನೋಡಿ. ಕಾಮಕ್ರೋಧಗಳಿಲ್ಲದೆ ಚಿತ್ತವನ್ನು ಬಗಿಹಿಡಿದ ಯತಿಗಳು ಅತ್ಮವೇತ್ತರು : ಅವರಿಗೆ ಬ್ರಹ್ಮವು ಎದುರಿಗೇ ಇರುವುದು.

2. ಇಲ್ಲಿ ಹೇಳಿರುವ ವೃಕ್ಷವು ಕ್ಷೇತ್ರವೆಂಬುದು. ಈ ಶರೀರ-ಜಗತ್ತು ಎರಡೂ ಕ್ಷೇತ್ರಗಳೇ ! ಎರಡು ಹಕ್ಕಿಗಳು ಎಂಬುದು ಜೀವ,ಈಶ್ವರ ಎಂಬ ಕ್ಷರ-ಅಕ್ಷರ ಪುರುಷರು. ಜೀವನು ಕರ್ಮಫಲ ರೂಪವಾದ ಹಣ್ಣುಗಳನ್ನು ತಿನ್ನುತ್ತಿರುವನು. ಈಶ್ವರನು ತನಗೆ ಕರ್ಮಫಲ ಭೋಗವಿಲ್ಲದ್ದರಿಂದ ನೋಡುತ್ತ ಕುಳಿತಿರುವನು.

ಎಲ್ಲವೂ ಈತನ ಮಹಿಮಾ ಎಂದು (ತಿಳಿಯುವನು, ಆಗ) ಅವನು ಶೋಕ ವಿಲ್ಲದವನಾಗುವನು.[1]

೩. ಯಾವಾಗ ಸಾಧಕನು ಚಿನ್ನದ ಬಣ್ಣದ, ಎಲ್ಲದಕ್ಕೂ ಕರ್ತನಾದ ಈಶನನ್ನು, ಆ ಪುರುಷನನ್ನು, ಎಲ್ಲದಕ್ಕೂ ಕಾರಣವಾದ ಬ್ರಹ್ಮವನ್ನು ಕಾಣುವನೋ, ಆಗ ಅವನು ವಿದ್ವಾಂಸನಾಗುವನು. ಪುಣ್ಯಪಾಪಗಳು ಎರಡನ್ನೂ ಬಿಡುವನು. ನಿರಂಜನ (ಯಾವದರ ಸೋಂಕೂ ಇಲ್ಲದವ) ನನ್ನು, ಪರಮನನ್ನು, (ಹೆಚ್ಚು ಕಡಿಮೆಗಳಿಲ್ಲದೆ) ತಾನೇ ತಾನಾಗಿರುವವನನ್ನು ಪಡೆಯುವನು.

೪. ಎಲ್ಲ ಪ್ರಾಣಿಗಳಲ್ಲಿಯೂ ಇದ್ದುಕೊಂಡಿರುವವನು ಪ್ರಾಣನು. ಅದನ್ನು ತಿಳಿದವನು ವಿದ್ವಾಂಸನು. ಆತನು (ಎಲ್ಲವೂ ಪ್ರಾಣವೇ ಎಂದರೆ) ಅದು ಅತಿವಾದವಲ್ಲ.[2] ಆ ವಿದ್ವಾಂಸನು ಆತ್ಮಕ್ರೀಡನು (ಎಂದರೆ ಆತನಿಗೆ ಸಂತೋಷವಾಗಿರಲು ಬಾಹ್ಯಸಾಧನಗಳು ಬೇಕಿಲ್ಲ) ಆತನು ಆತ್ಮರತಿಯು (ಸುಖವಾಗಿರಲು ಆತನಿಗೆ ಮತ್ತೊಂದರ ಮೇಲೆ ಅಭಿಮಾನ ಪ್ರೀತಿಗಳೂ ಬೇಕಿಲ್ಲ.) ಆತನು (ಜ್ಞಾನಧ್ಯಾನ ವೈರಾಗ್ಯಾದಿ) ಕ್ರಿಯೆಗಳಿಂದ ಕೂಡಿದವನು. ಇಂಥವನು ಬ್ರಹ್ಮವೇತ್ತರಲ್ಲಿ ವರಿಷ್ಠನು.

೫. ಈ ಆತ್ಮನು (ಬ್ರಹ್ಮವು) ಸತ್ಯದಿಂದಲೂ, ತಪಸ್ಸಿನಿಂದಲೂ, ಸಮ್ಯಗ್ಜ್ಞಾನದಿಂದಲೂ, ನಿತ್ಯವಾದ ಬ್ರಹ್ಮಚರ್ಯದಿಂದಲೂ ಲಭಿಸುವನು.[3] ಆತನು ಶರೀರದಲ್ಲಿಯೇ ಇರುವನು. ಜ್ಯೋತಿರ್ಮಯನಾಗಿ,

---

1. (ಹೋಲಿಸಿ : ಕಠ ೨-೧೨. ಪುಟ ೧೪೯, ೨-೨೩ ಪುಟ ೧೯೨)

2. ಅತಿವಾದ ಎಂದರೆ ಬರುಡೆ ಮಾತು : ತಿಳಿದುದಕ್ಕಿಂತಲೂ ಹೆಚ್ಚು ಮಾತು.

3. (ಕಠ. ೨-೨೩ರಲ್ಲಿ '' ಈ ಆತ್ಮನು ಅಧ್ಯಯನ ಮೊದಲಾದವುಗಳಿಂದ ಸಿಕ್ಕುವನಲ್ಲ '' ಎಂದಿದೆ. ಹಾಗೆಯೇ ಗೀತೆಯಲ್ಲಿಯೂ ಅದೇ ಅಭಿಪ್ರಾಯ ಬಂದಿದೆ. ಇಲ್ಲಿ ಹೀಗೆ ಹೇಳಿದೆ. ಆದರೂ ಎರಡೂ ಒಂದೇ ಅಭಿಪ್ರಾಯ.)

ಶುಭ್ರವಾಗಿ ಇರುವನು. (ಆದರೆ) ಆತನನ್ನು ಪಾಪರಹಿತರೂ ಯತಿಗಳೂ ಆದವರು ಮಾತ್ರ ನೋಡುವರು.

೬. ಸತ್ಯ[1]ವೇ ಗೆಲ್ಲುವುದು: ಸುಳ್ಳಲ್ಲ. ಸತ್ಯದಿಂದ ದೇವಯಾನ ಮಾರ್ಗವು ತೆರೆಯುವುದು. ಆಪ್ತಕಾಮರು (ಕಾಮಗಳನ್ನು ಗೆದವರು), ಋಷಿಗಳು[2] (ಬ್ರಹ್ಮದರ್ಶನವನ್ನು ಪಡೆದವರು) ಆ ಮಾರ್ಗದಲ್ಲಿ ಹೋಗುವರು. ಆ ಮಾರ್ಗದಲ್ಲಿ ಹೋದವರು ಸತ್ಯದ ಪರಮ (ಶ್ರೇಷ್ಠ) ವಾದ ನಿಧಿಯೆಲ್ಲಿರುವುದೋ ಅಲ್ಲಿಗೆ ಹೋಗುವರು.

೭. ಆ ಆತ್ಮತತ್ತ್ವವು ಬೃಹತ್ (ಎಲ್ಲದಕ್ಕಿಂತ ದೊಡ್ಡದು). ಅದು ದಿವ್ಯವು (ಪ್ರಕಾಶಮಯವಾದುದು). ಅದರ ರೂಪವು ಇಂಥದು ಎಂದು ಚಿಂತಿಸಲೂ ಸಾಧ್ಯವಿಲ್ಲ. ಅದು ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾದರೂ (ಚೆನ್ನಾಗಿ ನಕ್ಷತ್ರದಂತೆ) ಹೊಳೆಯುವುದು. ಅದು ದೂರಕ್ಕಿಂತ ದೂರವೂ ಆಗಿರುವುದು: ಹಾಗೆಯೇ ಹತ್ತಿರಕ್ಕಿಂತ ಹತ್ತಿರವೂ ಆಗಿರುವುದು. ನೋಡುವವರಿಗೆ, ಇಲ್ಲಿಯೇ ಅವರವರ ಬುದ್ಧಿಯಲ್ಲಿಯೇ ಇದ್ದುಕೊಂಡು ದರ್ಶನಕೊಡುವುದು.

೮. ಅದನ್ನು ಕಣ್ಣಿನಿಂದ ನೋಡಲಾಗುವುದಿಲ್ಲ: ವಾಕ್ಕಿನಿಂದ ಹೇಳಲಾಗುವುದಿಲ್ಲ, ಮಿಕ್ಕ ಇಂದ್ರಿಯಗಳಿಂದಲಾಗಲಿ, ತಪಸ್ಸಿನಿಂದಾಗಲಿ, ಕರ್ಮದಿಂದಾಗಲಿ ಅದು ಸಿಕ್ಕುವುದಿಲ್ಲ. ಜ್ಞಾನವು ಪ್ರಸನ್ನ

---

1. ಸತ್ಯ ಎಂದರೆ ಸುಳ್ಳಾಡದಿರುವುದು. ತಪಸ್ಸು ಎಂದರೆ ಇಂದ್ರಿಯ ಮನೋ ಬುದ್ಧಿಗಳಲ್ಲಿ ಏಕಾಗ್ರತೆಯಿರುವುದು. ಅದರಿಂದ ಬ್ರಹ್ಮ ದರ್ಶನಕ್ಕೆ ಬಹಳ ಅನುಕೂಲವಾಗುವುದು. ಸಮ್ಯಗ್‌ಜ್ಞಾನವೆಂದರೆ ಆತ್ಮವಿಷಯವಾದ ನಿಸ್ಸಂಶಯ ಜ್ಞಾನವು. ಬ್ರಹ್ಮಚರ್ಯವೆಂದರೆ ಇಲ್ಲಿ ಸ್ತ್ರೀಸಂಗ ತ್ಯಾಗವು. ಸ್ತ್ರೀಯಲ್ಲಿ ಸೇರಿದರೆ ಪ್ರಾಣವು ಅಪಾನದಲ್ಲಿ ಹೋಮವಾಗುವುದು: ತೇಜಸ್ಸು ಕಡಿಮೆಯಾಗುವುದು: ತಪಸ್ಸು ಕಷ್ಟಸಾಧ್ಯವಾಗುವುದು. ಕಠದಲ್ಲಿ "ಭೋಗವು ಇಂದ್ರಿಯಗಳ ತೇಜಸ್ಸನ್ನು ಅಪಹಾರ ಮಾಡುವುದು" ಎಂದು ಹೇಳಿರುವುದನ್ನು ನೋಡಿ.

2. ಋಷಿ: ಅಂತಃಕರಣದಲ್ಲಿರುವ ಪಾಪವನ್ನು ಕಳೆದುಕೊಂಡವನು. ಜೀವನಿಗೂ ಆತ್ಮತತ್ತ್ವಕ್ಕೂ ನಡುವೆ ಪಾಪದ ಗೋಡೆಯಿದೆ. ಆ ಗೋಡೆಯನ್ನು ಕೆಡವಿದರೆ ಸಾಕು. ಒಳಗಿರುವ ಆತ್ಮತತ್ತ್ವವು ಬೋಧವಾಗುವುದು.

ವಾದರೆ, ಅಂತಃಕರಣವು ಶುದ್ಧವಾಗಿ, ನಿಷ್ಕಲಧ್ಯಾನವು ಲಭಿಸಿ, (ಪೂರ್ಣವಾಗಿರುವ) ಆ ಆತ್ಮನನ್ನು ತೋರಿಸುವುದು.

೯. ಈ ಆತ್ಮನು ಬಹು ಸೂಕ್ಷ್ಮನು. (ಕೇವಲ ಶುದ್ಧವಾದ) ಮನಸ್ಸಿನಿಂದ ಮಾತ್ರ ತಿಳಿಯಬೇಕಾದವನು. (ಆ ಮನಸ್ಸನ್ನೇ ಪ್ರೇರಿಸುತ್ತ) ಶರೀರದಲ್ಲಿ ಐದು ಭಾಗವಾಗಿ ನಿಂತು ಕೆಲಸಮಾಡುವ ಆ ಪ್ರಾಣವೂ ಆತನಲ್ಲಿ ಲಯವಾಗುವುದು. ಆ ಪ್ರಾಣಗಳಿಂದ ಪ್ರತಿಯೊಬ್ಬರ ಚಿತ್ತವೂ ಆಗಿರುವುದು. ಆ ಚಿತ್ತವು ವಿಶುದ್ಧವಾದರೆ, ಆಗ ಆ ಆತ್ಮನನ್ನು ಕಾಣುವುದು.[1]

೧೦. ವಿಶುದ್ಧವಾದ ಅಂತಃಕರಣವುಳ್ಳವನು[2], (ಆ ಆತ್ಮನನ್ನು ಕಂಡವನು) ಯಾವ ಯಾವ ಲೋಕವನ್ನು ಮನಸ್ಸಿನಿಂದ ಚಿಂತಿಸುವನೋ, ಯಾವ ಯಾವ ಕಾಮವನ್ನು ಕುರಿಯುವನೋ, ಆಯಾ ಲೋಕಗಳನ್ನು, ಆಯಾ ಕಾಮಗಳನ್ನು, ಹೊಂದುವನು. ಆದರಿಂದ ಭೂತಿಕಾಮನು (ತನಗೆ ಒಳ್ಳೆಯದಾಗಬೇಕು ಎಂದಿರುವವನು) ಆತ್ಮಜ್ಞನನ್ನು ಅರ್ಚಿಸಬೇಕು.[3]

ಮೊದಲನೆಯ ಖಂಡವು.

ಖಂಡ ಎರಡು.

೧. ಈ ಪರಮವಾದ ಬ್ರಹ್ಮವು (ಎಲ್ಲದಕ್ಕೂ) ಆಶ್ರಯವು ಎಂಬುದನ್ನು ಆತ್ಮಜ್ಞನು ಕಾಣುವನು. ಈ ಎಲ್ಲವೂ ಅಲ್ಲಿಯೇ ಇರು

---

1. ಜ್ಞಾನವು ಯಾವಾಗಲೂ ಹೊರಗಿನ ಪದಾರ್ಥವನ್ನು ಕುರಿತುದು ಎಂದುಕೊಂಡಿರುವುದು ತಪ್ಪಬೇಕು: ಜ್ಞಾನವು ಅಂತರ್ಮುಖವಾಗಬೇಕು. ಆಗ ಅದು ಪ್ರಸನ್ನವಾಯಿತು: ಶುದ್ಧವಾಯಿತು.

2. ಅಂತಃಕರಣವು ಯಾವಾಗಲೂ ಬೇಕು ಬೇಡಗಳು ಎಂಬ ರಾಗ ದ್ವೇಷಗಳ ಆಟದ ಬಯಲು. ಆ ಬೇಕು ಬೇಡಗಳು ಸುಮ್ಮನಾಗುವುದೇ ಇಲ್ಲವಾಗುವುದೇ ಪಾಪರಾಹಿತ್ಯ. ಅದೇ ಅಂತಃಕರಣವು ಶುದ್ಧವಾಗುವಿಕೆ.

3. ಆತ್ಮಜ್ಞನಿಗೆ ಕಾಮಗಳಿಲ್ಲ: ಲೋಕಗಳು ಬೇಕಿಲ್ಲ. ಆದರೂ ಈ ಮಾತೇಕೆ ಎಂದರೆ, ಅದು ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ಆಡಿದ ಮಾತು. ತೈ. ೨-೧ "ಅವನು ಸರ್ವ ಕಾಮಗಳನ್ನೂ ಪಡೆಯುವನು."

ವುದು. ಅಲ್ಲಿ ಅದು ಶುಭ್ರವಾಗಿ ಬೆಳಗುವುದು. ಯಾರು ಅಕಾಮರಾಗಿ ಈ ಪುರುಷನನ್ನು ಉಪಾಸನ ಮಾಡುವರೋ, ಅವರು ಶುಕ್ರ[1]ವನ್ನು ದಾಟುವರು: ಧೀರರಾಗುವರು.

೨. ಆತ್ಮವನ್ನು ತಿಳಿಯದವನು ಕಾಮಗಳನ್ನು ಕಾಮಿಸುವನು: ಅಂಥವನು ಆಯಾ ಕಾಮಗಳನ್ನು ಅನುಭವಿಸಲು, ಎಲ್ಲೆಲ್ಲೋ ಆ ಕಾಮಗಳೊಡನೆ ಹುಟ್ಟುವನು. (ಆದರೆ) ಆತ್ಮವನ್ನು ಬಲ್ಲವನು ಪರ್ಯಾಪ್ತಕಾಯನು[2]: (ಎಲ್ಲ ಕಾಮಗಳನ್ನೂ ಗೆದ್ದವನು): ಆತನಿಗೆ ಇದ್ದಲ್ಲಿಯೇ ಸರ್ವಕಾಮಗಳೂ ಕರಗಿಹೋಗುವುವು.

---

1. ಶುಕ್ರ ಎನ್ನುವುದು ಪುರುಷನಲ್ಲಿರುವ ಬೀಜ. ಸ್ತ್ರೀಯಲ್ಲಿರುವ ಶೋಣಿತವು ಯಾವಾಗಲೂ ದ್ರವವಾಗಿಯೇ ಇರುವುದು. ಶುಕ್ರವು ಸಾಮಾನ್ಯವಾಗಿ ದ್ರವವಾಗಿದ್ದರೂ ಅದನ್ನು ತಪಸ್ಸಿನಿಂದ ಗಟ್ಟಿಮಾಡಬಹುದು. ಹಾಗೆ ಘನವಾದಾಗ ಆ ಶುಕ್ರವು ಸುಣ್ಣದ ಕಲ್ಲಿನಂತೆ ಅರಳುವುದು. ಆಗ ಶುಕ್ರವೆಲ್ಲವೂ ತೇಜಸ್ಸಾಗುವುದು: ಆಗ ಮಾನವನು ಊರ್ಧ್ವರೇತನಾಗುವನು. ಆಗ ಕಾಮವನ್ನು ಗೆಲ್ಲುವನು.

ಶುಕ್ರವು ಆಹಾರ ದೋಷದಿಂದ ಕೆಡುವುದು: ಆಗ ತಾನಿರುವ ಸ್ಥಳದಲ್ಲಿ ಇರಲಾರದೆ ಹೊರಹೊರಡಲು ಯತ್ನಿಸುವುದು. ಆಗ ಮಾನವನಿಗೆ ರತಿಯಲ್ಲಿ ಆಶೆಯುಂಟಾಗುವುದು. ಶಕ್ತಿಹೀನರಿಗೆ ಸ್ವಪ್ನಸ್ಖಲನವಾಗುವುದು.

ಶುಕ್ರ-ಶೋಣಿತಗಳಿಂದಲೇ ಮಾನವರಲ್ಲಿ ಉತ್ತಮಾಧಮತೆಗಳು, ಅಕಾಮನಾಗಬೇಕೆಂದವನು ಮೊದಲು ಶುಕ್ರವನ್ನು ಪರಿಶುದ್ಧಿಗೊಳಿಸಿಕೊಳ್ಳಬೇಕು.

ಹೀಗೆ ಶುಕ್ರವನ್ನು ಗೆದ್ದವನು ಮತ್ತೆ ಜನ್ಮವನ್ನು ಪಡೆಯುವುದಿಲ್ಲ. (ಶಂ.)

2. ಆತ್ಮನು ಪೂರ್ಣನು: ಅದರಿಂದ ಆತ್ಮನನ್ನು ಪಡೆದಮೇಲೆ ಆತನಿಗೆ ಆತ್ಮವಲ್ಲದ ಇನ್ನೇನು ಬೇಕಿಲ್ಲವಾಗಿ, ಇರುವುದೆಲ್ಲ ಆತ್ಮವೇ ಆಗಿರುವುದರಿಂದ, ಕಾಮಗಳಿಗೆ ವಿಷಯವೇ ಇಲ್ಲವಾಗಿ, ಅವೆಲ್ಲ ಜೀರ್ಣವಾಗಿ ಹೋಗುವುವು.

ಗೀತಾ—ಅಧ್ಯಾಯ ೧೫—ಶ್ಲೋಕ ೫ ರಲ್ಲಿ ಬರುವ ವಿನಿವ ತ ಕಾಮ ಎಂಬ ಅರ್ಥವನ್ನು ಚಿಂತಿಸಿ.

೩. ಈ ಆತ್ಮನು ಪ್ರವಚನ[1] ಗಳಿಗೆ ಸಿಕ್ಕುವುದಿಲ್ಲ: ಮೇಧಾ[2] (ಬುದ್ಧಿ) ಶಕ್ತಿಯಿಂದ, ಬಹುವಾಗಿ ಕೇಳಿದುದರಿಂದ[3] ಸಿಕ್ಕುವುದಿಲ್ಲ. ಆತ್ಮನು ತಾನು ಯಾರಿಗೆ ಒಲಿಯುವನೋ ಆತನಿಗೆ ದೊರೆಯುವನು: ಆತನಿಗೆ ಈ ಆತ್ಮನು ತನ್ನ ಸ್ವರೂಪವನ್ನು ವಿಸ್ತಾರವಾಗಿ ತೋರಿಸುವನು.

೪. ಈ ಆತ್ಮನು ಬಲಹೀನರಿಗೆ ಸಿಕ್ಕುವನಲ್ಲ: (ಲೋಕದಲ್ಲಿ ಏನೋ ಮಾಡುವುದಕ್ಕೆ ಹೋದರೆ ಏನೋ ಆಗುವಂತೆ) ಪ್ರಮಾದವಾಗಿ ಸಿಕ್ಕುವನಲ್ಲ: ಗುರಿಯಿಲ್ಲದ ತಪಸ್ಸಿನಿಂದಲೂ ಸಿಕ್ಕುವುದಿಲ್ಲ. ತಿಳಿದವನು ಈ ಎಲ್ಲ ಉಪಾಯಗಳಿಂದಲೂ ಆತ್ಮನನ್ನು ಪಡೆಯಲು ಯತ್ನಿಸಬೇಕು. ಅಂಥವನ ಆತ್ಮವು ಬ್ರಹ್ಮಧಾಮವನ್ನು ಪಡೆಯುವುದು.[4]

೫. ಈ ಆತ್ಮನನ್ನು ಋಷಿಗಳು (ಕ್ಷೀಣಕಲ್ಮಷರು) ಪಡೆಯುವರು. ಆ ಆತ್ಮಜ್ಞಾನದಿಂದ ತೃಪ್ತರಾಗುವರು (ಅವರಿಗೆ ಇನ್ನೇನೂ ಬೇಕಾಗುವುದಿಲ್ಲ.) ಅವರು ಕೃತಾತ್ಮರು (ಏನನ್ನು ಪಡೆಯಬೇಕೋ ಅದನ್ನು ಪಡೆದವರು) ಆಗುವರು. ವೀತರಾಗ (ರಾಗವೆಂದರೆ ವಿಷಯಗಳು ಬೇಕು ಎನ್ನುವ ಅಂತಃಕರಣ ಪ್ರವೃತ್ತಿ: ಅದಿಲ್ಲದವರು ಆಗುವರು.) ಪ್ರಶಾಂತರಾಗುವರು. (ಅವರ ಅಂತಃಕರಣದಲ್ಲಿ ಯಾವುದರಿಂದಲೂ ಏನೂ ವಿಕ್ಷೋಭವಾಗುವುದಿಲ್ಲ.) ಅವರು ಸರ್ವದರಲ್ಲಿಯೂ ಇರುವ (ಆತ್ಮ) ನನ್ನು ಎಲ್ಲೆಲ್ಲಿಯೂ ಪಡೆದು ಧೀರರಾದ

---

1. ಪ್ರವಚನವು ಬುದ್ಧಿಯಿಂದ ಹೊರಹೊರಟ ವಾಕ್ಕು.

2. ಮೇಧಾ ಎನ್ನುವುದು ಬುದ್ಧಿಯ ಶಕ್ತಿ.

3. ಬಹುಶ್ರುತವೆನ್ನುವುದು ಬುದ್ಧಿಯ ಸಂಪಾದನ. ಇವುಗಳಿಂದ ಬುದ್ಧಿಯ ಆಚೆ ಇರುವವನನ್ನು ಹಿಡಿಯಲು ಆದೀತೆ? ಅದರಿಂದ ಆತ್ಮಪ್ರಸಾದವನ್ನು ಪಡೆಯಬೇಕು. ಆಗ ಆತ್ಮನು ದೊರೆಯುವನು.

4. ಬಲ: ಆತ್ಮನಿಷ್ಠಾಜನಿತ ವೀರ್ಯ. ಪ್ರಮಾದ: ಹೆಚ್ಚಾಗಿ ಮೈಮರೆಯುವಂತೆ ಮಾಡುವ ಸಂಸಾರ.

ಆತ್ಮ ಪ್ರಾರ್ಥನಾ ಸಹಾಯಕಗಳು ಬಲ, ಅಪ್ರಮಾದ, ಲಿಂಗಯುಕ್ತ ತಪಸ್ಸು (ಸನ್ಯಾಸ) ಇವು ಎಂದು ಅವುಗಳನ್ನು ಕುರಿತು ಹೇಳಿದೆ.—ಶಂಕರರು.

ವರು: ಯುಕ್ತಾತ್ಮರು (ಆತ್ಮನಾಗಿ ಹೋದವರು) ಅವರು ಸರ್ವದ ರಲ್ಲಿಯೂ ಇರುವರು.

೬. ವೇದಾಂತವು ಹೇಳುವ ವಿಜ್ಞಾನವನ್ನು ಸರಿಯಾಗಿ ತಿಳಿದವರು ಅವರು: ಸಂನ್ಯಾಸವನ್ನು ಮಾಡಿದವರು: ಯತಿಗಳು: ಶುದ್ಧಾಂತಃಕರಣವುಳ್ಳವರು: ಅವರು (ಇರುವವರೆಗೂ) ಬ್ರಹ್ಮಲೋಕ[1] ಗಳಲ್ಲಿ (ಇದ್ದು) ಪ್ರಲಯಕಾಲದಲ್ಲಿ ಅಮೃತವನ್ನು ಪಡೆದವರಾಗಿ ಮುಕ್ತ ರಾಗುವರು.

(ಮುಕ್ತಿ[3]ಯೆಂದರೇನು ಎಂಬುದನ್ನು ಹೇಳುತ್ತಾರೆ :)

೭. (ದೇಹವನ್ನು ಆರಂಭಿಸುವ) ಹದಿನೈದು ಕಲೆಗಳು[4] ಅವವು ಗಳ ಕಾರಣವನ್ನು ಸೇರುವುವು. (ಅಂಗಾಂಗಗಳಲ್ಲಿರುವ) ದೇವತೆ ಗಳೆಲ್ಲರೂ ಬ್ರಹ್ಮಾಂಡದಲ್ಲಿರುವ ದೇವತೆಗಳನ್ನು ಸೇರುವರು : ಮುಕ್ತರ ಕರ್ಮಗಳೆಲ್ಲವೂ[5] ಕ್ಷಯವಾಗುವುವು. ವಿಜ್ಞಾನಮಯನಾದ ಅವರ ಆತ್ಮನು (ಜೀವನು) ಅವ್ಯಯವಾದ ಪರದಲ್ಲಿ ಐಕ್ಯನಾಗುವನು.

---

1. ಬ್ರಹ್ಮಲೋಕವು ಬಹು ಪರಿಶುದ್ಧವಾದುದು. ಅಲ್ಲಿ ಬ್ರಹ್ಮವು ನೆರಳು ಬಿಸಿಲುಗಳ ಹಾಗೆ ಪ್ರತ್ಯೇಕವಾಗಿ ಕಾಣುವುದು. (ಕಠ_ವಲ್ಲಿ ೬-೫ ಪುಟ ೨೦೪ ನೋಡಿ.)

ಬ್ರಹ್ಮಲೋಕಗಳು : ಒಂದೇ ಆಗಿದ್ದರೂ ನಾನಾ ಆಗಿ ಕಾಣುವುದು ಎಂದು ಇಲ್ಲಿ ಬಹುವಚನ: ಪರಾಮೃತಾಃ—ಬದುಕಿರುವಾಗಲೇ ಬ್ರಹ್ಮ ಭೂತ ರಾದವರು—ಮುಕ್ತರಾಗುವರು ಎಂದರೆ ಎಲ್ಲಿಯೋ ಎಂದಲ್ಲ: ಇದ್ದಲ್ಲಿಯೇ ಮುಕ್ತರಾಗುವರು. (ಶಂಕರರು).

2. ಬ್ರಹ್ಮಸೂತ್ರದಲ್ಲ ಯಾವದಧಿಕಾರಾಧಿಕಾರಣ ನೋಡಿ.

3. ಮುಕ್ತಿಯೆಂದರೆ ಯಾವುದೋ ಕಾಲದಲ್ಲಿ, ಯಾವುದೋ ದೇಶದಲ್ಲಿ ಎಂದಲ್ಲ. ಕಾಲದೇಶಗಳೆರಡೂ ಒಂದೇ ಹೊರತು ಬೇರೆಯಲ್ಲ. ಜೀವನ್ಮುಕ್ತರು ಸದ್ಯೋಮುಕ್ತಿಯನ್ನೂ ಪಡೆಯಬಲ್ಲರು. ಆದರೂ ಪರಮಾತ್ಮನ ನಿಯಮದಂತೆ ನಡೆಯುವುದೇ ಅವರಿಗೆ ಆನಂದ. ಅದರಿಂದ ಯತಿಗಳಾದವರು ಬ್ರಹ್ಮಾನಂದ ಸಂಪನ್ನರಾಗಿ ಇರುವರು. ಅವರಿದ್ದಲ್ಲಿಯೇ ಬ್ರಹ್ಮಲೋಕವೆಂದು, ಬ್ರಹ್ಮಲೋಕ ಗಳು ಎಂದು ಹೇಳಿರುವುದು.

4. ದೇಹವನ್ನು ಆರಂಭಿಸುವ ಕಲೆಗಳನ್ನು ಪ್ರಶ್ನೋಪನಿಷತ್ತಿನ ಆರ ನೆಯ ಅಧ್ಯಾಯದಲ್ಲ ಹೇಳಿದೆ. ಪುಟ ೧೧೮ ನೋಡಿ.

5. ಕರ್ಮಗಳಲ್ಲಿ ಪಾಕವಾಗಿ ಫಲಾಭಿಮುಖವಾದವು ಕೆಲವು: ಫಲಾಭಿ ಮುಖವಾಗದವು ಕೆಲವು. ಫಲಾಭಿಮುಖವಾಗದ ಕರ್ಮಗಳು ಫಲಾಭಿಮುಖ ವಾದವಲ್ಲಿ ಸೇರಿಹೋಗಿ ಕ್ಷಯವಾಗುವುವು. (ಶಂಕರರು).

೮. ನದಿಗಳು ಹರಿಯುತ್ತ ಹೋಗಿ ಸಮುದ್ರವನ್ನು ಸೇರಿ, ಅಲ್ಲಿ ತಮ್ಮ ಹೆಸರು, ರೂಪಗಳನ್ನು ಬಿಟ್ಟು ಒಂದಾಗುವವಲ್ಲವೆ? ಅದರಂತೆ, ಆತ್ಮಜ್ಞಾನಿಯು ತನ್ನ ಪ್ರತ್ಯೇಕ ನಾಮ ರೂಪಗಳನ್ನು ಬಿಟ್ಟು, ಪರಾತ್ಪರನಾದ ದಿವ್ಯಪುರುಷನನ್ನು ಸೇರುವನು.

೯. ಯಾವನು ಪರಮವಾದ ಬ್ರಹ್ಮವನ್ನು ತಿಳಿಯುವನೋ ಅವನು ತಪ್ಪದೆ ಬ್ರಹ್ಮವೇ ಆಗುವನು. (ಅಷ್ಟೇ ಅಲ್ಲ:) ಅವನ ಕುಲದಲ್ಲಿ ಅಬ್ರಹ್ಮವಿತ್ ಆದವನು ಹುಟ್ಟುವುದಿಲ್ಲ: (ಅವನ ಕುಲದಲ್ಲಿ ಹುಟ್ಟಿದವರೂ ಬ್ರಹ್ಮಜ್ಞರಾಗುವರು.) ಬ್ರಹ್ಮಜ್ಞನು ಶೋಕವನ್ನು ದಾಟುವನು: ಪಾಪವನ್ನು ದಾಟುವನು. ಗುಹಾಗ್ರಂಥಿಗಳು (ಅವಿದ್ಯಾಗ್ರಂಥಿಗಳು: ಹಿಂದೆ ಹೃದಯಗ್ರಂಥಿ ಎಂದು ಹೇಳಿತ್ತು) ಬಿಚ್ಚಿ ಹೋಗುವುವು: ಆತನು ಅಮೃತನಾಗುವನು.

ಇದನ್ನು ಋಕ್ಕು ಕೂಡ ಹೇಳಿದೆ.

೧೦. ಕ್ರಿಯಾವಂತರಾಗಿ, ಶ್ರೋತ್ರಿಯರಾಗಿ, ಬ್ರಹ್ಮನಿಷ್ಠರಾಗಿ, ಶ್ರದ್ಧೆಯಿಂದ, ಏಕರ್ಷಿಯೆಂಬ ಹೆಸರಿನ ಅಗ್ನಿಯನ್ನು ತಾವೇ ಹೋಮದಿಂದ ಆರಾಧಿಸುವವರು ಯಾರೋ ಅವರಿಗೆ, ಯಾರು ಶಿರೋವ್ರತವನ್ನು ವಿಧಿವತ್ತಾಗಿ ಆಚರಿಸಿರುವರೋ ಅವರಿಗೆ ಮಾತ್ರ ಈ ಬ್ರಹ್ಮವಿದ್ಯೆಯನ್ನು ಹೇಳತಕ್ಕುದು.

೧೧. ಇದು ಸತ್ಯವು. ಇದು ಅಂಗಿರನು ಹೇಳಿದುದು. ಇದನ್ನು ವ್ರತವನ್ನು ಮಾಡದವನು ಓದಬಾರದು.

ಪರಮ ಋಷಿಗಳಿಗೆ ನಮಸ್ಕಾರವು. ಪರಮ ಋಷಿಗಳಿಗೆ ನಮಸ್ಕಾರವು.

ಇಂತಿದು ಎರಡನೆಯ ಖಂಡವು—ಎರಡನೆಯ ಅಧ್ಯಾಯವು.

ಭದ್ರಂ ಕರ್ಣೇಭಿಃ ಎಂಬ ಶಾಂತಿ ಮಂತ್ರವು.

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

ಇಂತಿದು ಮುಂಡಕವು.

೮. ಕಠೋಪನಿಷತ್ತು

ಇದು ಯಜುರ್ವೇದಕ್ಕೆ ಸೇರಿದ ಉಪನಿಷತ್ತು. ಈಗಿನ ಬೆಲೂಚೀಸ್ಥಾನದಲ್ಲಿ ಹಿಂದೆ ಕಾಠಕರೆಂಬ ಜನರಿದ್ದರೆಂದೂ ಈ ಉಪನಿಷತ್ತು ಅವರಲ್ಲಿ ಪ್ರಚಾರದಲ್ಲಿದ್ದುದೆಂದೂ ಹೇಳುತ್ತಾರೆ.

ಉಪನಿಷತ್ತುಗಳಲ್ಲೆಲ್ಲಾ ಇದಕ್ಕೆ ಅಗ್ರಸ್ಥಾನವೆಂದು ನಮ್ಮ ಮತ. ಇದು ಬಹು ಪುರಾತನವೂ ರಹಸ್ಯವೂ ಆದುದು. (ಪುಟ ೧೯೨ ನೋಡಿ) ಈ ಲೋಕದ ನಚಿಕೇತನು ಲೋಕಾಂತರಕ್ಕೆ ಹೋಗಿ, ಸಾಕ್ಷಾನ್ಮೃತ್ಯುವನ್ನು ಆಶ್ರಯಿಸಿ, ಸ್ವರ್ಗಲೋಕಕ್ಕೆ ಹೋಗಿ ಬರುವ ಅಗ್ನಿ ವಿದ್ಯೆಯನ್ನೂ, ಸ್ವರ್ಗದಿಂದ ಆಚೆ ಇರುವ ಬ್ರಹ್ಮವನ್ನು ಪಡೆಯುವ ಆತ್ಮವಿದ್ಯೆಯನ್ನೂ ಯೋಗವನ್ನೂ ಪಡೆಯುತ್ತಾನೆ. ಹೀಗೆ ಸ್ವರ್ಗ, ಬ್ರಹ್ಮ, ಎರಡನ್ನೂ ಪ್ರತ್ಯಕ್ಷವಾಗಿ ಹೇಳುವ ಉಪನಿಷತ್ತುಗಳೂ ಇವೆಯಾದರೂ ಇದರಲ್ಲಿ ಹೇಳಿರುವಷ್ಟು ಸೊಗಸಾಗಿ ಸುಲಭವಾಗಿ ಇನ್ನೆಲ್ಲೂ ಹೇಳಿಲ್ಲ.

ಇದರಲ್ಲಿ ಎರಡು ಅಧ್ಯಾಯಗಳೂ, ಆರು ವಲ್ಲಿಗಳೂ ನೂರಿಪ್ಪತ್ತು ಮಂತ್ರಗಳೂ ಇವೆ.

ಓಂ. ಭಗವಂತನೂ ವೈವಸ್ವತನೂ ಆದ ಮೃತ್ಯುವಿಗೂ, ಬ್ರಹ್ಮ ವಿದ್ಯಾಚಾರ್ಯನಾದ ನಚಿಕೇತನಿಗೂ ನಮಸ್ಕಾರಗಳು.

[ಸಹನಾವವತು ಎಂಬುದು ಶಾಂತಿಮಂತ್ರ.]

ಉಪನಿಷತ್ತು.

೧. ಓಂ. ಕಾಮಗಳನ್ನುಳ್ಳ ವಾಜಶ್ರವಸನು (ತನ್ನಲ್ಲಿದ್ದ ಸರ್ವಸ್ವವನ್ನೂ) ದಾನಮಾಡಬೇಕಾದ ವಿಶ್ವಜಿತ್ತು ಎಂಬ ಯಜ್ಞವನ್ನು ಮಾಡಿದನು. ಆತನಿಗೆ ನಚಿಕೇತಸ್ ಎಂಬ ಮಗನಿದ್ದನು.

೨. (ಆ ನಚಿಕೇತನು ಇನ್ನೂ ಚಿಕ್ಕವನು. ಆದರೂ) ದಕ್ಷಿಣೆಗಳನ್ನು ಎಲ್ಲರೂ ತೆಗೆದುಕೊಂಡು ಹೋಗುತ್ತಿರುವಾಗ ಶ್ರದ್ಧೆ[1]ಯು ಅವನನ್ನು ಪ್ರವೇಶಿಸಿತು : (ಆಗ ಅವನು ಚಿಂತಿಸಿದನು).

೩. (ತನ್ನಲ್ಲಿದ್ದುದನ್ನೆಲ್ಲಾ ಕೊಡುವುದಾಗಿ ಸಂಕಲ್ಪಿಸಿರುವ ವಾಜಶ್ರವಸನು ಎಲ್ಲವನ್ನೂ ಕೊಟ್ಟು, ತನ್ನಲ್ಲಿದ್ದ ಹಳೆಯ ಹಸುಗಳನ್ನೂ ದಾನವಾಗಿ ಕೊಡುತ್ತಾನೆ. ಆ ಹಳೆಯ ಹಸುಗಳು) ನಿರಿಂದ್ರಿಯಗಳು (ಕಣ್ಣು ಕಾಲು ಮೊದಲಾದವೂ ಇಲ್ಲದವು.) (ಅದರಿಂದ) ಪೀತೋದಕಗಳು (ನೀರನ್ನು ಇನ್ನು ಮುಂದೆ ಕುಡಿಯುವಂತಿಲ್ಲ). ಜಗ್ಧತೃಣಗಳು (ಇನ್ನು ಮುಂದೆ ಹುಲ್ಲು ತಿನ್ನುವಂತಿಲ್ಲ). ದುಗ್ಧದೋಹಗಳು (ಹಾಲು ಕರೆಯುವುದಂತೂ ಇಲ್ಲವೇ ಇಲ್ಲ) : ಇಂತಹ ದನಗಳನ್ನು ದಾನವಾಗಿ ಕೊಟ್ಟರೆ, ಅನಂದಾ (ಆನಂದರಹಿತಗಳು) ಎಂಬ ಹೆಸರಿನ ಲೋಕಗಳುಂಟಲ್ಲಾ, ಅವನ್ನು ಪಡೆಯುವನು.

೪. (ಇಂತಹವುಗಳನ್ನು ದಾನವಾಗಿ ಕೊಡುವನು ಎಂದ ಮೇಲೆ ತನ್ನಲ್ಲಿರುವುದನ್ನೆಲ್ಲಾ ಕೊಡುವನೆ ? ಹಾಗಾದರೆ ತಾನೂ ಆತನಿಗೆ ಸೇರಿದವನು. ಮಗನು ತಂದೆಯ ಆಸ್ತಿಯು ತಾನೇ ? ಹಾಗಾದರೆ, ನನ್ನನ್ನೂ ಕೊಡುವನೆ ? ಎನ್ನಿಸಿತು. ತಾನಾಗಿ ಏಷ್ಟು

---

1. ಶ್ರದ್ಧಾ—ಆಸ್ತಿಕ್ಯಬುದ್ಧಿ. ಯಾವುದರಿಂದ ಸರ್ವಪುರುಷಾರ್ಥ ಸಾಧನಗಳನ್ನೂ ಉಪಯೋಗಿಸಲು ಬೇಕಾದ ಚಿತ್ತಪ್ರಸಾದವು ಲಭಿಸುವುದೋ ಆ ಆಸ್ತಿಕ್ಯಬುದ್ಧಿ. ಧರ್ಮ, ಅರ್ಥ, ಕಾಮ, ಮೋಕ್ಷಗಳು ನಾಲ್ಕು ಪುರುಷಾರ್ಥಗಳು. ಎರಡು ಮೂರನೆಯ ಅರ್ಥಕಾಮಗಳು ಪ್ರೇಯಸ್ಸು. ಮೊದಲನೆಯ ಕೊನೆಯವು ಶ್ರೇಯಸ್ಸು. ಪ್ರೇಯಸ್ಸಿನ ಕಡೆಗೆ ಬುದ್ಧಿಯು ಯಾರ ಪ್ರೇರಣೆಯೂ ಇಲ್ಲದೆ ಹಳ್ಳದ ಕಡೆಗೆ ಓಡುವ ನೀರಿನಂತೆ ಓಡುವುದು. ಶ್ರೇಯಸ್ಸಿನ ಕಡೆಗೆ ಹೋಗಬೇಕಾದರೆ ಬುದ್ಧಿಗೆ ವಿಶೇಷ ಸಾಮರ್ಥ್ಯವು ಬೇಕು. ಅಂತಹ ಬುದ್ಧಿಯ ವಿಶೇಷ ಸಾಮರ್ಥ್ಯಕ್ಕೆ ಶ್ರದ್ಧಾ ಎಂದು ಹೆಸರು.

ಶ್ರದ್ಧಾ ವಿಷಯವಾಗಿ ಋಗ್ವೇದ ದಶಮ ಮಂಡಲದಲ್ಲಿ ಒಂದು ಸೂಕ್ತವಿದೆ. (೧೫೧.).

ಚಿಂತಿಸಿದರೂ ಬಗೆ ಹರಿಯಲಿಲ್ಲ. ಅದಕ್ಕಾಗಿ ತಂದೆಯನ್ನು ಕೇಳಿದನು[1]) ಆತನು ತಂದೆಯನ್ನು ಕುರಿತು "ನನ್ನನ್ನು ಯಾರಿಗೆ ಕೊಡುವೆ?" ಎಂದು ಕೇಳಿದನು. (ತಂದೆಯು ಉತ್ತರವನ್ನು ಕೊಡಲಿಲ್ಲ. ಅದರಿಂದ) ಎರಡನೆಯ ಸಲ, ಮೂರನೆಯ ಸಲವೂ ಕೇಳಿದನು. ತಂದೆಯು "ನಿನ್ನನ್ನು ಮೃತ್ಯುವಿಗೆ ಕೊಡುವೆನು" ಎಂದನು.[2]

೫. (ಮೃತ್ಯುವು, ವೈವಸ್ವತನು, ಬ್ರಹ್ಮವಿದ್ಯಾಚಾರ್ಯನೆಂದು ಪ್ರಸಿದ್ಧಿಯಾಗಿತ್ತು. ಅದರಿಂದ, ತಂದೆಯು ತನ್ನನ್ನು ಆ ಬ್ರಹ್ಮವಿದ್ಯಾಚಾರ್ಯನಿಗೆ ಕೊಡುವನು ಎಂದು ಆ ಕುಮಾರನಿಗೆ ಎನ್ನಿಸಿತು. ಆಗ,)

(ನಾನು ಆಚಾರ್ಯನಲ್ಲಿ ಓದುವ) ಅನೇಕರಲ್ಲಿ ಮೊದಲನೆಯವನಾಗುವೆನು. (ಅಲ್ಲಿ ಹಾಗಾದರೆ ನನ್ನಷ್ಟು ಬುದ್ಧಿವಂತರು ಇಲ್ಲ ಎನ್ನುವುದಕ್ಕಾದೀತೆ? ಇರಲಾರದು. ಹಾಗಿದ್ದರೆ) ನಾನು ಅವರಲ್ಲಿ ಮಧ್ಯಮನಾದರೂ ಆಗುವೆನು. (ಅಧಮನಂತೂ ಆಗುವುದೇ ಇಲ್ಲ, ಎಂದುಕೊಂಡನು. ಇನ್ನೂ ಯೋಚಿಸಿದನು :) ಆ ಯಮನಿಗೆ ಬೇಕಾದ ಯಾವ ಕರ್ತವ್ಯವು, ನನ್ನಿಂದ ಆಗಬೇಕಾದುದು, ಇದ್ದೀತು?

೬. (ಆ ವೇಳೆಗೆ ತಂದೆಗೆ ತಾನು ಆಡಿದುದು ಸರಿಯಾಗಲಿಲ್ಲ ಎನ್ನಿಸಿತು. ಮಗನನ್ನು ಮೃತ್ಯುವಿಗೆ ಕೊಡುವೆನೆಂದೆನಲ್ಲಾ! ಯಜ್ಞದೀಕ್ಷಿತನಾದ ನನ್ನ ಮಾತು ಸುಳ್ಳಾಗುವುದಿಲ್ಲವಲ್ಲ! ಎನ್ನಿಸಿ ಬಹು ದುಃಖವಾಯಿತು. ಆ ದುಃಖದಿಂದ ಸಂಕಟಪಡುತ್ತಿರುವ ತಂದೆಯನ್ನು ನೋಡಿ ಮಗನು ಹೇಳುತ್ತಾನೆ). ನಿನ್ನ ಹಿಂದಿನವರು ಏನಾದರು ಎನ್ನುವುದನ್ನು ನೆನೆಸಿಕೊ. ಹಾಗೆಯೇ ಮುಂದಿನವರು ಏನಾಗಬೇಕು ಎಂಬುದನ್ನು ಪರ್ಯಾಲೋಚಿಸು. ಮನುಷ್ಯನು ಮರ್ತ್ಯನು (ಮರಣ

---

1. ಹೀಗೆ ಕ್ರತುವಿಗೆ ಅಸಂಪತ್ತಿಯನ್ನು ತರುವ, ತಂದೆಯ (ದಾನದ) ಅನಿಷ್ಟಫಲವನ್ನು ಸತ್ಪುತ್ರನಾದ ತಾನು ಆತ್ಮಪ್ರದಾನದಿಂದಲಾದರೂ ತಪ್ಪಿಸಿ ಕ್ರತುವು ಸಂಪನ್ನವಾಗುವಂತೆ ಮಾಡಬೇಕು ಎಂದು ಹೋಗಿ ತಂದೆಯನ್ನು ಕೇಳಿದನು. (ಶಂಕರರು).

2. ಹೀಗೆ ಕೇಳುವುದು ಕುಮಾರಸ್ವಭಾವವಲ್ಲ ಎಂದು ಕ್ರುದ್ಧನಾಗಿ ತಂದೆಯು ಮಗನನ್ನು ಮೃತ್ಯುವಿಗೆ ಕೊಡುವೆನು ಎಂದನು(ಶಂಕರರು).

ಧರ್ಮಿಯು. ಎಂದಾದರೂ ಒಂದು ದಿನ ಸಾಯಲೇ ಬೇಕಾದವನು.) ಸಸ್ಯದಂತೆ ತಾನಾಗಿ ಪಾಕವಾಗಿ ಹೋಗುವನು. ಮತ್ತೆ ಸಸ್ಯದಂತೆಯೇ ಹುಟ್ಟುವನು. (ಇದಕ್ಕಾಗಿ ಅಳುವುದೇಕೆ ? ಎಂದು, ಆ ವೇಳೆಗೆ ಬಂದ ಮೃತ್ಯುವಿನ ದೂತರೊಡನೆ ಹೊರಟು ಹೋದನು.)

೭. (ವೈವಸ್ವತನು ಶಿಷ್ಯಭಾವದಿಂದ ತನ್ನಲ್ಲಿಗೆ ಬಂದ ನಚಿಕೇತಸ್ಸನ್ನು ಪರೀಕ್ಷಿಸಿದನು.[1] ಮೂರು ರಾತ್ರಿಗಳು ಆ ವೈವಸ್ವತ ಮಂದಿರದಲ್ಲಿ ಆತನನ್ನು ಯಾರು ಏನು ಎಂದು ಯಾರೂ ಕೇಳಲಿಲ್ಲ. ಆತನು ಇನ್ನೂ ಎಷ್ಟುದಿನ ಪರೀಕ್ಷಿಸಬೇಕು ಎಂದಿದ್ದನೋ ? ಅಷ್ಟರೊಳಗಾಗಿ ಆಕಾಶವಾಣಿಯು ನುಡಿಯಿತು.) ಬ್ರಾಹ್ಮಣನು ಅತಿಥಿಯಾಗಿ ಬಂದಾಗ ವೈಶ್ವಾನರನು ಮನೆಯನ್ನು ಪ್ರವೇಶಿಸುವನು. ಅದರಿಂದ ಅತಿಥಿಗೆ (ಶಾಸ್ತ್ರೋಕ್ತವಾದ) ಶಾಂತಿಯನ್ನು ಮಾಡುವರು. (ಅದರಿಂದ) ವೈವಸ್ವತ, ಈತನಿಗೆ (ಅರ್ಘ್ಯಪಾದ್ಯಾದಿಗಳಿಗಾಗಿ) ನೀರನ್ನು ಕೊಡು.

೮. (ನೀನು ಶಾಂತ್ಯರ್ಥವಾಗಿ ಉದಕವನ್ನು ಕೊಡದಿದ್ದರೆ ಏನಾಗುವುದು ಬಲ್ಲೆಯಾ ? ಕೇಳು)

ಮಂದಬುದ್ಧಿಯಾದ ಯಾವನಾದರೂ ಪುರುಷನ ಮನೆಯಲ್ಲಿ ಬ್ರಾಹ್ಮಣನು ಊಟ ಮಾಡದೆ ಇದ್ದುದೇ ಆದರೆ, (ಆ ಬ್ರಾಹ್ಮಣನು ಆ ಯಜಮಾನನ) ಆಶೆ, ಪ್ರತೀಕ್ಷೆ, ಸಂಗತ, ಸೂನೃತ, ಇಷ್ಟಾಪೂರ್ತಗಳು, ಸರ್ವಪುತ್ರಪಶುಗಳು, ಇವೆಲ್ಲವನ್ನೂ ತಿಂದು ಹಾಕುವನು.[2] (ಇವೆಲ್ಲವೂ ನಾಶವಾಗುವುವು.)

---

1. ಜನಕರಾಜನು ಶುಕಾಚಾರ್ಯನನ್ನು ಪರೀಕ್ಷಿಸಿದುದನ್ನು ಸ್ಮರಿಸಿ. ನಚಿಕೇತನು ಬಂದಾಗ ಯಮನು ಮನೆಯಲ್ಲಿ ಇರಲಿಲ್ಲ.(ಶಂಕರರು).
2. ಆಶೆ : ನಿಖರವಾಗಿ ಗೊತ್ತಿಲ್ಲದುದನ್ನು ಕುರಿತ ಬಯಕೆ.
   ಪ್ರತೀಕ್ಷೆ : ಗೊತ್ತಿರುವುದನ್ನು ಕುರಿತ ಬಯಕೆ.
   ಸಂಗತ : ಆಶಾಪ್ರತೀಕ್ಷೆಗಳು ಫಲಿಸಿದ ಮೇಲೆ ಆಗುವ ಕಾರ್ಯ.
   ಸೂನೃತ : ಪ್ರಿಯವಾಕ್ಯ.
   ಇಷ್ಟ : ಯಜ್ಞಯಾಗಾದಿಗಳು.
   ಪೂರ್ತ : ತಟಾಕ-ಉದ್ಯಾನ ಇವುಗಳನ್ನು ಮಾಡುವುದು.

(ಆಕಾಶವಾಣಿಯನ್ನು ಕೇಳಿ ಯಮನು ನಚಿಕೇತನನ್ನು ಹುಡುಕಿಕೊಂಡು ಹೋದನು: ಆತನಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟನು: ಹೇಳಿದನು:)[1]

೯. "ಎಲೈ ಬ್ರಹ್ಮನ್,[2] ನೀನು ನನ್ನ ಮನೆಯಲ್ಲಿ ಊಟ ಉಪಚಾರಗಳಿಲ್ಲದೆ ಮೂರು ರಾತ್ರಿಗಳು ವಾಸವಾಗಿದ್ದೆ. ಎಲೈ ಬ್ರಹ್ಮನ್, ನಿನಗೆ ನಮಸ್ಕಾರವು. ನನಗೆ ಸ್ವಸ್ತಿಯಾಗಲಿ. ಅದಕ್ಕಾಗಿ (ನಿನಗೆ) ಮೂರುವರಗಳನ್ನು ಕೊಡುವೆನು."

೧೦. ಪ್ರಿಯವಾಕ್ಕಿನಿಂದ ಸಂತುಷ್ಟನಾದ ನಚಿಕೇತಸ್ಸು ಆ ವರಗಳನ್ನು ಒಪ್ಪಿಕೊಂಡನು. ಮೊದಲನೆಯ ವರವನ್ನು ಕೇಳಿದನು: "ಎಲೈ ಮೃತ್ಯುವೆ, (ನನ್ನ ತಂದೆಯಾದ) ಗೌತಮನು ಶಾಂತಸಂಕಲ್ಪನಾಗಲಿ (ಎಂದರೆ ವಿಶ್ವಜಿತ್ತನ್ನು ಮಾಡಬೇಕೆಂದಿದ್ದ ಆತನ ಸಂಕಲ್ಪವು ಪೂರ್ಣವಾಗಲಿ.) ಆತನು ನನ್ನ ವಿಷಯದಲ್ಲಿ ಕೋಪವಿಲ್ಲದವನಾಗಿ ಪ್ರಸನ್ನನಾಗಲಿ. ನೀನು ಹಿಂದಿರುಗಿ ಕಳುಹಿಸುವ ನನ್ನನ್ನು ಗುರುತಿಸಿ ಮಾತನಾಡಿಸಲಿ. (ನೀನು ಕೊಡುವೆನೆಂದ) ಮೂರು ವರಗಳಲ್ಲಿ ಇದನ್ನು ಮೊದಲನೆಯದನ್ನಾಗಿ ವರಿಸುವೆನು."

೧೧. (ಅದಕ್ಕೆ ಯಮನು ಉತ್ತರವನ್ನು ಹೇಳುತ್ತಾನೆ.) "ನಾನು ಅಪ್ಪಣೆ ಮಾಡುತ್ತೇನೆ: ನಿನ್ನ ತಂದೆಯಾದ ಔದ್ದಾಲಕಿ ಆರುಣಿಯು (ನಿನ್ನಲ್ಲಿ) ಮೊದಲನಂತೆ ಪ್ರೀತಿಯುಳ್ಳವನಾಗುವನು. ರಾತ್ರಿಯ ಹೊತ್ತಿನಲ್ಲಿ ಸುಖವಾಗಿ ಮಲಗುವನು ಕೋಪವಿಲ್ಲದವ

---

1. (ಪ್ರಪಂಚದ ಸಾಹಿತ್ಯ ರಾಶಿಯಲ್ಲಿ "ಧರ್ಮಪಾಲಕನಾದವನು ಒಬ್ಬ ಯಃಕಶ್ಚಿತ್ ಅತಿಥಿಯನ್ನು ಕಂಡು ಹೆದರಿ ಉಪವಾಸವಿಟ್ಟ ದೋಷದ ಪ್ರಾಯಶ್ಚಿತ್ತವಾಗಿ ವರಗಳನ್ನು ಕೊಡುವೆನು" ಎಂದಿರುವುದು ಇನ್ನೆಲ್ಲಿಯಾದರೂ ಉಂಟೇನೋ ನೋಡಿ)

2. "ಬ್ರಹ್ಮನ್" ಎಂಬುದರಿಂದ ನೀನು ಬ್ರಹ್ಮನಾಗುವೆ. ಎಂದು ಕೊಟ್ಟಿರುವ ಅಭಿವಚನವನ್ನು ನೋಡಿ. ಬ್ರಹ್ಮನ್ ನಮಸ್ತೇऽಸ್ತು ಎಂಬುದರಿಂದ, ನೀನು ಬ್ರಹ್ಮನೇ ಆಗಿರುವೆ: ಅದರಿಂದಲೇ ಬ್ರಹ್ಮಜ್ಞನಾದ ನಾನೂ ನಿನಗೆ ನಮಸ್ಕಾರವನ್ನು ಮಾಡುವೆನು ಎಂಬುದು ವಿಶೇಷಾರ್ಥ.

ನಾಗಿ, ನನ್ನ ಕಡೆಯಿಂದ ಹಿಂತಿರುಗಿ ಹೋಗುವ ನಿನ್ನನ್ನು ಕಂಡು (ಸುಖಪಡುವನು.)"

(ತಂದೆಯು ಮಾಡುತ್ತಿದ್ದ ಯಜ್ಞದ ಫಲವು ಸ್ವರ್ಗವು, ಅದರ ವಿಚಾರವಾಗಿ ತಿಳಿದುಕೊಳ್ಳಬೇಕು ಎಂದು ನಚಿಕೇತನು ಕೇಳುತ್ತಾನೆ.)

೧೨. ಸ್ವರ್ಗವೆಂದು ಒಂದು ಲೋಕ (ವುಂಟು ಎಂದು ಕೇಳಿದ್ದೇನೆ. ಅಲ್ಲಿ) ಭಯವು ಕೊಂಚವೂ ಇಲ್ಲ (ವಂತೆ.) ನೀನು ಅಲ್ಲಿ ಇಲ್ಲ (ವಂತೆ.)ಮುಪ್ಪಿನ ಭೀತಿ ಇಲ್ಲ (ವಂತೆ) ಅಲ್ಲಿಗೆ ಹೋದವನು ಹಸಿವು ನೀರಡಿಕೆಗಳು ಎರಡನ್ನೂ ಕಳೆದುಕೊಂಡು, ಶೋಕವನ್ನೂ ದಾಟಿ, ಸ್ವರ್ಗದಲ್ಲಿ ಸಂತೋಷಪಡುತ್ತಾನೆ (ಎಂದು ಕೇಳಿದ್ದೇನೆ.)

೧೩. ಆ ಸ್ವರ್ಗಕ್ಕೆ ಅಗ್ನಿಯು ಕರೆದುಕೊಂಡು ಹೋಗುವನು. (ಎಂದೂ ಕೇಳಿದ್ದೇನೆ). ಎಲೈ ಮೃತ್ಯುವೆ, ನೀನು ಸ್ವರ್ಗಕ್ಕೆ ಕರೆದೊಯ್ಯುವ ಆ ಅಗ್ನಿ (ವಿದ್ಯೆ)ಯನ್ನು ನನಗೆ ಹೇಳಿಕೊಡು. ನಾನು ಶ್ರದ್ಧೆಯಿಂದ ಅದನ್ನು ಕಲಿತುಕೊಳ್ಳುವೆನು. ಸ್ವರ್ಗಲೋಕದಲ್ಲಿ ಅಮೃತತ್ವವನ್ನು ಪಡೆಯುವರು (ಎಂದು ಕೇಳಿದ್ದೇನೆ.) ಇದು ನನಗೆ ಎರಡನೆಯ ವರವಾಗಲಿ.

೧೪. (ಯಮನು ಹೇಳುತ್ತಾನೆ) ನಚಿಕೇತ, ನಾನು ನಿನಗೆ ಅದನ್ನ ಹೇಳುವೆನು. ಸ್ವರ್ಗವನ್ನು ಕೊಡುವ ಅಗ್ನಿ (ವಿದ್ಯೆ)ಯನ್ನು ನನ್ನಿಂದ ಕಲಿತುಕೊ. ಅದನ್ನು ತಿಳಿದರೆ, ಅನಂತವಾದ ಲೋಕಗಳನ್ನು ಪಡೆಯಬಹುದು: ಹಾಗೆಯೇ ಪ್ರತಿಷ್ಠಿತನೂ ಆಗಬಹುದು. (ಆದರೆ) ಅದು ಗುಹೆಯಲ್ಲಿರುವುದು. ಅದನ್ನು ತಿಳಿ (ಯುವೆ).[1]

೧೫. ಲೋಕಾದಿಯಾದ ಅಗ್ನಿಯನ್ನು (ಕುರಿತ ವಿದ್ಯೆಯನ್ನು ಯಮನು) ಆತನಿಗೆ ಹೇಳಿದನು. (ಹಾಗೆಯೇ) ಯಾವ ಯಾವ ಇಟ್ಟಿಗೆಗಳು ಎಷ್ಟೆಷ್ಟು? ಹೇಗೆ ? ಎಂಬುದನ್ನೂ ಹೇಳಿಕೊಟ್ಟನು. ಆ ನಚಿಕೇತನೂ

1. ಗುಹೆ ಎಂದರೆ ಬುದ್ಧಿ.

ಅತನು ಹೇಳಿಕೊಟ್ಟಂತೆಯೇ ಕಲಿತನು. ಆಗ (ಅಷ್ಟು ಬೇಗ ವಿದ್ಯಾ ಗ್ರಹಣ ಮಾಡಿದನೆಂದು) ಸಂತುಷ್ಟನಾದ ಮೃತ್ಯುವು ಮತ್ತೆ ಆತನಿಗೆ (ಹೀಗೆ) ಹೇಳಿದನು :

೧೬. ಮಹಾತ್ಮನಾದ ಮೃತ್ಯುವು ಪ್ರೀತಿಯಿಂದ ಅವನಿಗೆ ಹೇಳಿದನು. "ನಿನಗೆ ಮತ್ತೂ ಒಂದು ವರವನ್ನು ಕೊಡುವೆನು. ಈ ಅಗ್ನಿ ವಿದ್ಯೆಗೆ ನಿನ್ನ ಹೆಸರಾಗಲಿ. ಇಗೋ ಅನೇಕ ರೂಪವಾದ ಈ ಸೃಂಕೆ[1] ಯನ್ನು ತೆಗೆದುಕೊ."

೧೭. ನಾಚಿಕೇತಾಗ್ನಿಯನ್ನು ಮೂರುಸಲ ಸಂಧಾನ ಮಾಡಿ, ತಾಯಿ ತಂದೆ ಆಚಾರ್ಯ ಮೂಲಕವಾಗಿ ಸಂಧಿಯನ್ನು ಪಡೆದು, (ತಾಯಿ ತಂದೆ ಆಚಾರ್ಯರಿಂದ ಕ್ರಮವಾಗಿ ಶಿಕ್ಷೆಯನ್ನು ಪಡೆದು) (ಇಜ್ಯ, ಅಧ್ಯಯನ, ದಾನಗಳೆಂಬ) ಮೂರು ಕರ್ಮಗಳನ್ನು ಮಾಡಿದವನು ಜರಾಮೃತ್ಯುಗಳನ್ನು ದಾಟುವನು. ಸರ್ವಜ್ಞನೂ ಸ್ತುತ್ಯನೂ ಆದ ಪರಮನನ್ನು ತಿಳಿದು, ನೋಡಿ, ತನ್ನಲ್ಲಿರುವ ಅತ್ಯಂತವಾದ ಶಾಂತಿಯನ್ನು ಹೊಂದುವನು. (ಜ್ಞಾನಕರ್ಮಸಮುಚ್ಚಯ[2]ದಿಂದ ಪಡೆಯುವ ವಿರಾಟ್ಪದವನ್ನು ಪಡೆಯುವನು.)

೧೮. ತ್ರಿಣಾಚಿಕೇತವೆಂಬ ಈ ಮೂರನ್ನು ಬಲ್ಲವನು, ಈ ನಾಚಿಕೇತವನ್ನು ಹೀಗೆ ಮಾಡಿದುದೇ ಆದರೆ, ಅವನು (ಅಧರ್ಮ, ಅಜ್ಞಾನ, ರಾಗ, ದ್ವೇಷಾದಿ ಲಕ್ಷಣ) ಮೃತ್ಯುಪಾಶಗಳನ್ನು ಶರೀರವಿದ್ದಾ

---

1. ಸೃಂಕಾ-ಲೋಕಲೋಕಗಳಿಗೆ ಹೋಗಿ ಬರುವ ಗತಿ.

2. ಜ್ಞಾನಕರ್ಮಸಮುಚ್ಚಯ ಎಂದರೆ ಒಂದು ಹಕ್ಕಿಗೆ ಎರಡು ರೆಕ್ಕೆಗಳಿರುವಂತೆ ಜೀವನಿಗೆ ಜ್ಞಾನ ಕರ್ಮ ಎಂದು ಎರಡು ರೆಕ್ಕೆಗಳು. ಇವೆರಡನ್ನೂ ಸಮಾನವೆಂದು ಆರಾಧಿಸಬೇಕು ಎಂಬುದೊಂದು ಮತ. ಶಂಕರರು ಇದನ್ನು ಒಪ್ಪದೆ ಜ್ಞಾನವೇ ಪ್ರಧಾನ ಎಂಬ ಮತವನ್ನು ಪ್ರತಿಪಾದನ ಮಾಡುತ್ತಾರೆ. "ವಿರಾಟ್ಪದ ಎಂದರೆ ಬ್ರಹ್ಮಲೋಕಪ್ರಾಪ್ತಿ. ಈ ಜ್ಞಾನಕರ್ಮಸಮುಚ್ಚಯದಿಂದ ಪಡೆಯಬಹುದಾದ ತುಟ್ಟತುದಿಯ ಸಿದ್ಧಿ ವಿರಾಟ್ಪದ. ಆದರೆ ಮುಕ್ತಿಯು ಅದರ ಆಚಿನದು. ಅದನ್ನು ಪಡೆಯಲು ಜ್ಞಾನವೊಂದರಿಂದಲೇ ಸಾಧ್ಯ" ಎಂದು ಶಂಕರರ ವಾದ.

ಗಳೇ ತಪ್ಪಿಸಿಕೊಂಡು, ಶೋಕವನ್ನು ದಾಟಿ, ಸ್ವರ್ಗಲೋಕದಲ್ಲಿ ಸುಖವಾಗಿರುವನು.

೧೯. ನಚಿಕೇತ, ಈ ಅಗ್ನಿಯು ನಿನ್ನದು. ಎರಡನೆಯ ವರವಾಗಿ ನೀನು ಕೇಳಿದುದು. ಸ್ವರ್ಗವನ್ನು ಕೊಡುವ ಈ ಅಗ್ನಿವಿದ್ಯೆಯನ್ನು ಇನ್ನು ಮುಂದೆ ಜನರು ನಿನ್ನದೆಂದೇ ಹೇಳುವರು. ಇನ್ನು ಮೂರನೆಯ ವರವನ್ನು ಕೇಳು.

೨೦. (ನಚಿಕೇತನು ಕೇಳುತ್ತಾನೆ.) ಮನುಷ್ಯನು ಮರಣವಶನಾದಾಗ ಈ ಸಂಶಯವು (ಬರುತ್ತದೆ): ಕೆಲವರು (ಈತನು) ಇದ್ದಾನೆ ಎನ್ನುತ್ತಾರೆ. ಇನ್ನು ಕೆಲವರು ಇಲ್ಲ ಎನ್ನುತ್ತಾರೆ. ಅದನ್ನು ತಿಳಿಯುವ ವಿದ್ಯೆಯನ್ನು ನನಗೆ ಕಲಿಸಿಕೊಡು. ಇದು ಮೂರನೆಯ ವರವು. ಎಲ್ಲಾ ವರಗಳಿಗಿಂತ (ಶ್ರೇಷ್ಠವಾದ) ವರವಿದು.

(ಯಮನು ಶಿಷ್ಯನನ್ನು ಪರೀಕ್ಷಿಸಲು ಹೇಳುತ್ತಾನೆ.)

೨೧. ಈ ವಿಚಾರವಾಗಿ ಹಿಂದೆ ದೇವತೆಗಳೂ ವಿಚಾರಮಾಡಿದ್ದಾರೆ. ಇದು ಬಹುಸೂಕ್ಷ್ಮ ಲಕ್ಷಣವುಳ್ಳದು. ಸುಲಭವಾಗಿ ತಿಳಿಯತಕ್ಕದಲ್ಲ. (ಅದರಿಂದ ಇದನ್ನು ಬಿಟ್ಟು) ಬೇರೆ ವರವನ್ನು ಕೇಳು. ಚಂಡಿಸಬೇಡ. ಇದನ್ನು ಬಿಡು.

(ನಚಿಕೇತನು ಮತ್ತೆ ಗುರುವಿನಲ್ಲಿ ವಿಜ್ಞಾಪನ ಮಾಡುತ್ತಾನೆ.)

೨೨. ಎಲೈ ಮೃತ್ಯುದೇವನೆ, ದೇವತೆಗಳೂ (ತಿಳಿಯದೆ) ಈ ವಿಷಯದಲ್ಲಿ ಸಂಶಯಗೊಂಡಿದ್ದಾರೆ (ಎಂದೆ.) ನಿನಗೂ ಈ ವಿಷಯವು ಸುಲಭವಾಗಿ ಅರ್ಥವಾಗುವುದಿಲ್ಲ ಎಂದೆ. ಅದರಿಂದ, ನಿನ್ನ ಹಾಗೆ ಈ ವಿಷಯವನ್ನು ನಿರ್ಣಯಿಸಿ ಹೇಳಬಲ್ಲವರಾರೂ ಸಿಕ್ಕುವುದಿಲ್ಲವಾದ್ದರಿಂದ ಈ ವರಕ್ಕೆ ಸಮವಾದುದು (ಇನ್ನು ಯಾವುದೂ) ಇಲ್ಲ.

(ಯಮನು ಮತ್ತೆ ಹೇಳುತ್ತಾನೆ.)

೨೩. ನೂರುವರ್ಷ ವಯಸ್ಸಿನ ಪುತ್ರ ಪೌತ್ರರನ್ನು ಕೇಳು: ಬಹು ಪಶುಗಳನ್ನೂ ಆನೆ, ಕುದುರೆ, ಹಿರಣ್ಯಗಳನ್ನೂ ಕೇಳು. ವಿಸ್ತಾರ

ವಾದ ಭೂಮಂಡಲವನ್ನು ಕೇಳು. ಬೇಕೆಂದರೆ, ನೀನೂ ನೂರು ವರ್ಷಗಳು ಬದುಕು.

೨೪. ಇದಕ್ಕೆ ಸಮನಾದುದು ಇನ್ನು ಯಾವುದಾದರೂ ಇದ್ದರೆ ಅದನ್ನು ಕೇಳು. ನಿನಗೆ ವಿತ್ತವು ಬೇಕೆ ? ಚಿರಂಜೀವಿತ್ವವು ಬೇಕೆ ? ನಚಿಕೇತ, ನೀನು ಮಹಾ ಭೂಮನಾಗಿ (ಮಹಾ ಭೂಮಿಗೆ ರಾಜನಾಗಿ) ಬಾಳು. ಬೇಕೆಂದುದು ನಿನಗೆ (ಸಿಕ್ಕುವಂತೆ) ಮಾಡುವೆನು.

೨೫. ಮನುಷ್ಯ ಲೋಕದಲ್ಲಿ ದುರ್ಲಭವಾದ ಯಾವ ಯಾವ ಕಾಮಗಳುಂಟೋ ಅವೆಲ್ಲವನ್ನೂ, ನಿನಗೆ ತೋರಿದಂತೆ ಕೇಳು: ಇದೋ ನೋಡು, (ಈ ನಿನ್ನ ಎದುರು ಇರುವ) ಈ ರಮಣಿಯರು ಸರಥವಾಗಿ ಮಂಗಳವಾದ್ಯಗಳೊಡನೆ ಬಂದಿರುವರು. ಇಂಥವರು ಮನುಷ್ಯರಿಗೆ ದೊರಕುವುದಿಲ್ಲ. ಇವರನ್ನು ನಾನು ನಿನಗೆ ಕೊಟ್ಟಿರುವೆನು. ಇವರಿಂದ ಉಪಚಾರವನ್ನು ಮಾಡಿಸಿಕೊ. ನಚಿಕೇತ, ಮರಣವನ್ನು ಮಾತ್ರ ಕೇಳಬೇಡ.

(ಆ ಮಾತನ್ನು ಕೇಳಿ ನಚಿಕೇತನು ಉತ್ತರಕೊಡುತ್ತಾನೆ.)

೨೬. ನೀನು ಹೇಳಿದ ಇವೆಲ್ಲವೂ (ಇವೊತ್ತು ಇದ್ದು ನಾಳೆಯಿಲ್ಲವಾಗುವ) ಶ್ವೋಭಾವಗಳು. ಜೊತೆಯಲ್ಲಿ ಮನುಷ್ಯನಿಗೆ ನೀನು ಅಂತಕನು. ಅಲ್ಲದೆ ಇವೆಲ್ಲ ಭೋಗಗಳೂ ಸರ್ವೇಂದ್ರಿಯಗಳ ತೇಜವನ್ನು ಹರಣಮಾಡುವವು. ಅಲ್ಲದೆ, ನೀನು ಹೇಳಿದ ಚಿರಂಜೀವಿತ್ವವೂ ಅಲ್ಪವೇ ಅಲ್ಲವೇ ? (ಈ ರಥ, ಈ ನೃತ್ಯ, ಈ ಗೀತ), ಇವೆಲ್ಲವನ್ನೂ ನೀನೇ ಹೊತ್ತುಕೊಂಡು ಹೋಗುವೆ.

೨೭. (ಅಲ್ಲದೆ), ಮನುಷ್ಯನಿಗೆ ಏನಾದರೂ ಎಷ್ಟಾದರೂ ಸಾಲದು. ನಿನ್ನ ದರ್ಶನವು ಆಗುತ್ತಿರಲು, ಬೇಕಾದಾಗ ನಿನ್ನನ್ನು ಕೇಳಿದರೆ ಇವೆಲ್ಲವೂ ದೊರೆತೇ ದೊರೆಯುವುವು. ನಮ್ಮ ಜೀವಿತವೂ ಹಾಗೆಯೇ, ನಿನ್ನ ಅಧಿಕಾರಕ್ಕೆ ಒಳಪಟ್ಟುದು. ಅದರಿಂದ, ನಾನು ಪಡೆಯಬೇಕು ಎನ್ನುವುದಾದರೆ, ಆ ವರವೊಂದನ್ನು ಕೊಡು.

೨೮. ಪೃಥಿವಿಯಲ್ಲಿ ಜರಾ ಮರಣಗಳ ಪಾಲಾಗುವೆನು ಎಂದು ತಿಳಿದ ಯಾವನು ತಾನೇ, ಅಜರರೂ ಅಮರರೂ ಆದವರನ್ನು ಕಂಡು, ಅಪ್ಸರೆಯರ ಭೋಗಗಳನ್ನು ಆಶಿಸುವನು ? ಬಲ್ಲವನು ಯಾವನು ತಾನೇ ಅತಿ ದೀರ್ಘವಾದ ಜೀವಿತದಲ್ಲಿ ಆಶೆಪಡುವನು ?

೨೯. ನಾನು ಕೇಳಿದುದನ್ನು, ಯಾವ ವಿಷಯದಲ್ಲಿ ಉಂಟೋ ಇಲ್ಲವೋ ಎಂದು (ದೇವತೆಗಳು) ಅಳೆದು ಸುರಿಯುವರೋ ಅದನ್ನು, ಎಲೈ ಮೃತ್ಯುವೆ, ಪರಲೋಕದಲ್ಲಿ ಮಹತ್ತಾದ ಪ್ರಯೋಜನವುಂಟು ಮಾಡುವ ಅದನ್ನು, ಯಾವುದನ್ನು ನೀನು ಶ್ರೇಷ್ಠವಾದರೂ ರಹಸ್ಯ ತಮವೆನ್ನುವೆಯೋ ಅದನ್ನು (ಆ ಆತ್ಮಜ್ಞಾನವನ್ನು) ಕುರಿತು ನನಗೆ ಹೇಳು. ನಚಿಕೇತನಿಗೆ ಇನ್ನು ಯಾವುದೂ ಬೇಡ.

ಇಂತಿದು ಮೊದಲನೆಯ ವಲ್ಲಿಯು.

ಎರಡನೆಯ ವಲ್ಲಿ

(ಕೊಡುವುದಾದರೆ ಜ್ಞಾನವನ್ನು ಕೊಡು ಇನ್ನು ಏನೂ ಬೇಡ ಎಂದು ಹಟ ಹಿಡಿದ ನಚಿಕೇತನಿಗೆ ಯಮನು ಆತ್ಮಜ್ಞಾನವನ್ನು ಕುರಿತು ಬೋಧಿಸುತ್ತಾನೆ. ಆತ್ಮಜ್ಞಾನವಲ್ಲದೆ ನನಗೇನೂ ಬೇಡ ಎಂಬುದೇ ಬ್ರಹ್ಮವಿದ್ಯಾಧಿಕಾರ).

೧. ಶ್ರೇಯಸ್ಸು ಎನ್ನುವುದೊಂದು ಪ್ರೇಯಸ್ಸು ಎನ್ನುವುದು ಇನ್ನೊಂದು. ಎರಡಕ್ಕೂ ಗುರಿಯು ಬೇರೆ ಬೇರೆ. ಎರಡೂ ಪುರುಷ ನನ್ನು ಕಟ್ಟುತ್ತವೆ. ಅವೆರಡರಲ್ಲಿ ಶ್ರೇಯಸ್ಸಿನ ಹಾದಿಯನ್ನು ಹಿಡಿದವನಿಗೆ ಒಳ್ಳೆಯದು ಆಗುವುದು. ಯಾವನು ಪ್ರೇಯಸ್ಸನ್ನು ಹಿಡಿಯುವನೋ ಅವನು ಗುರಿಯು ತಪ್ಪಿದವನು.

೨. ಶ್ರೇಯಸ್ಸು ಪ್ರೇಯಸ್ಸು ಎರಡೂ ಮನುಷ್ಯನ ಬಳಿಗೆ ಬರುವುವು. ಅವೆರಡನ್ನೂ ಕುರಿತು, ಚೆನ್ನಾಗಿ ಮನಸ್ಸಿನಲ್ಲಿ ಆಲೋಚನೆಮಾಡಿ

ಧೀರನು[1] ಎರಡಕ್ಕೂ ಇರುವ ವ್ಯತ್ಯಾಸವನ್ನು ಕಾಣುವನು. ಪ್ರೇಯಸ್ಸಿಗಿಂತಲೂ ಶ್ರೇಯಸ್ಸು ಹೆಚ್ಚು ಎಂದು ಧೀರನು ಶ್ರೇಯಸ್ಸನ್ನು ವರಿಸುವನು : ಮಂದನು ಯೋಗಕ್ಷೇಮದ ದೃಷ್ಟಿಯಿಂದ[2] ಪ್ರೇಯಸ್ಸನ್ನು ವರಿಸುವನು.

೩. (ಆದರೆ) ನೀನು ಮಾತ್ರ ಪ್ರಿಯಗಳನ್ನೂ ಪ್ರಿಯರೂಪಗಳನ್ನೂ ಕಾಮಗಳನ್ನೂ ಕುರಿತು ಯೋಚನೆಮಾಡಿ (ಇವುಗಳಿಂದ ಶ್ರೇಯಸ್ಸು ದೊರಕುವುದಿಲ್ಲ ಎಂಬುದನ್ನು ಮನಗಂಡು) ಅವುಗಳನ್ನು ತ್ಯಜಿಸಿದೆ. ನಾನು ನಿನಗೆ ಕೊಟ್ಟ ಈ ಸೃಂಕೆಯು ವಿತ್ತಮಯಿಯಾದರೂ ಅದನ್ನು ನೀನು ಒಪ್ಪಿಕೊಳ್ಳಲಿಲ್ಲ. ಆದರೆ ಅನೇಕರು ಇದನ್ನು ಒಪ್ಪಿಕೊಂಡು ಇದರಲ್ಲಿ ಮುಳುಗಿ ಹೋಗುವರು.

೪. ವಿದ್ಯಾ ಅವಿದ್ಯಾ ಎಂಬೀ ಎರಡೂ ಒಂದಕ್ಕೊಂದು ಬಹುದೂರದಲ್ಲಿರುವುವು : ಎರಡೂ ಬೇರೆ ಬೇರೆ : ಭಿನ್ನವಾದ ಮಾರ್ಗದಲ್ಲಿ ಹೋಗುವುವು (ವಿದ್ಯೆಯು ಶ್ರೇಯೋ ವಿಷಯ : ಅವಿದ್ಯೆಯು ಪ್ರೇಯೋ ವಿಷಯ.) ನಚಿಕೇತನು ವಿದ್ಯೆಯೇ ಬೇಕೆನ್ನುವವನು ಎಂದು ಕೊಂಡಿದ್ದೇನೆ. ಏಕೆಂದರೆ ನಿನ್ನನ್ನು ಬಹುವಿಧವಾದ ಕಾಮಗಳು ಯಾವವೂ ಲೋಭಗೊಳಿಸಲಿಲ್ಲ.

೫. ಅವಿದ್ಯೆಯಲ್ಲಿ ಸಿಕ್ಕಿಕೊಂಡವರು, ನಾವೇ ಧೀರರು ಪಂಡಿತರು ಎಂದುಕೊಂಡವರು, ಮೂಢರಾಗಿ, ಕುರುಡರ ಹಿಂದೆ ಹೋದ ಕುರುಡರಂತೆ, (ಜರಾಮರಣ ರೋಗಾದಿ)ದುಃಖಗಳಲ್ಲಿ ಒದ್ದಾಡುವರು.

೬. (ಇಂತಹ ಅವಿವೇಕಿಯು) ಬಾಲನು (ಬುದ್ಧಿಯಿಲ್ಲದವನು.) ವಿತ್ತಮೋಹದಿಂದ ಮೂಢನಾದ ಅವನಿಗೆ ಸಾಂಪರಾಯವು (ಪರಬ್ರಹ್ಮವನ್ನು ಕೊಡುವ ಶಾಸ್ತ್ರೀಯ ಸಾಧನವು)

---

1. ಧೀರ-ಧೀ-ಬುದ್ಧಿ. ಅದನ್ನು ಇಂದ್ರಿಯಗಳಿಂದ ರಾತಿ—ತರುವನು ಇಂದ್ರಿಯಗಳಿಗೆ ವಶನಾಗದವನು.

2. ಯೋಗ ಕ್ಷೇಮ ದೃಷ್ಟಿ : ಮಂದನು ದೇಹವೇ ತಾನೆಂದುಕೊಂಡು, ಅದಕ್ಕೆ ಯೋಗ (ಹೊಸದಾಗಿ ಸಿಕ್ಕುವುದು) ಕ್ಷೇಮ (ಇದ್ದುದನ್ನು ಉಳಿಸಿಕೊಳ್ಳುವುದು) ಎಂಬ ದೃಷ್ಟಿಯಿಂದ ಎಲ್ಲವನ್ನೂ ನೋಡುವನು.

ಹೊಳೆಯುವುದಿಲ್ಲ. (ಇರುವುದೆಲ್ಲ) ಈ ಲೋಕವೇ, ಪರಲೋಕ ವಿಲ್ಲ ಎಂದು ತಿಳಿದುಕೊಂಡು, ಅವನು ಮತ್ತೆ ಮತ್ತೆ ನನ್ನ ವಶ ನಾಗುತ್ತಿರುವನು.

೭. (ಸಾವಿರಾರು ಜನಗಳು ಮೇಲೆ ಹೇಳಿದಂತೆ ಸಾಂಪ್ರ ದಾಯವನ್ನು ಅರಿಯದವರು. ಬಹುಜನರಲ್ಲಿ ಯಾವನೋ ನಿನ್ನಂ ತಹವನೊಬ್ಬನು ಪರಲೋಕಕ್ಕಿಂತಲೂ ಹೆಚ್ಚಿನ ಆತ್ಮವನ್ನು ಹುಡುಕಿ ಕೊಂಡುಹೋಗುವನು.) ಆದರೂ ಆ ಆತ್ಮವು ಅನೇಕರಿಗೆ ಕೇಳು ವುದಕ್ಕೂ ಸಿಕ್ಕುವುದಿಲ್ಲ. ಕೇಳಿದವರಲ್ಲಿಯೂ ಅನೇಕರಿಗೆ ಅದು ತಿಳಿ ಯುವುದಿಲ್ಲ. ಅದರಿಂದ, ಇದನ್ನು ಹೇಳುವವನೂ ಎಲ್ಲೋ ಒಬ್ಬ. ಇದನ್ನು ಪಡೆಯುವವನು ಬಹು ನಿಪುಣನು. (ಸರಿಯಾದ ಗುರುವಿನ ಬಳಿ ಹೋಗಿ ಆತನನ್ನು ಆಶ್ರಯಿಸಿ ತಿಳಿದುಕೊಳ್ಳುವವನಂತೂ ಎಷ್ಟೋ ಲಕ್ಷ ದಲ್ಲಿ) ಒಬ್ಬನು.

೮. ಸಾಮಾನ್ಯ ಮನುಷ್ಯನು ಇದನ್ನು (ಈ ಆತ್ಮವನ್ನು) ಕುರಿತು ಹೇಳಲೂ ಆರನು. ಈ ಆತ್ಮನು ತನ್ನನ್ನು ಕುರಿತು ಬಹುವಾಗಿ ಚಿಂತಿ ಸುವವರಿಗೆ ಮಾತ್ರ ಸುಲಭವಾಗಿ ತಿಳಿಯುವನು. (ಜೀವಬ್ರಹ್ಮರಿಗೆ ಭೇದವಿಲ್ಲ ಎಂದು ತಿಳಿದವನು ಮಾತ್ರ ಹೇಳಬಲ್ಲ). ಈ ಆತ್ಮನಲ್ಲಿ (ಇದ್ದಾ ನೆಯೋ ಇಲ್ಲವೋ ಎಂಬ) ಚಿಂತೆಗೆ ಅವಕಾಶವಿಲ್ಲ. ಏಕೆಂದರೆ, ಈತನು ತರ್ಕಕ್ಕೆ ಸಿಕ್ಕುವನಲ್ಲ. ಆದರೂ ಅಣುವೆಂದು ಶಾಸ್ತ್ರವು ಹೇಳುವುದ ರಿಂದ ಈ ಆತ್ಮನು ಎಲ್ಲದಕ್ಕಿಂತಲೂ, ಅಣುವಿಗಿಂತಲೂ ಅಣುವಾಗಿ ಇದ್ದೇ ಇರುವನು.

೯. (ಆತ್ಮನುಂಟು ಎಂಬ) ಈ (ಶಾಸ್ತ್ರಸಿದ್ಧ) ಬುದ್ಧಿಯು ತರ್ಕದಿಂದ ಲಭಿಸುವುದಿಲ್ಲ: (ಹಾಗೂ ತರ್ಕವು ಅದನ್ನು, ಎಂದರೆ ಆತ್ಮ ನುಂಟು ಎಂಬ ಬುದ್ಧಿಯನ್ನು, ಹೋಗಲಾಡಿಸಲೂ ಆರದು.) ಎಲೈ ಪ್ರಿಯತಮನಾದ ನಚಿಕೇತ, ಆಗಮವನ್ನು ಬಲ್ಲ ಗುರುವು ಹೇಳಿ ಕೊಟ್ಟರೆ ಈ ವಿಚಾರವು ಸುಲಭವಾಗಿ ತಿಳಿಯುವುದು. ನೀನು ಆ

ಮತಿಃಯನ್ನು[1] ಪಡೆದೆ. ನೀನು ಬಹಳ ಧೈರ್ಯಶಾಲಿಯು. ನಿನ್ನ ಹಾಗೆ ಹಟ ಹಿಡಿದು ಕೇಳುವವನು, ನಚಿಕೇತ, ನಮಗೆ ಮತ್ತೆ ಸಿಕ್ಕಲಿ.[2]

೧೦. (ಯಮನು ತಾನು ಆತ್ಮತತ್ವವನ್ನು ಹೇಗೆ ತಿಳಿದನೆಂಬುದನ್ನು ಹೇಳುತ್ತಾನೆ). ಶೇವಧಿ ಎಂದರೆ ಕರ್ಮಗಳ ಸತ್ಫಲವು ದೊಡ್ಡದು ಎಂಬುದನ್ನು ಬಲ್ಲೆ : ಹಾಗೆಯೇ ಅದು ಅನಿತ್ಯವೆಂಬುದನ್ನೂ ಬಲ್ಲೆ. ಅನಿತ್ಯವಾದವುಗಳಿಂದ ನಿತ್ಯವನ್ನು ಪಡೆಯುವುದು ಹೇಗೆ ? ಅದರಿಂದ, ನಾನು ನಾಚಿಕೇತಾಗ್ನಿಯನ್ನು ಅನಿತ್ಯವಾದ ದ್ರವ್ಯಗಳನ್ನೆಲ್ಲಾ ಹೋಮ ಮಾಡಿ ಆರಾಧಿಸಿದೆನು: ಅದರಿಂದ ನಿತ್ಯ[3]ವನ್ನು ಪಡೆದೆನು.

೧೧. (ನಚಿಕೇತನೂ ಹಾಗೆಯೇ ಮಾಡಿದ್ದಾನೆಂದು ಗುರುವು ಹೊಗಳುತ್ತಾನೆ.) ನಚಿಕೇತ, ನೀನೂ ಕೂಡ ಅನಿತ್ಯವಾದವುಗಳನ್ನು ಬಿಟ್ಟೆ. ಏಕೆಂದರೆ ನಿನ್ನ ದೃಷ್ಟಿಯು ಕಾಮವು ಎಲ್ಲಿ ಕೊನೆಯಾಗುವುದೋ, ಜಗತ್ತು ಯಾವುದನ್ನು ಆಶ್ರಯಿಸಿ ಸ್ಥಿರವಾಗಿದೆಯೋ, ಉಪಾಸನೆಯ ಫಲವು ಯಾವುದೋ, ಅಭಯದ ಕೊನೆ ಯಾವುದೋ, ಹೊಗಳಿಸಿಕೊಳ್ಳುವುದಕ್ಕೆ ಯೋಗ್ಯವಾದವುಗಳಲ್ಲಿ ಬಲು ದೊಡ್ಡದು ಯಾವುದೋ, ಹೊಂದಬೇಕಾದ ಗತಿಗಳಲ್ಲೆಲ್ಲ ದೊಡ್ಡದು ಯಾವುದೋ, ಯಾವುದು ಎಲ್ಲದಕ್ಕೂ ಆಧಾರವೋ ಅದನ್ನು ನೋಡುತ್ತಿದೆ.

೧೨. ಅದು ಸುಲಭವಾಗಿ ಕಾಣಲಾಗದುದು : ಬಹು ರಹಸ್ಯವಾದುದು. ಅದು ಈ ಲೋಕದ ಒಳಹೊಕ್ಕು ಕುಳಿತಿರುವುದು. ಎಲ್ಲವನ್ನೂ ತಿಳಿಯುವ ಬುದ್ಧಿಯೊಳಗೆ ಇರುವುದು. ಹೋಗುವುದಕ್ಕೆ ಅಸಾಧ್ಯವಾದ ಕಡೆ ಇರುವುದು. ಅದು ಬಹು ಪುರಾತನವಾದುದು.

---

1. ಮತಿ:ಶಾಸ್ತ್ರಾಧ್ಯಯನದಿಂದ ಲಭಿಸಿದ ಶುದ್ಧ ಬುದ್ಧಿ.

2. ಹಿಂದಿನ ಮಂತ್ರವನ್ನು ನೋಡಿ. ಮುಂದೆ ೧೨ನೆಯ ಮಂತ್ರವನ್ನು ನೋಡಿ. ಅಲ್ಲಿ ಆತ್ಮನನ್ನು ತಿಳಿಯಲು ಶಾಸ್ತ್ರವು ಹೇಗೆ ಸಹಾಯ ಎಂಬುದನ್ನು ಹೇಳಿದೆ.

3. ಇಲ್ಲಿ ನಿತ್ಯವೆಂದರೆ ಯಮಪಟ್ಟ ಎಂದು ಶಂಕರರು.

ಅಂತಹ ಆ ಅದನ್ನು, ಆತ್ಮವನ್ನು, ಅಧ್ಯಾತ್ಮಯೋಗ[1]ವನ್ನು ಅವಲಂಬಿಸಿದವನು ತಿಳಿಯುವನು. ಆ ಆತ್ಮವನ್ನು ತಿಳಿದ ಧೀರನು ಹರ್ಷಶೋಕಗಳನ್ನು ಬಿಡುವನು.

೧೩. ಈಗ ನಾನು ಹೇಳುತ್ತಿರುವ ಈ ಆತ್ಮತತ್ವವನ್ನು ಕೇಳಿ, ಇದನ್ನು ಚೆನ್ನಾಗಿ ಅರಿತುಕೊಂಡು, ಮರಣ ಧರ್ಮವುಳ್ಳ ಮಾನವನು, ಮರಣವು ಶರೀರಕ್ಕೆ, ಆತ್ಮನಿಗಲ್ಲ ಎಂಬುದನ್ನು ಮನಸ್ಸಿಗೆ ತಂದುಕೊಂಡು, ಧರ್ಮ ಸ್ವರೂಪವೂ ಬಹುಸೂಕ್ಷ್ಮನೂ ಆದ ಆತ್ಮನನ್ನು ತಿಳಿಯುವನು. ಆತ್ಮನಿಗಿಂತ ಸುಖಕರವಾದುದು ಇನ್ನೊಂದಿಲ್ಲ. ಅದನ್ನು ಪಡೆದವನು ನಿಜವಾಗಿಯೂ ಸುಖಪಡುವನು. ನಚಿಕೇತನು ಈ ಆತ್ಮವನ್ನು ಪಡೆಯಲು ಬಾಗಿಲು ತೆರೆದಿದೆಯೆಂದು ತಿಳಿಯುವೆನು

(ಆ ಆತ್ಮವು ಇದುವರೆಗೂ ನಮಗೆ ತಿಳಿದಿರುವ ಯಾವುದೂ ಅಲ್ಲ ಎಂಬುದನ್ನು ಹೇಳಿ ಗುರುವು ಶಿಷ್ಯನನ್ನು ಎಚ್ಚರಿಸುತ್ತಾನೆ).

೧೪. ಆ ಆತ್ಮವು ಧರ್ಮಕ್ಕಿಂತ ಬೇರೆಯಾದುದು. ಅದು ಅಧರ್ಮಕ್ಕಿಂತಲೂ ಬೇರೆಯಾದುದು. ನಾವು ಬಲ್ಲ ಕಾರ್ಯಕ್ಕಿಂತಲೂ ಬೇರೆಯಾದುದು. ನಾವು ಬಲ್ಲ ಕಾರಣಕ್ಕಿಂತಲೂ ಬೇರೆಯಾದುದು. ಅದು ಭೂತಾರ್ಥಕ್ಕಿಂತಲೂ ಬೇರೆಯಾದುದು. ಭವಿಷ್ಯದರ್ಥಕ್ಕಿಂತಲೂ ಬೇರೆಯಾದುದು, (ಹೀಗೆ ಧರ್ಮಾಧರ್ಮಗಳೂ, ಕಾರ್ಯಕಾರಣಗಳೂ, ಭೂತಭವ್ಯಗಳೂ ಅಲ್ಲದಿದ್ದರೂ ನಿನ್ನ ಎದುರಿಗೆ ನಿಂತಿರುವ,) ಈಗ ನೀನು ಕಾಣುತ್ತಿರುವ ಅದೇನು ? ಅದನ್ನು ಹೇಳು.

(ಗುರುವು ಅದನ್ನು ಏನೆಂದು ಗುರುತಿಸಬೇಕೋ ಅದನ್ನೂ ಹೇಳುತ್ತಾನೆ.)

---

1. ವಿಷಯಗಳ ಕಡೆ ಓಡುವ ಮನಸ್ಸನ್ನು ಹಿಂದಕ್ಕೆ ಎಳೆದುಕೊಂಡು ಆತ್ಮನಲ್ಲಿ ನಿಲ್ಲಿಸುವುದೇ ಅಧ್ಯಾತ್ಮ ಯೋಗವು.'' ಯತ್ರ ಯತ್ರ ಮನೋ ಮದೀಯಂ ತತ್ರ ತತ್ರ ಪದಂ ತ್ವದೀಯಂ ' ನನ್ನ ಮನಸ್ಸು ಹೋದ ಹೋದ ಎಡೆಯಲ್ಲೆಲ್ಲಾ ನಿನ್ನ ಪಾದಗಳನ್ನು ಕಾಣುವುದಾಗಲಿ ಎಂಬುದೇ ಅಧ್ಯಾತ್ಮಯೋಗವು.

೧೫. ಸಮಸ್ತ ವೇದಗಳೂ ಕೊನೆಕೊನೆಯೆಂದು ಹೇಳುತ್ತಿರುವುದು ಇದನ್ನೇ! ಎಲ್ಲಾ ತಪಸ್ಸುಗಳೂ ಇದಕ್ಕಾಗಿಯೇ! ಎಲ್ಲರೂ ಬ್ರಹ್ಮಚರ್ಯವನ್ನಾಚರಿಸುವುದೂ ಇದಕ್ಕಾಗಿಯೇ! ಇದನ್ನು ಒಂದು ನುಡಿಯಲ್ಲಿ ಹೇಳುವೆನು: 'ಓಂ' ಎಂದು.

೧೬. ಇದೆಯೇ ಅಕ್ಷರವಾದ ಬ್ರಹ್ಮ! ಇದೇ ಅಕ್ಷರವಾದ ಪರವು! ಈ ಅಕ್ಷರವನ್ನು ತಿಳಿದರೆ, ಯಾರು ಏನು ಬಯಸಿದರೆ ಅದು ಸಿದ್ಧ.

೧೭. ಈ ಆಲಂಬನ[1] ವು ಶ್ರೇಷ್ಠವು: ಇದು ಪರಮವು: ಇದನು: ತಿಳಿದವನು ಬ್ರಹ್ಮಲೋಕದಲ್ಲಿಯೂ ದೊಡ್ಡವನಾಗುವನು.

೧೮. ಎಲೈ ಬುದ್ಧಿವಂತನೇ, ಈ ಆತ್ಮನು ಹುಟ್ಟುವುದಿಲ್ಲ ಸಾಯುವುದಿಲ್ಲ. ಎಲ್ಲಿಂದಲೂ ಬರಲಿಲ್ಲ. ಏನೋ ಆದ ಆದು ಅ–ಜ್ನ ಜನ್ಮವಿಲ್ಲದ್ದು: ನಿತ್ಯವಾದುದು: ಶಾಶ್ವತವಾದುದು. ಪುರಾತನವಾದ ಅದು ಏಟಿಗೆ ಸಿಕ್ಕುವ ಶರೀರದಲ್ಲಿ ಇದ್ದರೂ ಏಟು ತಿನ್ನುವದಲ್ಲ.[2]

೧೯. ಹೊಡೆಯಬೇಕೆಂದುಕೊಂಡವನು ಹೊಡೆಯುವವನು ಹೊಡೆದೆನು ಎಂದುಕೊಂಡರೂ, ಹೊಡೆಸಿಕೊಂಡವನು ಹೊಡೆಸಿಕೊಂಡೆನೆಂದರೂ, ಇಬ್ಬರೂ ಆತ್ಮನನ್ನು ತಿಳಿಯದವರೇ! ಈ ಆತ್ಮನು ಹೊಡೆಯುವುದೂ ಇಲ್ಲ: ಹೊಡೆಯಿಸಿಕೊಳ್ಳುವುದೂ ಇಲ್ಲ.[3]

೨೦. ಈ ಆತ್ಮನು ಅಣುವಿಗಿಂತ ಅಣುವು: ದೊಡ್ಡದಕ್ಕಿಂತಲೂ ದೊಡ್ಡವನು. ಪ್ರತಿಯೊಂದು ಜಂತುವಿನ ಹೃದಯದಲ್ಲೂ ಇರುವನು. ಆತನನ್ನು ಅಕ್ರತುವು (ಬೇಕು ಬೇಡ ಎಂಬ ಎರಡೂ ಇಲ್ಲದವನು) ನೋಡುವನು. ಹಾಗೆ ನೋಡಬೇಕಾದರೆ ಮನಸ್ಸು ಮೊದಲಾದವು

---

1. ಆಲಂಬನ ಎಂದರೆ, ಆಶ್ರಯವು. ಇಲ್ಲಿ ಎಲ್ಲವಕ್ಕೂ ಆಶ್ರಯ ಕೊಡುವುದರಿಂದ ಆತ್ಮವು ಆಲಂಬನವು.

2. ಗೀತೆ ಅ. II ಶ್ಲೋಕ ೨೦ ನೋಡಿ.

3. ಇಲ್ಲಿ ಶರೀರವು ನಾನು ಎಂದುಕೊಳ್ಳುವವನಿಗೂ ಶರೀರದ ಒಳಗೆ ಬೇರೆ ಇರುವ ಆತ್ಮನಿಗೂ ತೋರಿರುವ ವ್ಯತ್ಯಾಸವನ್ನು ಚಿಂತಿಸಿ.

ಗಳೆಲ್ಲವೂ ಪ್ರಸನ್ನವಾಗಿರಬೇಕು. (ಆಗ ಪರಮಾತ್ಮನು ಜೀವಾತ್ಮನ ಕರ್ಮಗಳಿಂದ ಹಾನಿ ವೃದ್ಧಿಯನ್ನು ಪಡೆಯುವುದಿಲ್ಲ ಎಂಬ ಆತ್ಮನ ಮಹಿಮೆಯನ್ನು) ಕಂಡು ಶೋಕವನ್ನು ಕಳೆದುಕೊಳ್ಳುವನು.

೨೧. (ಈ ಆತ್ಮನಿಗೆ ದೇಶ, ಕಾಲ, ಮೊದಲಾದುವುಗಳು ಯಾವವೂ ಯಾವ ಅಡ್ಡಿಯನ್ನೂ ಮಾಡಲಾರವು. ಅದರಿಂದ) ಇದ್ದಲ್ಲಿಯೇ ಇದ್ದು ದೂರ ಹೋಗುವನು. ಮಲಗಿದ್ದವನು ಎಲ್ಲೆಲ್ಲಿಯೋ ಅಲೆಯುವನು. (ಈತನು ಹರ್ಷ-ಅಹರ್ಷ ಎಂಬ ಎರಡೂ ಧರ್ಮಗಳು ಉಳ್ಳವನು.) ಹೀಗೆ ವಿರೋಧ ಧರ್ಮಗಳುಳ್ಳ ಈ ಆತ್ಮನನ್ನು 'ನಾನು–ಅಲ್ಲದವನು' ಯಾವನು ತಾನೇ ತಿಳಿಯಬಲ್ಲನು?

೨೨. ಶಾಶ್ವತಗಳಲ್ಲದ ಶರೀರಗಳಲ್ಲಿ ಇರುವ ಶಾಶ್ವತನಾದ ಅಶರೀರಿಯಾದ ಆತ್ಮನು ಮಹಾನ್–(ಎಲ್ಲರಿಗಿಂತ, ಎಲ್ಲದಕ್ಕಿಂತ ದೊಡ್ಡವನು,) ವಿಭು–(ಎಲ್ಲೆಲ್ಲಿಯೂ ತುಂಬಿರುವವನು,) ಆತ್ಮಾ–(ಇವನನ್ನೇ ಎಲ್ಲರೂ ನಾನು ನಾನು ಎನ್ನುವುದು,) ಎಂಬುದನ್ನು ತಿಳಿದ ಧೀರನು ಶೋಕವನ್ನು ನೀಗುವನು.

೨೩. ಈ ಆತ್ಮನನ್ನು ಪ್ರವಚನ[1]ದಿಂದ ಪಡೆಯುವುದು ಸಾಧ್ಯವಿಲ್ಲ: ಬುದ್ಧಿಯಿಂದ, ಹೆಚ್ಚಾಗಿ ಶ್ರವಣಮಾಡಿದುದರಿಂದ, ಪಡೆಯಲು ಆಗುವದಿಲ್ಲ. ಯಾವನನ್ನು ಈತನು ಆರಿಸಿಕೊಳ್ಳುವನೋ ಅವನಿಗೆ ಸಿಕ್ಕುವನು: ಅವನಿಗೆ ತನ್ನ ಸ್ವರೂಪವನ್ನು ತೋರಿಸಿಕೊಡುವನು.

೨೪. ದುಶ್ಚರಿತಗಳನ್ನು ಬಿಡದವನು, ಶಾಂತಿಯಿಲ್ಲದವನು, ಏಕಾಗ್ರಚಿತ್ತವಿಲ್ಲದವನು, ಮನಸ್ಸು ಶಾಂತವಾಗದವನು (ಕಾಮಸಂಕಲ್ಪಗಳು ತುಂಬಿದವನು), ಇವರಲ್ಲಿ ಯಾರೂ ಆತ್ಮನನ್ನು ಹೊಂದಲಾರರು. ಆತ್ಮನು ಪ್ರಜ್ಞಾನ[2]ಕ್ಕೆ ಮಾತ್ರ ಸಿಕ್ಕುವನು.

---

1. ಪ್ರವಚನವೆಂದರೆ ಇತರರಿಗೆ ತಿಳಿಯುವಂತೆ ಶಾಸ್ತ್ರಾದಿಗಳನ್ನು ವಿವರಿಸಿ ಹೇಳುವುದು.

2. ಜ್ಞಾನವು ತಾನೇ ತಾನಾಗುವುದೇ ಪ್ರಜ್ಞಾನ.

೨೫. ಯಾವ ಆತ್ಮನಿಗೆ ಬ್ರಹ್ಮ–ಕ್ಷತ್ರಗಳು ಎರಡೂ ತಿನ್ನುವ ಅನ್ನವೋ, (ಎಲ್ಲವನ್ನೂ ನುಂಗುವ) ಮೃತ್ಯುವು ಯಾವನಿಗೆ ಪ್ರೋಕ್ಷಣೆಯ ನೀರೋ, ಆ ಆತ್ಮನೆಲ್ಲಿರುವನು, ಎಂಬುದನ್ನು (ಹುಟ್ಟಿಬಂದವನು, ಸಾಮಾನ್ಯನು, ಸಾಧನ ಸಂಪನ್ನನಂತೆ[1]) ಹೇಗೆ ತಿಳಿದಾನು ?

ಇಂತಿದು ಎರಡನೆಯ ವಲ್ಲಿಯು.

ಮೂರನೆಯ ವಲ್ಲಿ.

(ಎರಡನೆಯ ವಲ್ಲಿಯಲ್ಲಿ ಶ್ರೇಯಸ್ಸು ಪ್ರೇಯಸ್ಸು ಎಂಬ ಎರಡನ್ನು ಹೇಳಿ, ಶ್ರೇಯಸ್ಸಿನ ಗುರಿಯಾದ ಆತ್ಮನನ್ನು ಕುರಿತು ಹೇಳಿಯಾಯಿತು. ಈ ಮೂರನೆಯ ವಲ್ಲಿಯಲ್ಲಿ ಹಿಂದೆ ಎರಡನೆಯ ವಲ್ಲಿ ೨೨ರಲ್ಲಿ ಹೇಳಿದ ಶರೀರದಲ್ಲಿರುವ ಶಾರೀರ ಆತ್ಮಾ, ಶರೀರದಲ್ಲಿದ್ದರೂ ಅಶರೀರನಾದ ಆತ್ಮಾ ಇಬ್ಬರನ್ನೂ ಕುರಿತು ಹೇಳಲಾಗುತ್ತದೆ.)

೧. ಈ ಲೋಕ (ಶರೀರ)[2] ದಲ್ಲಿ, ಹಿಂದೆ ಮಾಡಿದ ಕರ್ಮಗಳ ಫಲವನ್ನು ಅನುಭವಿಸುತ್ತಾ[3], ಹೃದಯದಲ್ಲಿ ಇರುವ ಪರಮಾಕಾಶವಾದ, ಗುಹಾ (ಎಂದರೆ ಬುದ್ಧಿಯಲ್ಲಿ) ಪ್ರವೇಶಮಾಡಿದವರಾಗಿ, ಬಿಸಿಲು

---

1. ಆತ್ಮನನ್ನು ತಿಳಿಯಲು ಸಾಧನಗಳಿದ್ದವನಿಗೆ ಮಾತ್ರ ಸಾಧ್ಯವು: ಇತರರಿಗೆ ಸಾಧ್ಯವಿಲ್ಲವೆಂಬುದು ಅಭಿಪ್ರಾಯ.

2. ಶರೀರವನ್ನು ಲೋಕ ಎಂದಿರುವುದನ್ನು ಗಮನಿಸಿ. ಲೋಕದಲ್ಲಿರು ಸಮಸ್ತವೂ ಈ ಶರೀರದಲ್ಲಿರುವುದು ಎಂದು ಇದರ ಅರ್ಥ.

3. ಜೀವಾತ್ಮ, ಪರಮಾತ್ಮರಲ್ಲಿ, ಜೀವಾತ್ಮನು ಮಾತ್ರ ಕರ್ಮ ಮಾಡು ವನು. ಪರಮಾತ್ಮನು ಕರ್ಮಗಳನ್ನು ಮಾಡುವುದೂ ಇಲ್ಲ: ಅದರ ಫಲವು ಅವನಿಗೆ ಇಲ್ಲವೂ ಇಲ್ಲ: ಆದರೂ ಜೀವಾತ್ಮನ ಜೊತೆಯಲ್ಲಿರುವುದರಿಂದ ಆತನಿಗೂ ಕರ್ಮಫಲವುಂಟು ಎಂದು ಉತ್ಪ್ರೇಕ್ಷೆಯು. ಬುದ್ಧಿಯನ್ನು ಗುಹಾ, ಚಿದಾಕಾಶ ಎಂದು ಎರಡೂ ಹೆಸರಿನಿಂದ ಕರೆಯುವುದುಂಟು. ಅದು ಸಹಜ ವಾಗಿ ಸಂಸ್ಕಾರರಹಿತವಾದಾಗ ಗುಹೆ: ಎಂದರೆ ಎಲ್ಲವನ್ನೂ ಮುಚ್ಚಿಡುವುದು ಎಂದು ಗುಹೆ. ಸಂಸ್ಕಾರಸಂಪನ್ನವಾದಾಗ ಅಲ್ಲಿಯೇ ಪರಮಾತ್ಮ ದರ್ಶನ ವಾಗುವುದು ಎಂದು ಚಿದಾಕಾಶ. ಹಿಂದೆ ವಲ್ಲಿ ೨. ಮಂತ್ರ ೧೨ರಲ್ಲಿ ಹೇಳಿದ ಅಧ್ಯಾತ್ಮಯೋಗವನ್ನು ಕುರಿತು ಚಿಂತಿಸಿದರೆ ಈ ಸ್ವಾರಸ್ಯವು ತಿಳಿಯುವುದು.

ನೆರಳುಗಳಂತೆ ಇರುವರು ಎಂದು ಬ್ರಹ್ಮಜ್ಞರು, ಪಂಚಾಗ್ನಿಗಳು, ತ್ರಿಣಾಚಿಕೇತ[1]ರು ಹೇಳುವರು.

೨. ಕರ್ಮ ಮಾಡುವವರಿಗೆಲ್ಲ ಸ್ವರ್ಗಕ್ಕೆ ಕಟ್ಟಿದ ಸೇತುವೆ ನಂತಿರುವ ನಾಚಿಕೇತಾಗ್ನಿಯನ್ನು ಆರಾಧಿಸುವುದಕ್ಕೂ, ಅದಕ್ಕೂ ಆಚೆಯಿರುವ, ಸಂಸಾರವನ್ನು ದಾಟಬೇಕು ಎಂದಿರುವವರಿಗೆ ಆಶ್ರಯ ವಾದ, ಅಕ್ಷರ ಬ್ರಹ್ಮವನ್ನು ತಿಳಿಯುವುದಕ್ಕೂ ಶಕ್ತರಾಗೋಣ.

(ಹಾಗೆ ಆಗಲು ಏನು ಮಾಡಬೇಕು. ಎಂಬುದನ್ನು ಮುಂದಿನ ಎರಡು ಶ್ಲೋಕಗಳಿಂದ ಹೇಳಲಾಗಿದೆ.)

೩-೪. ಆತ್ಮ (ಇಲ್ಲಿ ಜೀವಾತ್ಮ)ನನ್ನು ರಥಿಕನಾಗಿ ತಿಳಿ. ಶರೀರವೇ ರಥವು. ಬುದ್ಧಿಯೇ ಸಾರಥಿಯು. ಮನಸ್ಸು ಹಗ್ಗವು. ಇಂದ್ರಿಯಗಳು ಕುದುರೆಗಳು. ಇಂದ್ರಿಯಗಳ ಗುರಿಗಳಾದ ವಿಷಯ ಗಳೇ ಮಾರ್ಗಗಳು. ಶರೀರ, ಇಂದ್ರಿಯ, ಮನಸ್ಸು ಇವು ಗಳೆಲ್ಲವನ್ನೂ ಕೂಡಿಕೊಂಡಿರುವ ಆತನನ್ನು, ತಿಳಿದವರು ಭೋಕ್ತಾ (ಸಂಸಾರೀ) ಎನ್ನುವರು.

೫-೬. ಯಾವನ ಬುದ್ಧಿಯೆಂಬ ಸಾರಥಿಯು ನಿಪುಣನಾಗಿ ಹಗ್ಗವಾದ ಮನಸ್ಸನ್ನು ಬಿಗಿಯಾಗಿ ಯಾವಾಗಲೂ ಹಿಡಿದಿರಲಾರನೋ, ಆತನಿಗೆ ಸಾರಥಿಗೆ ಬಗ್ಗದ ಕೆಟ್ಟ ಕುದುರೆಗಳಂತೆ ಇಂದ್ರಿಯಗಳು ವಶದಲ್ಲಿರುವುದಿಲ್ಲ. ಯಾವನ ಬುದ್ಧಿಯೆಂಬ ಸಾರಥಿಯು ಹಗ್ಗವಾದ ಮನಸ್ಸನ್ನು ಯಾವಾಗಲೂ ಬಿಗಿಯಾಗಿ ಹಿಡಿದಿರುವನೊ ಅವನಿಗೆ, ಸಾರಥಿಗೆ ಸಗ್ಗುವ ಒಳ್ಳೆಯ ಕುದುರೆಗಳಂತೆ, ಇಂದ್ರಿಯಗಳು ವಶ ದಲ್ಲಿರುವುವು.

೭-೮. ಯಾವನು ವಿಜ್ಞಾನವಿಲ್ಲದವನೋ, ಮನಸ್ಸನ್ನು ಹಿಡಿತ ದಲ್ಲಿಟ್ಟಿಲ್ಲವೋ, ಯಾವಾಗಲೂ ಶೌಚಾಚಾರಸಂಪನ್ನನಾಗಿರುವು ದಿಲ್ಲವೋ ಅವನು ತತ್ಪದವನ್ನು ಹೊಂದುವುದಿಲ್ಲ: ಸಂಸಾರದಲ್ಲಿ

---

1. ತ್ರಿಣಾಚಿಕೇತ ಎಂಬುದಕ್ಕೆ ವಲ್ಲಿ ೧. ಮಂತ್ರ ೧೭ ನೋಡಿ.

ಕಟ್ಟುಬಿದ್ದಿರುವವನು. ಯಾವನು ವಿಜ್ಞಾನವಂತನೋ, ಮನಸ್ಸನ್ನು ಹಿಡಿತದಲ್ಲಿಟ್ಟಿರುವವನೋ, ಯಾವಾಗಲೂ ಶೌಚಾಚಾರಸಂಪನ್ನನೋ, ಅವನು ತತ್ಪದವನ್ನು ಹೊಂದಿಯೇ ಹೊಂದುವವನು. ಹಾಗೆ ತತ್ಪದವನ್ನು ಹೊಂದಿದವನು ಮತ್ತೆ ಹುಟ್ಟುವುದಿಲ್ಲ.

೯. ವಿಜ್ಞಾನ ಸಾರಥಿಯು ಯಾರಿಗುಂಟೋ, ಮನಸ್ಸೆಂಬ ಹಗ್ಗವು ಯಾರಿಗುಂಟೋ ಅವನು ಹಾದಿಯ[1] ಕೊನೆಯನ್ನು ಸೇರುವನು. ಅದೇ ವಿಷ್ಣುವಿನ ಪರಮ ಪದವು.

೧೦. ಇಂದ್ರಿಯಗಳಿಗಿಂತಲೂ ವಿಷಯಗಳು ಹೆಚ್ಚು.[2] ವಿಷಯಗಳಿಗಿಂತ ಮನಸ್ಸು ಹೆಚ್ಚು. ಮನಸ್ಸಿಗಿಂತ ಬುದ್ಧಿಯು ಹೆಚ್ಚು. ಬುದ್ಧಿಗಿಂತ ಮಹಾನ್ ಆದ ಆತ್ಮನು (ಜೀವಾತ್ಮ) ಹೆಚ್ಚು.

೧೧. ಮಹಾನ್ ಆತ್ಮ (ಇಲ್ಲಿ ಜೀವಾತ್ಮ)ನಿಗಿಂತ ಅವ್ಯಕ್ತವು ಹೆಚ್ಚು. ಅವ್ಯಕ್ತಕ್ಕಿಂತ ಪುರುಷನು ಹೆಚ್ಚು. ಪುರುಷನಿಗಿಂತ ಹೆಚ್ಚಾದುದು ಯಾವುದೂ ಇಲ್ಲ. ಆ ಪುರುಷನೇ ಎಲ್ಲದಕ್ಕೂ ಕೊನೆಯು: ಎಲ್ಲದಕ್ಕಿಂತ ಹೆಚ್ಚಿನ ಗತಿಯು.

೧೨. ಈ ಪುರುಷನು ಸರ್ವಭೂತಗಳಲ್ಲಿಯೂ ಗೂಢನಾಗಿರುವನು: ಪ್ರಕಾಶಿಸನು[3]: ಆದರೆ, ಸಂಸ್ಕಾರ ಸಂಪನ್ನವಾದ, ಸೂಕ್ಷ್ಮವಾದ ಬುದ್ಧಿಯುಳ್ಳ ಸೂಕ್ಷ್ಮದರ್ಶಿಗಳಿಗೆ ಕಾಣುವನು.

---

1. ಹಿಂದೆ ಇದೇ ವಲ್ಲಿಯ ೪ನೆಯ ಮಂತ್ರದಲ್ಲಿ ವಿಷಯಗಳನ್ನೇ ಮಾರ್ಗಗಳನ್ನಾಗಿ ಹೇಳಿದೆ. ಇಲ್ಲಿ ಮಾರ್ಗದ ಕೊನೆಯನ್ನು ಸೇರುವವನು ಎಂದಿದೆ. ಹಿಂದೆ ಇಂದ್ರಿಯ ವಶನಾಗದ ಧೀರನು ಅಮೃತತ್ವವನ್ನು ಪಡೆಯುವನು ಎಂದು ಹೇಳಿದೆ. ಇವೆಲ್ಲವನ್ನೂ ಸಮನ್ವಯ ಮಾಡಿನೋಡಿ.

(ಆ ವಿಷ್ಣುವಿನ ಪದವೇ ಸರ್ವವೂ ವಾಸುದೇವನೆಂಬ ಪರಮಸ್ಥಾನವು. ಅದನ್ನು ಪಡೆಯುವುದು ಹೇಗೆ ಎಂಬುದನ್ನು ಮುಂದೆ ಹೇಳಲಾಗಿದೆ.)

2. ಕಣ್ಣು—ಇಂದ್ರಿಯ. ನೋಡಿಸಿಕೊಳ್ಳುವ ವಸ್ತು—ವಿಷಯ.

3. ಪ್ರಕಾಶಿಸನು—ಕಾಣುವನು ಎಂಬ ಎರಡೂ ಒಂದಕ್ಕೊಂದು ವಿರೋಧವಲ್ಲವೇ ? ಎಂದರೆ ಸಂಸ್ಕಾರವಿಲ್ಲದಾಗ ಕಾಣಿಸನು: ಸಂಸ್ಕಾರವಿರುವಾಗ ಕಾಣುವನು ಎಂದರ್ಥ. ಸಂಸ್ಕಾರವನ್ನು ಹಿಂದಿನ ಶ್ಲೋಕದಲ್ಲಿ ಹೇಳಿದೆ.

೧೩. ಪ್ರಾಜ್ಞನಾದವನು ವಾಕ್ಕನ್ನು ಮನಸ್ಸಿನಲ್ಲಿಡಬೇಕು: ಆ ಮನಸ್ಸನ್ನು ಜ್ಞಾನಸ್ವರೂಪವಾದ ಬುದ್ಧಿಯಲ್ಲಿ ಇಡಬೇಕು: ಬುದ್ಧಿಯನ್ನು ಮಹಾನ್ ಆತ್ಮನಲ್ಲಿ, ಅದನ್ನು ಶಾಂತನಾದ ಪರಮಾತ್ಮನಲ್ಲಿ ಇಡಬೇಕು.

೧೪. ಏಳಿರಿ: ಎಚ್ಚರಗೊಳ್ಳಿರಿ: ವರಗಳನ್ನು ಪಡೆದುಕೊಳ್ಳಿ. ಕತ್ತಿಯ ಅಲುಗಿನಂತೆ ಹರಿತವಾಗಿ ನಡೆಯುವುದಕ್ಕೆ ಕಷ್ಟವಾಗಿರುವ ದಾರಿಯಿದು ಎಂದು ಕವಿಗಳು ಹೇಳುವರು.

೧೫. ಅಶಬ್ದವು, ಅಸ್ಪರ್ಶವು, ಅರೂಪವು, ಅವ್ಯಯವು ಅರಸವು, ಅಗಂಧವು ಆಗಿರುವ ಅದು ನಿತ್ಯವು, ಅನಾದಿಯು ಅನಂತವು. ಅದು ಮಹತ್ತಿನಿಂದ ಆಚೆ ಇರುವುದು. ಶಾಶ್ವತವಾಗಿರುವ ಅದನ್ನು ತಿಳಿದು ಮೃತ್ಯು ಮುಖದಿಂದ ಬಿಡಿಸಿಕೊಳ್ಳುವನು.

೧೬. ಮೃತ್ಯುವು ಹೇಳಿದ ಈ ಉಪಾಖ್ಯಾನವು ಸನಾತನವಾದುದು: ನಚಿಕೇತನಿಂದ ಲೋಕದಲ್ಲಿ ಹರಡಿತು. ಇದನ್ನು ಹೇಳಿದವರೂ ಕೇಳಿದವರೂ ಮೇಧಾವಿಗಳಾಗಿ ಬ್ರಹ್ಮಲೋಕದಲ್ಲಿ ಮೆರೆಯುವರು.

೧೭. ಪರಮಗುಹ್ಯವಾದ ಇದನ್ನು ಬ್ರಹ್ಮಸಭೆಯಲ್ಲಿ, ಶ್ರಾದ್ಧಕಾಲದಲ್ಲಿ, ಯಾರು ಕೇಳಿಸುವರೋ ಅವರು ಆನಂತ್ಯ (ಅನಂತದ ಭಾವ)ವನ್ನು ಹೊಂದುವರು.

ಇಂತಿದು ಮೂರನೆಯ ವಲ್ಲಿಯು.

ನಾಲ್ಕನೆಯ ವಲ್ಲಿ.

(ಆ ಬ್ರಹ್ಮವು ಎಲ್ಲೆಲ್ಲಿಯೂ ಇದ್ದರೂ ಎಲ್ಲರಿಗೂ ಏಕೆ ಕಾಣಿಸುವುದಿಲ್ಲ ಎಂಬುದನ್ನು ಕುರಿತು ಶಿಷ್ಯನಿಗೆ ಗುರುವು ಹೇಳುತ್ತಾನೆ.)

೧. ಬ್ರಹ್ಮನು ಇಂದ್ರಿಯಗಳನ್ನು ಹೊರಮೊಕವಾಗಿ ಮಾಡಿದನು. ಅದರಿಂದ, ಅವು ಹೊರಕ್ಕೆ ತಿರುಗಿವೆ: ಅವು ಅಂತರಾತ್ಮನನ್ನು

ನೋಡಲಾರವು. ಯಾವನೋ ಒಬ್ಬ ಧೀರನು, ಅಮೃತತ್ವವನ್ನು ಬಯಸಿ, ಇಂದ್ರಿಯ ವೃತ್ತಿಗಳನ್ನು ಅಂತರ್ಮುಖವಾಗಿ ತಿರುಗಿಸಿ ಪ್ರತ್ಯಗಾತ್ಮನನ್ನು ನೋಡುತ್ತಾನೆ.

೨. ಬಾಲರು (ತಿಳಿಯದಿದ್ದವರು) ಹೊರಗಿರುವ ಕಾಮ ವಿಷಯಗಳನ್ನು ಅಪೇಕ್ಷಿಸುವರು. ಅದರಿಂದ ಅವರು ಮೃತ್ಯುವು ಬೀಸಿದ ಪಾಶಗಳಲ್ಲಿ ಸಿಕ್ಕಿಕೊಳ್ಳುವರು. ಆದರೆ, ಧೀರರು ಅಮೃತತ್ವವನ್ನು ಬಲ್ಲವರಾಗಿ, ಧ್ರುವ(ಶಾಶ್ವತ)ವಾದ ಬ್ರಹ್ಮವನ್ನು ಅಧ್ರುವ (ಅಶಾಶ್ವತ) ಗಳಲ್ಲಿ ಅಪೇಕ್ಷಿಸುವುದಿಲ್ಲ.

೩. ರೂಪ, ರಸ, ಗಂಧ, ಶಬ್ದ, ಸ್ಪರ್ಶ, ಸಂಯೋಗ, ಮೊದಲಾದುವುಗಳನ್ನೆಲ್ಲ ತಿಳಿಯುವುದು ಆತ್ಮನಿಂದ. ಆ ಆತ್ಮನು ದೇಹವಲ್ಲ. ಆತನು ವಿಜ್ಞಾನರೂಪನು. ಆತನಿಗೆ ತಿಳಿಯದುದು ಯಾವುದೂ ಇಲ್ಲ. ನಚಿಕೇತ, ನೀನು ಯಾವುದನ್ನು ತಿಳಿಯಬೇಕು ಎಂದು ಕೇಳಿದೆಯೋ ಅದೇ ಆ ಆತ್ಮ.

೪. ಸ್ವಪ್ನದ ಕೊನೆ, ಜಾಗ್ರತ್ತಿನ ಕೊನೆ, ಎರಡನ್ನೂ ಯಾರಿಂದ ತಿಳಿಯುವನೋ, ಆತನು ಮಹಾನ್, ವಿಭು, ಆತ್ಮಾ. ಆತನನ್ನು ಹಾಗೆಂದು ತಿಳಿದ ಧೀರನು ಶೋಕಿಸುವುದಿಲ್ಲ.[1]

೫. ಯಾವನು ಕರ್ಮಫಲಭೋಕ್ತೃ ಎನ್ನಿಸಿಕೊಂಡಿರುವ, ದೇಹದಲ್ಲಿರುವ ಪ್ರಾಣಾದಿಗಳನ್ನೆಲ್ಲ ಧಾರಣಮಾಡಿಕೊಂಡಿರುವ, ಜೀವ

---

1. ಇಲ್ಲಿ ಸಾಕ್ಷಿಭಾವವನ್ನು ಹೇಳಿದೆ. ಜಾಗ್ರತ್ತಿನಲ್ಲ ಇಂದ್ರಿಯ ವೃತ್ತಿಗಳು ಬಲವಾಗಿ ಮನೋಬುದ್ಧಿಗಳು ಅವುಗಳ ಹಿಂದೆ ಹೋಗಿರುವುದರಿಂದ, ಆಗ ಸಾಕ್ಷಿಯ ದರ್ಶನವಾಗುವುದಿಲ್ಲ. ಕನಸಿನಲ್ಲಿ ಆತ್ಮನು ತಾನೇ ತನ್ನ ಸ್ವರೂಪವನ್ನು ದೃಶ್ಯರೂಪವಾಗಿ ಕಾಣಲು ತೊಡಗಿರುವುದರಿಂದ, ಆಗಲೂ ಸಾಕ್ಷಿಯ ದರ್ಶನವಿಲ್ಲ. ಅದರಿಂದ ಜಾಗ್ರತ್ತು ಮುಗಿದು ಕನಸಿಗೆ ಬರುವಾಗಲೂ, ಕನಸು ಮುಗಿದು ಜಾಗ್ರತ್ತಿಗೆ ಬರುವಾಗಲೂ ಸಾಕ್ಷಿಯ ದರ್ಶನವಾಗುವುದು. ಆಗ ಜಾಗ್ರತ್ತಿನಲ್ಲಿರುವಂತೆ ಕರ್ಮೇಂದ್ರಿಯ ವೃತ್ತಿಯಿಲ್ಲ; ಕನಸಿನಲ್ಲಿರುವಂತೆ ಜ್ಞಾನೇಂದ್ರಿಯ ವೃತ್ತಿಯಿಲ್ಲ. ಅದರಿಂದ ವೃತ್ತಿಶೂನ್ಯವಾದಾಗ ಆಗುವ ಸಾಕ್ಷಿಯ ದರ್ಶನವಾಗುವುದು. ಈ ಸ್ಥಿತಿಯನ್ನು ಪಡೆಯಲು ಉಷಾದೇವಿಯ ಅನುಗ್ರಹವಾಗಬೇಕು ಎಂದು ಹಿರಿಯರು.

ನನ್ನು ಆತ್ಮನೆಂದು, ಭೂತ (ಕಳೆದುಹೋದುದು), ಭವ್ಯ (ಮುಂದೆ ಆಗುವುದು)ವೆಂಬ ಎರಡಕ್ಕೂ ಒಡೆಯನೆಂದು ತಿಳಿಯುವನೋ ಅವನು "ರಕ್ಷಣೆಯು ಬೇಕಾಗಿಲ್ಲ: ನಾನು ಅಭಯನು" ಎಂದು ಸುಖವಾಗಿರುವನು. ನೀನು ಕೇಳಿದೆಯಲ್ಲ ಅದೇ ಅದು.

೬. ಆ ಸಾಕ್ಷಿಯು, ಜೀವನೆಂದೆನ್ನಿಸಿಕೊಂಡಿರುವನು, ಯಾರು ಎಂದರೆ, ತಪಸ್ಸಿನಿಂದ ಮೊಮ್ಮೊದಲು ಹುಟ್ಟಿದ ಹಿರಣ್ಯಗರ್ಭನು, ಎಲ್ಲದಕ್ಕೂ ಆದಿಕಾರಣವಾದ ಅಪ್ಪಿಗಿಂತ ಮೊದಲು ಹುಟ್ಟಿದ ಹಿರಣ್ಯಗರ್ಭನು ಬುದ್ಧಿಯನ್ನು ಪ್ರವೇಶಿಸಿ ಭೂತಗಳೊಡನೆ ಕುಳಿತಿರುವನು. ಅವನನ್ನು ಕಂಡವನು ಧನ್ಯನು. ನೀನು ಕೇಳಿದುದು ಯಾವುದೋ ಅದೇ ಅದು.

೭. ಪ್ರಾಣರೂಪನಾದ ಹಿರಣ್ಯಗರ್ಭನಾಗಿ ಹುಟ್ಟುವ ಅದಿತಿಯು ಉಂಟಲ್ಲವೇ, ಆಕೆಯಲ್ಲಿ ಸರ್ವ ದೇವತೆಗಳೂ ಇರುವರು. ಆಕೆಯು ಗುಹೆಯನ್ನು ಪ್ರವೇಶಿಸಿ ಭೂತಗಳೊಡನೆ ಕುಳಿತಿರುವಳು. ಅವಳು ಯಾರಿಂದ ಹುಟ್ಟಿದಳೋ ಅದೇ ಬ್ರಹ್ಮ. ಅದನ್ನೇ ನೀನು ಕೇಳಿದುದು.

೮. ಗರ್ಭಿಣಿಯರು ಗರ್ಭವನ್ನು ಧರಿಸಿದಂತೆ, ಅರಣಿಗಳು ಧರಿಸಿರುವ ಜಾತವೇದನುಂಟಲ್ಲವೆ, ದಿನದಿನವೂ ಎಚ್ಚರಿಕೆಯಿಂದಿರುವ ಕರ್ಮಿಗಳು ಹೊರಗೂ, ಯೋಗಿಗಳು ಹೃದಯದಲ್ಲೂ ಯಾರನ್ನು ಹೊಗಳುವರೋ, ಹವಿಸ್ಸನ್ನು ತಂದು ಮನುಷ್ಯರು ಯಾರಿಗೆ ಒಪ್ಪಿಸುವರೋ, ಆ ಅಗ್ನಿ, ಆತನು ಯಾರಿಂದ ಹುಟ್ಟಿದನೋ ಅದು ಬ್ರಹ್ಮ. ಅದೇ ನೀನು ಕೇಳಿದುದು.

೯. ಸೂರ್ಯನು ಎಲ್ಲಿ ಉದಯಿಸುವನೋ, ಎಲ್ಲಿ ಅಸ್ತನಾಗುವನೋ, ಆ ಪ್ರಾಣನುಂಟಲ್ಲ, ಆತನನ್ನು ದೇವತೆಗಳೆಲ್ಲರೂ ಆಶ್ರಯಿಸುವರು. ಅವನನ್ನು ದಾಟಿ ಯಾರೂ ಹೋಗಲಾರರು. ಆ ಪ್ರಾಣವು ಎಲ್ಲಿಂದ ಬಂತೋ ಅದು ಬ್ರಹ್ಮ. ಅದನ್ನೇ ನೀನು ಕೇಳಿದುದು.

೧೦. ಯಾವುದು ಇಲ್ಲಿ ಉಪಾಧಿಯಿಂದ ಕೂಡಿ ಬೇರೆಬೇರೆ ಯಾಗಿರುವಂತೆ ಕಾಣುವುದೋ, ಅದೇ ಅಲ್ಲಿ ಈ ಲೋಕದಿಂದಾಚೆ ತಾನೇತಾನಾಗಿರುವುದು. ಅಲ್ಲಿ ಯಾವುದು ತಾನೇತಾನಾಗಿರು ವುದೋ ಅದೇ ಇಲ್ಲಿ ಹೀಗೆ ನಾನಾ ಆಗಿರುವುದು. ಅದರಿಂದ, ಯಾರು ಎಲ್ಲವೂ ಒಂದೇ ಎನ್ನದೆ, ಇಲ್ಲಿ ನಾನಾ ಎಂದುಕೊಂಡಿರು ವರೋ ಅವರು ಮೃತ್ಯುವಿನಿಂದ ಮರಣವನ್ನು ಹೊಂದುವರು.

೧೧. ಈ ಬ್ರಹ್ಮವನ್ನು ಪರಿಶುದ್ಧವಾದ ಶ್ರದ್ಧಾಯುಕ್ತ ವಾದ ಮನಸ್ಸಿನಿಂದಲೇ ಪಡೆಯಬೇಕು. ಇಲ್ಲಿ ನಾನಾ ಎಂಬುದ, ಎಳ್ಳಷ್ಟೂ ಇಲ್ಲ. ಯಾವನು ಇಲ್ಲಿ ನಾನಾ ಎಂದುಕೊಳ್ಳುವನೋ ಅವನು ಮೃತ್ಯುವಿನಿಂದ ಮರಣವನ್ನು ಹೊಂದುವನು.

೧೨. ಹೃದಯದಲ್ಲಿ ಅಂಗುಷ್ಠಪರಿಮಾಣವುಳ್ಳ[1] ಒಬ್ಬ ಪುರುಷ ನಿದ್ದಾನೆ. ಆತನೇ ಭೂತಭವ್ಯಗಳ ನಾಥನು. ಅವನನ್ನು ತಿಳಿದವನಿಗೆ ಬೇರೆ ರಕ್ಷೆಯು ಬೇಕಾಗಿಲ್ಲ.[2] ನೀನು ಕೇಳಿದುದೇ ಅದು.

೧೩. (ಹೃದಯದಲ್ಲಿರುವ) ಅಂಗುಷ್ಠದಷ್ಟಿರುವ ಪುರುಷನು ಹೊಗೆಯಿಲ್ಲದ ಬೆಂಕಿಯಂತಿರುವನು. ಅವನು ಭೂತಭವ್ಯಗಳ ನಾಥನು. ಆತನು ಈಗ ಇರುವನು : ನಾಳೆಯೂ ಇರುವನು. ಅವನನ್ನೇ ನೀನು ಕೇಳಿದುದು.

೧೪. ಪರ್ವತಶಿಖರದಲ್ಲಿ ಆದ ಮಳೆಯ ನೀರು ಹಳ್ಳಹಳ್ಳ ದಲ್ಲಿಯೂ ಹರಿಯುವುದು. ಹಾಗೆ ಶರೀರ ಶರೀರದಲ್ಲಿಯೂ ಹಳ್ಳ ಹಳ್ಳದ ನೀರಿನಂತೆ ಬೇರೆಬೇರೆಯಾಗಿ ಕಾಣುತ್ತಿದ್ದರೂ ಆತ್ಮನು

---

1. ಬ್ರಹ್ಮವು ಯಾವ ಉಪಾಧಿಯೂ ಇಲ್ಲದ್ದು. ಹೀಗಿರಲು ಅಂಗುಷ್ಠ ದಷ್ಟು ಎಂದು ಹೇಳುವುದು ಸರಿಯೆ? ಎಂದರೆ, ಇದು ಉಪಾಸನಕ್ಕಾಗಿ ಹೇಳಿರುವುದು. ಅದರಿಂದ ದೋಷವಿಲ್ಲ.

2. ಭಯವಿರುವುದು ರಕ್ಷೆ ಬೇಕಾಗಿರುವುದು ಕ್ಷರ ಪುರುಷನಿಗೆ : ಅಕ್ಷರ ಪುರುಷನಿಗಲ್ಲ. ಎಂದಿನವರೆಗೆ ದೇಹವು ತಾನು ಎಂದುಕೊಂಡಿರುವನೋ ಅದುವರೆಗೆ ಭಯ. ದೇಹವು ತಾನಲ್ಲ ಎಂದ ಮೇಲೆ ಭಯವೇನು ?

ಒಂದೇ ! ಇದನ್ನರಿಯದೆ ಶರೀರ ಶರೀರದಲ್ಲಿಯೂ ಆತ್ಮನು ಬೇರೆ ಬೇರೆ ಎಂದವನಿಗೆ ಶರೀರ ಬರುವುದು ತಪ್ಪುವುದೇ ಇಲ್ಲ.

೧೫. ಶುದ್ಧವಾದ ನೀರಿಗೆ ಶುದ್ಧವಾದ ನೀರನ್ನು ಸೇರಿಸಿದರೆ ಎರಡೂ ಒಂದಾಗುವುದಲ್ಲವೆ ? ಹಾಗೆ, ಗೌತಮ, ತಿಳಿದವನು ಮನನಶೀಲನಾಗಿ ಆತ್ಮನ ಐಕ್ಯತೆಯನ್ನು ತಿಳಿಯುವನು.

ಇಂತಿದು ನಾಲ್ಕನೆಯ ವಲ್ಲಿಯು.

ಐದನೆಯ ವಲ್ಲಿ.

೧. (ಮುಖದಲ್ಲಿ ಏಳು, ಕೆಳಗೆ ನಾಭಿಯೂ ಸೇರಿ ಮೂರು, ತಲೆಯಲ್ಲಿ ಒಂದು, ಹೀಗೆ) ಹನ್ನೊಂದು ದ್ವಾರಗಳಿರುವ ಶರೀರವೆಂಬ ಈ ಪುರವು ಜನ್ಮವಿಲ್ಲದ ಅಜನದು. ಸೂರ್ಯಪ್ರಕಾಶದಂತೆ ಯಾವಾಗಲೂ ತನ್ನ ಜ್ಞಾನ ಪ್ರಕಾಶದಿಂದ ಬೆಳಗುತ್ತಿರುವ ಬ್ರಹ್ಮನದು. ಈ ಬ್ರಹ್ಮವನ್ನು ಅನುಷ್ಠಾನ ಮಾಡಿದವನು ಶೋಕಿಸುವುದಿಲ್ಲ : (ಶೋಕವನ್ನು ದಾಟುವನು. ಈ ದೇಹವಿರುವಾಗಲೇ ಕಾಮ ಕರ್ಮ ಬಂಧನಗಳಿಂದ ವಿಮುಕ್ತನಾಗುವನು.) ಮತ್ತೆ ಶರೀರವನ್ನು ಪಡೆಯದೆ ಮುಕ್ತನಾಗುವನು.

೨. (ಆ ಬ್ರಹ್ಮವು ಎಲ್ಲೆಲ್ಲಿಯೂ ಇರುವುದು :) ದ್ಯುಲೋಕದಲ್ಲಿ ಸೂರ್ಯನಾಗಿರುವುದು. ವಾಯುವಾಗಿ ಅಂತರಿಕ್ಷದಲ್ಲಿರುವುದು. ಅಗ್ನಿಯಾಗಿ ಅಗ್ನಿಕುಂಡದಲ್ಲಿರುವುದು : ಸೋಮನಾಗಿ ಕಲಶದಲ್ಲಿರುವುದು. ಮನುಷ್ಯರಲ್ಲಿರುವುದು. ದೇವತೆಗಳಲ್ಲಿರುವುದು. ಸತ್ಯದಲ್ಲಿರುವುದು. ಆಕಾಶದಲ್ಲಿರುವುದು. ನೀರಿನಲ್ಲಿರುವುದು. ಭೂಮಿಯಲ್ಲಿರುವುದು. ಯಜ್ಞಗಳಾಗುವುದು. ನದಿಗಳಾಗುವುದು. ಹೀಗೆ ಸರ್ವಾತ್ಮವಾಗಿದ್ದರೂ ಒಂದೇ ರೂಪವಾಗಿರುವುದು : ಅಷ್ಟೇ ಅಲ್ಲ. ಎಲ್ಲದಕ್ಕಿಂತ ದೊಡ್ಡದೂ ಆಗಿರುವುದು.

೩. (ಆ ಬ್ರಹ್ಮವನ್ನು ಗುರುತಿಸುವ ಗುಟ್ಟು ಹೇಳುತ್ತಾನೆ) (ಅದು) ಹೃದಯದಿಂದ ಮೇಲಕ್ಕೆ ಪ್ರಾಣವನ್ನು ಎತ್ತುವುದು: ಅಪಾನವನ್ನು ಕೆಳಕ್ಕೆ ಎಸೆಯುವುದು. ಆ ಪ್ರಾಣ ಅಪಾನಗಳ ನಡುವೆ ಸೇವ್ಯನಾಗಿ ಇರುವ ಆ ಬ್ರಹ್ಮವನ್ನು ದೇವತೆಗಳೆಲ್ಲರೂ ಉಪಾಸನಮಾಡುವರು.

೪. ಈ ಶರೀರದಲ್ಲಿರುವ ದೇಹಿಯು ಈ ದೇಹವನ್ನು ಬಿಟ್ಟು ಹೋಗುವಾಗ, ಏನು ತಾನೇ ಉಳಿಯುವುದು? ಆ ದೇಹಿಯು ಬ್ರಹ್ಮ. ಅದೇ ನೀನು ಕೇಳಿದುದು.

೫. ಮನುಷ್ಯನು ಬದುಕುವುದು ಪ್ರಾಣದಿಂದಲ್ಲ: ಅಪಾನದಿಂದಲ್ಲ: ಈ ಎರಡೂ ಆಶ್ರಯಿಸಿಕೊಂಡಿರುವ ಇನ್ನೊಂದು ಉಂಟಲ್ಲ: ಅದರಿಂದ.

೬. ಅಯ್ಯಾ, ನಿನಗೆ ಈ ರಹಸ್ಯವನ್ನು ಹೇಳುವೆನು. ಬ್ರಹ್ಮವು ಸನಾತನವು. ಗೌತಮ, ಆತ್ಮನು ಮರಣವನ್ನು ಹೊಂದಿ ಮತ್ತೆ ಹುಟ್ಟುವುದು ಹೇಗೆ ಎಂಬುದನ್ನು ಹೇಳುವೆನು ಕೇಳು.

೭. ಕೆಲವರು ಜೀವರು ಮತ್ತೆ ಶರೀರವನ್ನು ಪಡೆಯಲು ಗರ್ಭವನ್ನು ಸೇರುವರು. ಇನ್ನೂ ಕೆಲವರು ಮರ ಮುಂತಾದ ಸ್ಥಾವರ ಜನ್ಮವನ್ನೂ ಪಡೆಯುವರು. ಅದೆಲ್ಲವೂ ಅವರವರ ಕರ್ಮ, ಜ್ಞಾನಗಳಿಗೆ ಅನುಸಾರವಾಗಿ ಆಗುವುದು.

೮. (ಇನ್ನೂ ಬ್ರಹ್ಮವನ್ನು ಕುರಿತು ಹೇಳುವೆನು ಕೇಳು) ಯಾರು ಇಂದ್ರಿಯಾದಿಗಳು ಮಲಗಿರುವಾಗ, ತಾನು ಎಚ್ಚರವಾಗಿದ್ದುಕೊಂಡು, ತನಗೆ ಬೇಕು ಎಂದೆನಿಸಿದ್ದ ಕಾಮಗಳನ್ನೆಲ್ಲ ನಿರ್ಮಾಣಮಾಡುವನೋ ಅವನೇ ಶುದ್ಧಬ್ರಹ್ಮವು. ಅದೇ ಅಮೃತವು. ಅದರಲ್ಲಿಯೇ ಎಲ್ಲಾ ಲೋಕಗಳೂ ಇರುವುವು. ಅದನ್ನು ದಾಟಿ ಯಾರೂ ಹೋಗಲಾರರು. ಅದೇ ನೀನು ಕೇಳಿದುದು.

೯. ಅಗ್ನಿಯು ತಾನೊಬ್ಬನೇ ಆಗಿದ್ದರೂ ಈ ಲೋಕದಲ್ಲಿ ಬೇರೆ ಬೇರೆ (ಕಡೆಗಳಲ್ಲಿ ತಾನು ಸುಡುವ ಪದಾರ್ಥಗಳಿಗೆ ತಕ್ಕಂತೆ)

ಬೇರೆ ಬೇರೆ ರೂಪವಾಗಿ ಹೇಗೆ ಕಾಣಿಸುವನೋ ಹಾಗೆಯೇ ಏಕನಾದ ಆತ್ಮನು ಸರ್ವಭೂತಗಳ ಒಳಗೆ ಆತ್ಮನಾಗಿಯೂ ಹೊರಗೆ ರೂಪರೂಪಗಳಿಗೆ ತಕ್ಕಂತೆ ಬೇರೆ ಬೇರೆಯಾಗಿಯೂ ಇರುವನು.

೧೦. ವಾಯುವು ತಾನೊಬ್ಬನೇ ಆಗಿದ್ದರೂ ಈ ಲೋಕದಲ್ಲಿ ಬೇರೆ ಬೇರೆ ಕಡೆಗಳಲ್ಲಿ ತಾನು ಬೇರೆ ಬೇರೆಯಾಗಿ ಕಾಣುವಂತೆ, ಏಕನಾದ ಆತ್ಮನು ಸರ್ವ ಭೂತಗಳ ಒಳಗೆ ಆತ್ಮನಾಗಿ ಹೊರಗೆ ರೂಪರೂಪಗಳಿಗೆ ತಕ್ಕಂತೆ ಬೇರೆ ಬೇರೆಯಾಗಿಯೂ ಇರುವನು.

೧೧. ಸೂರ್ಯನು ಸರ್ವಲೋಕಗಳಿಗೂ ಚಕ್ಷುವಾಗಿರುವನು. ಆದರೂ ಅವರಿವರ ಕಣ್ಣುಗಳಲ್ಲಿರುವ ದೋಷಗಳಿಂದ ಆತನಿಗೆ ಏನೂ ಆಗುವುದಿಲ್ಲ. ಹಾಗೆಯೇ ತಾನು ಏಕನಾಗಿ ಸರ್ವಭೂತಗಳೊಳಗೆ ಆತ್ಮನಾಗಿರುವ ಆತನು, ಹೊರಗೆ ನಾನಾರೂಪನಾಗಿದ್ದರೂ ಲೋಕದುಃಖಗಳಿಗೆ ಆತನು ಸಿಕ್ಕುವುದಿಲ್ಲ.

೧೨. ಏಕನಾಗಿ, ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವ, ಸರ್ವ ಭೂತಗಳ ಒಳಗೆ ಇರುವ ಆತ್ಮನು, ಒಂದೇ ರೂಪವನ್ನು ನಾನಾ ಆಗಿಮಾಡುವ ಆ ಆತ್ಮನು, ತನ್ನಲ್ಲಿಯೇ ಇರುವನು. ಆತನನ್ನು ಕಂಡವರು ಯಾರೋ ಅವರೇ ಧೀರರು. ಶಾಶ್ವತ ಸುಖವು ಅವರಿಗಲ್ಲದೆ ಇತರರಿಗಲ್ಲ.

೧೩. ಎಲ್ಲವೂ ಅನಿತ್ಯವಾದರೂ ಆತನು ನಿತ್ಯನು: ಎಲ್ಲವೂ ಅಚೇತನವಾದರೂ ಆತನು ಚೇತನನು. ಅನೇಕರ ಕಾಮಗಳನ್ನೆಲ್ಲ ಆತನು ಒಬ್ಬನೇ ಆಗಿ ಪೂರಯಿಸುವನು. ಈ ಆತ್ಮನು ತನ್ನಲ್ಲಿಯೇ ಇರುವನು. ಆತನನ್ನು ಕಂಡವರು ಯಾರೋ ಅವರೇ ಧೀರರು. ಶಾಶ್ವತ ಸುಖವು ಅವರಿಗಲ್ಲದೆ ಇತರರಿಗಲ್ಲ.

೧೪. ಸಾಮಾನ್ಯರಿಗೆ ಹೇಳುವುದಕ್ಕೂ ಊಹಿಸುವುದಕ್ಕೂ ಆಗದ ಆ ಪರಮ ಸುಖವು ಯಾವುದುಂಟೋ ಅದನ್ನು ಬಲ್ಲವರು ಇದು ಎಂದು

ಅರಿಯುವರು. ಅದನ್ನು ಹೇಗೆ ತಾನೇ ವಿಸ್ತರಿಸಲಿ? ಅದು ಪ್ರಕಾಶವಾಗಿ ಬೆಳಗುವುದೆನ್ನಲೇ? ಬುದ್ಧಿಗೆ ಹೊಳೆಯುವುದೆನ್ನಲೇ?

೧೫. ಅಲ್ಲಿ ಸೂರ್ಯನು ಬೆಳಗಲಾರನು: ಚಂದ್ರನಕ್ಷತ್ರಗಳೂ ಇಲ್ಲ: ಈ ಮಿಂಚುಗಳೂ ಮಿಂಚುವುದಿಲ್ಲ: ಹೀಗಿರಲು ಈ ಬೆಂಕಿಯು ಬೆಳಗುವುದುಂಟೆ? ಆತನು ಬೆಳಗಲು, ಆತನ ಬೆನ್ನು ಹಿಡಿದು ಇವೆಲ್ಲವೂ ಬೆಳಗುವುವು. ಆತನ ಬೆಳಕಿನಿಂದ ಮಿಕ್ಕೆಲ್ಲವೂ ಬೆಳಗುವುವು.

ಇಂತಿದು ಐದನೆಯ ವಲ್ಲಿಯು.

ಆರನೆಯ ವಲ್ಲಿ.

೧. ಬೇರು ಮೇಲೆ, ಕೊಂಬೆ ಕೆಳಗೆ, ಆದ ಈ ಅಶ್ವತ್ಥವು ಸನಾತನವಾದುದು. ಅದೇ ಶುಕ್ರ (ಶುದ್ಧ)ವು, ಅದೇ ಬ್ರಹ್ಮವು. ಅದೇ ಅಮೃತ ಎನ್ನಿಸಿಕೊಳ್ಳುವುದು. ಅದರಲ್ಲಿ ಎಲ್ಲಾ ಲೋಕಗಳೂ ಇರುವುವು. ಅದನ್ನು ಯಾರೂ ಮೀರಿ ಹೋಗಲಾರರು*

೨. ಓಡಾಡುವುದು ಯಾವುದು ಯಾವುದುಂಟೋ ಅದೆಲ್ಲವೂ ಬ್ರಹ್ಮದಿಂದಲೇ ಬಂದುದು. ಆ ಪ್ರಾಣ (ಬ್ರಹ್ಮ)ವು ಇರಲಾಗಿ ಚಲಿಸುವುದು. ಆ ಬ್ರಹ್ಮವನ್ನು ಕಂಡರೆ ಎಲ್ಲರೂ ಹೆದರುವರು. ವಜ್ರಪಾಣಿಯನ್ನು ಕಂಡರೆ ಹೆದರುವಂತೆ ಹೆದರುವರು. ಈ ಬ್ರಹ್ಮವನ್ನು ಬಲ್ಲವರು ಅಮೃತರಾಗುವರು.

೩. ಈ ಬ್ರಹ್ಮದ ಅಂಜಿಕೆಯಿಂದ ಅಗ್ನಿಯು ಸುಡುವನು: ಅದರ ಭಯದಿಂದ ಸೂರ್ಯನು ಸುಡುವನು. ಅದರ ಭಯದಿಂದ ಇಂದ್ರನು, ವಾಯುವು, ಕೊನೆಗೆ ಐದನೆಯವನಾದ ಮೃತ್ಯುವೂ ಓಡುವರು.

೪. ಈ ದೇಹವು ಬೀಳುವುದಕ್ಕೆ ಮುಂಚೆಯೇ ಅದನ್ನು ತಿಳಿಯಬೇಕು. ಹಾಗೆ ತಿಳಿಯದೆಹೋದರೆ, ಯಾವಯಾವದೋ ಲೋಕಗಳಲ್ಲಿ ಶರೀರವನ್ನು ಧರಿಸಬೇಕಾಗುವುದು.

---

* ಸಂಸಾರವನ್ನು ಇಲ್ಲಿ ವೃಕ್ಷಕ್ಕೆ ಹೋಲಿಸಿದೆ. ಗೀತೆ ಅಧ್ಯಾಯ ೧೫ರಲ್ಲೂ ಈ ಭಾವನೆ ಇದೆ.

೫. ಈ ಲೋಕದಲ್ಲಿ (ಬುದ್ಧಿಯು ಶುದ್ಧವಾಗಿದ್ದರೆ) ಆತ್ಮನು ಬುದ್ಧಿಯಲ್ಲಿ ಕನ್ನಡಿಯಲ್ಲಿ ಕಂಡಂತೆ ಕಾಣುವನು: ಪಿತೃಲೋಕದಲ್ಲಿ ಆತ್ಮನು ಕನಸಿನಲ್ಲಿ ಕಾಣುವಂತೆ ಕಾಣುವನು. ಗಂಧರ್ವಲೋಕದಲ್ಲಿ ಆತ್ಮನು ನೀರಿನಲ್ಲಿ ಕಾಣುವಂತೆ ಕಾಣುವನು. ಬ್ರಹ್ಮಲೋಕದಲ್ಲಿ ಬೆಳಕು ಕತ್ತಲೆಗಳಂತೆ ಚೆನ್ನಾಗಿ ಕಾಣುವನು.

೬. ಆಕಾಶಾದಿ ಭೂತಗಳಿಂದ ಹುಟ್ಟುವ ಇಂದ್ರಿಯಗಳು ಆತ್ಮನಿಂದ ಬೇರೆಯಾದವು. ಇವುಗಳ ಹುಟ್ಟು ಇದು: ಕೊನೆಯಿದು ಎಂದು ತಿಳಿದವನು ಧೀರನು: ಆತನಿಗೆ ಶೋಕವಿಲ್ಲ.

೭. ಇಂದ್ರಿಯಗಳಿಗಿಂತ ಮನಸ್ಸು ಮೇಲಿನದು: ಮನಸ್ಸಿಗಿಂತ ಬುದ್ಧಿಯು ಮೇಲಿನದು: ಬುದ್ಧಿಗಿಂತ ಮಹಾನ್ ಆತ್ಮನು ಮೇಲಿನವನು. ಆ ಮಹತ್ತಿಗಿಂತ ಅವ್ಯಕ್ತವು ದೊಡ್ಡದು.

೮. ಅವ್ಯಕ್ತಕ್ಕಿಂತಲೂ ಪುರುಷನು ಹೆಚ್ಚು: ಆತನು ಎಲ್ಲವನ್ನೂ ವ್ಯಾಪಿಸಿರುವನು. ಆತನು ಯಾವ ಗುರುತೂ ಇಲ್ಲದವನು. ಆತನನ್ನು ತಿಳಿದರೆ, ಜಂತುವು ಅಮೃತನಾಗುವನು: ಮುಕ್ತನಾಗುವನು.

೯. ಬ್ರಹ್ಮವು ಯಾರ ಕಣ್ಣಮುಂದೆಯೂ ನಿಂತಿಲ್ಲ. ಯಾರೂ ಅದನ್ನು ಕಣ್ಣಿಂದ ನೋಡುವುದಿಲ್ಲ. ಬುದ್ಧಿಯಿಂದ, ಸ್ಥಿರ ಸಂಕಲ್ಪದಿಂದ, ಮನನಮಾಡುವುದರಿಂದ, ಇದನ್ನು ತಿಳಿಯುವರು. ತಿಳಿದವರು ಅಮೃತರಾಗುವರು.

೧೦. ಪಂಚೇಂದ್ರಿಯಗಳೂ ಮನಸ್ಸೂ ಯಾವಾಗ ವಿಷಯಗಳನ್ನು ಚಿಂತಿಸುವುದನ್ನು ಬಿಟ್ಟು ಸ್ಥಿರವಾಗುವುವೋ, ಬುದ್ಧಿಯೂ ತನ್ನ ವ್ಯಾಪಾರವನ್ನು ಮಾಡುವುದಿಲ್ಲವೋ, ಅದನ್ನು ಪರಮಾಗತಿಯೆನ್ನುವರು.

೧೧. ಸ್ಥಿರವಾದ ಆ ಇಂದ್ರಿಯ ಧಾರಣವನ್ನು ಯೋಗ ಎನ್ನುವರು. ಆಗ, ಆ ಸ್ಥಿತಿಯನ್ನು ಪಡೆದಾಗ, ಪ್ರಮಾದವಿಲ್ಲದವನಾಗು

ವನು. ಯೋಗವೇ ಪ್ರಭವವು : ಅಪ್ಯಯುವು (ಪ್ರಭವ ಎಂದರೆ ಹುಟ್ಟು —ಅಪ್ಯಯು ಎಂದರೆ ಸಾವು.)[1]

೧೨. ಈ ಬ್ರಹ್ಮವನ್ನು ವಾಕ್ಕಿನಿಂದ, ಮನಸ್ಸಿನಿಂದ, ಕಣ್ಣಿನಿಂದ ಪಡೆಯುವುದಕ್ಕೆ ಸಾಧ್ಯವಿಲ್ಲ. (ಐದು ಇಂದ್ರಿಯಗಳೂ, ಮನೋಬುದ್ಧಿಗಳೂ, ವ್ಯಾಪಾರವನ್ನು ಬಿಟ್ಟಮೇಲೆ ತಿಳಿಯುವ ಬ್ರಹ್ಮವನ್ನು ಅವು ವ್ಯಾಪಾರಮಾಡುತ್ತಿರುವಾಗ ತಿಳಿಯುವುದೆಂತು ?)[2] ಅದರಿಂದ, ಅಸ್ತಿ-ಇದೆ ಎಂದು ಹೇಳುವುದು ಒಂದನ್ನು ಬಿಟ್ಟು, ಬೇರೆ ಇನ್ನು ಯಾವ ರೀತಿಯಾಗಿ ಅದನ್ನು ಪಡೆಯಲಾದೀತು ?

೧೩. ಉಪಾಧಿ ಇರುವ ಕಾಲದಲ್ಲಿಯೂ ಉಪಾಧಿಯು ನಾಶವಾದ ಮೇಲೂ, ತತ್-ಭಾವದಿಂದ ಅಸ್ತಿಯೆಂದೇ ಆ ಬ್ರಹ್ಮವನ್ನು

1. ಶಾಸ್ತ್ರಗಳಲ್ಲಿ ಅರೂಢ ಪತಿತ ಎಂಬ ಒಂದು ಸ್ಥಿತಿಯನ್ನು ಹೇಳುತ್ತಾರೆ. ಆನಂದಮಯ ಕೋಶದವರೆಗೂ ಏರಿದವನೂ ಪತಿತನಾಗುವ ಸಂಭವವುಂಟು. ಹಾಗೆ ಪತಿತನಾಗುವುದೇ ಪ್ರಮಾದ. ಪ್ರಭವ–ಅಪ್ಯಯಗಳು ಯೋಗ ಎನ್ನುವುದರಲ್ಲಿ ಬೇಕಾದಾಗ ಈ ದೇಹವನ್ನು ಬಿಟ್ಟು ಹೋಗಬಲ್ಲ, ಮತ್ತೆ ಬೇಕೆಂದರೆ ಬರಬಲ್ಲ ಶಕ್ತಿ ಎಂದು ಅರ್ಥಮಾಡಿದರೆ ಸರಿಹೋಗುತ್ತದೆ ಎಂದು ಹಿರಿಯರು. ಮಹಾಭಾರತ ಯುದ್ಧದಲ್ಲಿ ದ್ರೋಣಾಚಾರ್ಯರು ಮಾಡಿದುದನ್ನೂ ಸ್ವೇಚ್ಛಾ ಮರಣಿಗಳಾದ ಭೀಷ್ಮಾಚಾರ್ಯರ ಕಾರ್ಯವನ್ನೂ ಗಮನಿಸಿ.

2. ಮೆಷೀನ್ ಅಟ್ ವರ್ಕ್–ಮೆಷೀನ್ ಅಟ್ ರೆಸ್ಟ್ ಎಂಬುದನ್ನು ಕುರಿತು ಯೋಚಿಸಿ ನೋಡಿ.

ಪಂಚಭೂತಗಳು ಈ ಶರೀರವು ಆಗುವುದಕ್ಕೆ ಕಾರಣಗಳು. ಅವು ಪ್ರಸನ್ನವಾಗಿ ದಾರಿಯನ್ನು ಕೊಟ್ಟಲ್ಲದೆ ಮುಂದೆ ಹೋಗುವುದಕ್ಕೆ ಆಗುವುದಿಲ್ಲ. ಅದನ್ನೇ ಹಿಂದೆ ೧೦–೧೧ನೆಯ ಮಂತ್ರಗಳಲ್ಲಿ ಹೇಳಿರುವುದು. ಅವು ಒಂದೊಂದು ಲೀನವಾಗುವಾಗಲೂ ಜೀವಶಕ್ತಿಯನ್ನು ತಮ್ಮಲ್ಲಿ ಲೀನಮಾಡಿಕೊಳ್ಳುತ್ತವೆ. ಆಗ ಆಗುವ ಅಪ್ಯಯ ಎಂದರೆ ತಲ್ಲೀನವಾಗುವಿಕೆ, ಮತ್ತೆ ಪ್ರಭವ ಎಂದರೆ ಹುಟ್ಟಿಬರುವಿಕೆ ಆಗಬೇಕು. ಕೊನೆಗೆ, ಆಕಾಶದಲ್ಲಿ ಅಪ್ಯಯವಾಗಿಹೋದರೆ, ಅಲ್ಲಿ ಮತ್ತೆ ಪ್ರಭವವಾಗಲು ಅಸ್ತಿ ಎಂಬ ಉಪಾಸನೆಯೇ ಬೇಕು. ಅದನ್ನು ಕುರಿತು ಮುಂದಿನ ಶ್ಲೋಕದಲ್ಲಿ ಹೇಳುತ್ತದೆ.

ಪಡೆಯಬೇಕು. (ನಚಿಕೇತ) ಅಸ್ತಿಯೆಂದೇ ಪಡೆದವನಿಗೆ ತತ್ತ್ವಭಾವವು ಒಲಿಯುವುದು.[1]

(ಹಿಂದಿನ ಮಂತ್ರದಲ್ಲಿ ಹೇಳಿರುವುದನ್ನೇ ಈ ಮುಂದಿನ ಎರಡು ಮಂತ್ರಗಳಿಂದ ಇನ್ನೂ ವಿಸ್ತರಿಸುತ್ತಾರೆ.)

೧೪. ಉಪಾಧಿ ಬಲದಿಂದ ಜೀವನಾಗಿದ್ದವನ ಅಂತಃಕರಣದಲ್ಲಿರುವ ವ್ಯಕ್ತ-ಅವ್ಯಕ್ತ ಕಾಮಗಳೆಲ್ಲವೂ ಯಾವಾಗ ಬಿಟ್ಟುಹೋಗುವುವೋ ಆಗ ಮರಣಧರ್ಮಿಯಾದ ಮಾನವನು ಮರಣವನ್ನು ದಾಟಿ ಅಮೃತನಾಗುವನು. ಅಲ್ಲಿ ಬ್ರಹ್ಮವನ್ನು ಪಡೆಯಲಾಗುವುದು.[2]

೧೫. ಹೃದಯದ ಗ್ರಂಥಿಗಳೆಲ್ಲವೂ ಯಾವಾಗ ಬಿಚ್ಚಿಹೋಗುವುವೋ ಆಗ ಮರ್ತ್ಯ (ಮರಣ ಧರ್ಮಿ) ಜೀವನು ಅಮೃತನಾಗುವನು. ಇದೇಯೇ ವೇದಾಂತದ ಅನುಶಾಸನವು.[3]

---

1. ಉಪಾಧಿಯೆಂದರೆ ದೊಡ್ಡದನ್ನು ಚಿಕ್ಕದುಮಾಡಿ ತೋರಿಸುವ ಮಾಯೆ. ಇದು ಇರುವುದು ಒಂದು ಘಟ್ಟ: ಆಗ ಜೀವತ್ವವುಂಟು. ಇದು ಹೋಗುವುದು ಒಂದು ಘಟ್ಟ. ಆಗ ಜೀವತ್ವವು ಹೋಯಿತು. ಆದರೂ ಸೂಕ್ಷ್ಮ ಸೂಕ್ಷ್ಮವಾಗಿ ಇನ್ನೂ ಬ್ರಹ್ಮವಾಗದಿರುವ ಭಾವವೂ ಒಂದುಂಟು. ಆ ಭಾವವೂ ಇಲ್ಲವಾಗುವುದು ತತ್ತ್ವ ಭಾವವು ಒಲಿದಾಗ. ನದಿಯು ಸಮುದ್ರದೊಳಕ್ಕೆ ನುಗ್ಗಿತು. ಪ್ರವಾಹವೂ ನಿಂತಿತು. ಆದರೂ ಸಮುದ್ರದ ನೀರಿನಲ್ಲಿ ಬೆರೆದು ಸಮುದ್ರವಾಗುವ ಒಂದು ಕಾರ್ಯವಿನ್ನೂ ಉಳಿದಿದೆ. ಹಾಗೆ ಜೀವನು ನಾಮರೂಪಗಳನ್ನು ಬಿಟ್ಟರೂ ಬ್ರಹ್ಮಭಿನ್ನವಾಗಿದ್ದು ಬ್ರಹ್ಮವಾಗುವ ಒಂದು ಘಟ್ಟವುಂಟು. ಅಲ್ಲಿ ಇನ್ನೂ ಜೀವನು ಅಜೀವನಾಗಿದ್ದರೂ ಅತತ್ ಆಗಿರುವುದು. ಅತತ್ ಹೋಗಿ ತತ್ ಆಗಲು ತತ್ತ್ವಭಾವ ಪ್ರಸಾದವಾಗಬೇಕು. ತತ್ ಎಂದರೆ ಬ್ರಹ್ಮ. ತತ್ತ್ವ ಎಂದರೆ ಬ್ರಹ್ಮತ್ವ. (ಬ್ರಹ್ಮಸೂತ್ರದಲ್ಲಿ ಯಾವದಧಿಕಾರಾಧಿಕರಣ ನೋಡಿ.)

2. ಸೃಷ್ಟಿಯಾದುದು ಪ್ರಜಾಪತಿಯು ಕಾಮವನ್ನು ಅವಲಂಬಿಸಿದಾಗ ಅದರಿಂದ ಉಪಾಧಿ ನಾಶವಾಗಲು ಕಾಮವು ನಷ್ಟವಾಗಬೇಕು. ವ್ಯಕ್ತವೆಂದರೆ ಈ ಜನ್ಮದಲ್ಲಿ ಪ್ರಕಟವಾಗಿರುವುದು. ಅವ್ಯಕ್ತ ಕಾಮವೆಂದರೆ, ಪ್ರಕಟವಾಗಲು ಸಿದ್ಧವಾಗಿರುವುದು. ಹೂಗೊಂಚಲು ನೋಡಿ; ಅರಳಿರುವ ಹೂವು ವ್ಯಕ್ತ ಕಾಮ: ಅರಳಲಿರುವ ಮೊಗ್ಗು ಅವ್ಯಕ್ತ ಕಾಮ. ಹೂವು ಮೊಗ್ಗೂ ಎಲ್ಲವೂ ಉದುರಿ ಹೋಗುವುದು ಅಮೃತನಾಗುವಿಕೆ.

3. ಮುಂಡಕ–೨-೧-೧೦ರಲ್ಲಿ ಹೇಳಿರುವ ಅವಿದ್ಯಾ ಗ್ರಂಥಿ–ಅದೇ ೨.೨.೯ರಲ್ಲಿ ಹೇಳಿರುವ ಹೃದಯ ಗ್ರಂಥಿ. ಇವೆರಡನ್ನೂ ಅನುಸಂಧಾನಮಾಡಿ.

ಹೃದಯ ಎಂದರೆ ಬುದ್ಧಿಯು, ಗ್ರಂಥಿಗಳು ಎಂದರೆ ಗಂಟು, ಗಂಟಿನಹಾಗೆ ಭದ್ರವಾದ ಕಟ್ಟು–ಅವಿದ್ಯಾ ಪ್ರತ್ಯಯಗಳು. ಈ ಶರೀರವೇ ನಾನು, ಈ ಧನವು

೧೬. ಹೃದಯದ ಸುತ್ತಲೂ ನೂರೊಂದು ನಾಡಿಗಳಿವೆ. ಅವುಗಳಲ್ಲಿ ಒಂದು ನೆತ್ತಿಯ ಕಡೆಗೆ ಹೋಗುತ್ತದೆ. ಅದನ್ನು ಹಿಡಿದು ಮೇಲಕ್ಕೆ ಹೋದವನು ಅಮೃತತ್ವವನ್ನು ಹೊಂದುವನು. ಮಿಕ್ಕವು ಎಲ್ಲಾ ಕಡೆಗಳಲ್ಲಿಯೂ ಹರಡಿವೆ. ಅವು ಈ ಲೋಕವನ್ನೇ ಹೊಂದಿಸುವುವು.[1]

೧೭. ಒಳಗೆ ಇರುವ ಆತ್ಮನು ಅಂಗುಷ್ಠಮಾತ್ರನಾಗಿ, ಹೃದಯಾಕಾಶವನ್ನೆಲ್ಲಾ ಆಕ್ರಮಿಸಿರುವ ಪುರುಷನಾಗಿ, ಯಾವಾಗಲೂ ಎಲ್ಲರ ಹೃದಯದಲ್ಲೂ ಇರುವನು.

೧೮. ಹುಲ್ಲಿನಿಂದ ತೆನೆಯನ್ನು ಕಿತ್ತುಕೊಳ್ಳುವಂತೆ ಆತನನ್ನು, ತನ್ನ ಶರೀರದಿಂದ ಪ್ರಮಾದವಾಗದಂತೆ, ಮೇಲಕ್ಕೆ ಎತ್ತಿಕೊಳ್ಳಬೇಕು.

ಆತನನ್ನು ಶುದ್ಧ ಅಮೃತ ಎಂದು ತಿಳಿಯಬೇಕು.

ಈ ಪೂರ್ಣ ಬ್ರಹ್ಮವಿದ್ಯೆಯನ್ನೂ ಅದನ್ನು ಅನುಷ್ಠಾನ ಮಾಡಲು ಬೇಕಾದ ಯೋಗನಿಷ್ಠೆಯನ್ನೂ ಮೃತ್ಯುವು ಉಪದೇಶಿಸಿದನು. ಅದನ್ನು ನಚಿಕೇತನು ಪಡೆದನು. ಅದರಿಂದ ಬ್ರಹ್ಮವನ್ನು ಪಡೆದುಕೊಂಡನು. ಪಾಪವನ್ನು ಕಳೆದುಕೊಂಡನು. ಮೃತ್ಯುವನ್ನು ದಾಟಿದನು. ಇತರರೂ ಹೀಗೆ ಮಾಡಿದರೆ ಅಧ್ಯಾತ್ಮವನ್ನು ತಿಳಿದವರಾಗುವರು.

ಇಂತಿದು ಆರನೆಯ ವಲ್ಲಿಯು.

ಸಹನಾವವತು ಎಂಬ ಶಾಂತಿ ಮಂತ್ರವು.

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

ಇಂತಿದು ಕಠವು

ನನ್ನದು, ನಾನು ಸುಖಿ, ನಾನು ದುಃಖಿ ಮೊದಲಾದವೇ ಈ ಹೃದಯಗ್ರಂಥಿಗಳು—ಶಂಕರರು.

1. ಛಾಂದೋಗ್ಯ. ಅಧ್ಯಾಯ ೮. ಖಂಡ ೬. ಮಂತ್ರ ೬. ಇದೇ ಶ್ಲೋಕ ಮುಂಡಕ. ೨-೨-೬ರಲ್ಲಿ ಈ ನಾಡಿಗಳ ವಿಷಯವಿದೆ. ಬೃಹ. ೪ ೪—೨-೩ರಲ್ಲಿ "ಹೃದಯದಲ್ಲಿ ಬಲೆಯಂತಿದೆ. ಅಲ್ಲಿ ಹೃದಯದಿಂದ ಮೇಲಕ್ಕೊಂದು ನಾಡಿಯು ಹೋಗುತ್ತದೆ" ಎಂದು ಹೇಳಿದೆ.

WD 447—GPB—2,000—4-2-58